ಶುಕ್ರವಾರ, ಆಗಸ್ಟ್ 27, 2021 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕೃಷ್ಣನಿಗೆ ಮೆರುಗು

ಕೃಷ್ಣ ಜನ್ಮಾಷ್ಟಮಿ ಸಮೀಪಿಸುತ್ತಿದ್ದು, ಅಮೃತಸರದಲ್ಲಿ ಗುರುವಾರ ಶ್ರೀಕೃಷ್ಣನ ಮೂರ್ತಿಗೆ ಅಂತಿಮ ಸ್ಪರ್ಶ ನೀಡಿದ ಕಲಾವಿದೆ
–ಪಿಟಿಐ ಚಿತ್ರ

ಭೂಮಾಪನದಲ್ಲಿ ಅನುಕೂಲ ಮಾಡಿಕೊಟ್ಟಿರುವ ಆರೋಪ: ಆನಂದಕುಮಾರ್, ರಮೇಶ್ ಸೆರೆ

ಲಂಚ ಪ್ರಕರಣ: ₹ 20.70 ಲಕ್ಷ ವಶ

ಪ್ರಜಾವಾಣಿ ವಾರ್ತೆ

ಆನಂದಕುಮಾರ್

ಕುಸುಮಲತಾ

ಬೆಂಗಳೂರು: ಸ್ಥಿರಾಸ್ತಿಯೊಂದರ ಗಡಿ ಗುರುತಿಸುವಾಗ ಅನುಕೂಲ ಮಾಡಿಕೊಡಲು ಬೃಹತ್ ಮೊತ್ತದ ಲಂಚ ಪಡೆದಿರುವ ಆರೋಪದ ಮೇಲೆ ಭೂಮಾಪನ ಇಲಾಖೆಯ ಹಿರಿಯ ಅಧಿಕಾರಿಗಳು ಸೇರಿದಂತೆ ನಾಲ್ವರ ಮನೆಗಳಲ್ಲಿ ಬುಧವಾರ ರಾತ್ರಿ ಶೋಧ ನಡೆಸಿರುವ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ), ₹ 20.70 ಲಕ್ಷ ನಗದು ಮತ್ತು ಒಟ್ಟು ₹ 70 ಲಕ್ಷ ಮೊತ್ತದ ಮೂರು ಚೆಕ್‌ಗಳನ್ನು ವಶಪಡಿಸಿಕೊಂಡಿದೆ.

ಭೂಮಾಪನ ಇಲಾಖೆಯ ಯಲಹಂಕ (ಬೆಂಗಳೂರು ಉತ್ತರ ಹೆಚ್ಚುವರಿ) ತಾಲ್ಲೂಕು ಸಹಾಯಕ ನಿರ್ದೇಶಕ (ಎಡಿಎಲ್‌ಆರ್) ಆನಂದಕುಮಾರ್ ಅವರ ಜಾಲಹಳ್ಳಿಯ ಮನೆ, ಅವರ ಕಚೇರಿಯ ಗುತ್ತಿಗೆ ನೌಕರ ರಮೇಶ್ ಅವರ ಜಾಲಹಳ್ಳಿ ಸಮೀಪದಲ್ಲಿರುವ ಮನೆ, ಭೂಮಾಪನ ಇಲಾಖೆಯ ಬೆಂಗಳೂರು ನಗರ ಜಿಲ್ಲೆಯ ಉಪ ನಿರ್ದೇಶಕಿ ಕುಸುಮಲತಾ ಅವರ ಕೆಂಗೇರಿಯ ಮನೆ ಮತ್ತು ಎಡಿಎಲ್‌ಆರ್ ಕಚೇರಿಯ ಭೂಮಾಪನ ಮೇಲುಸ್ತುವಾರಿ ಅಧಿಕಾರಿ ಶ್ರೀನಿವಾಸ್ ಆಚಾರ್ ಅವರ ತುಮಕೂರಿನ ಮನೆಗಳಲ್ಲಿ ಶೋಧ ನಡೆಸಲಾಗಿದೆ.

ಆನಂದಕುಮಾರ್ ಮನೆಯಲ್ಲಿದ್ದ ನಗದು

ಈ ಪೈಕಿ ಆನಂದಕುಮಾರ್ ಮನೆಯಲ್ಲಿ ₹ 20.70 ಲಕ್ಷ ನಗದು ಪತ್ತೆಯಾಗಿದ್ದರೆ, ರಮೇಶ್ ಮನೆಯಲ್ಲಿ ಮೂರು ಚೆಕ್‌ಗಳು ಪತ್ತೆಯಾಗಿವೆ. ಅವುಗಳನ್ನು ವಶಕ್ಕೆ ಪಡೆದಿರುವ ಎಸಿಬಿ ಅಧಿಕಾರಿಗಳು, ಈ ಇಬ್ಬರನ್ನೂ ಬಂಧಿಸಿದ್ದಾರೆ. ಶ್ರೀನಿವಾಸ್ ಆಚಾರ್ ಅವರ ಮನೆಯಲ್ಲಿ ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳು ಪತ್ತೆಯಾಗಿವೆ ಎಂದು ಎಸಿಬಿ ಪ್ರಕಟಣೆ ತಿಳಿಸಿದೆ.

ಗೋಮಾಳ ಜಮೀನು ಸೇರಿಸಿ ದಾಖಲೆ ಸೃಷ್ಟಿ: ಯಲಹಂಕ ತಾಲ್ಲೂಕಿನ ಕುದುರೆಗೆರೆ ಗ್ರಾಮದ ಸ್ವತ್ತಿನ ಗಡಿ ವಿವಾದ ಕುರಿತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಾಗದಾಸನಪುರದ ವ್ಯಕ್ತಿಯೊಬ್ಬರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಹೈಕೋರ್ಟ್, ಭೂಮಾಪನ ಇಲಾಖೆಗೆ ಆದೇಶಿಸಿತ್ತು. ಇತ್ತೀಚೆಗೆ ಸದರಿ ಸ್ವತ್ತಿನ ಭೂಮಾಪನ ನಡೆಸಿದ್ದ ಅಧಿಕಾರಿಗಳು, ಅಳತೆ ಟಿಪ್ಪಣಿ ತಯಾರಿಸಿದ್ದರು.

‘ಆ ಸ್ವತ್ತಿನ ಮಾಲೀಕರು ನೈಜವಾಗಿ ಹೊಂದಿದ್ದ ಜಮೀನಿನ ಜತೆಗೆ ಪಕ್ಕದ ಗೋಮಾಳ ಜಮೀನು ಹಾಗೂ ನಮ್ಮ ಜಮೀನಿನ ಒಂದಷ್ಟು ಭಾಗವನ್ನೂ ಸೇರಿಸಿ 14 ಎಕರೆಗೆ ಅಳತೆ ಟಿಪ್ಪಣಿ ತಯಾರಿಸಿದ್ದಾರೆ. ಇದಕ್ಕಾಗಿ ₹ 70 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದ ಆನಂದ ಕುಮಾರ್ ಮತ್ತು ಇತರ ಆರೋಪಿಗಳು, ಈಗಾಗಲೇ ₹ 20 ಲಕ್ಷ ಪಡೆದುಕೊಂಡಿದ್ದಾರೆ’ ಎಂದು ಆರೋಪಿಸಿ ನೆರೆಯ ಜಮೀನಿನ ಮಾಲೀಕರೊಬ್ಬರು ಎಸಿಬಿಗೆ ದೂರು ನೀಡಿದ್ದರು.

ಡ್ರೋನ್: ಬಿಗಿ ನೀತಿ ಕೈಬಿಟ್ಟ ಕೇಂದ್ರ

ಡ್ರೋನ್ ಗಾತ್ರಕ್ಕೆ ಅನುಗುಣವಾಗಿ ಶುಲ್ಕ: ಹೊಸ ನಿಯಮ

● ಶೆಮಿನ್ ಜಾಯ್

ನವದೆಹಲಿ: ಡ್ರೋನ್ ಬಳಕೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಹೊಸ ನಿಯಮಗಳನ್ನು ಜಾರಿಗೊಳಿಸಿದೆ.

ಭಾರತದಲ್ಲಿ ಸರಾಗವಾಗಿ ಡ್ರೋನ್ ಬಳಕೆ ಮಾಡುವಂತಾಗಬೇಕು ಎಂಬ ದಿಸೆಯಲ್ಲಿ ಕೆಲವು ನಿಯಮಗಳನ್ನು ಸರ್ಕಾರ ಕೈಬಿಟ್ಟಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಹಲವಾರು ಬದಲಾವಣೆಗಳನ್ನು ಹೊಸ ಡ್ರೋನ್ ನಿಯಮ, 2021ರಲ್ಲಿ ಮಾಡಲಾಗಿದೆ. ಡ್ರೋನ್ ಬಳಸಲು ಪರವಾನಗಿ ಪಡೆಯಲು ಸಲ್ಲಿಸಬೇಕಿರುವ ಅರ್ಜಿಗಳ ಸಂಖ್ಯೆಯನ್ನು 25ರಿಂದ ಐದಕ್ಕೆ ಇಳಿಸಲಾಗಿದೆ. ನೋಂದಣಿ ಪ್ರಕ್ರಿಯೆಯನ್ನು ಸುಲಭಗೊಳಿಸಲಾಗಿದೆ. ಸಂಶೋಧನೆ ಮತ್ತು ಅಭಿವೃದ್ಧಿ ಉದ್ದೇಶಕ್ಕಾಗಿ ಡ್ರೋನ್ ಬಳಸಲು ಇಚ್ಛಿಸುವವರು ಇನ್ನು ಮುಂದೆ ಸುಲಭ ಪ್ರಕ್ರಿಯೆಗಳ ಮೂಲಕ ಡ್ರೋನ್ ಬಳಸಬಹುದಾಗಿದೆ. ಅದರಂತೆ ಸಂಶೋಧನಾ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು ಮತ್ತು ಕೈಗಾರಿಕೆ ಮತ್ತು ಆಂತರಿಕ ವ್ಯವಹಾರ ಉತ್ತೇಜನಾ ಇಲಾಖೆಯಿಂದ ಮಾನ್ಯತೆ ಪಡೆದಿರುವ ಸಂಸ್ಥೆಗಳಿಗೆ ಡ್ರೋನ್ ಪಡೆಯುವುದು ಸುಲಭವಾಗಲಿದೆ. ಸರಕು ಸಾಗಾಣಿಕೆಗಾಗಿ ಡ್ರೋನ್ ಕಾರಿಡಾರ್ ನಿರ್ಮಿಸುವ ಯೋಜನೆಯೂ ಹೊಸ ಡ್ರೋನ್ ನಿಯಮದಲ್ಲಿ ಇದೆ.

ಡ್ರೋನ್ ಹೊಸ ನಿಯಮಗಳು ಭಾರತದ ಡ್ರೋನ್ ಅಭಿವೃದ್ಧಿ ಕ್ಷೇತ್ರಕ್ಕೆ ಮೈಲುಗಲ್ಲಾಗಲಿವೆ. ಇದು ಅನ್ವೇಷಣೆ ಮತ್ತು ವ್ಯಾಪಾರ ಕ್ಷೇತ್ರದಲ್ಲಿ ಹೊಸ ಸಾಧ್ಯತೆಗಳನ್ನು ತೆರೆಯುತ್ತದೆ. ಈ ನಿಯಮಗಳು ದೇಶದ ಅನ್ವೇಷಣೆ, ತಂತ್ರಜ್ಞಾನ ಮತ್ತು ಇಂಜಿನಿಯರಿಂಗ್ ಕ್ಷೇತ್ರದ ಸಾಮರ್ಥ್ಯವನ್ನು ಹೆಚ್ಚಿಸುವ ಮೂಲಕ ದೇಶವನ್ನು ಡ್ರೋನ್ ಕೇಂದ್ರ ಸ್ಥಾನವನ್ನಾಗಿಸುತ್ತವೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ವಿಮಾನಯಾನ ಪ್ರದೇಶದಲ್ಲಿ ಡ್ರೋನ್ ಹಾರಾಟವನ್ನು ಹಸಿರು, ಹಳದಿ ಮತ್ತು ಕಂಪು ವಲಯಗಳಾಗಿ ವಲಯಗಳಾಗಿ ವಿಂಗಡಿಸಲಾಗಿದೆ. ಮೊದಲೇ ಅನುಮತಿ ಪಡೆದು ಹಳದಿ ಮತ್ತು ಕೆಂಪು ವಲಯದಲ್ಲಿ ಡ್ರೋನ್ ಹಾರಾಟ ನಡೆಸಬಹುದು. ಹಸಿರು ವಲಯದಲ್ಲಿ ಡ್ರೋನ್ ಹರಿಬಿಡಲು ಯಾವುದೇ ಅನುಮತಿ ಅಗತ್ಯವಿಲ್ಲ

ಹೊಸ ನಿಯಮದಲ್ಲಿ ಏನಿದೆ?

- ಅನುಮತಿ ಪಡೆಯಲು ವಿಶೇಷ ಗುರುತಿನ ಸಂಖ್ಯೆ, ವಿಶೇಷ ಮಾದರಿ ಗುರುತಿನ ಸಂಖ್ಯೆ, ಅನುಸರಣೆಯ ಪ್ರಮಾಣ ಪತ್ರ, ನಿರ್ವಹಣಾ ಪ್ರಮಾಣ ಪತ್ರ, ಬಳಕೆದಾರರ ಪರವಾನಗಿ, ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ಪ್ರಮಾಣ ಪತ್ರ, ರಿಮೋಟ್ ಪೈಲಟ್ ಪರವಾನಗಿ, ಡ್ರೋನ್ ಪೋರ್ಟ್ ಪ್ರಮಾಣಪತ್ರ, ಡ್ರೋನ್ ಬಿಡಿ ವಸ್ತುಗಳ ಆಮದು ಅನುಮತಿ ಪತ್ರ ಸಲ್ಲಿಸುವ ಅಗತ್ಯವಿಲ್ಲ
- ಡ್ರೋನ್‌ಗಳ ಸಾಗಾಟ ಸಾಮರ್ಥ್ಯ 300 ಕಿಲೋದಿಂದ 500 ಕಿಲೋಗೆ ಏರಿಕೆ
- ಅರ್ಜಿಗಳ ಸಂಖ್ಯೆ 25ರಿಂದ 5ಕ್ಕೆ ಇಳಿಕೆ
- ನೋಂದಣಿ ಮತ್ತು ಪರವಾನಗಿ ಜಾರಿಗೆ ಭದ್ರತಾ ಪ್ರಮಾಣಪತ್ರದ ಅಗತ್ಯವಿಲ್ಲ
- ಗರಿಷ್ಠ ಮೊತ್ತದ ದಂಡ ₹1 ಲಕ್ಷಕ್ಕೆ ಇಳಿಕೆ
- ಡಿಜಿಟಲ್ ಸ್ಕೈ ಪ್ಲಾಟ್‌ಫಾರ್ಮ್‌ನಲ್ಲಿ ಕೆಂಪು, ಹಳದಿ, ಹಸಿರು ವಲಯಗಳ ಗುರುತು
- ಹಸಿರು ವಲಯದಲ್ಲಿ ಅನುಮತಿ ರಹಿತ ಡ್ರೋನ್ ಹಾರಾಟ
- ‘ಡಿಜಿಟಲ್ ಸ್ಕೈ ಪ್ಲಾಟ್‌ಫಾರ್ಮ್’ ಮೂಲಕ ಎಲ್ಲಾ ರೀತಿಯ ಡ್ರೋನ್‌ಗಳ ಆನ್‌ಲೈನ್ ನೋಂದಣಿ ಲಭ್ಯ
- ವರ್ಗಾವಣೆ ಅಥವಾ ನೋಂದಣಿ ರದ್ದತಿಗೆ ಸುಲಭ ಪ್ರಕ್ರಿಯೆಗಳು
- ಮೈಕ್ರೊ ಮತ್ತು ನ್ಯಾನೊ ಡ್ರೋನ್ ಹಾರಿಸಲು ಪೈಲಟ್ ಪರವಾನಗಿ ಅಗತ್ಯವಿಲ್ಲ
- ಮುಂದಿನ ದಿನಗಳಲ್ಲಿ ಸುರಕ್ಷತಾ ಕ್ರಮಗಳಾದ ‘ನೊ ಪರ್ಮಿಶನ್– ನೊ ಟೇಕ್‌ಆಫ್’ (ಎನ್‌ಪಿಎನ್‌ಟಿ), ರಿಯಲ್ ಟೈಮ್ ಟ್ರಾಕಿಂಗ್ ಬೀಕನ್, ಜಿಯೋ ಫೆನ್ಸಿಂಗ್ ಅಳವಡಿಕೆ, ಅನುಸರಣೆಗೆ 6 ತಿಂಗಳ ಕಾಲಾವಕಾಶ,

ಸಂಪುಟ ವಿಸ್ತರಣೆ ಚರ್ಚೆ ಆಗಿಲ್ಲ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಪುಟ ವಿಸ್ತರಣೆ ಮತ್ತು ಸಚಿವರ ಖಾತೆ ಬದಲಾವಣೆಗೆ ಸಂಬಂಧಿಸಿದಂತೆ ಬಿಜೆಪಿ ರಾಜ್ಯ ಘಟಕದ ಉಸ್ತುವಾರಿ ಅರುಣ್ ಸಿಂಗ್ ಜತೆ ಚರ್ಚೆ ನಡೆಸಿಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಿಳಿಸಿದರು.

ದೆಹಲಿಯಲ್ಲಿ ಅರುಣ್‌ಸಿಂಗ್ ಅವರ ಭೇಟಿಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ರಾಜ್ಯ ರಾಜಕೀಯ ಮತ್ತು ಪಕ್ಷದ ಸಂಘಟನೆಯ ವಿಚಾರವಾಗಿ ಮಾತ್ರ ಮಾತುಕತೆ ನಡೆಸಿದ್ದೇನೆ’ ಎಂದು ಹೇಳಿದರು.‘ನಾಲ್ಕು ಸಚಿವ ಸ್ಥಾನ ಭರ್ತಿ ಮಾಡುವ ಬಗ್ಗೆ ಚರ್ಚೆ ನಡೆಸಿದ್ದೀರಾ’ ಎಂಬ ಪ್ರಶ್ನೆಗೆ, ‘ಆ ಬಗ್ಗೆ ಮುಂದೆ ಪಕ್ಷದ ಅಧ್ಯಕ್ಷ ಜೆ.ಪಿ.ನಡ್ಡಾ ಜತೆ ಚರ್ಚಿಸಲಾಗುವುದು. ಅದಕ್ಕಾಗಿ ಇನ್ನೊಮ್ಮೆ ಬರುತ್ತೇನೆ’ ಎಂದು ಹೇಳಿದರು.

ಕೃಷ್ಣಾ ಮೇಲ್ದಂಡೆ ಕುರಿತು ಸುಪ್ರೀಂಗೆ ಅರ್ಜಿ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೃಷ್ಣಾ ಮೇಲ್ದಂಡೆ ಯೋಜನೆಗೆ ಸಂಬಂಧಿಸಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗುರುವಾರ ಹೇಳಿದ್ದಾರೆ. ಕಾವೇರಿ ನದಿ ಕಣಿವೆಯಲ್ಲಿ ತಮಿಳುನಾಡು ಸರ್ಕಾರ ಕೈಗೊಂಡಿರುವ ಯೋಜನೆಗಳ ಬಗ್ಗೆಯೂ ಅರ್ಜಿ ಸಲ್ಲಿಸಲು ನಿರ್ಧರಿಸಲಾಗಿದೆ ಎಂದಿದ್ದಾರೆ.

ತಮಿಳುನಾಡು ಸರ್ಕಾರವು ನದಿ ಜೋಡಣೆಗೆ ಮುಂದಾಗಿದೆ. ಆದರೆ, ಅದು ಕಾನೂನುಬಾಹಿರ. ಈ ಬಗ್ಗೆ ವಕೀಲರ ತಂಡದ ಜತೆಗೆ ಚರ್ಚಿಸಲಾಗಿದೆ. ಹಾಗೆಯೇ, ರಾಜ್ಯದ ಜಲವಿವಾದ ಪ್ರಕರಣಗಳ ಸಂಬಂಧ ಕಾನೂನು ಮತ್ತು ತಾಂತ್ರಿಕ ತಜ್ಞರೊಂದಿಗೆ ಸುದೀರ್ಘ ಚರ್ಚೆ ನಡೆಸಲಾಗಿದೆ ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ.

ರಾಜ್ಯದ ಜಲ ವಿವಾದಗಳಿಗೆ ಸಂಬಂಧಿಸಿ ಸುಪ್ರೀಂ ಕೋರ್ಟ್‌ನಲ್ಲಿ ದೀರ್ಘಕಾಲದಿಂದ ಬಾಕಿ ಇರುವ ಪ್ರಕರಣಗಳ ತ್ವರಿತ ಇತ್ಯರ್ಥಕ್ಕಾಗಿ ಪ್ರಯತ್ನ ನಡೆಸಲಾಗುವುದು ಎಂದು ಅವರು ಹೇಳಿದ್ದಾರೆ.

ಮೇಕೆದಾಟು ಸಮನಾಂತರ ಜಲಾಶಯದ ವಿಚಾರದಲ್ಲಿ ಕರ್ನಾಟಕದ ನಿಲುವನ್ನು ಸಂದರ್ಭ ಬಂದಾಗ ಸುಪ್ರೀಂ ಕೋರ್ಟ್ ಮುಂದೆ ಇರಿಸಲಾಗುವುದು. ಮದ್ರಾಸ್ ಹೈಕೋರ್ಟ್‌ನ ಮದುರೆ ಪೀಠದಲ್ಲಿ ಪ್ರಕರಣವೊಂದನ್ನು ತಮಿಳುನಾಡು ಸರ್ಕಾರ ದಾಖಲಿಸಿದೆ. ಆದರೆ, ಪ್ರಕರಣವು ಮದುರೆ ಪೀಠದ ವ್ಯಾಪ್ತಿಗೆ ಬರುವುದಿಲ್ಲ ಎಂದು ಅವರು ಹೇಳಿದರು.

ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ, ಆರೋಗ್ಯ ಸಚಿವ ಡಾ. ಕೆ.ಸುಧಾಕರ್, ಸಂಸದ ಶಿವಕುಮಾರ್ ಉದಾಸಿ ಉಪಸ್ಥಿತರಿದ್ದರು.

ನಾಳೆಯಿಂದ 30ರವರೆಗೆ ಸಿಇಟಿ–2021

ಬೆಂಗಳೂರು: ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಇದೇ 28ರಿಂದ 30ರವರೆಗೆ ಸಾಮಾನ್ಯ ಪ್ರವೇಶ ಪರೀಕ್ಷೆಯು (ಸಿಇಟಿ) ರಾಜ್ಯದ 530 ಕೇಂದ್ರಗಳಲ್ಲಿ ನಡೆಯಲಿದೆ.

‘ಒಟ್ಟು 2,01,816 ವಿದ್ಯಾರ್ಥಿಗಳು ನೋಂದಣಿ ಮಾಡಿಸಿದ್ದು, ಕೋವಿಡ್ ಗಮನದಲ್ಲಿರಿಸಿಕೊಂಡು ಎಲ್ಲ ಮುನ್ನೆಚ್ಚರಿಕೆಗಳೊಂದಿಗೆ ಪರೀಕ್ಷೆ ನಡೆಸಲು ಕ್ರಮ ತೆಗೆದುಕೊಳ್ಳಲಾಗಿದೆ’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಹೇಳಿದ್ದಾರೆ.

28ರಂದು ಜೀವವಿಜ್ಞಾನ ಮತ್ತು ಗಣಿತ, 29ರಂದು ಭೌತವಿಜ್ಞಾನ ಮತ್ತು ರಸಾಯನ ವಿಜ್ಞಾನ ವಿಷಯಗಳ ಪರೀಕ್ಷೆ ನಡೆಯಲಿದೆ. ಹೊರನಾಡು ಹಾಗೂ ಗಡಿಭಾಗದ ವಿದ್ಯಾರ್ಥಿಗಳಿಗೆ ರಾಜ್ಯದ ಆರು ಸ್ಥಳಗಳಲ್ಲಿ ಇದೇ 30ರಂದು ಕನ್ನಡ ಪರೀಕ್ಷೆ ನಡೆಯಲಿದೆ. ಬೆಂಗಳೂರು, ಬೀದರ್, ವಿಜಯಪುರ, ಬಳ್ಳಾರಿ, ಬೆಳಗಾವಿ ಮತ್ತು ಮಂಗಳೂರು ಕೇಂದ್ರಗಳಲ್ಲಿ ನಡೆಯುವ ಈ ಪರೀಕ್ಷೆಗೆ 1,682 ವಿದ್ಯಾರ್ಥಿಗಳು ನೋಂದಣಿ ಮಾಡಿಸಿಕೊಂಡಿದ್ದಾರೆ ಎಂದು ತಿಳಿಸಿದರು.

‘ಸಾಧಕ–ಬಾಧಕ ಚರ್ಚಿಸದೆ ಶಿಕ್ಷಣ ನೀತಿ ಜಾರಿ’

ಶಿರಸಿ: ‘ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ತರುವ ಮುನ್ನ ರಾಜ್ಯ ಸರ್ಕಾರ ಸಾಧಕ-ಬಾಧಕಗಳ ಕುರಿತು ಚರ್ಚಿಸಲೇ ಇಲ್ಲ’ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಬೇಸರ ವ್ಯಕ್ತಪಡಿಸಿದರು.

ನಗರದ ಲಯನ್ಸ್ ಪ್ರೌಢಶಾಲೆಯಲ್ಲಿ ಮಾಧ್ಯಮಿಕ ಶಾಲಾ ನೌಕರರ ಸಂಘದ ತಾಲ್ಲೂಕು ಘಟಕ ಗುರುವಾರ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ‘ಶಿಕ್ಷಣ ವ್ಯವಸ್ಥೆ ಸುಧಾರಿಸುವ ಕೆಲಸವಾಗಬೇಕಿದೆ. ಬದಲಿಗೆ ಜನಪ್ರಿಯತೆಗೆ ಕೇಂದ್ರ ರೂಪಿಸಿದ ನೀತಿಯನ್ನು ರಾಜ್ಯ ಸರ್ಕಾರ ತರಾತುರಿಯಲ್ಲಿ ಜಾರಿಗೆ ತಂದಂತಿದೆ’ ಎಂದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Commerical

Peenya

COMMERCIAL/ OFFICE space 6000 sqft, with all facilities 10 KVA power at 1st floor, VITC Bhavan, KIADB Industrial Complex, Peenya 2nd Stage, Bangalore- 560058. Is available for Rent/ Lease/ Sale at attractive price. Interested parties for immediate settlement, can call seller directly Mob. No. 6364651956/ 9845898895

Flat

Electronic City

SALE SEMI furnished, 3 BHK Flat East Facing car parking utility clear title @ Anathanagar Electronic City 30 lakh 9886209230

HRBR Layout

LAST 2X3 BHK Flats for Sale at Rs. 7500/- Sq.ft, Aswath Enclave 9th E Main 1st Block Posh Locality 98453 51055 / 98459 05000

Banashankari

"SALE LUXURY-FLAT on-BDA-Plot, A-Katha,ready to-occupy, PoornaPragna Layout, Uttarahalli, 3BHK,2100.Sqft, one flat-on each-floor,1.40 Crore. "Sri.Ganesh Estate" 9845286505"

Malleshwaram

SALE 3BHK apartment 1750 sft Renaissance Park-3, Malleshwaram behind Orion Mall. 2.1 Crores negotiable. 9342139450

RMV

AMAZING OFFER RMV Extension Brand New 3 BHK 1850 Sft 95 Lakhs, 2 BHK 1550 Sft 79 Lakhs All Amenities: 9880571727

Industrial & Factory

Tumkur Road

SALE, COMMERCIAL Converted Property. 39204 sqft. Facing NH-4. Suitable for any Show-Room, Hotels Petrol Pump. NAIK: 9141326819, 9972636225

House

Magadi Road

AVAILABLE RECENTLY Constructed RCC Building for Sale on 30X40 Site,Magadi Road,near Tavarekere Call: 9448505526/ 9972460943

Sites

Hebbal

AVAILABLE SITES sale Arkavathy layout, Telecom layout, winfield layout 30x40, 40x60. Contact. Malnad 9844092859/ 9632377775.

Magadi Road

SITE SALE 30×40, W/F, BMRDA Approved E-Khata Ganesha Nagar Layout Tavarekere- Kengeri Main Road, Bengaluru west. Rs.2000/-per Sft. Nego. Brokers Excuse. Contact:9448122441.

Nandini Layout

NANDINI LAYOUT 40X60 and 60X90 Site for Sale, Clear Title, Excellent Location, Genuine buyers please Contact: 9739680106 (Brokers Excuse)

Rajarajeshwari Nagar

RAJARAJESWARINAGAR, BANGALORE University Layout (BDA) Site 30 X 46, VASAVI ESTATES: 9900522163, 9880127399

RENTAL PROPERTIES

Accommodation Available

Commercial

6000 SQFT With /Without Fit-Out at SR Complex, 2nd Floor, Tavarekere Main Road, SG Palya, Near Forum Mall. Contact : 9880448321, 080 - 41290053

Villas/Bunglows

SOBHA CITY 5BHK Semi-furnished Row House Villa available for Rent at Sobha City, Tanisandra Main Road. Contact owner: +91 7337676822

LOGO DISPLAY AD

Deccan Herald All Karnataka + Prajavani Bangalore

Two BHK for rent ground floor at xxxxxxxxxxxx xxxxxxxxx Bangalore Contact: xxxxxxxxxx xxxxxxxxxxxxxxxxx

3cm (W) x 4cm (H) @ Just Rs.2000/-* only

For more information contact: 9880856233 / 9731821077 9845114560 9606912256 / 9886213331

BUILDERS ESSENTIAL

Building Contractors

CONSTRUCT YOUR Dream home at Rs.1500/- per sqft (all inclusive.) special Offer for SMV Layout customers Ullal, Bangalore. Aadya Homes: 6364145566

JOB OPPORTUNITIES

Advertising Agency

WANTED MARKETING EXECUTIVES for an-Ad agency cum Ad Production House. Age around 25 years, should have experience 2 years in Bangalore City, Marketing field, working place Bangalore City. Send your biodata with photos to 9845217260.

General

REQUIRED JUNIOR Advocates, 1 or 2 years experience, Computer Data Operators, to work in Law Firm at Sadashivanagar, Bengaluru, interested persons Contact: 9880422215/ 9341245385

WANTED FOR Reputed Company, Graduates Age- 30-70, Bangalore only, Earn: 30,000- 50,000. Contact: 9008305194/ 9880441530.

Hospital & Medical Jobs

WANTED NURSING Staff, Duty Doctor (non COVID wards) Accommodation Given Contact:9900520357 Chaitanya Hospital, No80, P&T Colony, R.T.Nagar Bangalore-32

Marketing & Sales

WANTED MARKETING Executives For Private Limited Company Bangalore, Age Below 40 with Good Communication Skill fluent In English, Kannada, Hindi Contact: 9108458798/ 23384085

WANTED 200 candidates for field cum sales executive and tele-callers for dry fruits B2B whole sale company in Bangalore. 6366283318

Teachers/ Professors

MAX MULLER PUBLIC SCHOOL
BEML Layout, Basaveshwara Nagar Bengaluru-560079 Ph: 080-23233455.
REQUIRED
M.Sc or B.Sc, B.Ed Candidate to take 10th Physics and 9th Maths.
Required Kannada, Hindi Typist.

REQUIRED IMMEDIATELY PG/ UG B.Ed, B.PEd NCC Certified Faculty Members for ICSE School. Interested candidates contact: 080: 23897648/ 23761148 OR mail: principaltps67@gmail.com

Part-Time Jobs

JOBS WOMEN@RELIANCE Capital,Malleswaram Age 30yrs above (Degree) Fixed Salary-18k to 23k+PF+ESI: 9343349670

BUSINESS

Business Offers

Finance

NRI'S INVESTMENT And Finance AvailableOn LowInterest AgainstProperties, Land& Building,Sites,Flats, Converted& AgricultureLandsCall: 7411265189

Business For Sale

50 ROOMS Hotel, off Kanakapura Main Road available on Rent or Revenue sharing basis with MG Call:9591400500 /9820626981

PERSONAL

Change of Name

I, K.PRABHAKARA S/o K.Krishna Bhat R/a #171, 1st Floor, 1st Main 4th Cross Srinivasa Nagar Bangalore560050 Have Changed my name to K. Prabhakara Bhat Vide Affidavit dated 27-7-2021 sworn before Notary M.K.Venkatramana Bangalore.

WE, VISHWAJITH Kumbalimutt, S/o. Mr. K.M. Jagadish, aged about 51 years and Deepa Paranjothi, D/o. Mr. K.R. Paranjothi, aged about 43 years, both are R/at 1602-B, Tower-7, Godrej Woodsman Estate, Hebbal Kempapura, Bengaluru- 560024. We have changed our minor daughter's name from NAVYA KUMBALIMUTT to NAVYA VISHWAJITH. Vide affidavit dated 25.08.2021, sworn before Advocate & Notary P.G. Unnikrishnan, Bangalore.

WE, VISHWAJITH Kumbalimutt, S/o. Mr. K.M. Jagadish, aged about 51 years and Deepa Paranjothi, D/o. Mr. K.R. Paranjothi, aged about 43 years, both are R/at 1602-B, Tower-7, Godrej Woodsman Estate, Hebbal Kempapura, Bengaluru-560024. We have changed our minor daughter's name from MEGHANA KUMBALIMUTT to MEGHANA VISHWAJITH. Vide affidavit dated 25.08.2021, sworn before Advocate & Notary P.G. Unnikrishnan, Bangalore.

I, ASGAR Mohammed Haneef S/o. Mohammed Haneef r/at. No61, 1st floor, 2nd main road, 2nd stage, Pillanna Garden, Blr-45, wrongly mentioned my name as Asgar. M here declaring that my correct name is ASGAR MOHAMMED HANEEF vide affidavit dated 26/08/2021 before notary S.Samuel Solomon, Bangalore

I, HIREMATH SOMESHWARAYYA S/o. Channayya, Residing at No.52, 3rd Main, 1st Stage,1st Phase,WOC Road, Rajajinagar, Bengaluru- 560010 have changed my name to SOMESHWAR HIREMATH vide affidavit dated: 25.08.2021 sworn before notary:Aruna.V. Bengaluru

I, YANKAVVA BASAPPA JADAR D/o Basappa Jadar R/at No.27, Chilakawad, Arekurahatti, Navalgund (Tq) Dharwad-582208 have changed my name to SARASWATI JADAR vide affidavit dated: 22/9/2020 Before Notary Bidaralli.N.B Dharwad.

I, PUJAR MALA, Residing at No.52, 3rd Main,1st Stage, 1st Phase,WOC Road, Rajajinagar, Bengaluru- 560010 have changed my name to VEENA HIREMATH W/o. Someshwar Hiremath vide affidavit dated: 25.08.2021 sworn before notary:Aruna.V. Bengaluru

I, LAXMIBAI RAMADURGA alias LAXMIBAI JAKKAPPA RAMADURGA, R/a No. 62, 4th cross, MCECHS Layout, Dr. Shivaramakaranth Nagar, Bangalore- 560077, will henceforth be known as LAXMIBAI RAMADURGA, vide affidavit dated 26.08.2021 before Notary N. Nagappa, Bangalore.

For Online Classified Booking
Name Change / Education / Property / Job / Services and many more contact
9880856233
9886213331
dhclassifieds.com

WEEKEND CORNER

ಕ್ಲಾಸಿಫೈಡ್ಸ್

EDUCATIONAL

Admission

DIRECT FINAL/ REGULAR:Ph.D/ M.Phil/LL.B/ (3/5 Years)/ B.Tech/ Diploma/BAMS/BHMS/ NURSING/ B.Pharma/ D.Pharma/B.Sc (MLT/ Audiology/ Ophthalmology/ Orthopedics/ Renal Etc.) GOVT Recognised, Limited Seats, Join Immediately, Asha Institute,Bangalore:94 48460103

AUTOMOTIVE

Four Wheelers Selling

Toyota

REQUIRED SALVAGE quote for Toyota Innova 2.5V, 2012 model KA02 MG-6080 with/without RC. 9844036218

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಶುಕ್ರವಾರ, ಆಗಸ್ಟ್ 27, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 239 | ಪುಟ 16
• www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಸಿನಿಮಾ ಆಸಕ್ತಿಯಿಂದಾಗಿ ಪೊಲೀಸ್ ಕೆಲಸಕ್ಕೆ ಗುಡ್‌ಬೈ ಹೇಳಿ ಚಂದನವನ ಪ್ರವೇಶಿಸಿದ್ದಾರೆ ನಟ ರಾಜೀವ್.

ಆಳ-ಅಗಲ
ತೆರವಿಗೆ ನೆರವಾದ ದುಶಾಂಬೆ ವಾಯುನೆಲೆ
ಕೋವಿಡ್ ಸಂಬಂಧಿ ಕಾಯಿಲೆಗಳಿಗೇ ಹೆಚ್ಚು ಸಾವು 6
ಸಂಕಷ್ಟದಲ್ಲಿ ವಿಶೇಷ ಶಾಲೆಗಳ ಸಿಬ್ಬಂದಿ 4

ಸೆನ್ಸೆಕ್ಸ್	ನಿಫ್ಟಿ	₹/$
55,949 ▲	16,636 ▲	74.22 ▲

ಅತ್ಯಾಚಾರ ಪ್ರಕರಣ: ಎಡಿಜಿಪಿ ಮೊಕ್ಕಾಂ • ಐವರು ವಶಕ್ಕೆ, ತೀವ್ರಗೊಂಡ ವಿಚಾರಣೆ

ವಿಡಿಯೊ ಮಾಡಿದ ಆರೋಪಿಗಳು?

ಪ್ರಜಾವಾಣಿ ವಾರ್ತೆ

ಮೈಸೂರು: ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಲಲಿತಾದ್ರಿಪುರ ಗುಡ್ಡದಲ್ಲಿ ಮಂಗಳವಾರ ರಾತ್ರಿ ವಿದ್ಯಾರ್ಥಿನಿ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದ ಆರೋಪಿಗಳು, ಅದನ್ನು ವಿಡಿಯೊ ಮಾಡಿಕೊಂಡಿದ್ದರು ಎಂದು ಗೊತ್ತಾಗಿದೆ.

‘ಅತ್ಯಾಚಾರದ ದೃಶ್ಯವನ್ನು ವಿಡಿಯೊ ಮಾಡಿಕೊಂಡ ಆರೋಪಿಗಳು ಹಣಕ್ಕಾಗಿ ಪೀಡಿಸಿದ್ದರು. ಹಣ ನೀಡದೇ ಇದ್ದಾಗ ಸಂತ್ರಸ್ತೆಯ ಸ್ನೇಹಿತನ ಮೇಲೆ ಕಲ್ಲಿನಿಂದ ಹಲ್ಲೆ ನಡೆಸಿದ್ದರು’ ಎಂದು ಮೂಲಗಳು ತಿಳಿಸಿವೆ. ಆದರೆ, ‘ಈ ಕುರಿತು ಯಾವುದೇ ವಿವರವನ್ನು ನೀಡಲು ಸಾಧ್ಯವಿಲ್ಲ’ ಎಂದು ಎಡಿಜಿಪಿ ಪ್ರತಾಪರೆಡ್ಡಿ ಪ್ರತಿಕ್ರಿಯಿಸಿದರು.

ಪ್ರಕರಣದ ತನಿಖೆಗಾಗಿ ಡಿಸಿಪಿ ಪ್ರದೀಪ್‌ಗುಂಟಿ ನೇತೃತ್ವದಲ್ಲಿ ಆರು ತಂಡಗಳನ್ನು ರಚಿಸಿದ್ದು, ಮೇಲುಸ್ತುವಾರಿಗಾಗಿ ಎಡಿಜಿಪಿ ನಗರದಲ್ಲೇ ಮೊಕ್ಕಾಂ ಹೂಡಿದ್ದಾರೆ. ಘಟನೆ ನಡೆದ ಸ್ಥಳದಲ್ಲಿ ಗುರುವಾರ ಪರಿಶೀಲನೆ ನಡೆಸಿ, ಯುವತಿ ಹಾಗೂ ಆಕೆಯ ಸ್ನೇಹಿತನಿಂದ ಹೇಳಿಕೆ ಪಡೆದಿದ್ದಾರೆ. ಸ್ಥಳದಲ್ಲಿ ಒಟ್ಟು 34 ಸಾಕ್ಷ್ಯಗಳನ್ನು ಸಂಗ್ರಹಿಸಲಾಗಿದೆ.

6ನೇ ಪುಟ ನೋಡಿ

ಸಾಮೂಹಿಕ ಅತ್ಯಾಚಾರ ನಡೆದ ಸ್ಥಳಕ್ಕೆ ಭೇಟಿ ನೀಡಿದ ಎಡಿಜಿಪಿ ಪ್ರತಾಪರೆಡ್ಡಿ ನೇತೃತ್ವದ ಪೊಲೀಸರ ತಂಡವು ಗುರುವಾರ ಪರಿಶೀಲನೆ ನಡೆಸಿತು

ನನಗೆ ವರದಿ ಕೊಡಿ: ಬೊಮ್ಮಾಯಿ



‘ಗೃಹ ಸಚಿವ ಜ್ಞಾನೇಂದ್ರ ಹೇಳಿಕೆ ಬಗ್ಗೆ ತಮಗೆ ಸಹಮತ ಇಲ್ಲ’ ಎಂದಿರುವ ಮುಖ್ಯಮಂತ್ರಿ ಬೊಮ್ಮಾಯಿ, ಅತ್ಯಾಚಾರದ ಪ್ರಕರಣದ ತನಿಖೆಯ ಪ್ರಗತಿಯನ್ನು ತಮಗೆ ನೇರವಾಗಿ ವರದಿ ಸಲ್ಲಿಸುವಂತೆ ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ದೆಹಲಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಂಡಿದ್ದೇವೆ. ತನಿಖೆಯ ಉಸ್ತುವಾರಿ ಹೊತ್ತಿರುವ ಎಡಿಜಿಪಿ ಪ್ರತಾಪ ರೆಡ್ಡಿ ಹಾಗೂ ಮೈಸೂರು ಕಮಿಷನರ್ ಚಂದ್ರಗುಪ್ತ ಅವರ ಜತೆ ನೇರವಾಗಿ ನಾನೇ ಮಾತನಾಡಿದ್ದೇನೆ. ಅಪರಾಧಿಗಳ ಪತ್ತೆಗೆ ಶೋಧ ಕಾರ್ಯಾಚರಣೆ ಚುರುಕುಗೊಳಿಸಿ, ತಪ್ಪಿತಸ್ಥರು ಯಾರೇ ಇದ್ದರೂ ಪತ್ತೆ ಹಚ್ಚಿ ಶಿಕ್ಷೆಗೆ ಗುರಿಪಡಿಸುವಂತೆ ಸೂಚನೆ ನೀಡಿದ್ದೇನೆ. ನನಗೆ ವರದಿ ಮಾಡಿಕೊಳ್ಳುವಂತೆ ನಿರ್ದೇಶನ ನೀಡಿದ್ದೇನೆ’ ಎಂದರು.

‘ತನಿಖೆ ತೀವ್ರಗತಿಯಲ್ಲಿ ನಡೆದಿದೆ. ಸಂತ್ರಸ್ತೆ ಹಾಗೂ ಜೊತೆಗಿದ್ದ ಯುವಕ ಜತೆ, ಪೋಷಕರ ಜತೆ ಮಾತನಾಡಿ ಮಾಹಿತಿ ಕಲೆ ಹಾಕಲಾಗುತ್ತಿದೆ. ತಪ್ಪಿತಸ್ಥರನ್ನು ಸದೆಬಡಿಯುವ ಕೆಲಸ ಮಾಡಿಯೇ ತೀರುತ್ತೇವೆ’ ಎಂದರು.

ನಿರ್ಜನ ಪ್ರದೇಶಕ್ಕೆ ರಾತ್ರಿ ಹೋಗಬಾರದಿತ್ತು: ಜ್ಞಾನೇಂದ್ರ

ಬೆಂಗಳೂರು: ‘ಮೈಸೂರಿನಲ್ಲಿ ಯುವಕ-ಯುವತಿ ರಾತ್ರಿ 7.30 ಕ್ಕೆ ನಿರ್ಜನ ಪ್ರದೇಶಕ್ಕೆ ಹೋಗಿದ್ದಾರೆ. ಆ ವೇಳೆಯಲ್ಲಿ ಅಲ್ಲಿಗೆ ಹೋಗಬಾರದಿತ್ತು’ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು. ಸುದ್ದಿಗಾರರ ಜತೆ ಗುರುವಾರ ಬೆಳಿಗ್ಗೆ ಮಾತನಾಡಿದ ಅವರು, ‘ಆ ವೇಳೆಯಲ್ಲಿ ಅಲ್ಲಿಗೆ ಹೋಗಬೇಡಿ ಎಂದು ಅವರನ್ನು ತಡೆಯುವುದಕ್ಕೆ ಆಗುವುದಿಲ್ಲ. ಯುವಕ-ಯುವತಿ ಆಘಾತಕ್ಕೆ ಒಳಗಾಗಿದ್ದಾರೆ. ಅವರಿಂದ ಸಂಪೂರ್ಣ ಹೇಳಿಕೆ ಪಡೆಯಲು ಸಾಧ್ಯವಾಗಿಲ್ಲ. ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ’ ಎಂದೂ ಹೇಳಿದರು. ಸಚಿವರ ಈ ಹೇಳಿಕೆ ಸಾಮಾಜಿಕ ಜಾಲತಾಣದಲ್ಲಿ ವ್ಯಾಪಕ ಟೀಕೆಗೆ ಗುರಿಯಾಯಿತಲ್ಲದೇ, ಕಾಂಗ್ರೆಸ್ ನಾಯಕರು ಈ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದರು. ದೆಹಲಿ ಪ್ರವಾಸದಲ್ಲಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ‘ನಿಮ್ಮ ಹೇಳಿಕೆ ಸರಿಯಲ್ಲ. ಕೂಡಲೇ ಸ್ಪಷ್ಟನೆ ಕೊಡಿ’ ಎಂದು ಜ್ಞಾನೇಂದ್ರ ಅವರಿಗೆ ಸೂಚಿಸಿದರು.

ಸಂಜೆ ಹೊತ್ತಿಗೆ ಸ್ಪಷ್ಟನೆ ನೀಡಿದ ಜ್ಞಾನೇಂದ್ರ, ‘ಯಾರಿಗೂ ನೋವು ಉಂಟು ಮಾಡಲು ಈ ಹೇಳಿಕೆಗಳನ್ನು ನೀಡಿಲ್ಲ. ಮನನೊಂದು ಹೇಳಿಕೆ ನೀಡಿದ್ದೆ’ ಎಂದರು.

6ನೇ ಪುಟ ನೋಡಿ

> ಘಟನೆಯಲ್ಲಿ ಪೊಲೀಸರ ವೈಫಲ್ಯ ಕಂಡು ಬಂದರೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು
> **ಎಸ್.ಟಿ.ಸೋಮಶೇಖರ್**
> ಉಸ್ತುವಾರಿ ಸಚಿವ

> ಆ ಹೆಣ್ಣು ಮಗಳು ಅಷ್ಟು ಹೊತ್ತಿಗೆ ಅಲ್ಲಿಗೆ ಯಾಕೆ ಹೋಗಬೇಕಿತ್ತು ಎಂದು ಸಚಿವರು ಕೇಳುತ್ತಾರೆ ಎಂದರೆ, ಈ ರಾಜ್ಯದಲ್ಲಿ ಹೆಣ್ಣುಮಕ್ಕಳಿಗೆ ಸ್ವಾತಂತ್ರ್ಯವಿಲ್ಲ ಎಂಬುದು ಸ್ಪಷ್ಟ
> **ಡಿ.ಕೆ. ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

9 ಮಂದಿಯ ನೇಮಕಕ್ಕೆ ರಾಷ್ಟ್ರಪತಿ ಅಂಕಿತ

ಕರ್ನಾಟಕದ ನಾಗರತ್ನ ‘ಸುಪ್ರೀಂ’ ನ್ಯಾಯಮೂರ್ತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಸುಪ್ರೀಂ ಕೋರ್ಟ್‌ಗೆ ಒಂಬತ್ತು ಹೊಸ ನ್ಯಾಯಮೂರ್ತಿಗಳನ್ನು ಗುರುವಾರ ನೇಮಕ ಮಾಡಲಾಗಿದೆ. ಕರ್ನಾಟಕದವರಾದ ನ್ಯಾಯಮೂರ್ತಿ ಬಿ.ವಿ.ನಾಗರತ್ನ ಸೇರಿ ಮೂವರು ಮಹಿಳೆಯರು ಈ ಪಟ್ಟಿಯಲ್ಲಿ ಇದ್ದಾರೆ.

ನಾಗರತ್ನ

ಈ ತಂಡದಲ್ಲಿ ನೇಮಕವಾದವರಲ್ಲಿ ಮೂವರು ಮುಖ್ಯ ನ್ಯಾಯಮೂರ್ತಿ ಹುದ್ದೆಗೇರುವ ಸಾಧ್ಯತೆ ಹೊಂದಿದ್ದಾರೆ. ನಾಗರತ್ನಾ ಅವರಿಗೂ ಈ ಅವಕಾಶ ಇದೆ. ಅವರು ಈ ಹುದ್ದೆಗೆ ಏರಿದರೆ ಭಾರತದ ಮೊದಲ ಮಹಿಳಾ ಮುಖ್ಯ ನ್ಯಾಯಮೂರ್ತಿ ಎಂಬ ಹಿರಿಮೆಗೆ ಪಾತ್ರರಾಗಲಿದ್ದಾರೆ.

ನೇಮಕಾತಿ ಆದೇಶಕ್ಕೆ ರಾಷ್ಟ್ರಪತಿಯವರು ಸಹಿ ಹಾಕಿದ್ದಾರೆ. ಕೇಂದ್ರ ಕಾನೂನು ಸಚಿವಾಲಯವು ಅಧಿಸೂಚನೆಯನ್ನೂ ಹೊರಡಿಸಿದೆ.

ಈವರೆಗೆ ಕರ್ನಾಟಕ ಹೈಕೋರ್ಟ್‌ನ ನ್ಯಾಯಮೂರ್ತಿಯಾಗಿದ್ದ ನಾಗರತ್ನ ಅವರು 2027ರಲ್ಲಿ ನಿವೃತ್ತಿಯಾಗುವ ಮುನ್ನ ಒಂದು ತಿಂಗಳ ಅವಧಿಗೆ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಹುದ್ದೆಯಲ್ಲಿ ಇರಲಿದ್ದಾರೆ. ನಾಗರತ್ನ ಅವರು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿದ್ದ ಇ.ಎಸ್. ವೆಂಕಟರಾಮಯ್ಯ ಅವರ ಮಗಳು. ವೆಂಕಟರಾಮಯ್ಯ ಅವರು 1989ರಲ್ಲಿ ಮುಖ್ಯ ನ್ಯಾಯಮೂರ್ತಿಯಾಗಿ ಕರ್ತವ್ಯ ನಿರ್ವಹಿಸಿದ್ದರು.

6ನೇ ಪುಟ ನೋಡಿ

21 ತಿಂಗಳ ಬಳಿಕ ಸಹಮತ

ಇದೇ ಮೊದಲ ಬಾರಿ ಒಂಬತ್ತು ಮಂದಿಯನ್ನು ಒಮ್ಮೆಗೇ ನೇಮಕ ಮಾಡಲಾಗಿದೆ. ಆದರೆ, 21 ತಿಂಗಳ ಸುದೀರ್ಘ ಅವಧಿಯ ಬಳಿಕ ಈ ನೇಮಕ ನಡೆದಿದೆ. ಸುಪ್ರೀಂ ಕೋರ್ಟ್‌ನ ಕೊಲಿಜಿಯಂ (ನ್ಯಾಯಮೂರ್ತಿ ನೇಮಕಕ್ಕೆ ಶಿಫಾರಸು ಮಾಡುವ ಸಮಿತಿ) ಸದಸ್ಯರಾದ ಐವರು ಹಿರಿಯ ನ್ಯಾಯಮೂರ್ತಿಗಳಲ್ಲಿ ಸಹಮತ ಸಾಧ್ಯವಾಗದ ಕಾರಣ ನ್ಯಾಯಮೂರ್ತಿಗಳ ನೇಮಕಕ್ಕೆ ಶಿಫಾರಸು ಮಾಡುವುದೇ ಸಾಧ್ಯವಾಗಿರಲಿಲ್ಲ. ತ್ರಿಪುರಾ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಅಕಿಲ್ ಖುರೇಷಿ ಅವರಿಗೆ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ಬಡ್ತಿ ನೀಡಬೇಕು ಎಂದು ಕೊಲಿಜಿಯಂ ಸದಸ್ಯರಾಗಿದ್ದ ನ್ಯಾಯಮೂರ್ತಿ ಆರ್.ಎಫ್. ನರಿಮನ್ ಅವರು (ಇದೇ 12ರಂದು ನಿವೃತ್ತರಾದರು) ಒತ್ತಾಯಿಸಿದ್ದರು. ಗುಜರಾತ್ ಹೈಕೋರ್ಟ್ ನ್ಯಾಯಮೂರ್ತಿಯಾಗಿದ್ದ ಖುರೇಷಿ ಅವರು ಈಗಿನ ಗೃಹ ಸಚಿವ ಅಮಿತ್ ಶಾ ಅವರನ್ನು 2010ರಲ್ಲಿ ಸಿಬಿಐ ಕಸ್ಟಡಿಗೆ ನೀಡಿದ್ದರು.

ಅಂತರರಾಷ್ಟ್ರೀಯ ಡ್ರಗ್ಸ್ ಪ್ರಕರಣ: ದೋಷಾರೋಪ ಪಟ್ಟಿ ಸಲ್ಲಿಕೆ

ಕಮಿಷನರ್ ಕಚೇರಿ ಬಳಿ ‘ಡ್ರಗ್ಸ್ ಪಾರ್ಟಿ’!

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ದೇಶದಾದ್ಯಂತ ಹೆಚ್ಚು ಸುದ್ದಿ ಮಾಡಿದ್ದ ಅಂತರರಾಷ್ಟ್ರೀಯ ಡ್ರಗ್ಸ್ ಪ್ರಕರಣದ ಆರೋಪಿಗಳು, ಬೆಂಗಳೂರು ಪೊಲೀಸ್ ಕಮಿಷನರ್ ಕಚೇರಿ ಸಮೀಪದಲ್ಲಿರುವ ‘1 ಕ್ಯೂ 1’ ಪಬ್‌ನಲ್ಲಿ ಡ್ರಗ್ಸ್ ಪಾರ್ಟಿ ಆಯೋಜಿಸುತ್ತಿದ್ದ ಸಂಗತಿ ಸಿಸಿಬಿ ಪೊಲೀಸರ ತನಿಖೆಯಿಂದ ಪತ್ತೆಯಾಗಿದೆ.

ಸಿನಿಮಾ ನಟಿಯರು, ಉದ್ಯಮಿಗಳು, ಸರ್ಕಾರಿ ನೌಕರರು, ಶ್ರೀಮಂತರ ಮಕ್ಕಳು ಭಾಗಿಯಾಗಿದ್ದ ಡ್ರಗ್ಸ್ ಜಾಲ ಭೇದಿಸಿದ್ದ ಸಿಸಿಬಿ ಪೊಲೀಸರು, 25 ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ (ಚಾರ್ಜ್‌ಶೀಟ್) ಸಲ್ಲಿಸಿದ್ದಾರೆ. ದಂಧೆಯಲ್ಲಿ ಆರೋಪಿಗಳ ಪಾತ್ರವನ್ನು ಸಾಕ್ಷ್ಯ ಸಮೇತ ದಾಖಲಿಸಲಾಗಿದ್ದು, ಚಾರ್ಜ್‌ಶೀಟ್ ಪ್ರತಿಗಳು ‘ಪ್ರಜಾವಾಣಿ’ಗೆ ಲಭ್ಯವಾಗಿವೆ.

'ನಗರದ ಕಾಲೇಜ್‌ವೊಂದರಲ್ಲಿ ಸಾಫ್ಟ್‌ವೇರ್ ಎಂಜಿನಿಯರಿಂಗ್ ವ್ಯಾಸಂಗ ಮಾಡಿದ್ದ ಆರೋಪಿ ವೀರೇನ್ ಖನ್ನಾ, ವಿ.ಕೆ.ಪಿ ಪ್ರೊಡಕ್ಷನ್ ಹೆಸರಿನಲ್ಲಿ ಪಾರ್ಟಿಗಳನ್ನು ಆಯೋಜಿಸುತ್ತಿದ್ದ. ಶ್ರೀಮಂತರ ಮಕ್ಕಳು ಹಾಗೂ ಉದ್ಯಮಿಗಳಿಗೆ ಪಾರ್ಟಿ ಆಯೋಜಿಸುತ್ತಿದ್ದ ಆತ, ಆರಂಭದಲ್ಲಿ ಗಾಂಜಾ ಮಾರುತ್ತಿದ್ದ. ನಂತರ ಕೊಕೇನ್, ಎಂಡಿಎಂಎ ಸೇರಿದಂತೆ ಇತರೆ ಡ್ರಗ್ಸ್‌ಗಳ ಮಾರಾಟಕ್ಕೆ ಕೈ ಹಾಕಿದ್ದ’ ಎಂಬ ಅಂಶವೂ ಪಟ್ಟಿಯಲ್ಲಿದೆ.

‘ಪೊಲೀಸ್ ಕಮಿಷನರ್ ಕಚೇರಿ ಸಮೀಪದಲ್ಲಿರುವ ಕ್ವೀನ್ಸ್ ರಸ್ತೆಯಲ್ಲಿ ‘1 ಕ್ಯೂ 1’ ಪಬ್ ಇದೆ. ಇದಕ್ಕೆ ಹೊಂದಿಕೊಂಡೇ ಬೆಂಗಳೂರು ಸಂಚಾರ ನಿರ್ವಹಣಾ ಕೇಂದ್ರ (ಟಿಎಂಸಿ) ಕಟ್ಟಡವಿದ್ದು, ಅದರಲ್ಲೇ ಪೊಲೀಸ್ ಜಂಟಿ ಕಮಿಷನರ್ ಕಚೇರಿ ಸಹ ಇದೆ. ಈ ಪಬ್ ಮಾಲೀಕರ ಜೊತೆ ಒಪ್ಪಂದ ಮಾಡಿಕೊಂಡಿದ್ದ ವೀರೇನ್, ಪ್ರತಿ ಶನಿವಾರ ‘ಪ್ಲೇಟ್ ಪ್ರಾಜೆಕ್ಟ್ ಹಾಸ್ಪಿಟಾಲಿಟಿ’ ಹೆಸರಿನಲ್ಲಿ ಡ್ರಗ್ಸ್ ಪಾರ್ಟಿ ಆಯೋಜಿಸುತ್ತಿದ್ದ. ಪ್ರತಿ ಪಾರ್ಟಿಯಲ್ಲೂ 200ಕ್ಕೂ ಹೆಚ್ಚು ಮಂದಿ ಸೇರುತ್ತಿದ್ದರು.’

10ನೇ ಪುಟ ನೋಡಿ

ಚಾರ್ಜ್‌ಶೀಟ್‌ನಲ್ಲಿ ಹೆಸರಿರುವ ಇತರೆ ಆರೋಪಿಗಳು

ಪ್ರಮುಖ ಆರೋಪಿಗಳ ಜೊತೆಯಲ್ಲಿ ಪ್ರಶಾಂತ್ ರಾಜು, ಅಶ್ವಿನ್ ಬೂಗಿ, ಅಭಿಸ್ವಾಮಿ ಅಲಿಯಾಸ್ ಅಭಿಜಿತ್ ರಂಗಸ್ವಾಮಿ, ವಿನಯ್ ಕುಮಾರ್, ನಿಯಾಸ್ ಅಹಮ್ಮದ್, ಬೆನಾಲ್ಡ್ ಉಡೆನ್ನಾ ಅಲಿಯಾಸ್ ಬೆನ್, ಮ್ಯಾಶಿ ಅಲಿಯಾಸ್ ಷರೀಫ್ ಹಸನ್ ಮಸೂರಿ, ಒಸಿಟ್ ಒನ್ವೋ ಫಿಲಿಪ್, ಚಿಡಿಯಾಬಿರೆ ಅಂಬ್ರೋಸ್ ಅಲಿಯಾಸ್ ಚೀಫ್, ಆದಿತ್ಯ ಮೋಹನ್ ಅಗರವಾಲ್, ಕಿರಣ್ ಕಾರ್ತಿಕ್ ಅಲಿಯಾಸ್ ಕೆ.ಡಿ, ಸುಮಿತ್ ಸಾಗರ್, ಅಪೇಕ್ಷಾ ನಾಯಕ್ ಅವರನ್ನೂ ಆರೋಪಿಯನ್ನಾಗಿ ಮಾಡಲಾಗಿದೆ.

‘ವಿದೇಶಿ ಪ್ರಜೆಗಳಿಂದ ಡ್ರಗ್ಸ್ ಪೂರೈಕೆ’

‘ಪ್ರಕರಣದ ಪ್ರಮುಖ ಆರೋಪಿಗಳಾದ ಐವರು ವಿದೇಶಿಗರು, ಡ್ರಗ್ಸ್ ಪೂರೈಕೆ ಮಾಡುತ್ತಿದ್ದರು. ಅವರಿಂದ ಡ್ರಗ್ಸ್ ಖರೀದಿಸುತ್ತಿದ್ದ ಇತರೆ ಆರೋಪಿಗಳು, ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಡ್ರಗ್ಸ್ ಮಾರುತ್ತಿದ್ದರು’ ಎಂಬ ಸಂಗತಿ ದೋಷಾರೋಪ ಪಟ್ಟಿಯಲ್ಲಿ ಇದೆ. ‘ಈ ವಿದೇಶಿಗರು ಭಾರತಕ್ಕೆ ಅಕ್ರಮವಾಗಿ ವಲಸೆ ಬಂದಿದ್ದರು. ರಹದಾರಿ ಪತ್ರ ಹಾಗೂ ವೀಸಾಗಳನ್ನೂ ನಾಶ ಮಾಡಿದ್ದರು. ಕೊಕೇನ್, ಎಕ್ಸ್ಟೆಸಿ ಮಾತ್ರೆ, ಎಂಡಿಎಂಎ ಹಾಗೂ ಇತರೆ ಮಾದಕ ವಸ್ತುಗಳನ್ನು ಮಾರಿರುವುದು ದೃಢಪಟ್ಟಿದೆ’ ಎಂಬ ಅಂಶವೂ ಪಟ್ಟಿಯಲ್ಲಿದೆ.

ನಕಲಿ ಆರ್‌ಟಿಪಿಸಿಆರ್ ನೆಗೆಟಿವ್ ವರದಿ ಪತ್ತೆ: ಏಳು ಜನರ ಬಂಧನ

ಮಂಗಳೂರು: ಕೇರಳದಿಂದ ದಕ್ಷಿಣ ಕನ್ನಡ ಜಿಲ್ಲೆಗೆ ಪ್ರವೇಶಿಸಲು ನಕಲಿ ಆರ್‌ಟಿಪಿಸಿಆರ್ ನೆಗೆಟಿವ್ ವರದಿ ತಂದಿದ್ದ 4 ಪ್ರತ್ಯೇಕ ಪ್ರಕರಣಗಳನ್ನು ಪತ್ತೆ ಮಾಡಲಾಗಿದ್ದು, 7 ಮಂದಿಯನ್ನು ಬಂಧಿಸಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ತಿಳಿಸಿದ್ದಾರೆ. 6

ಕೋವಿಡ್: ಇನ್ನೂ 2 ತಿಂಗಳು ನಿರ್ಣಾಯಕ 6

ವಿಮಾನ ನಿಲ್ದಾಣದ ಬಳಿ ನಡೆದ ಪ್ರತ್ಯೇಕ ಸ್ಫೋಟ

ಕಾಬೂಲ್: ಆತ್ಮಹತ್ಯಾ ದಾಳಿಗೆ 22 ಬಲಿ

ಕಾಬೂಲ್ (ಎಪಿ, ಎಎಫ್‌ಪಿ/ ರಾಯಿಟರ್ಸ್): ಕಾಬೂಲ್‌ನ ಹಮೀದ್ ಕರ್ಜೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಪ್ರವೇಶ ದ್ವಾರದ ಬಳಿ ಗುರುವಾರ ಎರಡು ಆತ್ಮಹತ್ಯಾ ಬಾಂಬ್ ದಾಳಿಗಳು ನಡೆದಿದ್ದು, 22 ಜನರು ಮೃತಪಟ್ಟಿದ್ದಾರೆ.

ದಾಳಿಯಲ್ಲಿ 52ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ ಎಂದು ತಾಲಿಬಾನ್ ಹೇಳಿದೆ. ದಾಳಿಯನ್ನು ಅಮೆರಿಕ, ಜರ್ಮನಿ ಮತ್ತು ರಷ್ಯಾ ಸೇನೆಗಳು ದೃಢಪಡಿಸಿವೆ.

ವಿಮಾನ ನಿಲ್ದಾಣದ ಬಳಿ ಇಸ್ಲಾಮಿಕ್ ಸ್ಟೇಟ್ ಉಗ್ರರು ದಾಳಿ ನಡೆಸಬಹುದು ಎಂದು ಅಮೆರಿಕ ಎಚ್ಚರಿಕೆ ನೀಡಿದ್ದ ಬೆನ್ನಲ್ಲೇ ಈ ದಾಳಿ ನಡೆದಿದೆ. ಇಸ್ಲಾಮಿಕ್ ಸ್ಟೇಟ್ ಈ ದಾಳಿಯ ಹೊಣೆ ಹೊತ್ತುಕೊಂಡಿದೆ.

11ನೇ ಪುಟ ನೋಡಿ

ಅಮೆರಿಕದ 12 ಯೋಧರ ಸಾವು

ಬಾಂಬ್ ದಾಳಿಯಲ್ಲಿ ಅಮೆರಿಕದ 12 ಯೋಧರು ಸಾವಿಗೀಡಾಗಿದ್ದಾರೆ ಎಂದು ಅಮೆರಿಕದ ಅಧಿಕಾರಿಗಳು ತಿಳಿಸಿದ್ದಾರೆ. ‘ದಾಳಿಯಲ್ಲಿ ಅಮೆರಿಕದ ಹಲವು ಯೋಧರು ಗಾಯಗೊಂಡಿದ್ದಾರೆ. ಗಾಯಗೊಂಡವರ ಸಂಖ್ಯೆ ಖಚಿತವಾಗಿ ತಿಳಿದು ಬಂದಿಲ್ಲ’ ಎಂದು ತಿಳಿಸಿದ್ದಾರೆ.

‘ಕಾಬೂಲ್‌ನಲ್ಲಿ ಮತ್ತೆ ಇದೇ ರೀತಿಯ ದಾಳಿಗಳು ನಡೆಯುವ ಸಾಧ್ಯತೆ ಇದೆ. ಈ ದಾಳಿಯ ಹಿಂದೆ ಇಸ್ಲಾಮಿಕ್ ಸ್ಟೇಟ್ ಉಗ್ರರ ಕೈವಾಡವಿದೆ. ಇಸ್ಲಾಮಿಕ್ ಸ್ಟೇಟ್ ವಿರುದ್ಧ ಪ್ರತೀಕಾರ ಕೈಗೊಳ್ಳಲಾಗುವುದು’ ಎಂದು ಪೆಂಟಗಾನ್ ತಿಳಿಸಿದೆ.

ಒಳ ಪುಟ

ದಾಖಲೆ ಮುರಿದ ಗುವೊ ಲಿಂಗ್ಲಿಂಗ್ ‘ಪವರ್’ 12

ರಾಜ್ಯ ಕೋವಿಡ್ ಅಂಕಿ–ಅಂಶ

29,43,463 ▲	ಒಟ್ಟು ಸೋಂಕಿತರು (29,42,250 ನಿನ್ನೆಯ ವಿವರ)
19,300 ▼	ಸಕ್ರಿಯ ಪ್ರಕರಣಗಳು
28,86,906 ▲	ಗುಣಮುಖರಾದವರು
37,231 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	1,213	▼
ಗುಣಮುಖ	1,206	▼
ಸಾವು	25	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಚಿನಕುರಳಿ

ಪ್ರಕಾಶ್ ಶೆಟ್ಟಿ

ಅಂಗನವಾಡಿ ಕಾರ್ಯಕರ್ತೆಯರಿಂದ 'ಬೆಂಗಳೂರು ಚಲೊ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಫೆಡರೇಷನ್ (ಎಐಟಿಯುಸಿ) ವತಿಯಿಂದ ಸೆಪ್ಟೆಂಬರ್ 2ರಂದು 'ಬೆಂಗಳೂರು ಚಲೊ' ಹಮ್ಮಿಕೊಳ್ಳಲಾಗಿದೆ' ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ಎನ್.ಶಿವಣ್ಣ ತಿಳಿಸಿದ್ದಾರೆ.

'ಅಂಗನವಾಡಿ ಕೇಂದ್ರಗಳಲ್ಲಿ ಆಹಾರ ಧಾನ್ಯಗಳನ್ನು ವಿತರಿಸುವ ಬದಲು ಅದಕ್ಕೆ ತಗಲುವ ಮೊತ್ತವನ್ನು ಮಕ್ಕಳ ಖಾತೆಗೆ ಜಮೆ ಮಾಡಲು ಸರ್ಕಾರ ಚಿಂತನೆ ನಡೆಸಿರುವುದಾಗಿ ಹೇಳಲಾಗುತ್ತಿದೆ. ಹಾಗೊಮ್ಮೆ ಆದರೆ ಐಸಿಡಿಎಸ್ ಯೋಜನೆ ಹಾಳು ಮಾಡಿದಂತಾಗುತ್ತದೆ. ಹೀಗಾಗಿ ಈ ಚಿಂತನೆಯನ್ನು ಸರ್ಕಾರ ಕೈಬಿಡಬೇಕು. ಸೇವಾ ಹಿರಿತನದ ಆಧಾರದಲ್ಲಿ ಗೌರವ ಧನ ಹೆಚ್ಚಿಸಬೇಕು. ಅಂಗನವಾಡಿ ಕಾರ್ಯಕರ್ತರು ಹಾಗೂ ಸಹಾಯಕಿಯರನ್ನು ಸರ್ಕಾರಿ ನೌಕರರೆಂದು ಪರಿಗಣಿಸಬೇಕು' ಎಂದು ಅವರು ಒತ್ತಾಯಿಸಿದ್ದಾರೆ.

ಫೆಡರೇಷನ್‌ನ ಪ್ರಧಾನ ಕಾರ್ಯದರ್ಶಿ ಎಂ.ಜಯಮ್ಮ, 'ಪಿಂಚಣಿ, ಭವಿಷ್ಯ ನಿಧಿ, ಇಎಸ್‌ಐ ಸೇರಿದಂತೆ ಇತರೆ ಸೌಕರ್ಯಗಳನ್ನು ಕಲ್ಪಿಸಬೇಕು. ಪೋಷಣ್ ಅಭಿಯಾನದ ಅಡಿಯಲ್ಲಿ ಅಂಗನವಾಡಿ ಕೇಂದ್ರಗಳ ಮಾಹಿತಿಯನ್ನು ಒಂದೇ ಆ್ಯಪ್‌ನಲ್ಲಿ ಅಳವಡಿಸಲು ಕ್ರಮ ಕೈಗೊಳ್ಳಬೇಕು. ಅಂಗನವಾಡಿ ಕೇಂದ್ರಗಳಲ್ಲೇ ಎಲ್‌ಕೆಜಿ ಹಾಗೂ ಯುಕೆಜಿ ಆರಂಭಿಸಬೇಕು' ಎಂದು ಆಗ್ರಹಿಸಿದ್ದಾರೆ.

1.25 ಲಕ್ಷ ಮಂದಿಗೆ ಅಂಧತ್ವ

ಆರೋಗ್ಯ ಇಲಾಖೆಯಿಂದ ರಾಷ್ಟ್ರೀಯ ನೇತ್ರದಾನ ಪಾಕ್ಷಿಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದಲ್ಲಿ ಸದ್ಯ 1.25 ಲಕ್ಷ ಜನ ಅಂಧತ್ವ ಸಮಸ್ಯೆ ಎದುರಿಸುತ್ತಿದ್ದಾರೆ. ಅಂತಹವರಿಗೆ ದೃಷ್ಟಿ ಒದಗಿಸಲು ನೇತ್ರದಾನದ ಸಂಕಲ್ಪವನ್ನು ಪ್ರತಿಯೊಬ್ಬರೂ ಕೈಗೊಳ್ಳಬೇಕು' ಎಂದು ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕಿ ಅರುಂಧತಿ ಚಂದ್ರಶೇಖರ್ ತಿಳಿಸಿದ್ದಾರೆ.

ಆರೋಗ್ಯ ಇಲಾಖೆಯು ರಾಜ್ಯದಾದ್ಯಂತ ಸೆ.8ರವರೆಗೆ ರಾಷ್ಟ್ರೀಯ ನೇತ್ರದಾನ ಪಾಕ್ಷಿಕ ಹಮ್ಮಿಕೊಂಡಿದ್ದು, ನೇತ್ರದಾನ ಮಹತ್ವದ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ.

'ಕಣ್ಣಿಗೆ ಗಾಯವಾಗುವಿಕೆ, ಅಪಘಾತ, ಜೀವಸತ್ವದ ಕೊರತೆ ಹಾಗೂ ಆನುವಂಶಿಕ ಸಮಸ್ಯೆಗಳಿಂದ ಕೆಲವರು ದೃಷ್ಟಿ ಕಳೆದುಕೊಳ್ಳುತ್ತಿದ್ದಾರೆ. ಅಂತಹವರಿಗೆ ನೇತ್ರವನ್ನು ದಾನ ಮಾಡಿದಲ್ಲಿ ಸಾವಿನಲ್ಲಿಯೂ ಸಾರ್ಥಕತೆ ಕಾಣಲು ಸಾಧ್ಯ. ಹಾಗಾಗಿ, ಮರಣಾನಂತರ ನೇತ್ರದಾನ ಮಾಡುವುದಾಗಿ ಪ್ರತಿಜ್ಞೆ ಕೈಗೊಳ್ಳಬೇಕು' ಎಂದು ಹೇಳಿದ್ದಾರೆ.

ಅರುಂಧತಿ ಚಂದ್ರಶೇಖರ್

'ದೇಶದಲ್ಲಿ ಪ್ರತಿವರ್ಷ 40 ಸಾವಿರದಿಂದ 50 ಸಾವಿರದಷ್ಟು ನೇತ್ರಗಳನ್ನು ಸಂಗ್ರಹಿಸಲಾಗುತ್ತಿದೆ. ದೇಶದಲ್ಲಿ 750 ನೇತ್ರ ಸಂಗ್ರಹಣಾ ಕೇಂದ್ರಗಳಿವೆ. ಕರ್ನಾಟಕದಲ್ಲಿ 32 ಕೇಂದ್ರಗಳಿವೆ. ವ್ಯಕ್ತಿ ಮರಣ ಹೊಂದಿದ 6 ಗಂಟೆಯೊಳಗೆ ನೇತ್ರವನ್ನು ದಾನವಾಗಿ ಪಡೆಯಲಾಗುತ್ತದೆ. ಈ ಪ್ರಕ್ರಿಯೆ ಗರಿಷ್ಠ ಅರ್ಧಗಂಟೆಯಲ್ಲಿ ನಡೆಯಲಿದೆ' ಎಂದು ತಿಳಿಸಿದ್ದಾರೆ.

'ನೇತ್ರದಾನ ಮಾಡಿದ ಬಳಿಕ ಮುಖ ವಿರೂಪಗೊಳ್ಳುವುದಿಲ್ಲ. ಆದ್ದರಿಂದ ಮನೆಯಲ್ಲಿ ಅಥವಾ ಕುಟುಂಬದಲ್ಲಿ ಸಾವು ಸಂಭವಿಸಿದರೆ ನೇತ್ರದಾನದ ಬಗ್ಗೆ ಮಾಹಿತಿ ನೀಡಬೇಕು. ನಮ್ಮ ಸಿಬ್ಬಂದಿಯೇ ನೇತ್ರ ಸಂಗ್ರಹಿಸುತ್ತಾರೆ. ಒಂದು ವೇಳೆ ನೇತ್ರದಾನಕ್ಕೆ ಹೆಸರು ನೋಂದಾಯಿಸದಿದ್ದರೂ ಕುಟುಂಬದ ಸದಸ್ಯರು ಇಚ್ಛಿಸಿದಲ್ಲಿ ಕಣ್ಣುಗಳನ್ನು ದಾನವಾಗಿ ಪಡೆಯಬಹುದು. ಅವರು ಹತ್ತಿರದ ಆರೋಗ್ಯ ಕೇಂದ್ರ ಅಥವಾ 104 ಸಹಾಯವಾಣಿಗೆ ಕರೆ ಮಾಡಬೇಕು' ಎಂದು ಹೇಳಿದ್ದಾರೆ.

'ನೇತ್ರದಾನಕ್ಕೆ ವಯೋಮಿತಿಯ ನಿರ್ಬಂಧವಿಲ್ಲ. ಅಧಿಕ ರಕ್ತದೊತ್ತಡ, ಮಧುಮೇಹ ಸೇರಿದಂತೆ ವಿವಿಧ ಅನಾರೋಗ್ಯ ಸಮಸ್ಯೆ ಇರುವವರು ಕೂಡ ನೇತ್ರದಾನಕ್ಕೆ ಅರ್ಹರು. ಒಂದು ಜೊತೆ ನೇತ್ರಗಳು ಇಬ್ಬರಿಗೆ ಸಹಕಾರಿಯಾಗಲಿದೆ. ಬದುಕಿದ್ದಾಗ ರಕ್ತದಾನ ಮಾಡಿ, ಮರಣಾನಂತರ ನೇತ್ರದಾನ ಮಾಡಿ' ಎಂದು ಮನವಿ ಮಾಡಿದ್ದಾರೆ.

ಬಿಎಂಟಿಸಿ ಮಾಸಿಕ ಪಾಸ್ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೆಪ್ಟೆಂಬರ್ ತಿಂಗಳ ಮಾಸಿಕ ಪಾಸ್‌ಗಳನ್ನು ಆ.28ರಿಂದ ವಿತರಿಸಲು ಬಿಎಂಟಿಸಿ ನಿರ್ಧರಿಸಿದೆ.

ಪ್ರಯಾಣಿಕರಿಗೆ ತ್ವರಿತವಾಗಿ ಪಾಸ್‌ಗಳನ್ನು ಲಭ್ಯವಾಗಿಸಲು ಬಿಎಂಟಿಸಿ ಬಸ್ ನಿಲ್ದಾಣ, ಟಿಟಿಎಂಸಿ, ಬೆಂಗಳೂರು ಒನ್ ಕೇಂದ್ರ, ಖಾಸಗಿ ಏಜನ್ಸಿ ಮೂಲಕವೂ ಪಾಸ್ ವಿತರಿಸಲಾಗುವುದು ಎಂದು ಬಿಎಂಟಿಸಿ ತಿಳಿಸಿದೆ.

ಕೆಎಸ್‌ಪಿಸಿಬಿ: ಪರಿಸರಸ್ನೇಹಿ ಗಣೇಶ ಹಬ್ಬಕ್ಕೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಬಾರಿ ಪರಿಸರಸ್ನೇಹಿ ಗಣೇಶ ಹಬ್ಬ ಆಚರಿಸಬೇಕು ಎಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ಮನವಿ ಮಾಡಿಕೊಂಡಿದೆ.

ಮಂಡಳಿಯು ಅರಿಸಿನ ಗಣೇಶ ನಿರ್ಮಾಣದ ಅಭಿಯಾನವನ್ನು ಈಗಾಗಲೇ ಪ್ರಾರಂಭಿಸಿದ್ದು, ಈ ಬಾರಿ 10 ಲಕ್ಷ ಅರಿಸಿನ ಗಣೇಶ ವಿಗ್ರಹಗಳ ನಿರ್ಮಾಣದ ಗುರಿ ಹಾಕಿಕೊಂಡಿದೆ. ಸೆ.8ರಿಂದ ಸೆ.10ರವರೆಗೆ ಅರಿಸಿನ ಗಣೇಶ ವಿಗ್ರಹಗಳ ಫೋಟೋಗಳನ್ನು ಮಂಡಳಿಯ ಸಾಮಾಜಿಕ ಜಾಲತಾಣಗಳ ಪುಟದಲ್ಲಿ ಅಪ್‌ಲೋಡ್ ಮಾಡಲು ಅವಕಾಶ ನೀಡಲಾಗಿದೆ. ಮೊಬೈಲ್ ಆ್ಯಪ್ ಮತ್ತು ಕ್ಯೂಆರ್ ಕೋಡ್ ಸ್ಕ್ಯಾನ್ ನೆರವಿನಿಂದ ಕೂಡ ಅಪ್‌ಲೋಡ್ ಮಾಡುವ ಅವಕಾಶ ಒದಗಿಸಲಾಗಿದೆ.

ಅರಿಸಿನ ಗಣೇಶ ವಿಗ್ರಹಗಳ ಆರಾಧನೆಯ ಮಹತ್ವದ ಬಗ್ಗೆ ವಿವಿಧ ಕ್ಷೇತ್ರಗಳ ಗಣ್ಯರಿಂದ ವಿಡಿಯೊ ಸಂದೇಶ ಹಾಗೂ ಅರಿಸಿನ ಗಣೇಶ ವಿಗ್ರಹಗಳ ನಿರ್ಮಾಣದ ವಿಧಾನ ತಿಳಿಸಿಕೊಡುವ ವಿಡಿಯೊಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕಲಾಗುತ್ತಿದೆ.

'ಸ್ವಚ್ಛ ಮತ್ತು ಸುರಕ್ಷಿತ ಗಣೇಶ ಹಬ್ಬ ಆಚರಣೆ ಆದ್ಯತೆಯಾಗಿದೆ. ಪರಿಸರಸ್ನೇಹಿ ಹಬ್ಬಕ್ಕೆ ಪ್ರತಿಯೊಬ್ಬರೂ ಸಹಕಾರ ನೀಡಬೇಕು. ಅರಿಸಿನ ಗಣೇಶ ವಿಗ್ರಹ ತಯಾರಿಸಿ, ಆರಾಧಿಸಬೇಕು' ಎಂದು ಮಂಡಳಿಯ ಕಾರ್ಯದರ್ಶಿ ಶ್ರೀನಿವಾಸಲು ಮನವಿ ಮಾಡಿಕೊಂಡಿದ್ದಾರೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಹೊರಗೆ ಹೋಗುವಾಗ ಮುಖಗವಸು ಧರಿಸಿ

IN THE COURT OF THE PRINCIPAL CIVIL JUDGE AT GAURIBIDANUR

O.S.No.407/2019

Between

Plaintiff : Hanumanthappa V/s

Defendants : Chikka Obakka and others

Summons to the proposed defendants No.13 by way of paper publication Proposed defendant No.13. G.Ashwathappa S/o Gangappa, Aged about 62 years, R/at No.13, 4th Cross, Pampa Extension, Kemapur Hebbala, Bangalore – North, Bangalore-24.

Whereas the Plaintiff herein has filed the above suit against the defendants for portion and separate possession in respect the suit schedule property. Hence, you Proposed defendant No.13 herein above are hereby summons to appear before this court either in person or through your advocate at the said Court on 07.09.2021 at 11.00.a.m. to answer the claim of the suit.

Take notice in case of your non appearance on the day & time above mentioned, the above appeal will be heard and determined in your absence.

SCHEDULE

All the part and parcel of landed property bearing Sy.no.83/25 to an extent of 01.00acre, is being situated at Doddakurugodu village, Kasaba Hobli, Gowribidnaur taluk, Chikkaballapur District, Karnataka State bounded by: **East by:** B.H.Road, **West by:** Property in Sy.No.83/18, **North by :** Property by: Property in Sy.No.83/24, **South by:** Property in Sy.No.82.

Given under my hand and the seal of the court. 23.08.2021

By Order of the Court

Chief Administrative Office Court of Principal Civil Judge, Gowribidnaur.

S.R.Srinivas, Advocate, No.127, Jaramareddy building, Raghavendra Colony, Near B.S.N.L Tower, madhugiri.

PUBLIC NOTICE

General Public is/are hereby informed that my client/s is/are intending to purchase the below mentioned Schedule Properties from its registered owner viz., Smt R.Mohambal, W/o Late K.S Ramaswamy, R/at No 33-C, Unnamallai Ammal Street, T.Nagar, Chennai-17. If any person/s having any right, title, interest or claim of any kind or any objections, he/she/they is/are at liberty to notify with documentary proof of his/her/their right, title or claim if any to the below mentioned address within 15 days from the date of the publication of this notice. Any claim or objections raised and received after 15 days shall not bind on my clients and my client/s will proceed to purchase the Schedule Property presuming that there are no claims/objections what so ever.

SCHEDULE

Item No-I

All that piece and parcel of the agricultural land bearing Sy.No.14/1 of Chokkanahalli Village, Tubugere Hobli, Doddaballapura Taluk, Bengaluru Rural District, measuring 2 Acre 35 Guntas and bounded on the:

East by : Shanthamma's Land
West by : C.K Shivakumar's Land
North by : Dodda Muthappa's Land
South by : Dodda Muthappa's Land

Item No-II

All that piece and parcel of the agricultural land bearing Sy.No.14/2, 14/3, 14/4, 14/5, 14/6, 14/7, 14/8, 14/9 & Sy No 14/19, All lands situated at Chokkanahalli Village, Tubugere Hobli, Doddaballapura Taluk, Bengaluru Rural District, all lands are attached with each other comprising common boundaries to each other and overall measuring 1 Acre 19 Guntas and bounded on the:

East by : C R Jayadev's Land
West by : C R Jayadev's Land
North by : C R Shivakumar's Land
South by : Dodda Muthappa's Land

Sd/-

(Venkataramana Reddy)

Advocate

No.56, I Floor, I 'A' Main, 7th Block, Koramangala, Bangalore-560095.

Mobile No 9844130703

PUBLIC NOTICE

General Public is/are hereby informed that my client/s is/are intending to purchase the below mentioned Schedule Properties from its registered owners viz., Sri Jose Mani, S/o Sri K.I.Mani & Smt Panchy Mani, W/o Sri Jose Mani both are R/at No 2284, 14th A Main, HAL 2nd Stage, Indiranagar, Bengaluru-560008. If any person/s having any right, title, interest or claim of any kind or any objections, he/she/they is/are at liberty to notify with documentary proof of his/her/their right, title or claim if any to the below mentioned address within 15 days from the date of the publication of this notice. Any claim or objections raised and received after 15 days shall not bind on my clients and my client/s will proceed to purchase the Schedule Property presuming that there are no claims/objections what so ever.

SCHEDULE

Item No-I

All that piece and parcel of the agricultural land bearing Sy.No.12/P6 to 12/P10 of Chokkanahalli Village, Tubugere Hobli, Doddaballapura Taluk, Bengaluru Rural District, measuring 30 Acre and bounded on the:

East by : Remaining land in Sy No 12
West by : Sy No 13 and 14
North by: Remaining land in Sy No 12
South by: Remaining land in Sy No 12

Item No-II

All that piece and parcel of the agricultural land bearing Sy.No.13/1 of Chokkanahalli Village, Tubugere Hobli, Doddaballapura Taluk, Bengaluru Rural District, measuring 2 Acre 20 Guntas and bounded on the:

East by : Jayadev's Land
West by : Govt Road
North by : Dodda Muthappa's Land
South by : Jayadev's Land

Item No-III

All that piece and parcel of the agricultural land bearing Sy.No.13/1 of Chokkanahalli Village, Tubugere Hobli, Doddaballapura Taluk, Bengaluru Rural District, measuring 1 Acre 13 Guntas and bounded on the:

East by : Smt Panchy Jose's Land
West by : Tank bund
North by : Smt Panchy Jose's Land
South by: Jose Mani's Land

Item No-IV

All that piece and parcel of the agricultural land bearing Sy.No.14/10 of Chokkanahalli Village, Tubugere Hobli, Doddaballapura Taluk, Bengaluru Rural District, measuring 2 Acre 14 Guntas and bounded on the:

East by : Jayadev's Land
West by : Govt Road
North by: Dodda Muthappa's Land
South by: Jayadev's Land

Item No-V

All that piece and parcel of the agricultural land bearing Sy.No. 14/12, 14/13, 14/14, 14/15, 14/16, 14/17 & 14/18, All lands situated at Chokkanahalli Village, Tubugere Hobli, Doddaballapura Taluk, Bengaluru Rural District, all lands are attached with each other comprising common boundaries to each other and overall measuring 2 Acre 09 Guntas and bounded on the:

East by : Prabha's Land
West by : Muthappa's Land
North by : Prabha's Land
South by : C R Shivakumar's Land

Sd/-

(Venkataramana Reddy)

Advocate

No.56, I Floor, I 'A' Main, 7th Block, Koramangala, Bangalore-560095.

Mob No 9844130703

ನಗರಸಭಾ ಕಾರ್ಯಾಲಯ, ಚನ್ನಪಟ್ಟಣ

ರಾಮನಗರ ಜಿಲ್ಲೆ – 562160

ದೂರವಾಣಿ: 080–27251235, Helpline: 080-27256087

Website: **www.channapatnacity.gov.in** e-Mail: **itstaff_ulb_channapatna@yahoo.co.in**

ಸಂಖ್ಯೆ: ನಸಚ/ಆ.ಶಾ/ಪೌ.ಸ/ಸಿಆರ್–1/ನ.ನಿ(ಶೀ.24.10)/2021–22 ದಿನಾಂಕ: 23.08.2021

ಟೆಂಡರ್ ಪ್ರಕಟಣೆ

ಚನ್ನಪಟ್ಟಣ ನಗರಸಭೆಯ 2020–21ನೇ ಸಾಲಿನಲ್ಲಿ ಟೆಂಡರ್‌ಗಳನ್ನು ಕರೆಯಲಾಗಿದ್ದು, ಆಸಕ್ತ ಸರಬರಾಜುದಾರರು/ಏಜೆನ್ಸಿಗಳು/ಗುತ್ತಿಗೆದಾರರುಗಳು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದ್ದು, ವಿವರಗಳು ಈ ಕೆಳಗಿನಂತಿವೆ:

ವಿವರ: (1) ಚನ್ನಪಟ್ಟಣ ನಗರಸಭಾ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಹಾಗೂ ಹೊರಗುತ್ತಿಗೆ/ನೇರಪಾವತಿ ಪೌರಕಾರ್ಮಿಕರಿಗೆ ಸಮವಸ್ತ್ರ ಹಾಗೂ ಸುರಕ್ಷಾ ಧಿರಿಸುಗಳನ್ನು ಖರೀದಿಸುವುದು. ಅಂದಾಜು ಮೊತ್ತ: **2020–21ನೇ ಸಾಲಿನ ಶೀ. 24.10ರ ನಗರಸಭಾ ನಿಧಿಯಡಿ ರೂ. 2.16 ಲಕ್ಷ**. ಇ.ಎಂ.ಡಿ: **ರೂ. 6000/–**. (2) ಚನ್ನಪಟ್ಟಣ ನಗರಸಭಾ ವ್ಯಾಪ್ತಿಯಲ್ಲಿನ ಘನತ್ಯಾಜ್ಯ ವಸ್ತುಗಳನ್ನು ಸಂಸ್ಕರಣೆ ಮತ್ತು ವಿಲೇವಾರಿಗಾಗಿ ಬಯೋಕಲ್ಚರ್ ದ್ರಾವಣವನ್ನು ಖರೀದಿಸುವುದು. ಅಂದಾಜು ಮೊತ್ತ: **14ನೇ ಹಣಕಾಸು ಮತ್ತು ನಗರಸಭಾ ನಿಧಿ ರೂ. 5.00 ಲಕ್ಷ**. ಇ.ಎಂ.ಡಿ: **ರೂ. 13000/–**.

ಟೆಂಡರ್ ಫಾರಂಅನ್ನು ದಿನಾಂಕ: 25.08.2021 ರಿಂದ ಕಛೇರಿಯಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಸಲ್ಲಿಸುವ **ದಿನಾಂಕ: 07.09.2021 ರಂದು ಸಂಜೆ 4:30 ಗಂಟೆಯೊಳಗೆ**. ಟೆಂಡರ್‌ನ್ನು ತೆರೆಯುವ **ದಿನಾಂಕ: 07.09.2021 ರಂದು ಸಂಜೆ 5:00 ಗಂಟೆಗೆ**. ಹೆಚ್ಚಿನ ವಿವರಗಳಿಗೆ ಕಛೇರಿಯ ಆರೋಗ್ಯ ಶಾಖೆಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಪೌರಾಯುಕ್ತರು
ನಗರಸಭೆ, ಚನ್ನಪಟ್ಟಣ

ವಾಸಾಸಂಇ/ರಾನ/ಬ್ರಾಂಜ್/218/2021–22

ಕರಾಸಕೈಅನಿನಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು–560 010. ದೂರವಾಣಿ: 080-23407011-25, ಫ್ಯಾಕ್ಸ್:91-080-23143566/233889070, ಇ–ಮೈಲ್:kssidcho@karnataka.gov.in ವೆಬ್‌ಸೈಟ್:www.kssidc.co.in

ಸಂಖ್ಯೆ:ಕೈ.ವ:ಪೀಣ್ಯ–1:ಎ–180:ಬೀಗಮುದ್ರೆ:ಪೀಠೋ:ಯಂತೋ:ಹರಾಜು:2021 ದಿನಾಂಕ:24.08.2021

ಅಲ್ಪಾವಧಿ ಟೆಂಡರ್ ಪ್ರಕಟಣೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಕೈಗಾರಿಕಾ ವಸಾಹತು, ಪೀಣ್ಯ 1ನೇ ಹಂತ, ಕಚ್ಚಾಸಾಮಗ್ರಿ ಮಳಿಗೆ ಸಂಖ್ಯೆ ಎ–180ರಲ್ಲಿ ದಾಸ್ತಾನು ಮಾಡಿರುವ ಹಳೆ ಯಂತ್ರೋಪಕರಣಗಳು ಮತ್ತು ಹಳೆ ಪೀಠೋಪಕರಣಗಳಾದ ಟೇಬಲ್, ಖುರ್ಚಿ, ಅಲ್ಮೇರಾ, ರ್‍ಯಾಕ್ ಮತ್ತು ಇತರೆ ವಸ್ತುಗಳನ್ನು ದಾಸ್ತಾನು ಮಾಡಲಾಗಿದೆ, ಸದರಿ ಹಳೆ ಸಾಮಗ್ರಿಗಳು ಎಲ್ಲಿ ಹೇಗಿದೆಯೋ ಹಾಗೆ ವಿಲೇವಾರಿ ಮಾಡಲು ಇ–ಪ್ರೊಕ್ಯೂರ್‌ಮೆಂಟ್ Single Cover System ಟೆಂಡರ್ ಮುಖಾಂತರ ಈ ಕೆಳಕಂಡಂತೆ ಟೆಂಡರ್ ಆಹ್ವಾನಿಸಲಾಗಿದೆ.

ಸದರಿ ಹಳೆ ಸಾಮಗ್ರಿಗಳ ವಿಲೇವಾರಿ ಮಾಡಲು ಬಿಡ್ ಮೌಲ್ಯ **ರೂ. 6,00,000/– +ಜಿಎಸ್‌ಟಿ** ಮತ್ತು **ಮುಂಗಡ ಠೇವಣಿ ರೂ. 15,000/–** ನಿಗದಿಪಡಿಸಲಾಗಿದೆ. ಭಾಗವಹಿಸಲು ಆಸಕ್ತಿವುಳ್ಳ ಜಿಎಸ್‌ಟಿ ಹೊಂದಿರುವ ಬಿಡ್‌ದಾರರು ವಿವರವಾದ ಟೆಂಡರ್ ಪ್ರಕಟಣೆ, ದಾಖಲಾತಿಗಳನ್ನು ಆನ್‌ಲೈನ್ ಗೇಟ್‌ವೇ ಪೋರ್ಟಲ್ ವೆಬ್‌ಸೈಟ್ ಮೂಲಕ **ದಿನಾಂಕ: 27.08.2021ರ ಬೆಳಿಗ್ಗೆ 11.30ರ** ನಂತರ ಪಡೆದುಕೊಳ್ಳಬಹುದು. ಭರ್ತಿ ಮಾಡಲಾದ ಟೆಂಡರ್‌ನೊಂದಿಗೆ ಇ–ಟೆಂಡರ್‌ಗೆ ಸಂಬಂಧಿಸಿದ ಇ.ಎಂ.ಡಿ ಮೊತ್ತವನ್ನು ಇ–ಪೋರ್ಟಲ್ ಮೂಲಕ **ದಿನಾಂಕ: 06.09.2021 ರಂದು ಸಂಜೆ 05.00 ಗಂಟೆ ಒಳಗಾಗಿ** ಸಲ್ಲಿಸಬಹುದಾಗಿದೆ. ಸ್ವೀಕರಿಸಿದ ಬಿಡ್‌ಅನ್ನು **ದಿನಾಂಕ: 07.09.2021 ರಂದು ಬೆಳಿಗ್ಗೆ 11.30 ಗಂಟೆಗೆ** ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕೈ.ವ), ಬೆಂಗಳೂರು ವಿಭಾಗರವರ ಕಛೇರಿಯಲ್ಲಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://www.eproc.karnataka.gov.in** ಅಥವಾ ಇ–ಪ್ರೊಕ್ಯೂರ್‌ಮೆಂಟ್ ಸೆಲ್/ ಹೆಲ್ಪ್ ಡೆಸ್ಕ್ (ಸಂಚಾರಿ ದೂರವಾಣಿ ಸಂಖ್ಯೆ: 9513316637) ಮುಖಾಂತರ ಪಡೆಯಲು ಕೋರಿದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ವಾಸಾಸಂಇ/ಬೆಂ.ನ/ಜಿಎ/1326/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

IN THE COURT OF THE ADDITIONAL SENIOR CIVIL JUDGE AT GUBBI

R.A. No. 12/2021

Appellants: (1) Gangamma, (2) Jagadeesh **V/S**

Respondents: (2) N.S. Pankaja, aged about 57 years, W/o Nijaguna, R/at No.101, 4th Cross, 5th B Main, R.P.C.Layout, 2nd Stage, Near Sankatahara Ganapathi Temple Vijayanagara, Bangalore-40.

NOTICE BY WAY OF PAPER PUBLICATION

Whereas the appellants filed this appeal against the judgement and decree passed in O.S. no.211/2011 on the file of the Prl. Civil Judge and JMFC at Gubbi dated 09.12.2020. It is noticed to the respondent no.2 to appear before the aforesaid Hob'ble court either in person or through her counsel on 30.09.2021, failing which the matter will be heard and decided on the available records. By the order of the Hon'ble Addl. Senior Civil Judge at Gubbi, Tumakuru District, Karnataka State.

By order of the court,
Sign/- Sheristhedar
Addl. Senior Civil Judge & JMFC at Gubbi

K.S. Shivakumar, Raveeshkumar, Dinesh Kumar Advocates, Room No. 25& 26, V/3 Complex, Kari Basaveshwara Mutt Building, 1st Floor, Horapet Main Road, Tumakuru-572101.

KARNATAKA RURAL INFRASTRUCTURE DEVELOPMENT LIMITED

(Formerly KARNATAKA LAND ARMY CORPORATION LIMITED)

Grameenabhivruddhi Bhavan, 4th and 5th Floor, Anand Rao Circle, Bengaluru, Karnataka – 560009

KRIDL invites tenders through e-bidding from Public Sector banks / Regional Rural Banks / Private Sector banks for Investment of **Rs. 450.00 Crore** and **Rs. 395.00 Crore** in Fixed deposit for a period of one year. Other terms and conditions may be viewed on e-Procurement portal **www.eproc.karnataka.gov.in** from **26-08-2021**

Sd/- Managing Director

ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್

ಕಾರ್ಪೋರೇಟ್ ಐಡೆಂಟಿಫಿಕೇಶನ್ ನಂಬರ್ (ಸಿಐಎನ್): L18101KA2004PLC033475

ನೋಂದಾಯಿತ ಕಛೇರಿ: ನಂ. 25, 2ನೇ ಅಡ್ಡರಸ್ತೆ, 3ನೇ ಮುಖ್ಯರಸ್ತೆ, ಕೈಗಾರಿಕಾ ಉಪನಗರ, ಯಶವಂತಪುರ, ಬೆಂಗಳೂರು – 560022

ದೂ: +91 80 68951000 ಫ್ಯಾಕ್ಸ್: +91 80 68951001 ಇಮೇಲ್: info@gokaldasexports.com ವೆಬ್‌ಸೈಟ್: www.gokaldasexports.com

18ನೇ ವಾರ್ಷಿಕ ಸಾಮಾನ್ಯ ಸಭೆ, ಪುಸ್ತಕ ಮುಚ್ಚುವಿಕೆಯ ನೋಟೀಸ್ ಮತ್ತು ರಿಮೋಟ್ ಇ–ಮತದಾನ ಮಾಹಿತಿ

ಕಂಪನಿಯ ಸದಸ್ಯರ 18ನೇ ವಾರ್ಷಿಕ ಸಾಮಾನ್ಯ ಸಭೆ ('ಎಜಿಎಂ') **ಶುಕ್ರವಾರ, ಸೆಪ್ಟೆಂಬರ್ 17, 2021ರಂದು** ಭಾರತೀಯ ಕಾಲಮಾನ ("ಐಎಸ್‌ಟಿ") **ಮಧ್ಯಾಹ್ನ 2:30ಕ್ಕೆ** ಕಂಪನಿಗಳ ಕಾಯಿದೆ, 2013 ರ ಅನ್ವಯವಾಗುವ ನಿಯಮಗಳ ಅನುಸಾರವಾಗಿ ಸಾಮಾನ್ಯ ಸ್ಥಳದಲ್ಲಿ ಷೇರುದಾರರ ದೈಹಿಕ ಉಪಸ್ಥಿತಿಯಿಲ್ಲದೆ ವಿಡಿಯೋ ಕಾನ್ಫರೆನ್ಸಿಂಗ್ / ಅದರ್ ಆಡಿಯೋ ವಿಷುವಲ್ ಮೀನ್ಸ್ ಮೂಲಕ ("ವಿಸಿ/ಒಎವಿಎಂ") ಮೂಲಕ ನಡೆಯಲಿದ್ದು, ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದಿಂದ ("ಎಂಸಿಎ") ಹೊರಡಿಸಲಾದ ಸಾಮಾನ್ಯ ಸುತ್ತೋಲೆ ಸಂಖ್ಯೆ 14/2020 ದಿನಾಂಕ 8 ಏಪ್ರಿಲ್, 2020, ಸಾಮಾನ್ಯ ಸುತ್ತೋಲೆ ಸಂಖ್ಯೆ 17/2020 13 ಏಪ್ರಿಲ್, 2020 ಸಾಮಾನ್ಯ ಸುತ್ತೋಲೆ ಸಂಖ್ಯೆ 20/2020 ದಿನಾಂಕ 5 ಮೇ, 2020, ಸಾಮಾನ್ಯ ಸುತ್ತೋಲೆ ಸಂಖ್ಯೆ 22/2020 ದಿನಾಂಕ 15, ಜೂನ್ 2020, ಸಾಮಾನ್ಯ ಸುತ್ತೋಲೆ ಸಂಖ್ಯೆ 33/2020 ದಿನಾಂಕ 28, ಸೆಪ್ಟೆಂಬರ್ 2020, ಸಾಮಾನ್ಯ ಸುತ್ತೋಲೆ ಸಂಖ್ಯೆ 39/2020 ದಿನಾಂಕ 31, ಡಿಸೆಂಬರ್ 2020 ಮತ್ತು ಸುತ್ತೋಲೆ ಸಂಖ್ಯೆ 02/2021 ದಿನಾಂಕ 13, ಜನವರಿ 2021 ಹಾಗೂ ಸೆಕ್ಯೂರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ("ಸೆಬಿ ಸುತ್ತೋಲೆಗಳು") ಹೊರಡಿಸಲಾದ ಸುತ್ತೋಲೆ ಸಂಖ್ಯೆ SEBI/HO/CFD/CMD2/CIR/P/2021/11 ದಿನಾಂಕ 15 ಜನವರಿ, 2021 ಮತ್ತು ಕಾಯ್ದೆಯ ನಿಬಂಧನೆಗಳನುಸಾರ ಹಾಗೂ ಸೆಬಿ (ಲಿಸ್ಟಿಂಗ್ ಆಬ್ಲಿಗೇಷನ್ಸ್ ಅಂಡ್ ಡಿಸ್‌ಕ್ಲೋಷರ್ ರಿಕ್ವಾಯರ್‌ಮೆಂಟ್ಸ್) ನಿಯಂತ್ರಣಗಳು, 2015 ("ಲಿಸ್ಟಿಂಗ್ ರೆಗ್ಯುಲೇಷನ್ಸ್)ರಂತೆ ದಿನಾಂಕ 24ನೇ ಆಗಸ್ಟ್, 2021ರ ಎಜಿಎಂ ನೋಟೀಸ್‌ನಲ್ಲಿ ತಿಳಿಸಲಾದ ವ್ಯವಹಾರವನ್ನು ವ್ಯವಹಾರ ಮಾಡಲಾಗುವುದು.

ಕಂಪನಿ ಅಥವಾ ಡೆಪಾಸಿಟರಿ ಪಾರ್ಟಿಸಿಪೆಂಟ್(ಗಳ) ರವರೊಂದಿಗೆ ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಿಕೊಂಡಿರುವ ಸದಸ್ಯರಿಗೆ ಎಜಿಎಂ ನೋಟೀಸ್ ಮತ್ತು 2020–21ರ ವಾರ್ಷಿಕ ವರದಿಯ ವಿದ್ಯುನ್ಮಾನ ಪ್ರತಿಗಳನ್ನು ಮಾತ್ರ ವಿದ್ಯುನ್ಮಾನ ಮೂಲಕವಾಗಿ 26ನೇ ಆಗಸ್ಟ್ 2021ರಂದು ರವಾನಿಸಲಾಗಿದೆ. 18ನೇ ಎಜಿಎಂನ ನೋಟೀಸ್ ಮತ್ತು ಆರ್ಥಿಕ ವರ್ಷ 2020–21ರ ವಾರ್ಷಿಕ ವರದಿಯು ಕಂಪನಿಯ ವೆಬ್‌ಸೈಟ್ **www.gokaldasexports.com**ನ ವಾರ್ಷಿಕ ವರದಿಯ ವಿಭಾಗದ ಟ್ಯಾಬ್ ಮತ್ತು ಸ್ಟಾಕ್‌ಎಕ್ಸ್‌ಚೇಂಜ್ ವೆಬ್‌ಸೈಟ್‌ಗಳು ಅಂದರೆ, **www.bseindia.com** ಮತ್ತು **www.nseindia.com** ಕೆಫಿನ್ ಟೆಕ್ನಾಲಜೀಸ್ ಪ್ರೈ. ಲಿ. (ಕೆಫಿನ್‌ಟೆಕ್)ನ ವೆಬ್‌ಸೈಟ್ **https://evoting.kfintech.com** ನಲ್ಲಿ ಸಹ ಲಭ್ಯವಿದೆ.

ಸದಸ್ಯರು ವಿಸಿ/ಒಎವಿಎಂ ಮೂಲಕ ಎಜಿಎಂಗೆ ಹಾಜರಾಗಲು ಸೂಚನೆಗಳಿಗಾಗಿ ಎಜಿಎಂನ ಸೂಚನೆಯನ್ನು ಗಮನಿಸುವಂತೆ ಕೋರಲಾಗಿದೆ.

ಎ. ಡಿಮ್ಯಾಟ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರಿಗೆ ಇಮೇಲ್ ಐಡಿಯ ಶಾಶ್ವತ ನೋಂದಣಿ: ಡಿಮ್ಯಾಟ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ಡಿಪಾಸಿಟರಿ ಭಾಗವಹಿಸುವವರು ಸೂಚಿಸಿರುವ ವಿಧಾನವನ್ನು ಅನುಸರಿಸುವ ಮೂಲಕ ತಮ್ಮ ಡಿಪಾಸಿಟರಿ ಭಾಗವಹಿಸುವವರೊಂದಿಗೆ ನವೀಕರಿಸಲು ವಿನಂತಿಸಲಾಗಿದೆ.

ಬಿ. ಭೌತಿಕ ಷೇರುಗಳನ್ನು ಹೊಂದಿರುವ ಷೇರುದಾರರಿಗೆ ಇಮೇಲ್ ಐಡಿಯ ನೋಂದಣಿ: ಇ–ಮೇಲ್ ವಿಳಾಸ ನೋಂದಾಯಿಸದ ಸದಸ್ಯರು ತಾತ್ಕಾಲಿಕವಾಗಿ ತಮ್ಮನ್ನು ಕೆಫಿನ್‌ಟೆಕ್ / ಡಿಪಾಸಿಟರಿ ಪಾರ್ಟಿಸಿಪೆಂಟ್ಸ್‌ರವರೊಂದಿಗೆ **https://ris.kfintech.com/clientservices/mobilereg/mobileemailreg.aspx** ಲಿಂಕ್‌ಅನ್ನು ಕ್ಲಿಕ್ ಮಾಡುವುದರ ಮೂಲಕ ನೋಂದಾಯಿಸಿಕೊಳ್ಳುವಂತೆ ಕೋರಲಾಗಿದೆ ಅಥವಾ ಪರ್ಯಾಯವಾಗಿ ಇ–ಮೇಲ್ ಐಡಿ **einward.ris@kfintech.com** ನಲ್ಲಿ ಇ–ಮೇಲ್ ವಿಳಾಸದ ನೋಂದಣಿಗಾಗಿ ಮತ್ತು ಎಜಿಎಂ ಸೂಚನೆ ಪಡೆಯಲು ಇ–ಮೇಲ್ ವಿನಂತಿಯನ್ನು ಕಳುಹಿಸಿ ಹೆಸರು (ಗಳು), ಇ–ಮೇಲ್ ವಿಳಾಸ, ಮೊಬೈಲ್ ಸಂಖ್ಯೆ, ಸ್ವಯಂ ದೃಢೀಕೃತ ಪ್ಯಾನ್ ಕಾರ್ಡ್‌ನ ನಕಲು, ಎಲೆಕ್ಟ್ರಾನಿಕ್ ಫೋಲಿಯೋ ಆಗಿದ್ದಲ್ಲಿ ಕ್ಲೈಂಟ್ ಮಾಸ್ಟರ್ ಪ್ರತಿ ಮತ್ತು ಷೇರು ಪ್ರಮಾಣಪತ್ರದ ಪ್ರತಿಗಳನ್ನು ವಾರ್ಷಿಕ ವರದಿ ಮತ್ತು ಇ–ಮತದಾನದ ಸೂಚನೆಗಳನ್ನು ಸ್ವೀಕರಿಸಬಹುದಾಗಿರುತ್ತದೆ. ಎಜಿಎಂ ಸಮಯದಲ್ಲಿ ರಿಮೋಟ್ ಮತಚಲಾಯಿಸಲು ಅಥವಾ ಇ–ಮತದಾನ ಮಾಡುವ ವಿವರವಾದ ಕಾರ್ಯವಿಧಾನಕ್ಕಾಗಿ, ಮೇಲಿನ ವೆಬ್‌ಸೈಟ್‌ಗಳಲ್ಲಿ ಲಭ್ಯವಿರುವ ಎಜಿಎಂ ಪ್ರಕಟಣೆಯನ್ನು ಗಮನಿಸಲು ಸದಸ್ಯರನ್ನು ಕೋರಲಾಗಿದೆ.

ಸಿ. ಭೌತಿಕ ಷೇರುದಾರರಿಗೆ ಬ್ಯಾಂಕ್ ವಿವರಗಳ ನೋಂದಣಿ: ಭೌತಿಕ ರೂಪದಲ್ಲಿ ಕಂಪನಿಯ ಇಕ್ವಿಟಿ ಷೇರುಗಳನ್ನು ಹೊಂದಿರುವ ಮತ್ತು ತಮ್ಮ ಬ್ಯಾಂಕ್ ವಿವರಗಳನ್ನು ನೋಂದಾಯಿಸದ ಕಂಪನಿಯ ಸದಸ್ಯರು ರಿಜಿಸ್ಟ್ರಾರ್ ಮತ್ತು ಷೇರ್ ಟ್ರಾನ್ಸ್‌ಫರ್ ಏಜೆಂಟ್‌ನಲ್ಲಿ ನೋಂದಾಯಿಸಿಕೊಳ್ಳಬಹುದಾಗಿರುತ್ತಾರೆ. ಸದಸ್ಯರ ಹೆಸರು, ಫೋಲಿಯೊ ಸಂಖ್ಯೆ, ಪ್ರಮಾಣಪತ್ರ ಸಂಖ್ಯೆ, ಪ್ಯಾನ್, ಇ–ಮೇಲ್ ಐಡಿ ಮತ್ತು ಬ್ಯಾಂಕ್ ಹೆಸರು ಮತ್ತು ಶಾಖೆ, ಖಾತೆಯ ವಿಧಾನ, ಬ್ಯಾಂಕ್ ಖಾತೆ ಸಂಖ್ಯೆ, MICR ವಿವರಗಳು ಮತ್ತು IFSC ಕೋಡ್ ಹೊಂದಿರುವ ಚೆಕ್ ಪ್ರತಿಯ ಮೇಲೆ ಮೊದಲ ಹೆಸರಿನ ಷೇರುದಾರರ ಹೆಸರನ್ನು ಮುದ್ರಿಸಿರುವ ಚೆಕ್ ಲೀಫ್‌ನ ಪ್ರತಿಯನ್ನು PDF ಅಥವಾ JPEG ರೂಪದಲ್ಲಿ ಒದಗಿಸುವಂತೆ ಕೋರಲಾಗಿದೆ. ಯಾವುದೇ ಪ್ರಶ್ನೆಯ ಸಂದರ್ಭದಲ್ಲಿ, ಸದಸ್ಯರು ಆರ್‌ಟಿಎಗೆ **einward.ris@kfintech.com**ನಲ್ಲಿ ಇ–ಮೇಲ್ ಕಳುಹಿಸಬಹುದು.

ಸದಸ್ಯರು ವಿಸಿ/ಒಎವಿಎಂ ಮೂಲಕ ಮಾತ್ರ ಎಜಿಎಂನಲ್ಲಿ ಹಾಜರಾಗಬಹುದು ಮತ್ತು ಭಾಗವಹಿಸಬಹುದು. ಎಜಿಎಂನಲ್ಲಿ ಭಾಗವಹಿಸುವ ಸೂಚನೆಗಳು ಮತ್ತು ಎಜಿಎಂ ಸಮಯದಲ್ಲಿ ರಿಮೋಟ್ ಇ–ಮತದಾನ ಅಥವಾ ಇ–ಮತದಾನ ವ್ಯವಸ್ಥೆಯ ಮೂಲಕ ಮತ ಚಲಾಯಿಸುವ ವಿಧಾನವನ್ನು ಎಜಿಎಂ ನೋಟಿಸ್‌ನಲ್ಲಿ ನೀಡಲಾಗಿದೆ.

ಕಂಪೆನಿ ಕಾಯ್ದೆ, 2013ರ ಸೆಕ್ಷನ್ 91 ಮತ್ತು ಲಿಸ್ಟಿಂಗ್ ರೆಗ್ಯುಲೇಷನ್‌ಗಳ ರೆಗ್ಯುಲೇಷನ್ 42ರ ಪ್ರಕಾರ 31.03.2021ಕ್ಕೆ ಕೊನೆಗೊಂಡ ವರ್ಷದ ಕಂಪನಿಯ ವಾರ್ಷಿಕ ಸಾಮಾನ್ಯ ಸಭೆಯ ಉದ್ದೇಶಕ್ಕಾಗಿ ಕಂಪನಿಯ ಸದಸ್ಯ / ಷೇರು ವರ್ಗಾವಣೆ ಪುಸ್ತಕಗಳ ರಿಜಿಸ್ಟರ್ **ಶನಿವಾರ, 11ನೇ ಸೆಪ್ಟೆಂಬರ್ 2021ರಿಂದ ಶುಕ್ರವಾರ, 17ನೇ ಸೆಪ್ಟೆಂಬರ್ 2021ರ ವರೆಗೆ (ಎರಡೂ ದಿನಗಳನ್ನು ಒಳಗೊಂಡಂತೆ)** ಮುಚ್ಚಿರುತ್ತದೆ ಎಂದು ನೋಟಿಸ್ ನೀಡಲಾಗಿದೆ.

ಕಂಪನಿಗಳ ಕಾಯ್ದೆಯ ಸೆಕ್ಷನ್ 108ರ ಜೊತೆಗೆ ನಿಯಮಗಳು, 2014ರ ನಿಯಮ 20 (ಮ್ಯಾನೇಜ್‌ಮೆಂಟ್ ಅಂಡ್ ಅಡ್ಮಿನಿಸ್ಟ್ರೇಷನ್) ನ್ನು ಓದಿಕೊಂಡಂತೆ ಕಾಲಕಾಲಕ್ಕೆ ತಿದ್ದುಪಡಿ ಮಾಡಿದಂತೆ, ಇನ್ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೇಟರೀಸ್ ಆಫ್ ಇಂಡಿಯಾದಿಂದ ಹೊರಡಿಸಲಾದ ಸಾಮಾನ್ಯ ಸಭೆಗಳ ಸೆಕ್ರೆಟರಿಯಲ್ ಸ್ಟ್ಯಾಂಡರ್ಡ್ ('ಎಸ್‌ಎಸ್–2') ಮತ್ತು ಲಿಸ್ಟಿಂಗ್ ನಿಯಮಗಳ ನಿಯಮ 44ರ ನಿಬಂಧನೆಗಳಿಗೆ ಅನುಸಾರವಾಗಿ ಕಂಪನಿಯು ತನ್ನ ಸದಸ್ಯರಿಗೆ ಭೌತಿಕ ರೂಪದಲ್ಲಿ ಅಥವಾ ಡಿಮೆಟೀರಿಯಲೈಸ್ಡ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸೌಲಭ್ಯವನ್ನು ಒದಗಿಸಲು **ಸೆಪ್ಟೆಂಬರ್ 10, 2021 (ಕಟ್–ಆಫ್ ದಿನಾಂಕ)** ದಿನಾಂಕದಂದು ವಿದ್ಯುನ್ಮಾನವಾಗಿ ಇ–ವೋಟಿಂಗ್ ಪ್ಲಾಟ್‌ಫಾರ್ಮ್ ಮೂಲಕ ಪ್ರತಿ ಐಟಂಗೆ ಮತ ಚಲಾಯಿಸಲು 18ನೇ ಎಜಿಎಂನ ಸೂಚನೆಯಲ್ಲಿ ತಿಳಿಸಲಾಗಿದೆ. ಇ–ಮತದಾನದ ವಿವರವಾದ ವಿಧಾನ/ಸೂಚನೆಗಳು 18ನೇ ಎಜಿಎಂನ ಸೂಚನೆಯು ಒಳಗೊಂಡಿವೆ.

ಎಲ್ಲಾ ಸದಸ್ಯರಿಗೆ ಈ ಮೂಲಕ ತಿಳಿಸುವುದೇನೆಂದರೆ:

1. ಎಜಿಎಂ ನೋಟಿಸ್‌ನಲ್ಲಿ ಸೂಚಿಸಿರುವ ಸಾಮಾನ್ಯ ಮತ್ತು ವಿಶೇಷ ವ್ಯವಹಾರವನ್ನು ವಿದ್ಯುನ್ಮಾನ ವಿಧಾನದಿಂದ ಮತದಾನದ ಮೂಲಕ ವಹಿವಾಟು ಮಾಡಬಹುದು;
2. ಸದಸ್ಯರ ನೋಂದಣಿ ಪುಸ್ತಕ / ಫಲಾನುಭವಿ ಮಾಲೀಕರ ರಿಜಿಸ್ಟರ್‌ನಲ್ಲಿ ಕಟ್–ಆಫ್ ದಿನಾಂಕದಂದು ಅಂದರೆ ಶುಕ್ರವಾರ, ಸೆಪ್ಟೆಂಬರ್ 10, 2021ರಂದು ಹೆಸರು ದಾಖಲಾಗಿರುವ ವ್ಯಕ್ತಿ ಮಾತ್ರ ರಿಮೋಟ್ ಇ–ಮತದಾನ / ಎಜಿಎಂನಲ್ಲಿ ಇ–ಮತದಾನದ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ.
3. ಒಂದು ವೇಳೆ ಸೂಚನೆ ರವಾನೆಯಾದ ನಂತರ ಆದರೆ, ರಿಮೋಟ್ ಇ–ಮತದಾನದ ಕಟ್–ಆಫ್ ದಿನಾಂಕದಂದು ಅಥವಾ ಮೊದಲು ಯಾವುದೇ ವ್ಯಕ್ತಿ ಕಂಪನಿಯ ಸದಸ್ಯರಾದಲ್ಲಿ ಅಥವಾ ಸೂಚನೆಯು ರವಾನೆಯಾದ ನಂತರ ಇಮೇಲ್ ವಿಳಾಸವನ್ನು ನೋಂದಾಯಿಸಿಕೊಂಡಲ್ಲಿ, ಅಂತಹ ಸದಸ್ಯರು ಇ–ಮತದಾನದ ವಿಧಾನ ಮತ್ತು ಸೂಚನೆಯಲ್ಲಿ ಒದಗಿಸಿದ ರೀತಿಯಲ್ಲಿ ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಅನ್ನು ಪಡೆಯಬಹುದು. ಕಟ್–ಆಫ್ ದಿನಾಂಕದಂದು ಸದಸ್ಯರಲ್ಲದ ವ್ಯಕ್ತಿಯು ಎಜಿಎಂನ ಸೂಚನೆಯನ್ನು ಮಾಹಿತಿ ಉದ್ದೇಶಕ್ಕಾಗಿ ಮಾತ್ರ ಎಂದು ಪರಿಗಣಿಸಬೇಕು.
4. ರಿಮೋಟ್ ಇ–ಮತದಾನವು **14ನೇ ಸೆಪ್ಟೆಂಬರ್, 2021ರಂದು (ಬೆಳಿಗ್ಗೆ 9.00 ಐಎಸ್‌ಟಿ) ಪ್ರಾರಂಭವಾಗುತ್ತದೆ ಮತ್ತು 16ನೇ ಸೆಪ್ಟೆಂಬರ್, 2021ರಂದು (ಸಂಜೆ 5.00 ಐಎಸ್‌ಟಿ) ಕೊನೆಗೊಳ್ಳುತ್ತದೆ.** ರಿಮೋಟ್ ಇ–ಮತದಾನವನ್ನು ಮೇಲಿನ ದಿನಾಂಕ ಮತ್ತು ಸಮಯದ ನಂತರ ಅನುಮತಿಸಲಾಗುವುದಿಲ್ಲ. ಕಟ್–ಆಫ್ ದಿನಾಂಕ ಅಂದರೆ, 10ನೇ ಸೆಪ್ಟೆಂಬರ್, 2021ರಂದು ಸದಸ್ಯರ ನೋಂದಣಿ ಪುಸ್ತಕದಲ್ಲಿ ಅಥವಾ ಡೆಪಾಸಿಟರೀಸ್‌ರವರು ನಿರ್ವಹಿಸುವ ಫಲಾನುಭವಿ ಮಾಲೀಕರ ನೋಂದಣಿ ಪುಸ್ತಕದಲ್ಲಿ ಹೆಸರನ್ನು ದಾಖಲಿಸಿರುವ ವ್ಯಕ್ತಿಯು ರಿಮೋಟ್ ಇ–ಮತದಾನ ಅಥವಾ ಎಜಿಎಂ ಸಂದರ್ಭದಲ್ಲಿ ಇ–ಮತದಾನ ಸೌಲಭ್ಯವನ್ನು ಪಡೆಯಲು ಅರ್ಹರಾಗಿರುತ್ತಾರೆ. ಒಮ್ಮೆ ನಿರ್ಣಯಕ್ಕೆ ಅನುಸಾರ ಮತಚಲಾಯಿಸಿದ ಸದಸ್ಯರು ತದನಂತರ ಬದಲಾಯಿಸಲು ಅವಕಾಶವಿರುವುದಿಲ್ಲ.
5. ಎಜಿಎಂಗೆ ಮುಂಚಿತವಾಗಿ ರಿಮೋಟ್ ಇ–ಮತದಾನದ ಮೂಲಕ ಮತ ಚಲಾಯಿಸಿದ ಸದಸ್ಯರು ಎಜಿಎಂಗೆ ವಿಸಿ / ಒಎವಿಎಂ ಮೂಲಕ ಹಾಜರಾಗಬಹುದು ಆದರೆ ಸಭೆಯಲ್ಲಿ ಮತ್ತೆ ಮತ ಚಲಾಯಿಸಲು ಅರ್ಹರಾಗಿರುವುದಿಲ್ಲ. ಆದಾಗ್ಯೂ, ರಿಮೋಟ್ ಇ–ಮತದಾನದ ಮೂಲಕ ನಿರ್ಣಯಗಳ ಮೇಲೆ ತಮ್ಮ ಮತಗಳನ್ನು ಚಲಾಯಿಸದ ಸದಸ್ಯರು ಮತ್ತು ಹಾಗೆ ಮಾಡುವುದನ್ನು ನಿರ್ಬಂಧಿಸದಿದ್ದರೆ, ಎಜಿಎಂ ಸಮಯದಲ್ಲಿ ಇ–ಮತದಾನದ ವ್ಯವಸ್ಥೆಯ ಮೂಲಕ ಮತ ಚಲಾಯಿಸಲು ಅರ್ಹರಾಗಿರುತ್ತಾರೆ.
6. ಇ–ಮತದಾನದ ಕುರಿತಾಗಿ ವಿಚಾರಣೆಗಾಗಿ:

ಎ. ಡಿಮ್ಯಾಟ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ನಾನ್ ಇಂಡಿವಿಜುವಲ್ ಸದಸ್ಯರು ಮತ್ತು ಭೌತಿಕ ರೂಪದಲ್ಲಿ ಸೆಕ್ಯೂರಿಟಿಗಳನ್ನು ಹೊಂದಿರುವ ಸದಸ್ಯರು ಕೆಫಿನ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಅವರನ್ನು ಟೋಲ್ ಫ್ರೀ ಸಂಖ್ಯೆ 1–800–309–4001 ಮೂಲಕ ಸಂಪರ್ಕಿಸುವುದು ಅಥವಾ **einward.ris@kfintech.com** ಮತ್ತು **evoting@ kfintech.com**ಗೆ ಬರೆಯುವುದು. ಯಾವುದೇ ಹೆಚ್ಚಿನ ಸ್ಪಷ್ಟೀಕರಣಗಳಿಗಾಗಿ ಸದಸ್ಯರು ಕೆಫಿನ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್‌ನ ಶ್ರೀ ಶಿವಕುಮಾರ್‌ರವರನ್ನು **shivakumar.n@kfintech.com** ಅಥವಾ 040–67162222ನಲ್ಲಿ ಸಂಪರ್ಕಿಸಬಹುದು.

ಬಿ. NSDL ಮೂಲಕ ಷೇರುಗಳನ್ನು ಹೊಂದಿರುವ ಇಂಡಿವಿಜುವಲ್ ಸದಸ್ಯರು **evoting@nsdl.co.in**ಗೆ ಬರೆಯುವ ಮೂಲಕ ಅಥವಾ ಟೋಲ್ ಫ್ರೀ ಸಂಖ್ಯೆ 1800 1020 990 ಮತ್ತು 1800 22 44 30 ಮೂಲಕ NSDL ಸಹಾಯ ಕೇಂದ್ರವನ್ನು ಸಂಪರ್ಕಿಸಬಹುದು.

ಸಿ. CDSL ಮೂಲಕ ಷೇರುಗಳನ್ನು ಹೊಂದಿರುವ ಇಂಡಿವಿಜುವಲ್ ಸದಸ್ಯರು **helpdesk.evoting@cdslindia.com**ಗೆ ಬರೆಯುವ ಮೂಲಕ ಅಥವಾ 022– 23058738 ಅಥವಾ 022–23058542–43 ಮೂಲಕ CDSL ಸಹಾಯ ಕೇಂದ್ರವನ್ನು ಸಂಪರ್ಕಿಸಬಹುದು.

ವಕ್ತಾರರ ನೋಂದಣಿ ಪಡೆಯುವ ವಿಧಾನ:

ಎಜಿಎಂ ಸಂದರ್ಭದಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅಥವಾ ಪ್ರಶ್ನೆಗಳನ್ನು ಕೇಳಲು ಬಯಸುವ ಸದಸ್ಯರು ತಮ್ಮ ಹೆಸರು, ಡಿಪಿ ಐಡಿ ಮತ್ತು ಕ್ಲೈಂಟ್ ಐಡಿ/ಫೋಲಿಯೋ ಸಂಖ್ಯೆ, ಪ್ಯಾನ್, ಮೊಬೈಲ್ ಸಂಖ್ಯೆಯನ್ನು https://emeetings.kfintech.com ನಲ್ಲಿ ನಮೂದಿಸಿ ಸೆಪ್ಟೆಂಬರ್ 13, 2021 (ಬೆಳಿಗ್ಗೆ 9:00 ಗಂಟೆ ಐಎಸ್‌ಟಿ) ನಿಂದ ಸೆಪ್ಟೆಂಬರ್ 14, 2021 (ಸಂಜೆ 5:00 ಗಂಟೆ ಐಎಸ್‌ಟಿ) ವರೆಗೆ ತಮ್ಮ ನೋಂದಾಯಿತ ಇಮೇಲ್ ವಿಳಾಸದಿಂದ ವಕ್ತಾರರಾಗಿ ನೋಂದಾಯಿಸಿಕೊಳ್ಳಬಹುದು. ತಮ್ಮನ್ನು ವಕ್ತಾರರಾಗಿ ನೋಂದಾಯಿಸಿಕೊಂಡ ಸದಸ್ಯರಿಗೆ ಮಾತ್ರ ಎಜಿಎಂ ಸಂದರ್ಭದಲ್ಲಿ ತಮ್ಮ ಅಭಿಪ್ರಾಯಗಳನ್ನು / ಪ್ರಶ್ನೆಗಳನ್ನು ಕೇಳಲು ಅನುಮತಿಸಲಾಗುತ್ತದೆ. ಎಜಿಎಂಗಾಗಿ ಲಭ್ಯವಿರುವ ಸಮಯವನ್ನು ಅವಲಂಬಿಸಿ ವಕ್ತಾರರ ಸಂಖ್ಯೆಯನ್ನು ನಿರ್ಬಂಧಿಸುವ ಹಕ್ಕನ್ನು ಕಂಪನಿ ಹೊಂದಿದೆ.

ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್ ಪರವಾಗಿ
ಸಹಿ/–
ಶ್ರೀತಿ ಎಂ ಎಸ್
ಕಂಪನಿ ಕಾರ್ಯದರ್ಶಿ

ಸ್ಥಳ : ಬೆಂಗಳೂರು
ದಿನಾಂಕ : 26ನೇ ಆಗಸ್ಟ್ 2021

ಬಿಬಿಎಂಪಿ ಶಾಲಾ ಕಾಲೇಜುಗಳ 16,218 ವಿದ್ಯಾರ್ಥಿಗಳಿಗೆ 2020–21ನೇ ಸಾಲಿನಲ್ಲಿ ಸ್ವೆಟರ್ ವಿತರಣೆ

2,382 ವಿದ್ಯಾರ್ಥಿಗಳಿಗೆ ಇನ್ನೂ ನೀಡಿಲ್ಲ ಸ್ವೆಟರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಆಡಳಿತದ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ 2020–21ನೇ ಸಾಲಿನಲ್ಲಿ ವಿತರಿಸಲು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಿಂದ (ಕೆಎಚ್‌ಡಿಸಿ) ಸ್ವೆಟರ್‌ಗಳು ಪೂರೈಕೆಯಾಗಿದ್ದು, 2,382 ವಿದ್ಯಾರ್ಥಿಗಳಿಗೆ ಶಾಲಾ–ಕಾಲೇಜುಗಳು ಇನ್ನೂ ವಿತರಣೆ ಮಾಡಿಲ್ಲ.

'2020–21ನೇ ಸಾಲಿನಲ್ಲಿ ಸ್ವೆಟರ್ ವಿತರಣೆಯಲ್ಲಿ ಅಕ್ರಮ ನಡೆದಿದೆ. ಕೊರೊನಾ ಕಾರಣದಿಂದ ಬಿಬಿಎಂಪಿ ಶಾಲಾ, ಕಾಲೇಜುಗಳಲ್ಲಿ ತರಗತಿಗಳು ನಡೆದಿರಲಿಲ್ಲ. ಆದರೂ ಸ್ವೆಟರ್‌ಗಳನ್ನು ವಿದ್ಯಾರ್ಥಿಗಳಿಗೆ ನೀಡಲಾಗಿದೆ ಎಂದು ಹೇಳಿ ₹ 1.76 ಕೋಟಿ ಹಣ ಪಾವತಿ ಮಾಡಲಾಗಿದೆ' ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ಆರೋಪಿಸಿತ್ತು. ಈ ಬಗ್ಗೆ ಬಿಬಿಎಂಪಿಯ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಶಿಕ್ಷಣ ವಿಭಾಗದಿಂದ ವರದಿ ಕೇಳಿದ್ದರು. ಶಿಕ್ಷಣ ವಿಭಾಗದ ಸಹಾಯಕ ಆಯುಕ್ತರು 2020–21ನೇ ಸಾಲಿನಲ್ಲಿ ವಿದ್ಯಾರ್ಥಿಗಳಿಗೆ ಸ್ವೆಟರ್ ವಿತರಣೆ ಕುರಿತು ಬುಧವಾರ ವರದಿ ನೀಡಿದ್ದಾರೆ. ಯಾವ ಶಾಲೆಗೆ ಎಷ್ಟು ಸ್ವೆಟರ್‌ಗಳನ್ನು ಪೂರೈಸಲಾಗಿದೆ. ಅದರಲ್ಲಿ ವಿದ್ಯಾರ್ಥಿಗಳಿಗೆ ಎಷ್ಟು ಸ್ವೆಟರ್ ನೀಡಲಾಗಿದೆ ಎಂದು ಶಾಲಾವಾರು ವಿವರವನ್ನು ಅವರು ಒದಗಿಸಿದ್ದಾರೆ. ಅದರ ಪ್ರಕಾರ ಪಾಲಿಕೆ ಶಾಲಾ ಕಾಲೇಜುಗಳಿಗೆ 2020–21ನೇ ಸಾಲಿನಲ್ಲಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಿಂದ (ಕೆಎಚ್‌ಡಿಸಿ) ಒಟ್ಟು 18,600 ಸ್ವೆಟರ್‌ಗಳು ಪೂರೈಕೆ ಆಗಿವೆ. ಇದುವರೆಗೆ 16,218 ಸ್ವೆಟರ್‌ಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಲಾಗಿದೆ.

'ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆಯ (ಕೆಟಿಪಿಪಿ) 4 ಜಿ ಸೆಕ್ಷನ್ ಅಡಿ ವಿನಾಯಿತಿ ಪಡೆದು ಟೆಂಡರ್ ಕರೆಯದೆಯೇ ಸ್ವೆಟರ್ ಪೂರೈಕೆ ಮಾಡುವುದು ಇದು ಮೊದಲೇನಲ್ಲ. ಈ ಹಿಂದೆಯೂ ಅನೇಕ ಸಲ ಇದೇ ರೀತಿ ಸರ್ಕಾರದ ಅಧೀನದ ಕೆಎಚ್‌ಡಿಸಿಯಿಂದ ಸ್ವೆಟರ್ ಖರೀದಿಸಲಾಗಿದೆ. ಈ ನಿರ್ಧಾರವನ್ನು ಬಿಬಿಎಂಪಿಯ ಚುನಾಯಿತ ಕೌನ್ಸಿಲ್‌ನ ಸ್ಥಾಯಿ ಸಮಿತಿಯೇ ಕೈಗೊಂಡಿತ್ತು. ಅದಕ್ಕೆ ಎಲ್ಲ ರೀತಿಯ ಮಂಜೂರಾತಿಗಳನ್ನೂ ಪಡೆಯಲಾಗಿತ್ತು' ಎಂದು ಶಿಕ್ಷಣ ಇಲಾಖೆಯ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

2020ರ ಡಿ.23ರಂದು ಶಿಕ್ಷಣ ಇಲಾಖೆ ಹೊರಡಿಸಿದ ಸುತ್ತೋಲೆಯಂತೆ 6ರಿಂದ 9ನೇ ತರಗತಿ ವಿದ್ಯಾರ್ಥಿಗಳಿಗೆ ಆನ್‌ಲೈನ್ ತರಗತಿಗಳು ಹಾಗೂ ಎಸ್ಸೆಸ್ಸೆಲ್ಸಿ ಮತ್ತು ಪಿ.ಯು ಕಾಲೇಜು ವಿದ್ಯಾರ್ಥಿಗಳಿಗೆ 2021ರ ಜನವರಿಯಿಂದ ಏಪ್ರಿಲ್‌ವರೆಗೆ ತರಗತಿಗಳು ನಡೆದಿವೆ. ಆಗ ತರಗತಿಗೆ ಹಾಜರಾದ ವಿದ್ಯಾರ್ಥಿಗಳಿಗೆ ಮಾತ್ರ ಸ್ವೆಟರ್‌ಗಳನ್ನು ವಿತರಿಸಲಾಗಿದೆ ಎಂದು ಶಿಕ್ಷಣ ವಿಭಾಗದ ಅಧಿಕಾರಿಗಳು ಮುಖ್ಯ ಆಯುಕ್ತರಿಗೆ ಈ ಹಿಂದೆ ಸಲ್ಲಿಸಿದ್ದ ವರದಿಯಲ್ಲಿ ತಿಳಿಸಿದ್ದರು.

ಕೋಮಲ್‌ಗೂ ನಮಗೂ ಸಂಬಂಧವಿಲ್ಲ: ಕೆಎಚ್‌ಡಿಸಿ

'ಚಿತ್ರ ನಟ ಕೋಮಲ್‌ಗೂ ಕೆಎಚ್‌ಡಿಸಿಗೂ ಸಂಬಂಧವಿಲ್ಲ. ಸ್ವೆಟರ್ ಪೂರೈಕೆಗೆ ಸಂಬಂಧಿಸಿ ನಾವು ಅವರಿಗೆ ಯಾವುದೇ ಗುತ್ತಿಗೆ ನೀಡಿಲ್ಲ. ಈ ರೀತಿ ಉಪಗುತ್ತಿಗೆ ನೀಡಲು ಅವಕಾಶವೂ ಇಲ್ಲ. ಸ್ವೆಟರ್ ಪೂರೈಕೆ ಸಲುವಾಗಿ ಬಿಬಿಎಂಪಿ ನಮಗೆ ನೇರವಾಗಿ ಆದೇಶ ನೀಡುತ್ತದೆ' ಎಂದು ನಿಗಮದ ಅಧ್ಯಕ್ಷ ಸಿದ್ದು ಸವದಿ 'ಪ್ರಜಾವಾಣಿ'ಗೆ ತಿಳಿಸಿದರು.

'ಕೆಎಚ್‌ಡಿಸಿಯು ಕೇಂದ್ರೀಯ ಭಂಡಾರದಿಂದ ಬಟ್ಟೆ ತರಿಸಿಕೊಳ್ಳುತ್ತದೆ. ಅದರಿಂದ ತಯಾರಿಸಿದ ಸ್ವೆಟರ್‌ಗಳನ್ನು ಬಿಬಿಎಂಪಿ ಶಾಲಾ–ಕಾಲೇಜುಗಳಿಗೆ ಪೂರೈಸಲಾಗಿದೆ. ನಿಗಮದ ವಾಹನಗಳಲ್ಲೇ ಅವುಗಳನ್ನು ಶಾಲೆಗಳಿಗೆ ತಲುಪಿಸಲಾಗಿದೆ. ನಾನು ಅಧ್ಯಕ್ಷನಾಗುವ ಮುನ್ನವೇ ಪೂರೈಕೆ ಮಾಡಲಾಗಿದೆ. ಅವುಗಳ ಗುಣಮಟ್ಟದ ಪರೀಕ್ಷೆಗಳನ್ನೂ ಮಾಡಿಸಲಾಗಿದೆ. ಈ ಸಂಬಂಧ ನಮಗೆ ಬಿಬಿಎಂಪಿಯಿಂದ ಹಣ ಪಾವತಿ ಆಗಿದೆ. ಇದರಲ್ಲಿ ಒಂದು ರೂಪಾಯಿ ಅವ್ಯವಹಾರವೂ ನಡೆದಿಲ್ಲ' ಎಂದು ಅವರು ಸ್ಪಷ್ಟಪಡಿಸಿದರು.

ಯಾವ ಶಿಕ್ಷಣ ಸಂಸ್ಥೆಗೆ ಎಷ್ಟು ಸ್ವೆಟರ್ ಪೂರೈಕೆ?

ಶಿಕ್ಷಣ ಸಂಸ್ಥೆ	ಸಂಖ್ಯೆ	ಕೆಎಚ್‌ಡಿಸಿಯಿಂದ ಪೂರೈಕೆಯಾದ ಸ್ವೆಟರ್	ವಿದ್ಯಾರ್ಥಿಗಳಿಗೆ ವಿತರಿಸಿದ್ದು	ವಿತರಣೆಗೆ ಬಾಕಿ ಇರುವುದು
ಪ್ರಾಥಮಿಕ ಶಾಲೆಗಳು	16	4,302	3,143	1,159
ಪ್ರೌಢಶಾಲೆಗಳು	33	6,601	6,284	317
ಪಿ.ಯು.ಕಾಲೇಜುಗಳು	15	6,466	5,788	678
ಪದವಿ ಕಾಲೇಜುಗಳು	4	1,232	1004	228

ಪ್ರಜಾವಾಣಿ DH
EXAM ಪರಿಚಯಿಸುತ್ತಿದ್ದೇವೆ
MASTERMIND

ಪ್ರಿಯ ಸ್ಪರ್ಧಾರ್ಥಿಗಳೇ,

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸುತ್ತಿದ್ದೀರಾ? ರ್‍ಯಾಂಕ್, ಅತ್ಯುತ್ತಮ ಅಂಕ ಗಳಿಸಿ ಸರ್ಕಾರಿ ಉದ್ಯೋಗ ಗಿಟ್ಟಿಸುವ ಕನಸು ಕಂಡಿದ್ದೀರಾ? ಹಾಗಾದರೆ ನಿಮ್ಮ ಕನಸನ್ನು ನನಸಾಗಿಸಲು ನಿಮ್ಮ ಹೆಮ್ಮೆಯ 'ಪ್ರಜಾವಾಣಿ –ಡೆಕ್ಕನ್ ಹೆರಾಲ್ಡ್' ಇನ್ನೊಂದು ಮಹತ್ವದ ಹೆಜ್ಜೆ ಇಟ್ಟಿವೆ ಯುಪಿಎಸ್‌ಸಿ, ಕೆಪಿಎಸ್‌ಸಿ, ಬ್ಯಾಂಕಿಂಗ್, ರೈಲ್ವೆ, ಸಬ್ ಇನ್‌ಸ್ಪೆಕ್ಟರ್, ಪೊಲೀಸ್ ಕಾನ್‌ಸ್ಟೇಬಲ್, ಎಫ್‌ಡಿಎ.. ಹೀಗೆ ಎಲ್ಲಾ ಬಗೆಯ ಸ್ಪರ್ಧಾತ್ಮಕ ಪರೀಕ್ಷೆಗಳ ಓದಿಗೆ ನೆರವು ನೀಡುವ 'ಎಕ್ಸಾಂ ಮಾಸ್ಟರ್‌ಮೈಂಡ್' ಇ-ಪೇಪರ್ ಹೊರತರುತ್ತಿವೆ.

ಇಂಗ್ಲಿಷ್ ಮತ್ತು ಕನ್ನಡ ಎರಡೂ ಭಾಷೆಯಲ್ಲಿರುವ ಮತ್ತು ವಾರದ ಐದು ದಿನ ಲಭ್ಯವಿರುವ 'ಎಕ್ಸಾಂ ಮಾಸ್ಟರ್‌ಮೈಂಡ್' ಈ ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಲು ಸೂಕ್ತ ಅಧ್ಯಯನ ಸಾಮಗ್ರಿಯನ್ನು ಒಳಗೊಂಡಿದೆ. ಜನರಲ್ ಸ್ಟಡೀಸ್, ಸ್ಟ್ಯಾಟಿಕ್, ಕರೆಂಟ್ ಅಫೇರ್ಸ್, ರೀಸನಿಂಗ್ ಎಬಿಲಿಟಿ, ಇಂಗ್ಲಿಷ್ ಲ್ಯಾಂಗ್ವೇಜ್ ಆ್ಯಂಡ್ ವರ್ಬಲ್ ಎಬಿಲಿಟಿ, ಕ್ವಾಲಿಟೇಟಿವ್ ಆಪ್ಟಿಟ್ಯೂಡ್, ಪ್ರಬಂಧಗಳು, ಉಪಯುಕ್ತ ಸಲಹೆಗಳು ಮುಂತಾದವುಗಳ ಜೊತೆಗೆ ಮಾದರಿ ಪ್ರಶ್ನೋತ್ತರಗಳನ್ನು ಹಾಗೂ ಪೂರಕವಾದ ಆಡಿಯೊ ಮತ್ತು ವಿಡಿಯೊಗಳನ್ನು ನೀಡಲಿದೆ.

ಚಂದಾದಾರರಾಗಲು ಸಂಪರ್ಕಿಸಿ
ಎಕ್ಸಿಕ್ಯೂಟಿವ್ ಹೆಸರು: ಅರುಣ್ ಸ್ಟ್ಯಾನ್ಲಿ
ಮೊಬೈಲ್: 98454 42703
bit.ly/emmstudent

ವಿವಿಧೆಡೆ ವಿದ್ಯುತ್ ವ್ಯತ್ಯಯ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುರ್ತು ನಿರ್ವಹಣಾ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ಇದೇ 27ರಿಂದ 29ರವರೆಗೆ ಬೆಳಿಗ್ಗೆ 10ರಿಂದ ಸಂಜೆ 6ರ ತನಕ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

27: ಗಂಗೊಂಡನಹಳ್ಳಿ ಸೇತುವೆ, ನಾಯಂಡನಹಳ್ಳಿ, ಐಟಿಐ ಬಡಾವಣೆ, ದೊಡ್ಡಬೆಲೆ ರಸ್ತೆ, ಬಿಎಂಟಿಸಿ ಡಿಪೊ, ಬಿಇಎಂಎಲ್ ರಸ್ತೆ, ಮಾರಪ್ಪ ಬಡಾವಣೆ, ಮಾಗಡಿ ಮುಖ್ಯರಸ್ತೆ, ಸ್ಯಾಟಲೈಟ್ ಕ್ಲಬ್, ಬಿಡಿಎ ಬಡಾವಣೆ, ಉಪ್ಕಾರ್ ಬಡಾವಣೆ, ದೊಡ್ಡಬಸ್ತಿ ಪ್ರದೇಶ ಹಾಗೂ ಸುತ್ತ–ಮುತ್ತಲಿನ ಪ್ರದೇಶ.

28: ಕೆಐಎಡಿಬಿ ಕೈಗಾರಿಕಾ ಪ್ರದೇಶ, ಮಾದಪಟ್ಟಣ, ಸೀತನಾಯಕನಹಳ್ಳಿ ಗ್ರಾಮ, ಲಿಂಗಾಪುರ, ನಾಯಕನಹಳ್ಳಿ, ಕುಂಬಾರನಹಳ್ಳಿ, ದ್ಯಾವಸಂದ್ರ, ಕೋನಸಂದ್ರ, ಬೊಮ್ಮಂಡಹಳ್ಳಿ, ವಡೇರಮಂಚನಹಳ್ಳಿ, ನಂದನವನ ಬಡಾವಣೆ, ಕ್ಲಾಸಿಕ್ ಬಡಾವಣೆ, ವಕೀಲ್ ಬಡಾವಣೆ, ಹರಪ್ಪನಹಳ್ಳಿ, ಸ್ಪ್ರಿಂಗ್‌ವುಡ್, ಪ್ರೈಡ್‌ವಾಟಿಕಾ ಬಡಾವಣೆ, ಸತ್ತರ್‌ಸಾಬಿ ದಿನ್ನೆ.

ಗ್ರೀನ್‌ಮೆಡೋಸ್ ಬಡಾವಣೆ, ಕೊಪ್ಪ, ಐಶ್ವರ್ಯ ಬಡಾವಣೆ, ಜಿಗಣಿ ಜೋಡಿ ರಸ್ತೆ, ಬಸ್ ಡಿಪೊ, ಮಹಾಂತಲಿಂಗಾಪುರ, ಕಲ್ಲುಬಾಳು ರಸ್ತೆ, ಇಂಡ್ಲವಾಡಿ, ಚಿಕ್ಕ ಇಂಡ್ಲವಾಡಿ, ಚಿಕ್ಕನಹಳ್ಳಿ, ಮೈಸೂರಮ್ಮನ ದೊಡ್ಡಿ, ಕಾಡುಜಕ್ಕನಹಳ್ಳಿ, ತಿಮ್ಮಸಂದ್ರ, ಇಂಡ್ಲವಾಡಿಪುರ.

ಸುರಜಕ್ಕನಹಳ್ಳಿ, ಆದೂರು, ಸಿದ್ದನಪಾಳ್ಯ, ಚಿನ್ನಯ್ಯನಪಾಳ್ಯ, ತಮ್ಮನಾಯಕನಹಳ್ಳಿ, ಚಿಕ್ಕಹೊಸಹಳ್ಳಿ, ಚೂಡಹಳ್ಳಿ, ಕರಕಲಘಟ್ಟ, ಲಿಂಗಾಪುರ, ಅನುಗ್ರಹ ಬಡಾವಣೆ, ಎನ್. ಗೊಲ್ಲಹಳ್ಳಿ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

27ರಿಂದ 29:

ಅಣ್ಣಯ್ಯ ರೆಡ್ಡಿ ಬಡಾವಣೆ, ಎಸ್‌ಜೆಆರ್ ಅಪಾರ್ಟ್‌ಮೆಂಟ್, ಸ್ಟೆರ್ಲಿಂಗ್ ಬ್ರೂಕ್‌ಫೀಲ್ಡ್ ಅಪಾರ್ಟ್‌ಮೆಂಟ್, ಐಟಿಪಿಎಲ್ ಮುಖ್ಯ ರಸ್ತೆ, 'ಬಿ' ಬ್ಲಾಕ್, 'ಸಿ' ಬ್ಲಾಕ್, ಎಇಸಿಎಸ್ ಬಡಾವಣೆ, ಬ್ರೋಕ್ ಫೀಲ್ಡ್ ಆಸ್ಪತ್ರೆ ಮತ್ತು ಅಪೊಲೊ ಕ್ರೆಡಲ್ ಆಸ್ಪತ್ರೆ, ಪೂರ್ವರಿವೆರಾ ಅಪಾರ್ಟ್‌ಮೆಂಟ್, ಪೂರ್ವ ಫೌಂಟೇನ್, ಮಾರುತಿ ಬಡಾವಣೆ, ವೀರಪ್ಪ ರೆಡ್ಡಿ ಬಡಾವಣೆ, ರೋಹನ್ ವಸಂತ್ ಅಪಾರ್ಟ್‌ಮೆಂಟ್, ಚಿನ್ನಪ್ಪನಹಳ್ಳಿ, ಬಿ.ಇ.ಎಂ.ಎಲ್ ಬಡಾವಣೆ, ಡ್ರೀಮ್ ಮೆಡೋಸ್, ರಾಯಲ್ ಇಂಟರ್‌ನ್ಯಾಷನಲ್ ಸ್ಕೂಲ್, ಎಂ.ಎಸ್. ರಾಮಯ್ಯ ಅಪಾರ್ಟ್‌ಮೆಂಟ್, ವಿನಾಯಕ ಬಡಾವಣೆ, ದಿವ್ಯಶ್ರೀ ಟೆಕ್ ಪಾರ್ಕ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಆಸ್ತಿ ತೆರಿಗೆ, ಎಲ್‌ಪಿಜಿ ಸಿಲಿಂಡರ್ ದರ ಹೆಚ್ಚಳಕ್ಕೆ ವಿರೋಧ

ಕಾಂಗ್ರೆಸ್‌ನಿಂದ ಬಿಬಿಎಂಪಿಗೆ ಮುತ್ತಿಗೆ

ಪ್ರಜಾವಾಣಿ ವಾರ್ತೆ

ಕಾಂಗ್ರೆಸ್ ಕಾರ್ಯಕರ್ತರು ಬಿಬಿಎಂಪಿ ಕಚೇರಿ ಎದುರು ಗುರುವಾರ ನಡೆಸಿದ ಪ್ರತಿಭಟನೆಯಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಮಾತನಾಡಿದರು. ಶಾಸಕ ರಿಜ್ವಾನ್ ಅರ್ಷದ್, ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಎಂ. ನಾರಾಯಣ ಸ್ವಾಮಿ ಸೇರಿದಂತೆ ಹಲವರು ಪಾಲ್ಗೊಂಡರು

ಬೆಂಗಳೂರು: ನಗರದ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆಯ ವಲಯ ವರ್ಗೀಕರಣಕ್ಕೆ ತಕ್ಕಂತೆ ತೆರಿಗೆ ಪಾವತಿಸದವರಿಗೆ ದಂಡ ವಸೂಲಿಗೆ ಬಿಬಿಎಂಪಿ ನೋಟಿಸ್ ಜಾರಿ ಮಾಡಿರುವುದು ಹಾಗೂ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಸಿಲಿಂಡರ್ ದರ ಹೆಚ್ಚಳ ವಿರೋಧಿಸಿ ಬೆಂಗಳೂರು ಕೇಂದ್ರ ಜಿಲ್ಲಾ ಕಾಂಗ್ರೆಸ್ ಸಮಿತಿ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಗುರುವಾರ ಬಿಬಿಎಂಪಿ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಪಾಲಿಕೆ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದ ಕಾಂಗ್ರೆಸ್ ಕಾರ್ಯಕರ್ತರು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿರುದ್ಧ ಘೋಷಣೆ ಕೂಗಿದರು. ಆಸ್ತಿ ತೆರಿಗೆಯ ವಲಯ ವರ್ಗೀಕರಣಕ್ಕೆ ಅನುಸಾರವಾಗಿ ತೆರಿಗೆ ಪಾವತಿಸದವರಿಗೆ ದಂಡ ವಿಧಿಸುವ ಕ್ರಮವನ್ನು ಕೈಬಿಡುವಂತೆ ಆಗ್ರಹಿಸಿದರು. ಪೆಟ್ರೋಲಿಯಂ ಉತ್ಪನ್ನಗಳ ದರ ಏರಿಕೆ ತಡೆಯುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು.

ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ, 'ಆಸ್ತಿ ತೆರಿಗೆ ವಲಯ ವರ್ಗೀಕರಣಕ್ಕೆ ಅನುಗುಣವಾಗಿ ತೆರಿಗೆ ಪಾವತಿಸದವರಿಗೆ ದುಬಾರಿ ದಂಡ ವಿಧಿಸುವ ವಿಚಾರದಲ್ಲಿ ಬಿಬಿಎಂಪಿ ತಪ್ಪು ಮಾಡುತ್ತಿದೆ. ₹ 120 ಕೋಟಿ ಆಸ್ತಿ ತೆರಿಗೆ ಬಾಕಿಗೆ ₹ 240 ಕೋಟಿ ಬಡ್ಡಿ ಮತ್ತು ದಂಡ ವಿಧಿಸುವುದು ಸರಿಯಾದ ಕ್ರಮವಲ್ಲ. ಈ ತೀರ್ಮಾನವನ್ನು ಹಿಂಪಡೆಯಲು ನಾವು ನೀಡಿದ್ದ ಗಡುವು ಮುಗಿದಿದೆ. ಬಡ್ಡಿ ಹಾಗೂ ದಂಡ ವಿಧಿಸುವ ತೀರ್ಮಾನ ಕೈಬಿಡುವವರೆಗೂ ಹೋರಾಟ ಮುಂದುವರಿಸಲಾಗುವುದು' ಎಂದರು.

ವಿಧಾನ ಪರಿಷತ್ ಸದಸ್ಯ ಪಿ.ಆರ್. ರಮೇಶ್, 'ಅನಗತ್ಯವಾಗಿ ಜನರ ಮೇಲೆ ಆರ್ಥಿಕ ಹೊರೆ ಹೇರುವ ಕ್ರಮವನ್ನು ಬಿಬಿಎಂಪಿ ಆಡಳಿತ ಅನುಸರಿಸುತ್ತಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನೂ ಖಾಸಗೀಕರಣ ಮಾಡುವ ಪ್ರಯತ್ನ ನಡೆಯುತ್ತಿದೆ. ಕಾನೂನುಬಾಹಿರವಾಗಿ ವಿಧಿಸಿರುವ ಹೆಚ್ಚುವರಿ ತೆರಿಗೆಯ ಹೊರೆಯನ್ನು ತಕ್ಷಣವೇ ಹಿಂಪಡೆಯಬೇಕು' ಎಂದು ಒತ್ತಾಯಿಸಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್, ಶಾಸಕ ರಿಜ್ವಾನ್ ಅರ್ಷದ್, ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಎಂ. ನಾರಾಯಣಸ್ವಾಮಿ, ಬೆಂಗಳೂರು ಕೇಂದ್ರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಜಿ. ಶೇಖರ್, ಬೆಂಗಳೂರು ದಕ್ಷಿಣ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಜಿ. ಕೃಷ್ಣಪ್ಪ, ಬೆಂಗಳೂರು ಉತ್ತರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಎಂ. ರಾಜ್‌ಕುಮಾರ್ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

'ದಂಡ ವಸೂಲಿ–ಸರ್ಕಾರದ ಮಟ್ಟದಲ್ಲೇ ನಿರ್ಧಾರ'

'ವಲಯ ವರ್ಗೀಕರಣಕ್ಕೆ ಅನುಗುಣವಾಗಿ ಆಸ್ತಿ ತೆರಿಗೆ ಪಾವತಿಸದವರಿಂದ ದಂಡ ಸಮೇತ ಬಾಕಿ ತೆರಿಗೆ ಬಾಕಿ ವಸೂಲಿ ವಿಚಾರದಲ್ಲಿ ಎದುರಾಗಿರುವ ಗೊಂದಲದ ಬಗ್ಗೆ ಸರ್ಕಾರಕ್ಕೆ ವರದಿ ನೀಡಿದ್ದೇವೆ. ದಂಡದ ಮೊತ್ತ ಹೆಚ್ಚಾಗಿರುವ ಬಗ್ಗೆ ಈಗಾಗಲೇ ಸರ್ಕಾರದ ಗಮನಕ್ಕೆ ತಂದಿದ್ದೇವೆ. ಈ ಬಗ್ಗೆ ಸರ್ಕಾರವೇ ನಿರ್ಧಾರ ತೆಗೆದುಕೊಳ್ಳಲಿದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಸುದ್ದಿಗಾರರಿಗೆ ತಿಳಿಸಿದರು.

11 ಪಾಲಿಕೆ ವ್ಯಾಪ್ತಿಯಲ್ಲಿ ಸಂಜೆ ಕಾಲೇಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 11 ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಸರ್ಕಾರಿ ಪ್ರಥಮ ದರ್ಜೆ (ಪದವಿ) ಕಾಲೇಜುಗಳಲ್ಲಿ 2021–22ನೇ ಸಾಲಿನಿಂದ ಸಂಜೆ ಕಾಲೇಜುಗಳನ್ನು ಆರಂಭಿಸಲು ಉನ್ನತ ಶಿಕ್ಷಣ ಇಲಾಖೆ ಅನುಮೋದನೆ ನೀಡಿದೆ.

ಕೆಲವು ಷರತ್ತುಗಳೊಂದಿಗೆ ಇಲಾಖೆಯು ಸಂಜೆ ಕಾಲೇಜು ಆರಂಭಕ್ಕೆ ಆಡಳಿತಾತ್ಮಕ ಒಪ್ಪಿಗೆ ಸೂಚಿಸಿದೆ. ಈ ಕಾಲೇಜುಗಳಲ್ಲಿ ಈಗಿರುವ ಮೂಲಸೌಕರ್ಯವನ್ನೇ ಉಪಯೋಗಿಸಿಕೊಂಡು ವಿದ್ಯಾರ್ಥಿಗಳಿಂದ ಹೆಚ್ಚು ಬೇಡಿಕೆ ಇರುವ ಹಾಗೂ ಉತ್ತಮ ಉದ್ಯೋಗಾವಕಾಶಗಳು ದೊರೆಯಲು ಸಾಧ್ಯವಾಗುವ ಬಿ.ಕಾಂ ಮತ್ತು ಬಿಸಿಎ ಕೋರ್ಸುಗಳನ್ನು 'ಸಂಧ್ಯಾ ಶಕ್ತಿ' ಯೋಜನೆಯಡಿ ಪ್ರಾರಂಭಿಸಬೇಕು ಎಂದೂ ಸೂಚಿಸಿದೆ.

ಅಗತ್ಯವಿರುವ ಹುದ್ದೆಗಳನ್ನು ಸೃಷ್ಟಿಸಲು ಪ್ರತ್ಯೇಕ ಪ್ರಸ್ತಾವ ಸಲ್ಲಿಸಬೇಕು. ಇದಕ್ಕೆ ತಗಲುವ ವೆಚ್ಚವನ್ನು ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಬೇಕು ಎಂದು ರಾಜ್ಯ ಸರ್ಕಾರ ಸೂಚನೆ ನೀಡಿದೆ.

ಬಜೆಟ್‌ನಲ್ಲಿ ಘೋಷಣೆ: ಸಂಜೆ ಕಾಲೇಜುಗಳನ್ನು ಆರಂಭಿಸುವ ಬಗ್ಗೆ ಈ ಬಾರಿಯ ಬಜೆಟ್‌ನಲ್ಲಿ ಘೋಷಿಸಲಾಗಿತ್ತು. ಈ ಸಂಬಂಧ ಕಾಲೇಜು ಶಿಕ್ಷಣ ಇಲಾಖೆ ಆಯುಕ್ತರು ಸರ್ಕಾರಕ್ಕೆ ಕಳೆದ ಜೂನ್‌ನಲ್ಲಿ ಪ್ರಸ್ತಾವ ಸಲ್ಲಿಸಿದ್ದರು.

ಬೆಂಗಳೂರು, ತುಮಕೂರು, ಮೈಸೂರು, ಬೆಳಗಾವಿ, ಶಿವಮೊಗ್ಗ, ದಾವಣಗೆರೆ, ಮಂಗಳೂರು, ಧಾರವಾಡ, ವಿಜಯಪುರ, ಕಲಬುರ್ಗಿ ಮತ್ತು ಬಳ್ಳಾರಿ ಮಹಾನಗರ ಪಾಲಿಕೆಗಳ ವ್ಯಾಪ್ತಿಯ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಸಂಜೆ ಕಾಲೇಜು ಆರಂಭಿಸಲು ಅನುಮತಿ ಕೋರಿದ್ದರು.

ಪ್ರತಿ ಕಾಲೇಜಿಗೆ 13 ಸಿಬ್ಬಂದಿ: ಪ್ರತಿ ಸಂಜೆ ಕಾಲೇಜಿಗೆ ಒಬ್ಬ ಪ್ರಾಚಾರ್ಯ, 7 ಬೋಧಕರು ಸೇರಿದಂತೆ ಒಟ್ಟು 13 ಸಿಬ್ಬಂದಿ ಒದಗಿಸಲಾಗುತ್ತದೆ ಮತ್ತು ಪ್ರತಿ ವರ್ಷ ₹6.30 ಕೋಟಿ ಅನುದಾನ ನೀಡಲಾಗುತ್ತದೆ. ಇದರಂತೆ, ಆರ್ಥಿಕ ಇಲಾಖೆಯು ಆಯ್ದ ಕಾಲೇಜುಗಳಲ್ಲಿ ಸಂಜೆ ಕಾಲೇಜು ಆರಂಭಿಸಲು ಅನುಮತಿ ನೀಡಿದ್ದು, ಅಗತ್ಯ ಹುದ್ದೆಗಳ ಸೃಷ್ಟಿಗೆ ಪ್ರತ್ಯೇಕ ಪ್ರಸ್ತಾವ ಸಲ್ಲಿಸಲು ತಿಳಿಸಿದೆ ಎಂದು ಉನ್ನತ ಶಿಕ್ಷಣ ಇಲಾಖೆ ಆದೇಶದಲ್ಲಿ ತಿಳಿಸಿದೆ.

ಭೂಗತ ಕೇಬಲ್ ಅಳವಡಿಕೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಸಚಿವ ವಿ.ಸೋಮಣ್ಣ ಹಾಗೂ ಸಂಸದ ತೇಜಸ್ವಿ ಸೂರ್ಯ ಅವರು ಭೂಗತ ಕೇಬಲ್ ಅಳವಡಿಕೆ ಕಾಮಗಾರಿಗೆ ಗುರುವಾರ ಚಾಲನೆ ನೀಡಿದರು. ಬಿಜೆಪಿ ಯುವ ಮುಖಂಡ ಡಾ.ಅರುಣ್ ಸೋಮಣ್ಣ, ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ.ಸೋಮಶೇಖರ್ ಇದ್ದರು

ಬೆಂಗಳೂರು: 'ಗೋವಿಂದರಾಜನಗರ ಕ್ಷೇತ್ರದ ಬಹುತೇಕ ಭಾಗಗಳಲ್ಲಿ ಹೈಟೆನ್ಷನ್ ವಿದ್ಯುತ್ ತಂತಿಗಳು ಹಾದು ಹೋಗುತ್ತಿದ್ದವು. ಇದರಿಂದ ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದರು. ಇದನ್ನು ತಪ್ಪಿಸುವ ಉದ್ದೇಶದಿಂದ ಆ ತಂತಿಗಳನ್ನು ಭೂಗತ ಕೇಬಲ್‌ಗಳಾಗಿ ಪರಿವರ್ತಿಸುವ ಯೋಜನೆ ಕೈಗೆತ್ತಿಕೊಳ್ಳಲಾಗಿದೆ. ಆ ಮೂಲಕ ಜನರ ಜೀವ ರಕ್ಷಣೆಗೆ ಆದ್ಯತೆ ನೀಡಲಾಗಿದೆ' ಎಂದು ವಸತಿ ಸಚಿವ ವಿ.ಸೋಮಣ್ಣ ತಿಳಿಸಿದರು.

ಹೈಟೆನ್ಷನ್ ವಿದ್ಯುತ್ ತಂತಿಗಳನ್ನು ಭೂಗತ ಕೇಬಲ್‌ಗಳಾಗಿ ಪರಿವರ್ತಿಸುವ ಯೋಜನೆಗೆ ಚಾಲನೆ ನೀಡಿ ಮಾತನಾಡಿದರು.

'ಕ್ಷೇತ್ರದ ವಿವಿಧ ಭಾಗಗಳಲ್ಲಿ 66 ಕೆ.ವಿ. ಹೈಟೆನ್ಷನ್ ವಿದ್ಯುತ್ ತಂತಿಗಳು ಹಾದುಹೋಗಿದ್ದವು. ಆ ಪ್ರದೇಶಗಳಲ್ಲಿ ವಾಸಿಸುತ್ತಿದ್ದ ಕುಟುಂಬಗಳು ಆತಂಕದಲ್ಲೇ ದಿನ ದೂಡುವ ಪರಿಸ್ಥಿತಿ ನಿರ್ಮಾಣವಾಗಿತ್ತು. ವಿದ್ಯುತ್ ಪ್ರವಹಿಸಿ ಕೆಲವರು ಪ್ರಾಣವನ್ನೂ ಕಳೆದುಕೊಂಡಿದ್ದರು. ಹೀಗಾಗಿ ಸುಮಾರು 5.5 ಕಿ. ಮೀ ಉದ್ದದ ಎಚ್.ಡಿ. ಲೈನ್ ಅನ್ನು 7.5 ಕಿ.ಮೀ. ಭೂಗತ ಕೇಬಲ್ ಆಗಿ ಬದಲಾಯಿಸುವ ಯೋಜನೆ ಕೈಗೆತ್ತಿಕೊಳ್ಳಲಾಗಿದೆ. ಈ ಕಾಮಗಾರಿಯಿಂದ ರಾಜಾಜಿನಗರ 6 ನೇ ಬ್ಲಾಕ್, ಕೈಗಾರಿಕಾ ಪ್ರದೇಶ, ಮಾರೇನಹಳ್ಳಿ, ಎಂ.ಸಿ. ಬಡಾವಣೆ, ಡಾ.ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣ, ಮಾರುತಿ ಮಂದಿರ, ಅಗ್ರಹಾರ ದಾಸರಹಳ್ಳಿ, ಗೋವಿಂದರಾಜನಗರ, ಚಂದ್ರಾ ಬಡಾವಣೆ, ಗಂಗೊಂಡನಹಳ್ಳಿ ಜನರಿಗೆ ಅನುಕೂಲವಾಗಲಿದೆ. ಇದಕ್ಕಾಗಿ ₹126 ಕೋಟಿ ವೆಚ್ಚವಾಗಲಿದೆ' ಎಂದರು.

ಸಂಸದ ತೇಜಸ್ವಿ ಸೂರ್ಯ 'ಜನರ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸುವ ಉದ್ದೇಶದಿಂದ ಸೋಮಣ್ಣ ಅವರು ಈ ಯೋಜನೆ ಕೈಗೆತ್ತಿಕೊಂಡಿದ್ದಾರೆ' ಎಂದು ತಿಳಿಸಿದರು.

ನಗರದಲ್ಲಿ ಇಂದು

ಮಲ್ಲೇಪುರಂ ಜಿ. ವೆಂಕಟೇಶ್

'ನೃಪತುಂಗ ಸಾಹಿತ್ಯ ಪ್ರಶಸ್ತಿ' ಹಾಗೂ 'ಮಯೂರವರ್ಮ ಸಾಹಿತ್ಯ ಪ್ರಶಸ್ತಿ' ಪ್ರದಾನ ಕಾರ್ಯಕ್ರಮ: ಉದ್ಘಾಟನೆ: ಸಾರಿಗೆ ಸಚಿವ ಬಿ. ಶ್ರೀರಾಮುಲು, ಪ್ರಶಸ್ತಿ ಪ್ರದಾನ: ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನೀಲ್ ಕುಮಾರ್, ಅಧ್ಯಕ್ಷತೆ: ಮನು ಬಳಿಗಾರ್, 'ನೃಪತುಂಗ ಸಾಹಿತ್ಯ ಪ್ರಶಸ್ತಿ' ಪುರಸ್ಕೃತರು: ಮಲ್ಲೇಪುರಂ ಜಿ. ವೆಂಕಟೇಶ್, 'ಮಯೂರವರ್ಮ ಸಾಹಿತ್ಯ ಪ್ರಶಸ್ತಿ' ಪುರಸ್ಕೃತರು: ಟಿ.ಜಿ. ಶ್ರೀನಿಧಿ, ಮಮತಾ ಅರಸೀಕೆರೆ, ದೀಪಾ ಹಿರೇಗುತ್ತಿ, ಬಸವರಾಜ ಭಜಂತ್ರಿ ಹಾಗೂ ಜಗದೀಶ ಲಿಂಗನಾಯಕ, ಅಭಿನಂದನಾ ನುಡಿ: ಸರಜೂ ಕಾಟ್ಕರ್, ಮುಖ್ಯ ಅತಿಥಿಗಳು: ಎನ್.ಎಸ್. ನಂದೀಶ್‌ರೆಡ್ಡಿ, ಎಸ್. ರಂಗಪ್ಪ, ಎಂ.ಟಿ. ರೇಜು, ಉಪಸ್ಥಿತಿ: ವ.ಚ. ಚನ್ನೇಗೌಡ, ಆಯೋಜನೆ: ಕಸಾಪ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 4

'ದರ್ಪಣ' ಸಾಕ್ಷ್ಯಚಿತ್ರ ಪ್ರದರ್ಶನ: 'ಸಿ. ನಾರಾಯಣ ರೆಡ್ಡಿ', ನಿರ್ದೇಶನ: ವೆಂಕಟ್ ಪರ್ಸಾ, ಆಯೋಜನೆ ಮತ್ತು ಸ್ಥಳ: ಸಾಹಿತ್ಯ ಅಕಾಡೆಮಿ, ಸೆಂಟ್ರಲ್ ಕಾಲೇಜು ಆವರಣ, ಸಂಜೆ 5

ಸಂಕ್ಷಿಪ್ತ ಸುದ್ದಿ

ಹಾಲು ಕರೆಯುವ ಯಂತ್ರ: ಸಹಾಯಧನಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ನಗರ ಜಿಲ್ಲೆಯ ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ವಿದ್ಯುತ್ ಚಾಲಿತ ಹಾಲು ಕರೆಯುವ ಯಂತ್ರ ಖರೀದಿಸಲು ಶೇ 90ರಷ್ಟು ಸಹಾಯಧನ ನೀಡಲಿದ್ದು ಇದಕ್ಕಾಗಿ ಅರ್ಜಿ ಆಹ್ವಾನಿಸಿದೆ.

ಎಸ್‌ಸಿಪಿ ಮತ್ತು ಟಿಎಸ್‌ಪಿ ಯೋಜನೆಗಳ ಅಡಿಯಲ್ಲಿ ನೀಡಲಾಗುತ್ತಿರುವ ಈ ಸಹಾಯಧನವು ನೆಲಕ್ಕೆ ಹಾಕುವ ರಬ್ಬರ್ ಹಾಸುಗಳ ಖರೀದಿಗೂ ಅನ್ವಯವಾಗಲಿದೆ. ಮಿಶ್ರ ತಳಿಯ 2 ರಿಂದ 3 ಹಸುಗಳನ್ನು ಸಾಕುತ್ತಿರುವವರು ಅರ್ಜಿ ಸಲ್ಲಿಸಲು ಅರ್ಹರು.

ಆಸಕ್ತ ರೈತರು ತಮ್ಮ ಹತ್ತಿರದ ಪಶುವೈದ್ಯ ಸಂಸ್ಥೆಗಳಿಂದ ಅರ್ಜಿಗಳನ್ನು ಪಡೆದು, ಸೆಪ್ಟೆಂಬರ್ 10ರೊಳಗೆ ಅವುಗಳನ್ನು ಸಲ್ಲಿಸಬೇಕು. ಇದರ ಜೊತೆಗೆ ಸೂಕ್ತ

ದಾಖಲೆಗಳನ್ನೂ ಲಗತ್ತಿಸಬೇಕು ಎಂದು ಸೂಚಿಸಲಾಗಿದೆ.

ನಾಳೆ ಹೃದಯ ತಪಾಸಣಾ ಶಿಬಿರ

ಬೆಂಗಳೂರು: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ (ಕೆಪಿಸಿಸಿ) ವೈದ್ಯಕೀಯ ಘಟಕವು ಬಸವನಗುಡಿ ವಿಧಾನಸಭಾ ಕ್ಷೇತ್ರದಲ್ಲಿ ಉಚಿತ ಹೃದಯ ತಪಾಸಣಾ ಶಿಬಿರ ಹಮ್ಮಿಕೊಂಡಿದೆ.

'ಇದೇ 28ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 12 ಗಂಟೆವರೆಗೆ ನಡೆಯುವ ಈ ಶಿಬಿರದಲ್ಲಿ ತತಾಗತ್ ಆಸ್ಪತ್ರೆಯ ಹಿರಿಯ ವೈದ್ಯರು ಭಾಗವಹಿಸಲಿದ್ದು ಇಸಿಜಿ, ರಕ್ತದಲ್ಲಿನ ಸಕ್ಕರೆ ಪ್ರಮಾಣ ಸೇರಿದಂತೆ ಇತರ ತಪಾಸಣೆಗಳನ್ನು ಮಾಡಲಿದ್ದಾರೆ' ಎಂದು ವೈದ್ಯಕೀಯ ಘಟಕದ ಪ್ರಧಾನ ಕಾರ್ಯದರ್ಶಿ ಡಾ.ಶಂಕರ ದ್ವಾರಕನಾಥ್ ಬೆಳ್ಳೂರ್ ತಿಳಿಸಿದ್ದಾರೆ.

ಬನಶಂಕರಿ 1ನೇ ಹಂತದಲ್ಲಿರುವ ಬ್ಯಾಂಕ್ ಕಾಲೊನಿ ಬಸ್‌ನಿಲ್ದಾಣದ ಹಿಂಭಾಗದಲ್ಲಿರುವ ಕೆಪಿಸಿಸಿ ಬೆಂಗಳೂರು ದಕ್ಷಿಣ ವಿಭಾಗದ ವೈದ್ಯಕೀಯ ಘಟಕದ ಕಚೇರಿ ಆವರಣದಲ್ಲಿ ಶಿಬಿರ ನಡೆಯಲಿದೆ. ಹೆಸರು ನೋಂದಾಯಿಸಲು 96068 09309ಗೆ ಕರೆ ಮಾಡಬಹುದು.

ಆಕಾಶವಾಣಿ ರಸಪ್ರಶ್ನೆ ಕಾರ್ಯಕ್ರಮ

ಬೆಂಗಳೂರು: ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಬೆಂಗಳೂರು ಆಕಾಶವಾಣಿಯ ಸುದ್ದಿ ವಿಭಾಗವು ಪ್ರತಿ ಭಾನುವಾರ ಸಂಜೆ 6.40ರ ಪ್ರದೇಶ ಸಮಾಚಾರದಲ್ಲಿ ಸಾಪ್ತಾಹಿಕ ವಿಶೇಷ ರಸಪ್ರಶ್ನೆ ಕಾರ್ಯಕ್ರಮ ಹಮ್ಮಿಕೊಂಡಿದೆ.

'ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ನಾಡಿನ ಕೊಡುಗೆ, ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಘಟನೆಗಳ ಕುರಿತ ರಸಪ್ರಶ್ನೆಗಳನ್ನು ಕಾರ್ಯಕ್ರಮದಲ್ಲಿ ಕೇಳಲಾಗುತ್ತದೆ. ಸೂಕ್ತ ಉತ್ತರ ನೀಡಿ ವಿಜೇತರಾದವರಿಗೆ ಪ್ರಮಾಣಪತ್ರ ನೀಡಿ, ಗೌರವಿಸಲಾಗುತ್ತದೆ' ಎಂದು ಬೆಂಗಳೂರು ಆಕಾಶವಾಣಿ ಸುದ್ದಿ ವಿಭಾಗದ ಉಪ ನಿರ್ದೇಶಕ ಟಿ.ಬಿ. ನಂಜುಂಡಸ್ವಾಮಿ ತಿಳಿಸಿದ್ದಾರೆ.

2023ರ ಆ.15 ರವರೆಗೆ ಈ ರಸಪ್ರಶ್ನೆ ಕಾರ್ಯಕ್ರಮ ನಡೆಯಲಿದೆ.

ಹೊಸ
Sleepwell COCOON
ಭಾರತದ ನಂ.1 ಕಸ್ಟಮೈಸ್ ಮಾಡಬಹುದಾದ ಆರ್ಥೋಪೆಡಿಕ್ ಮ್ಯಾಟ್ರೆಸ್
"ಅವರ ಹಾಗೆಯೇ ನನ್ನ ಅನುಕೂಲವೂ ಪ್ರಮುಖ"

ಆರ್ಥೋ ಗಟ್ಟಿ ಬದಿ
ಮೃದು ಬದಿ
ಸುರಕ್ಷಿತ ಮತ್ತು ಶುಚಿಯಾಗಿ ಬಾಕ್ಸ್‌ನಲ್ಲಿ ಮ್ಯಾಟ್ರೆಸ್ ಡೆಲಿವರಿ
ಸೂಕ್ತ ಆರ್ಥೋಪೆಡಿಕ್ ಬೆಂಬಲ
5 ವರ್ಷ ವಾರಂಟಿ
ಬಯಸಿದ ಸರ್ಫೇಸ್ ಫೀಲ್ ಪಡೆಯಲು ಲೇಯರ್‌ಗಳನ್ನು ಬದಲಿಸಲು ಝಿಪ್ ಇರುವ ಕವರ್
neem fresche For germ protection
www.mysleepwell.com • Toll Free: 1800 103 6664
Exclusive Outlets: Rajajinagar:9880715815/9845434933, Kanakapura Road: 9845007572/0809-40957572, Nagarbhavi: 9986528988 / 7760073655, Malleshwaram: 9844533370, Infantry Road: 22861888/9742737791, Banashankari: 9341258880/080-26694602, JC Road/Lalbagh Fort Rd: 9901941604/9341264330, ITPL: 9845164788, Vijayanagar: 9886327712, JP Nagar: 9880933913, Banaswadi: 9880247052, Maratahalli: 9900044550, HSR Layout: 9731312283, Sarjapur Road: 8904740310, Bellandur: 9845013345, Whitefield Road/Siddapura: 9916534634, Basavanagudi: 9611208586/080-26579077, HosurRoad/Singasandra: 9945535965/ 8553340301, Koramangala:9929946846, For Trade Enquiries and Showrooms: 08026570860/250.

ನಟ ದೊಡ್ಡಣ್ಣ ಆಸ್ಪತ್ರೆಗೆ ದಾಖಲು

ಬೆಂಗಳೂರು: ಕಳೆದ ಕೆಲ ದಿನಗಳಿಂದ ಅಸ್ವಸ್ಥರಾಗಿದ್ದ ಹಿರಿಯ ನಟ ದೊಡ್ಡಣ್ಣ ಅವರು ಚಿಕಿತ್ಸೆಗಾಗಿ ನಗರದ ಜಯದೇವ ಆಸ್ಪತ್ರೆಗೆ ದಾಖಲಾಗಿದ್ದಾರೆ. ಹೃದಯದ ಬಡಿತ ಇಳಿಕೆಯಾಗಿದ್ದ ಕಾರಣ ಅವರಿಗೆ ಶಸ್ತ್ರಚಿಕಿತ್ಸೆ ನಡೆಸಿ ಪೇಸ್‌ಮೇಕರ್ ಅಳವಡಿಸಲಾಗಿದೆ.

'ಕೆಲ ದಿನಗಳಿಂದ ಅವರಿಗೆ ಸುಸ್ತು, ತಲೆಸುತ್ತು ಕಾಡುತ್ತಿದೆ ಎಂದು ಬುಧವಾರ ಆಸ್ಪತ್ರೆಗೆ ಬಂದಾಗ ಹೇಳಿದರು. ಗುರುವಾರ ಶಸ್ತ್ರಚಿಕಿತ್ಸೆ ನಡೆಸಿ ಪೇಸ್‌ಮೇಕರ್ ಅಳವಡಿಸಲಾಗಿದೆ. ಇದು ಹೃದಯಾಘಾತ ಅಲ್ಲ. ಮೂರು ದಿನಗಳಲ್ಲಿ ಅವರು ಆಸ್ಪತ್ರೆಯಿಂದ ಮನೆಗೆ ತೆರಳಲಿದ್ದಾರೆ' ಎಂದು ಜಯದೇವ ಹೃದ್ರೋಗ ಆಸ್ಪತ್ರೆಯ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್, ತಿಳಿಸಿದ್ದಾರೆ.

ಆರು ತಿಂಗಳಿಂದ ದೊರೆತಿಲ್ಲ ವೇತನ; ಕುಟುಂಬ ನಿರ್ವಹಣೆ ಕಷ್ಟ

ಸಂಕಷ್ಟದಲ್ಲಿ ವಿಶೇಷ ಶಾಲೆಗಳ ಸಿಬ್ಬಂದಿ

• ಬಸವರಾಜ ಹವಾಲ್ದಾರ

ಹುಬ್ಬಳ್ಳಿ: ಕೋವಿಡ್ ಕಾಲದಲ್ಲಿಯೂ ಆನ್‌ಲೈನ್‌ನಲ್ಲಿ ಅಂಧ, ಅಂಗವಿಕಲ, ವಿಶೇಷ ಮಕ್ಕಳಿಗೆ ಪಾಠ ಮಾಡುತ್ತಿರುವ ರಾಜ್ಯದ 34 ಅನುದಾನಿತ ಅಂಗವಿಕಲರ ವಿಶೇಷ ಶಾಲೆಗಳ ಸಿಬ್ಬಂದಿಗೆ ಆರು ತಿಂಗಳ ವೇತನ ಬಿಡುಗಡೆಯಾಗಿಲ್ಲ. ಆ ಕುಟುಂಬಗಳು ಆರ್ಥಿಕ ಸಂಕಷ್ಟ ಎದುರಿಸುತ್ತಿವೆ.

ರಾಜ್ಯದ ಅನುದಾನ ಸಂಹಿತೆ 1982ರಡಿ ಈ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸಲಾಗಿದೆ. ಸಾವಿರಾರು ವಿಶೇಷ ಮಕ್ಕಳಿಗೆ ಶಿಕ್ಷಣ ನೀಡಲಾಗುತ್ತಿದೆ. ಸರಿಯಾಗಿ ವೇತನ ಪಾವತಿಯಾಗದ್ದರಿಂದ ಬೆಲೆ ಏರಿಕೆ ಸಂದರ್ಭದಲ್ಲಿ ಜೀವನ ಸಾಗಿಸುವುದು ಕಷ್ಟವಾಗಿದೆ ಎಂದು ಈ ಶಾಲೆಗಳ ಸಿಬ್ಬಂದಿ ಅವಲತ್ತುಕೊಳ್ಳುತ್ತಾರೆ.

'ಇದೇ ಮೊದಲ ಬಾರಿಯಲ್ಲ. ಆಗಾಗ, ಮೂರರಿಂದ ನಾಲ್ಕು ತಿಂಗಳಿಗೊಮ್ಮೆ ವೇತನ ಅನುದಾನ ಬಿಡುಗಡೆ ಮಾಡಲಾಗುತ್ತದೆ. ಈ ಬಾರಿ ಆರು ತಿಂಗಳಾದರೂ ಬಿಡುಗಡೆ ಮಾಡಿಲ್ಲ. ಕುಟುಂಬ ನಿರ್ವಹಣೆ ಕಷ್ಟವಾಗಿದ್ದು, ಸಾಲ ಮಾಡಬೇಕಾದ ಸ್ಥಿತಿ ಹಲವರಿಗೆ ಎದುರಾಗಿದೆ' ಎನ್ನುತ್ತಾರೆ ಕರ್ನಾಟಕ ರಾಜ್ಯ ಅಂಗವಿಕಲರ ಅನುದಾನಿತ ಶಾಲೆಗಳ ನೌಕರರ ಕ್ರಿಯಾಸಮಿತಿ ಅಧ್ಯಕ್ಷ ವಿನಾಯಕ ಕೆ. ಜೋಶಿ.

ಮುಖ್ಯಾಂಶಗಳು

- ನಿವೃತ್ತರಿಗೆ ಸಿಕ್ಕಿಲ್ಲ ಪಿಂಚಣಿ
- ಪಾಲನೆಯಾಗದ ಸರ್ಕಾರದ ಆದೇಶ
- ವಿಡಿಯೊ, ಆಡಿಯೊ ಮೂಲಕ ಪಾಠ

ನೌಕರರ ಖಾತೆಗೆ ನೇರವಾಗಿ ವೇತನ ಜಮಾ ಮಾಡುತ್ತಿರುವುದರಿಂದ ವೇತನ ಪಾವತಿ ವಿಳಂಬವಾಗಿದೆ. ಶೀಘ್ರ ಪಾವತಿಸಲಾಗುವುದು

ಡಿ.ಎಸ್. ಮೂಲಿಮನಿ, ಜಿಲ್ಲಾ ಕಲ್ಯಾಣಾಧಿಕಾರಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ

ಪ್ರಜಾವಾಣಿ ವಿಶೇಷ

'ಕೋವಿಡ್‌ನಿಂದಾಗಿ ಶಾಲೆಗೆ ಮಕ್ಕಳು ಬರುತ್ತಿಲ್ಲ. ಆದರೆ, ನಿತ್ಯ ಶಾಲೆಗೆ ಹೋಗುವ ನಾವು, ವಿಡಿಯೊ, ಆಡಿಯೊ ಮೂಲಕ ಮಕ್ಕಳ ಶೈಕ್ಷಣಿಕ ಪ್ರಗತಿ ಕುಂಠಿತವಾಗದಂತೆ ಪ್ರಯತ್ನಿಸುತ್ತಿದ್ದೇವೆ. ವಿಶೇಷ ಮಕ್ಕಳಿಗೆ ವಿಡಿಯೊ, ಆಡಿಯೊ ಮೂಲಕ ಪಾಠ ಮಾಡುವುದು ಸವಾಲಿನ ಕೆಲಸವಾಗಿದೆ. ಆದರೂ, ನಿರ್ವಹಿಸುತ್ತಿದ್ದೇವೆ' ಎಂದು ಅವರು ತಿಳಿಸಿದರು.

ರಾಜ್ಯ ಸರ್ಕಾರದ ಹಣಕಾಸು ಇಲಾಖೆಯು ನೌಕರರ ಖಾತೆಗೆ ನೇರವಾಗಿ ವೇತನ ಬಿಡುಗಡೆ ಮಾಡುವಂತೆ ಆದೇಶ ನೀಡಿದೆ. ಆದರೆ, ಅಧಿಕಾರಿಗಳು ಮಾತ್ರ ಈ ಆದೇಶ ಜಾರಿಗೊಳಿಸಿಲ್ಲ. ಅನುದಾನ ಬಿಡುಗಡೆಗಾಗಿ ಶಾಲೆಗಳವರು ಬಂದರೆ, ಒಂದಷ್ಟು ವ್ಯವಹಾರ ಗಿಟ್ಟುತ್ತದೆ ಎಂಬ ಕಾರಣಕ್ಕೆ ಹಣಕಾಸು ಇಲಾಖೆ ಆದೇಶ ಪಾಲಿಸುತ್ತಿಲ್ಲ ಎಂಬ ದೂರುಗಳಿವೆ.

ನಿವೃತ್ತರಿಗೆ ಸಿಕ್ಕಿಲ್ಲ ಪಿಂಚಣಿ: ಈ ಶಾಲೆಗಳಲ್ಲಿ ಕೆಲಸ ಮಾಡಿ, ನಿವೃತ್ತಿ ಹೊಂದಿದ ನೂರಕ್ಕೂ ಹೆಚ್ಚು ಸಿಬ್ಬಂದಿಗೆ ಪಿಂಚಣಿ ಸೌಲಭ್ಯ ದೊರೆತಿಲ್ಲ. ನಿವೃತ್ತಿ ನಂತರ ಕುಟುಂಬದವರು ಕಣ್ಣೀರಿನಲ್ಲಿ ಕೈತೊಳೆಯುವಂತಾಗಿದೆ.

ನಿವೃತ್ತ ನೌಕರರರು ಕಚೇರಿಗಳಿಗೆ ಅಲೆದು ಸುಸ್ತಾಗಿದ್ದಾರೆ. ಪಿಂಚಣಿಗಾಗಿ ಕಾದು ಹಲವರು ಮೃತರಾಗಿದ್ದಾರೆ. ಸಾಮಾನ್ಯ ಅನುದಾನಿತ ಶಾಲೆಗಳ ನಿವೃತ್ತರಿಗೆ ಪಿಂಚಣಿ ನೀಡಲಾಗುತ್ತದೆ. ವಿಶೇಷ ಅನುದಾನಿತ ಶಾಲೆಗಳ ಸಿಬ್ಬಂದಿಗೂ ಪಿಂಚಣಿ ಸೌಲಭ್ಯ ನೀಡಬೇಕು ಎಂದು ಸರ್ಕಾರ 2013ರಲ್ಲಿ ಆದೇಶ ನೀಡಿದೆ. ಆದರೆ, ಇಂದಿಗೂ ಜಾರಿಯಾಗಿಲ್ಲ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು
ಕೆಆರ್‌ಎಸ್*	124.80	119.32	2,960	8,562
ಹಾರಂಗಿ	2,859	2,857.65	1,320	1,632
ಕಬಿನಿ	2284.00	2282.41	2,878	5,000
ಹೇಮಾವತಿ	2,922	2,918.22	2,080	4,920
ಲಿಂಗನಮಕ್ಕಿ	1,819	1,812.60	4982	-
ಸೂಪಾ (ಮೀ)	564	554.76	2,983	4,705
ಮಾಣಿ	594	585.80	944	-
ತುಂಗಭದ್ರಾ	1,633	1,632.61	8,190	14,220
ಮಲಪ್ರಭಾ	2079.5	2,078.30	1,980	494
ಘಟಪ್ರಭಾ	2175	2,175.00	3,141	3,141
ಭದ್ರಾ	186	185.1	3299	3901
ಆಲಮಟ್ಟಿ (ಮೀ)	519.6	519.60	1,734	1,734
ನಾರಾಯಣಪುರ (ಮೀ)	492.25	492.06	300	8,000

* ನೆಲಮಟ್ಟದಿಂದ

ಕಾರವಾರದಲ್ಲಿ ಉತ್ತಮ ಮಳೆ

ಪ್ರಜಾವಾಣಿ ವಾರ್ತೆ

ಕಾರವಾರ: ಕೆಲವು ದಿನಗಳ ಬಿಡುವಿನ ನಂತರ ಜಿಲ್ಲೆಯ ವಿವಿಧೆಡೆ ಗುರುವಾರ ಮತ್ತೆ ಮಳೆಯಾಯಿತು.

ನಗರದಲ್ಲಿ ಬುಧವಾರ ತಡರಾತ್ರಿ ಶುರುವಾದ ವರ್ಷಧಾರೆಯು, ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೂ ಮುಂದುವರಿಯಿತು.

ಮಳೆಯೊಂದಿಗೆ ಆಗಾಗ ಗುಡುಗು ಕೂಡ ಅಬ್ಬರಿಸಿತು.

ಭಟ್ಕಳ, ಕುಮಟಾ, ಯಲ್ಲಾಪುರ, ದಾಂಡೇಲಿ ತಾಲ್ಲೂಕುಗಳ ವಿವಿಧೆಡೆಯೂ ಮಳೆಯಾಗಿದೆ.

ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನ ಸಂಸ್ಥೆ (ಎಂಪ್ರಿ)

(ಕರ್ನಾಟಕ ಸರ್ಕಾರದ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆಯಡಿ ಸ್ಥಾಪಿಸಲ್ಪಟ್ಟು, ಸರ್ಕಾರದ ಸೊಸೈಟಿಗಳ ನೋಂದಣಿ ಕಾಯ್ದೆಯಡಿ ನೋಂದಾಯಿಸಲ್ಪಟ್ಟ ಒಂದು ಸಂಸ್ಥೆ)
ಹಸಿರು ಭವನ, ದೊರೆಸಾನಿಪಾಳ್ಯ ಫಾರೆಸ್ಟ್ ಕ್ಯಾಂಪಸ್, ವಿನಾಯಕನಗರ ವೃತ್ತ, ಜೆ.ಪಿ. ನಗರ 5ನೇ ಹಂತ, ಬೆಂಗಳೂರು–560078 ದೂರವಾಣಿ: 080–26490747
ಸಂಖ್ಯೆ: ಎಂಪ್ರಿ/ಸಿಆರ್–10/ಎನ್‌ಜಿಸಿ/2021–22/541 ದಿನಾಂಕ: 19.08.2021

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ (ಪನಿನೀಸಂ) ಸಂಸ್ಥೆಯು ಕರ್ನಾಟಕ ಸೊಸೈಟಿಗಳ ನೋಂದಣಿ ಕಾಯ್ದೆ, 1960ರಡಿ ನೋಂದಣಿಯಾದ ಒಂದು ಸಂಸ್ಥೆಯಾಗಿದ್ದು, ಈ ಸಂಸ್ಥೆಯು 3 ತಿಂಗಳ ಅವಧಿಗೆ ರಾಷ್ಟ್ರೀಯ ಹಸಿರು ಪಡೆ ವಿಭಾಗದ ಕೈಪಿಡಿ ಹಾಗೂ ಮಕ್ಕಳ ಚಂದದ ಪರಿಸರ ಪುಸ್ತಕಗಳ ಮುದ್ರಣ ಮತ್ತು ಬೈಂಡಿಂಗ್ ಮಾಡಿ ಪೂರೈಕೆ ಮಾಡಲು ಅರ್ಹ ಗುತ್ತಿಗೆದಾರರಿಂದ/ಸಂಸ್ಥೆಗಳಿಂದ ಕರ್ನಾಟಕ ಸರ್ಕಾರದ ಇ–ಪೋರ್ಟಲ್ ಮೂಲಕ ಇ–ಟೆಂಡರ್ ಕರೆಯಲಾಗಿದೆ. ಇ–ಟೆಂಡರಿನ ವಿವರಗಳನ್ನು ಮತ್ತು ಷರತ್ತುಗಳನ್ನೊಳಗೊಂಡ ಬಿಡ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಅಂತರ್ಜಾಲ ತಾಣ **(www.eproc.karnataka.gov.in)** ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಸರಿಯಾಗಿ ಭರ್ತಿ ಮಾಡಿದ/ಪೂರ್ಣ ವಿವರಗಳನ್ನೊಳಗೊಂಡ ಟೆಂಡರುಗಳನ್ನು **ದಿನಾಂಕ: 18.09.2021ರಂದು ಸಂಜೆ 5.00 ಗಂಟೆಯವರೆಗೆ** ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬಹುದು. ಟೆಂಡರ್ ನೋಟಿಫಿಕೇಶನ್ ಪ್ರತಿಯನ್ನು ಪನಿನೀಸಂ ಸಂಸ್ಥೆಯ ಅಂತರ್ಜಾಲ **www.empri.karnataka.gov.in** ದಲ್ಲಿ ಸಹಾ ಲಭ್ಯವಿದೆ.

ಯಾವುದೇ ತಿದ್ದುಪಡಿಗಳು ಅಥವಾ ಹೆಚ್ಚುವರಿ ನಿಬಂಧನೆಗಳಿದ್ದಲ್ಲಿ ಅದನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮತ್ತು ಪನಿನೀಸಂ ಸಂಸ್ಥೆಯ ಅಂತರ್ಜಾಲದಲ್ಲಿ ಹಾಕಲಾಗುವುದು.

ಸಹಿ/- ಟೆಂಡರ್ ಕರೆಯುವ ಅಧಿಕಾರಿ, ಪನಿನೀಸಂ

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ

ಕೇಂದ್ರೀಯ ಉಗ್ರಾಣ, ಶಾಂತಿನಗರ, ಬೆಂಗಳೂರು –27
ಸಂಖ್ಯೆ: ಬೆ.ಮ.ಸಾ.ಸಂ./ಕೇಕ/ಉಖನಿ/ಟೆಂಡರ್/02/2021–22 ದಿ. 26.08.2021.

ಟೆಂಡರ್ ಆಹ್ವಾನ ಪ್ರಕಟಣೆ

ಬೆ.ಮ.ನ.ಸಾ.ಸಂಸ್ಥೆಗೆ ಅವಶ್ಯಕವಿರುವ ಈ ಕೆಳಗೆ ತೋರಿಸಲಾಗಿರುವ ಸರಕು/ಸೇವೆಗಳನ್ನು ಪಡೆಯಲು **e-procurement** ನ ಮೂಲಕ ಟೆಂಡರ್ ಕರೆಯಲಾಗಿದ್ದು ಆಸಕ್ತರು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ.

Sl. No.	Tender No. & Date	Description	Tender Value Approximate (Rs. In Lakhs)	Last date for bid submission in e-procurement portal
1	BMTC/2021/018 Date.26.08.2021	ನೀರು ಮೆದುಗೊಳಿಸುವ ಸ್ಥಾವರಗಳ ಸರಬರಾಜು ಮತ್ತು ಅಳವಡಿಸುವ ಬಗ್ಗೆ	28.00	15.09.2021 @14:30 Hrs
2	BMTC/2021/019 Date.26.08.2021	ನಿರ್ಭಯ ಯೋಜನೆಯಡಿಯಲ್ಲಿ ಪ್ರಿಂಟರ್ ಮತ್ತು ಸರ್ವರ್‌ಗಳ ಖರೀದಿಯ ಬಗ್ಗೆ	72.00	15.09.2021 @14:30 Hrs
3	BMTC/2021/020 Date.26.08.2021	ಮಾಸ್ಕಿಂಗ್ ಟೇಪ್‌ಗಳ ಖರೀದಿಯ ಬಗ್ಗೆ	25.00	15.09.2021 @14:30 Hrs
4	BMTC/2021/021 Date.26.08.2021	ಸ್ಯಾಂಡಿಂಗ್ ಡಿಸ್ಕ್‌ಗಳ ಖರೀದಿಯ ಬಗ್ಗೆ	20.00	15.09.2021 @14:30 Hrs
5	BMTC/2021/022 Date.26.08.2021	ವಿನೈಲ್ ಫ್ಲೋರಿಂಗ್ ಮ್ಯಾಟ್ ಖರೀದಿಯ ಬಗ್ಗೆ	22.00	17.09.2021 @14:30 Hrs
6	BMTC/2021/023 Date.26.08.2021	ಯುವಿ ರೇಡಿಯೇಶನ್ ಪಾಲಿಯೂರಿಥೇನ್ ಸೀಲೆಂಟ್ ಖರೀದಿಯ ಬಗ್ಗೆ	49.00	17.09.2021 @14:30 Hrs
7	BMTC/2021/024 Date.26.08.2021	ಫೋಟೋ ಕಾಪಿಯರ್ ಪೇಪರ್ ಖರೀದಿಯ ಬಗ್ಗೆ	10.00	17.09.2021 @14:30 Hrs

ಈ ಮೇಲಿನ ಟೆಂಡರ್‌ಗಳಿಗೆ ಸಂಬಂಧಿಸಿದ ವಿವರಗಳನ್ನು **www.eproc.karnataka.gov.in** ನಿಂದ ಪಡೆಯಬಹುದು.

ಸಹಿ/–
ಉಗ್ರಾಣ ಮತ್ತು ಖರೀದಿ ನಿಯಂತ್ರಕರು (ಟೆಂಡರ್ ಕರೆಯುವ ಪ್ರಾಧಿಕಾರಿ)
ವಾಸಾಸಂಇ/ಬೆಂನ/1321/ಅಲಕ್‌ನಂದ/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಹಿರಿಯ ಸಹಾಯಕ ನಿರ್ದೇಶಕರು ತೋಟಗಾರಿಕೆ, (ಬೊಮ್ಮನಹಳ್ಳಿ), ಬೊಮ್ಮನಹಳ್ಳಿ ವಲಯ, ಬೆಂಗಳೂರು – 560 068.
ಸಂಖ್ಯೆ: ಹಿಸನಿತೋ(ಬೊಮ್ಮ)/ಟೆಂಡರ್/ಪಿಆರ್/01/2021–22 ದಿನಾಂಕ: 26.08.2021

ಅಲ್ಪಾವಧಿ ಟೆಂಡರ್ ಪ್ರಕಟಣೆ ಆಹ್ವಾನ ಪತ್ರ (ಐಎಫ್‌ಟಿ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ) (ದ್ವಿಲಕೋಟೆ ಪದ್ಧತಿ)

ಹಿರಿಯ ಸಹಾಯಕ ನಿರ್ದೇಶಕರು, ತೋಟಗಾರಿಕೆ (ಬೊಮ್ಮನಹಳ್ಳಿ), ಇವರು (ಈ ದಾಖಲಾತಿಗಳಲ್ಲಿ ಕೆಲಸಕ್ಕೆ ನೇಮಿಸಿಕೊಳ್ಳುವವರು ಎಂದು ಓದಲಾಗಿದೆ) ಇವರು ಕೆಟಿಪಿಪಿ ಕಾಯಿದೆಗಳು 2000ರಂತೆ, ಉದ್ಯಾನವನಗಳನ್ನು ನಿರ್ವಹಣೆ ಮಾಡಲು ಕಾರ್ಮಿಕ ಇಲಾಖೆಯಡಿಯಲ್ಲಿ ನೋಂದಾಯಿತರಾಗಿರುವ ಅರ್ಹ ಮತ್ತು ನುರಿತ ವ್ಯಕ್ತಿಗಳು /ಏಜೆನ್ಸಿಗಳು/ಸಂಸ್ಥೆಗಳಿಂದ (ಈ ದಾಖಲೆಯಲ್ಲಿ ಗುತ್ತಿಗೆದಾರರೆಂದು ಓದಲಾಗಿದೆ) ಬೊಮ್ಮನಹಳ್ಳಿ ವಲಯದಲ್ಲಿ ಉದ್ಯಾನವನಗಳು, ಕೊಳವೆಬಾವಿಗಳು ಮತ್ತು ಮೀಡಿಯನ್ಸ್‌ಗಳನ್ನು ನಿರ್ವಹಣೆ ಮಾಡಲು ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ಹೆಸರು	ಅಂದಾಜು ಮೊತ್ತ (₹.ಗಳಲ್ಲಿ)	ವರ್ಗೀಕರಣ
1	ವಾರ್ಡ್ ಸಂಖ್ಯೆ–174 ಹೆಚ್‌ಎಸ್‌ಆರ್ ಬಡಾವಣೆಯಲ್ಲಿ ಉದ್ಯಾನವನಗಳನ್ನು ನಿರ್ವಹಣೆ ಮಾಡುವುದು.	1,73,01,625	ಸಾಮಾನ್ಯರಿಗೆ
2	ವಾರ್ಡ್ ಸಂಖ್ಯೆ–175 ಬೊಮ್ಮನಹಳ್ಳಿಯಲ್ಲಿ ಉದ್ಯಾನವನಗಳನ್ನು ನಿರ್ವಹಣೆ ಮಾಡುವುದು.	29,00,550	ಸಾಮಾನ್ಯರಿಗೆ
3	ವಾರ್ಡ್ ಸಂಖ್ಯೆ–184 ಉತ್ತರಹಳ್ಳಿಯಲ್ಲಿ ಉದ್ಯಾನವನಗಳನ್ನು ನಿರ್ವಹಣೆ ಮಾಡುವುದು.	1,11,69,725	ಸಾಮಾನ್ಯರಿಗೆ
4	ವಾರ್ಡ್ ಸಂಖ್ಯೆ–185 ಯಲಚೇನಹಳ್ಳಿಯಲ್ಲಿ ಉದ್ಯಾನವನಗಳನ್ನು ನಿರ್ವಹಣೆ ಮಾಡುವುದು.	35,32,725	ಪ.ಪಂಗಡ
5	ವಾರ್ಡ್ ಸಂಖ್ಯೆ–186 ಜರಗನಹಳ್ಳಿಯಲ್ಲಿ ಉದ್ಯಾನವನಗಳನ್ನು ನಿರ್ವಹಣೆ ಮಾಡುವುದು.	5,06,000	ಸಾಮಾನ್ಯರಿಗೆ
6	ವಾರ್ಡ್ ಸಂಖ್ಯೆ–187 ಪುಟ್ಟೇನಹಳ್ಳಿಯಲ್ಲಿ ಉದ್ಯಾನವನಗಳನ್ನು ನಿರ್ವಹಣೆ ಮಾಡುವುದು.	9,24,150	ಸಾಮಾನ್ಯರಿಗೆ
7	ವಾರ್ಡ್ ಸಂಖ್ಯೆ–188 ಬಿಳೇಕಹಳ್ಳಿಯಲ್ಲಿ ಉದ್ಯಾನವನಗಳನ್ನು ನಿರ್ವಹಣೆ ಮಾಡುವುದು.	39,17,125	ಸಾಮಾನ್ಯರಿಗೆ
8	ವಾರ್ಡ್ ಸಂಖ್ಯೆ–189 ಹೊಂಗಸಂದ್ರದಲ್ಲಿ ಉದ್ಯಾನವನಗಳನ್ನು ನಿರ್ವಹಣೆ ಮಾಡುವುದು.	1,33,800	ಸಾಮಾನ್ಯರಿಗೆ
9	ವಾರ್ಡ್ ಸಂಖ್ಯೆ–190 ಮಂಗಮ್ಮನಪಾಳ್ಯದಲ್ಲಿ ಉದ್ಯಾನವನಗಳನ್ನು ನಿರ್ವಹಣೆ ಮಾಡುವುದು.	24,95,000	ಸಾಮಾನ್ಯರಿಗೆ
10	ವಾರ್ಡ್ ಸಂಖ್ಯೆ–191 ಸಿಂಗಸಂದ್ರದಲ್ಲಿ ಉದ್ಯಾನವನಗಳನ್ನು ನಿರ್ವಹಣೆ ಮಾಡುವುದು.	17,23,750	ಸಾಮಾನ್ಯರಿಗೆ
11	ವಾರ್ಡ್ ಸಂಖ್ಯೆ–192 ಬೇಗೂರಿನಲ್ಲಿ ಉದ್ಯಾನವನಗಳನ್ನು ನಿರ್ವಹಣೆ ಮಾಡುವುದು.	11,04,450	ಪ.ಜಾತಿ
12	ವಾರ್ಡ್ ಸಂಖ್ಯೆ–193 ಅರಕೆರೆಯಲ್ಲಿ ಉದ್ಯಾನವನಗಳನ್ನು ನಿರ್ವಹಣೆ ಮಾಡುವುದು.	28,52,475	ಸಾಮಾನ್ಯರಿಗೆ
13	ವಾರ್ಡ್ ಸಂಖ್ಯೆ–194 ಗೊಟ್ಟಿಗೆರೆಯಲ್ಲಿ ಉದ್ಯಾನವನಗಳನ್ನು ನಿರ್ವಹಣೆ ಮಾಡುವುದು.	30,56,925	ಸಾಮಾನ್ಯರಿಗೆ
14	ವಾರ್ಡ್ ಸಂಖ್ಯೆ–195 ಕೋಣನಕುಂಟೆಯಲ್ಲಿ ಉದ್ಯಾನವನಗಳನ್ನು ನಿರ್ವಹಣೆ ಮಾಡುವುದು.	30,73,225	ಪ.ಜಾತಿ
15	ವಾರ್ಡ್ ಸಂಖ್ಯೆ–196 ಅಂಜನಾಪುರದಲ್ಲಿ ಉದ್ಯಾನವನಗಳನ್ನು ನಿರ್ವಹಣೆ ಮಾಡುವುದು.	46,50,500	ಪ.ಜಾತಿ
16	ವಾರ್ಡ್ ಸಂಖ್ಯೆ–197 ವಸಂತಪುರದಲ್ಲಿ ಉದ್ಯಾನವನಗಳನ್ನು ನಿರ್ವಹಣೆ ಮಾಡುವುದು.	27,70,900	ಸಾಮಾನ್ಯರಿಗೆ
17	ವಾರ್ಡ್ ಸಂಖ್ಯೆ–175 ಬೊಮ್ಮನಹಳ್ಳಿ ಕ್ಷೇತ್ರದ ಉದ್ಯಾನವನ–ಗಳಲ್ಲಿ ಕೊಳವೆಬಾವಿಗಳನ್ನು ನಿರ್ವಹಣೆ ಮಾಡುವುದು.	27,50,000	ಪ.ಪಂಗಡ
18	ವಾರ್ಡ್ ಸಂಖ್ಯೆ–197 ದಕ್ಷಿಣ ಕ್ಷೇತ್ರದ ಉದ್ಯಾನವನ–ಗಳಲ್ಲಿ ಕೊಳವೆಬಾವಿಗಳನ್ನು ನಿರ್ವಹಣೆ ಮಾಡುವುದು.	26,50,000	ಸಾಮಾನ್ಯರಿಗೆ

ಟೆಂಡರ್ ವೇಳಾಪಟ್ಟಿ: (1) ಪ್ರಕಟಣೆಯ ದಿನಾಂಕ: **26.08.2021**. (2) ಟೆಂಡರ್ ದಾಖಲೆಗಳನ್ನು ದಿನಾಂಕ: **02.09.2021**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (3) ಟೆಂಡರ್ ಮುಚ್ಚುವ ದಿನಾಂಕ **14.09.2021**. (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **16.09.2021** (5) ಆರ್ಥಿಕ ಬಿಡ್ ತೆರೆಯುವ ದಿನಾಂಕ: **20.09.2021**. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ. ಸಹಿ/– ಹಿರಿಯ ಸಹಾಯಕ ನಿರ್ದೇಶಕರು ತೋಟಗಾರಿಕೆ (ಬೊಮ್ಮನಹಳ್ಳಿ)

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ

E-mail: gimsgadag@gmail.com , dsgadag@gmai.com Tel Phone Number: 08372-297213
ಸಂ.ಗ.ವೈ.ವಿ.ಸಂ/ಸರಬರಾಜು/ಪೀಠೋಪಕರಣ/32/2021–22 ದಿನಾಂಕ : 25.08.2021

ಇ–ಟೆಂಡರ ಪ್ರಕಟಣೆ

ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ ಇಲ್ಲಿನ ಬಾಲಕ ಮತ್ತು ಬಾಲಕಿಯರ ನಿಲಯಗಳಲ್ಲಿರುವ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಅವಶ್ಯಕವಿರುವ ವಿವಿಧ ಪೀಠೋಪಕರಣಗಳ ಸರಬರಾಜು ಮಾಡುವದಕ್ಕಾಗಿ ಆಸಕ್ತಿಯುಳ್ಳ ಅಧಿಕೃತ ವ್ಯಾರಾಟಗಾರರಿಂದ ಹಾಗೂ ಸಂಸ್ಥೆಗಳಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ದಿನಾಂಕ:26.08.2021 ರಿಂದ ದಿನಾಂಕ:30.09.2021ರ ಸಾಯಂಕಾಲ 4:30ಗಂಟೆವರೆಗೆ ಇ–ಪೋರ್ಟಾಲ್ ಸಂಖ್ಯೆ: **ME/2021-22/IND3978 (http://www.eproc.karnataka.gov.in)** ನಲ್ಲಿ ಟೆಂಡರ ಅಪ್‌ಲೋಡ್ ಮಾಡಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕರ್ತವ್ಯದ ದಿನಗಳಲ್ಲಿ ಕೆಳಗಡೆ ಸಹಿ ಮಾಡಿದವರ ಕಛೇರಿಗೆ ಸಂಪರ್ಕಿಸಬಹುದು.

ಸಹಿ/– ಮುಖ್ಯ ಆಡಳಿತಾಧಿಕಾರಿಗಳು
ವಾ.ಸಾ.ಇ/ಗದಗ/232/2021–22/ದೇಶಪಾಂಡೆಪಬ್ಲಿಸಿಟಿ ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ

ನವೋದಯ ವಿದ್ಯಾಲಯ ಸಮಿತಿ

ಶಿಕ್ಷಣ ಸಚಿವಾಲಯದ ಅಧೀನ ಸ್ವಾಯತ್ತ ಸಂಸ್ಥೆ
ಬಿ15, ಸೆಕ್ಟರ್–62, ನೋಯ್ಡ.
ಜಿಲ್ಲೆ ಜಿ.ಬಿ.ನಗರ. ಉತ್ತರ ಪ್ರದೇಶ ಪಿನ್–201309

ಅಧಿಸೂಚನೆ

2021–22ನೇ ಶೈಕ್ಷಣಿಕ ವರ್ಷದ ಜವಾಹರ ನವೋದಯ ವಿದ್ಯಾಲಯಗಳ 2021 ನೇ ಸಾಲಿಗೆ 11ನೇ ತರಗತಿಯ ಉಳಿಕೆ ಸ್ಥಾನಗಳ ದಾಖಲಾತಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಅವಧಿಯನ್ನು ಆಡಳಿತಾತ್ಮಕ ಕಾರಣಗಳಿಂದಾಗಿ 31 ನೇ ಆಗಸ್ಟ್ 2021 ರವರೆಗೆ ವಿಸ್ತರಿಸಲಾಗಿದೆ.

ಉಪ ಆಯುಕ್ತರು
ನವೋದಯ ವಿದ್ಯಾಲಯ ಸಮಿತಿ

ಮುಖ್ಯ ಇಂಜನೀಯರು, ಬಾಗಲಕೋಟ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ, ಬಾಗಲಕೋಟ.

ನಂ:ಮು.ಇಂ/ಬಾ.ಪ.ಅ.ಪ್ರಾ/ಟೆಂಡರ್–10/2021–22/1692 ದಿನಾಂಕ:25.08.2021.

ಅಲ್ಪಾವಧಿ ಟೆಂಡರ್ ಪ್ರಕಟಣೆ.
(ಇ–ಪ್ರೋಕ್ಯೂರಮೆಂಟ್ ಮುಖಾಂತರ)

ಬಾಗಲಕೋಟ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಅಡಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಸರ್ವೆ, ತನಿಖೆ, ವಿನ್ಯಾಸ, ಅಂದಾಜು ಪತ್ರಿಕೆ ತಯಾರಿಸುವದು ಹಾಗೂ ಕರಡು ಟೆಂಡರ್ ಪುಸ್ತಕ ತಯಾರಿಸಿ ಸಲ್ಲಿಸಲು ಸಮಾಲೋಚಕರ ಸೇವೆ ಒದಗಿಸುವದಕ್ಕಾಗಿ ಅರ್ಹ ನೊಂದಾಯಿತ ಸಮಾಲೋಚಕರಿಂದ Lumpsum ಟೆಂಡರ್‌ಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಆಹ್ವಾನಿಸಲಾಗಿದೆ.

ಸದರಿ ಟೆಂಡರಿಗಳಲ್ಲಿ ಭಾಗವಹಿಸಲು ಇಚ್ಛಿಸುವವರು ಟೆಂಡರ್ ವಿವರಗಳನ್ನು ಇ–ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್ www.eproc.karnataka.gov.in ಮೂಲಕ ದಿನಾಂಕ: 15.09.2021 ಸಂಜೆ 5.00 ಘಂಟೆವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿದೆ. ದಿನಾಂಕ: 17.09.2021 ಬೆಳಿಗ್ಗೆ 11.00 ಘಂಟೆಗೆ ತಾಂತ್ರಿಕ ಬಿಡ್‌ಗಳನ್ನು ತೆರೆಯಲಾಗುವುದು ಹಾಗೂ ದಿನಾಂಕ: 21.09.2021 ರಂದು ಬೆಳಿಗ್ಗೆ 11.00 ಘಂಟೆಗೆ ಆರ್ಥಿಕ ಬಿಡ್‌ಗಳನ್ನು (ಸಾಧ್ಯವಾದಲ್ಲಿ) ತೆರೆಯಲಾಗುವುದು. ಹೆಚ್ಚಿನ ವಿವರಗಳಿಗಾಗಿ ಕಛೇರಿಯ ಅವಧಿಯಲ್ಲಿ ದೂರವಾಣಿ ಸಂಖ್ಯೆ: 08354–233353 ಸಂಪರ್ಕಿಸಬಹುದಾಗಿದೆ.

ಸಹಿ/–ಮುಖ್ಯ ಇಂಜನೀಯರು,
ಬಾಗಲಕೋಟ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ, ಬಾಗಲಕೋಟ.
DIPR/BGK/RO-NO-248/MCA/2021-22

ಗಣಿ ಮತ್ತು ಭೂವಿಜ್ಞಾನ ಇಲಾಖೆ

ನಂ.49, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–01
ಇ–ಮೇಲ್: **dir-mines@karnataka.gov.in**
ಸಂಖ್ಯೆ: DMG-17044/2/2021/2021-22 ದಿನಾಂಕ: 25.08.2021

ಅಲ್ಪಾವಧಿ ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಈ ಕೆಳಕಂಡ ಸೇವೆಗಳಿಗಾಗಿ ಅರ್ಹ ಕಂಪನಿ/ಸಂಸ್ಥೆ/ವ್ಯಕ್ತಿ ಗಳಿಂದ ಟೆಂಡರ್‌ಗಾಗಿ ಅರ್ಜಿ ಆಹ್ವಾನಿಸಿದೆ.

Scope of the work: **(1)** To design and implement a vision and strategic action plan for minerals exploration and value addition in Karnataka State. **(2)** To scientifically assess and identify quality and quantity of various minerals on high resolution maps. Based on that invite strategic global bids to extract and make value addition within Karnataka state. **(3)** Develop strategic plan and handhold it's implementation for organizational restructuring of the Department of Mines and Geology, enable its high performance and capacity building for complete digital governance. **(4)** Implementation of Single Window System for disposal of the application for grant of Mining/Quarry lease and also vetting of State Mineral Policy 2021-26. **(5)** Modalities to be adopted for auction of limestone blocks by considering the nationwide auction of limestone blocks. **(6)** Assessment of demand and supply of limestone mineral and capacity of existing industries in Karnataka (District wise). **(7)** Strategy to be adopted in auctioning the Limestone blocks in order to attract investments by new industries. **(8)** Pros and cons of composite license and mining lease auction of Limestone in the State. **(9)** Viability of investment on limestone exploration in the state and resulting in its successful auction. **(10)** Handhold support for Establishment of School of Mining. **(11)** Any other works related to above scope of work. ಇ.ಎಂ.ಡಿ: ರೂ. 1,00,000/-.

ಟೆಂಡರ್‌ನ ವೇಳಾಪಟ್ಟಿ: **(1)** ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in** ನಲ್ಲಿ ದಿನಾಂಕ: **26.08.2021**ರಿಂದ ಪಡೆಬಹುದಾಗಿರುತ್ತದೆ. **(2)** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **16.09.2021 ಸಂಜೆ: 4.00 ಗಂಟೆ. (3)** ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: **20.09.2021, 11.00 ಗಂಟೆ.**

ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ವಿಳಾಸವನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿರುತ್ತದೆ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in**ನ್ನು ಸಂಪರ್ಕಿಸಬಹುದಾಗಿರುತ್ತದೆ.

ಸಹಿ/- ಜಂಟಿ ನಿರ್ದೇಶಕರು
ಗಣಿ ಮತ್ತು ಭೂವಿಜ್ಞಾನ ಇಲಾಖೆ

ಪುರಸಭೆ ಮೂಡುಬಿದಿರೆ, ದ.ಕ ಜಿಲ್ಲೆ–574227

ದೂರವಾಣಿ–08258–236236 ವೆಬ್ಸೈಟ್:www.moodbidritown.mrc.gov.in

ಟೆಂಡರ್ ಪ್ರಕಟಣೆ (ಇ-ಪ್ರಕ್ಯೂರ್‌ಮೆಂಟ್ ಮುಖಾಂತರ)

ಸಂಖ್ಯೆ : ಮೂ.ಪು./ಪಅ/ಸಿಆರ್.146/2021–22 ದಿನಾಂಕ: 25–08–2021

ಮೂಡುಬಿದಿರೆ ಪುರಸಭಾ ವ್ಯಾಪ್ತಿಯಲ್ಲಿ ಸ್ವಚ್ಛ ಭಾರತ ಮಿಷನ್ ಯೋಜನೆಯ ಐಇಸಿ ಚಟುವಟಿಕೆಗಳ ಅನುದಾನದಲ್ಲಿ ವಿವಿಧ ಅರಿವು, ಅನುಷ್ಠಾನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಅರ್ಹ ಅಧಿಕೃತ ನೊಂದಾಯಿತ ಸರ್ಕಾರೇತರ ಸಂಸ್ಥೆ/ಕನ್ಸಲ್ಟೆಂಟ್‌ಗಳಿಂದ ಕನಿಷ್ಠ ದರದ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಆಹ್ವಾನಿಸಲಾಗಿದ್ದು (Tender No.: TMCMDB/ENV/CR.146/2021-22), ದಿನಾಂಕ: 09–09–2021ರ ಸಂಜೆ 4.30 ರೊಳಗಾಗಿ ತಮ್ಮ ಸಂಪೂರ್ಣ ದಾಖಲಾತಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಸಲ್ಲಿಸುವುದು. ಟೆಂಡರ್ ಮೊತ್ತ ರೂ.4,37,355/–, ಟೆಂಡರ್ ತೆರೆಯುವ ದಿನಾಂಕ: 10–09–2021ರಂದು ಸಂಜೆ 4:35ಕ್ಕೆ ಆಗಿರುತ್ತದೆ. ಹೆಚ್ಚಿನ ವಿವರ ಮತ್ತು ಷರತ್ತುಗಳನ್ನು https://eproc.karnataka.gov.in ನಲ್ಲಿ ನೋಡಬಹುದು.

ಸಹಿ/– ಶ್ರೀ ಪ್ರಸಾದ್ ಕುಮಾರ್, ಅಧ್ಯಕ್ಷರು, ಪುರಸಭೆ ಮೂಡುಬಿದಿರೆ
ಸಹಿ/– ಶ್ರೀಮತಿ ಇಂದು ಎಂ., ಮುಖ್ಯಾಧಿಕಾರಿ, ಪುರಸಭೆ ಮೂಡುಬಿದಿರೆ

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ, ಇಲಾಖೆ ವಿಭಾಗ, ಮಂಡ್ಯ

ಸಂ: 08/ 2021–2022 ದಿನಾಂಕ:25.08.2021

ಮಂಡ್ಯ ಜಿಲ್ಲೆಯ ವಿವಿಧ ಕಾಮಗಾರಿಗಳಿಗಾಗಿ ಟೆಂಡರ್ ಪ್ರಕಟಣೆ

ಐಟಂವಾರು ದರದ ಟೆಂಡರನ್ನು ಕೆಳಗೆ ಕಾಣಿಸಿದ ಕಾಮಗಾರಿಗಾಗಿ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ **KW-3&4** ರ ರೀತಿ ಎರಡು ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://www.eproc.karnataka.gov.in** ಮುಖಾಂತರ ಕಾಮಗಾರಿಯ ಟೆಂಡರ್‌ಗಾಗಿ ಭಾಗವಹಿಸಬಹುದು. ಟೆಂಡರ್ ಪೂರ್ವಭಾವಿ ಸಭೆಯನ್ನು ಕಾರ್ಯಪಾಲಕ ಇಂಜಿನಿಯರ್, ರವರ ಕಛೇರಿ ಲೋಕೋಪಯೋಗಿ ಇಲಾಖೆ, ವಿಭಾಗ ಮಂಡ್ಯದಲ್ಲಿ **ದಿನಾಂಕ: 20.09.2021 ರಂದು ಬೆಳಿಗ್ಗೆ 11.00 ಗಂಟೆಗೆ** ಕರೆಯಲಾಗಿದೆ, ಟೆಂಡರ್ ದಾಖಲಾತಿಗಳನ್ನು **ದಿನಾಂಕ 08.09.2021** ರಿಂದ ಇ–ಪೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ವಿಚಾರಣೆ **ದಿನಾಂಕ 27.09.2021 ಸಂಜೆ 4.00 ಗಂಟೆವರೆಗೆ,** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ 27.09.2021 ಸಂಜೆ 4.30 ಘಂಟೆವರೆಗೆ,** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ 28.09.2021 ಸಂಜೆ 5.00 ಘಂಟೆ** ನಂತರ, ಆರ್ಥಿಕ ಬಿಡ್ **ದಿನಾಂಕ 30.09.2021 ಬೆಳಿಗ್ಗೆ 11.00 ಗಂಟೆಗೆ** ಅಥವಾ ನಂತರದ ಕೆಲಸದ ದಿನಗಳು. ಟೆಂಡರ್ ಪ್ರಕ್ರಿಯೆ ಬೆಲೆ ಇ–ಪೋರ್ಟಲ್ ರಂತೆ. ಕಾಲಮಿತಿ: ಮಳೆಗಾಲ ಸೇರಿ **4/3 ತಿಂಗಳು ಒಟ್ಟು 3 (ಮೂರು)** ಕಾಮಗಾರಿಗಳ ಪೈಕಿ ಗರಿಷ್ಠ ಅಂದಾಜು ಮೊತ್ತ **ರೂ. 200.00 ಲಕ್ಷಗಳು** ಕನಿಷ್ಠ **ರೂ. 100.00 ಲಕ್ಷಗಳು** ಇ.ಎಂ.ಡಿ. ಬೆಲೆ ಇ–ಪೋರ್ಟಲ್‌ರಂತೆ ಕೆಲಸಗಳ ವಿವರ, ಅಂದಾಜು ಮೊತ್ತ, ಇ.ಎಂ.ಡಿ., ಮೊತ್ತ ಮುಂತಾದ ಮಾಹಿತಿಗಳನ್ನು ಸದರಿ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಲೋ.ಇ.,ವಿಭಾಗ, ಮಂಡ್ಯ
DIPR/AD-MDY/MCA/297/2021-22

ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ವನ್ಯಜೀವಿ ವಿಭಾಗ, ಮೈಸೂರು

ಅಶೋಕಪುರಂ, ಅರಣ್ಯ ಭವನ, ಮೈಸೂರು
ದೂ: 0821–2481159 ಇ–ಮೇಲ್: dcfwlmys@gmail.com
ಸಂಖ್ಯೆ: ಎ1.ಬಿಯುಡಿ/ಇ–ಟೆಂಡರ್/ಸಿ.ಆರ್.20/2021–22 ದಿ: 19.08.2021

ಅಲ್ಪಾವಧಿ ಟೆಂಡರ್ ಪ್ರಕಟಣೆ
(e-procurement)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 2000 ಪ್ರಕಾರ, ಮೈಸೂರು ವನ್ಯಜೀವಿ ವಿಭಾಗದ ವ್ಯಾಪ್ತಿಗೆ ಬರುವ, ಮೈಸೂರು ಮತ್ತು ಮೇಲುಕೋಟೆ ವನ್ಯಜೀವಿ ವಲಯಗಳಲ್ಲಿ ಕಾಮಗಾರಿಗಳನ್ನು ಕೈಗೊಳ್ಳುವುದಕ್ಕಾಗಿ ವಿವಿಧ ಸಂಸ್ಥೆ/ ಬಿಡ್ಡುದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರನ್ನು ಅಹ್ವಾನಿಸಲಾಗಿದೆ. 2021–22ನೇ ಸಾಲಿನಲ್ಲಿ ವಿವಿಧ ಯೋಜನೆ/ಯೋಜನೇತರ ಲೆಕ್ಕಶೀರ್ಷಿಕೆಯಡಿ ಅನುದಾನ ಬಿಡುಗಡೆಯಾಗುವ ನಿರೀಕ್ಷಣೆಯಲ್ಲಿ ಟೆಂಡರ್ ಕರೆಯಲಾಗುತ್ತಿದ್ದು, ಆಸಕ್ತಿವುಳ್ಳ ಗುತ್ತಿಗೆದಾರರು/ಸಂಸ್ಥೆಗಳು ಟೆಂಡರ್‌ನಲ್ಲಿ ಭಾಗವಹಿಸಿ ಇ–ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಟೆಂಡರ್ ದರಗಳನ್ನು ಸಲ್ಲಿಸಬಹುದಾಗಿರುತ್ತದೆ.

1) ಟೆಂಡರ್ ಸ್ವೀಕರಿಸುವ ದಿ: 08.09.2021 ರಂದು 16.00 ಗಂಟೆಯವರೆಗೆ
2) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿ: 09.09.2021ರಂದು 16.10 ಗಂಟೆಗೆ
3) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿ: 13.09.2021ರಂದು 11.00 ಗಂಟೆಗೆ

ಮರುಟೆಂಡರ್ ದಿನಾಂಕ: 1) ಟೆಂಡರ್ ಸ್ವೀಕರಿಸುವ ದಿ: 16.09.2021 ರಂದು 16.00 ಗಂಟೆಯವರೆಗೆ. 2) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿ: 17.09.2021 ರಂದು 16.10 ಗಂಟೆಗೆ. 3) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿ: 18.09.2021 ರಂದು 11.00 ಗಂಟೆಗೆ.

ಕಾಮಗಾರಿಗಳ ಪ್ರಮಾಣ ಮತ್ತು ಮೊತ್ತವು ಅಂದಾಜಿನದ್ದಾಗಿದ್ದು 2021–22ನೇ ಸಾಲಿಗೆ ಅನುದಾನ ನಿರೀಕ್ಷಿಸಿ ಟೆಂಡರ್ ನಡೆಸಲಾಗಿರುತ್ತದೆ ಹಾಗೂ ಅನುದಾನವು ವ್ಯತ್ಯಯವಾಗುವ ಸಂಭವವಿರುತ್ತದೆ. ನಿಗಧಿತ ಮೊತ್ತವು ಹೆಚ್ಚು–ಕಡಿಮೆಯಾದಲ್ಲಿ ಆ ಪ್ರಕಾರ ಕಾರ್ಯಾದೇಶ ನೀಡಲಾಗುವುದು. ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಮೈಸೂರು ರವರು ಯಾವುದೇ ನಿರ್ದಿಷ್ಟ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ರದ್ದು ಪಡಿಸುವ ಹಕ್ಕನ್ನು ಹೊಂದಿರುತ್ತಾರೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿಮಾಡಿರುವವರ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ http://eproc.karnataka.gov.in ರಲ್ಲಿ ಪಡೆಯಬಹುದು.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಮೈಸೂರು
DIPR/DDMYS/MCA/443/2021-22

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹಾವೇರಿ

ನಂ. ಗ್ರಾಕುನೀ&ನೈವಿ/ಹಾವೇರಿ/ಪಿಬಿ-1/ಟೆಂಡರ್:22/2021–22/711
ದಿನಾಂಕ : 24–08–2021

ಅಲ್ಪಾವಧಿ ಟೆಂಡರ ಪ್ರಕಟಣೆ (2ನೇ, 3ನೇ ಹಾಗೂ 4ನೇ ಕರೆ)
(E-GOK ಇ–ಪ್ರೊಕ್ಯೂರಮೆಂಟ ಮುಖಾಂತರ ಮಾತ್ರ)

NRDWP JJM ಯೋಜನೆಯಡಿ ರಾಣೇಬೆನ್ನೂರ, ಹಿರೇಕೆರೂರ ಮತ್ತು ಹಾವೇರಿ ತಾಲೂಕುಗಳಲ್ಲಿ ಈ ಕೆಳಕಂಡ ಗ್ರಾಮಗಳಲ್ಲಿ ಟೆಂಡರ್ ಕರೆಯಲಾಗಿದೆ.

(1) E-Procurement ನಲ್ಲಿ ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನ ಮತ್ತು ಸಮಯ : ದಿನಾಂಕ : **03–09–2021** ರ 17:30 ಗಂಟೆವರೆಗೆ (2) ಇ–ಪ್ರೊಕ್ಯೂರ್‌ಮೆಂಟ್ ತಾಂತ್ರಿಕ ಬಿಡ್ ತೆರೆಯುವ (ಸಾಧ್ಯವಾದಲ್ಲಿ) : ದಿನಾಂಕ : **04–09–2021** ರ 17:31 ಗಂಟೆ ನಂತರ (3) ಇ–ಪ್ರೊಕ್ಯೂರ್‌ಮೆಂಟ್ ಆರ್ಥಿಕ ಬಿಡ್ ತೆರೆಯುವ (ಸಾಧ್ಯವಾದಲ್ಲಿ) : ದಿನಾಂಕ : **06–09–2021**ರ 10:30 ಗಂಟೆ ನಂತರ (4) ಪ್ರೀ ಬಿಡ್ ಮೀಟಿಂಗ್ ಸ್ಥಳ : Office of the Executive Engineer, Rural Drinking Water & Sanitation Division, Vidyanagar, Old ZP Compound, Haveri-581110. : ದಿನಾಂಕ : **31–08–2021** ರಂದು ಬೆಳಿಗ್ಗೆ 11:00 ಗಂಟೆಗೆ

ಇಂಡೆಂಟ್ ನಂ :– (1) 33444/CALL-4, (2) 33027/CALL-4, (3) 34245/CALL-2, (4) 34289/CALL-2, (5) 32708/CALL-4, (6) 34313/CALL-2, (7) 32039/CALL-4, (8) 33293/CALL-4, (9) 34286/CALL-2, (10) 34287/CALL-2, (11) 33780/CALL-3

ಟೆಂಡರನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು E.GOK ಇ–ಪ್ರಕ್ಯೂರ್‌ಮೆಂಟ್ ಪ್ಲಾಟ್‌ಫಾರಂನಲ್ಲಿ **www.eproc.karnataka.gov.in** ರಲ್ಲಿ ಪಡೆಯಬಹುದು ಹಾಗೂ ವಿಭಾಗ ಕಛೇರಿಯಲ್ಲಿ ಹೆಚ್ಚಿನ ಮಾಹಿತಿಗಳನ್ನು ಪಡೆಯತಕ್ಕದ್ದು.

ಸಹಿ/– ಕಾರ್ಯನಿರ್ವಾಹಕ ಇಂಜನೀಯರ್,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹಾವೇರಿ.
ವಾಸಾಸಂಇ/ಹಾವೇರಿ/ಎಂಸಿಎ/220/2021–22

ವಾಣಿಜ್ಯ ತೆರಿಗೆ ಇಲಾಖೆ

ವಾಣಿಜ್ಯ ತೆರಿಗೆ ಅಧಿಕಾರಿಯವರ ಕಚೇರಿ, (ಲೆಕ್ಕ ಪರಿಶೋಧನೆ)–1.3, ಸರಕು ಮತ್ತು ಸೇವಾ ತೆರಿಗೆ ವಿಭಾಗ-1, 3ನೇ ಮಹಡಿ, ಟಿ.ಟಿ.ಎಂ.ಸಿ., ಬಿ.ಎಂ.ಟಿ.ಸಿ. ಬಸ್ ನಿಲ್ದಾಣ, ಯಶವಂತಪುರ, ಬೆಂಗಳೂರು–22. ದೂರವಾಣಿ: 080–23476653
ಸಂ.:ವಾ.ತೆ.ಅ.(ಲೆ.ಪ)–1.3./ರ.ಸಂ–346/2021–22 ದಿನಾಂಕ: 24–08–2021

ತೆರಿಗೆ ಬಾಕಿದಾರರ ಪತ್ತೆಗಾಗಿ ಸಾರ್ವಜನಿಕ ಪ್ರಕಟಣೆ



ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಈ ಫೋಟೋದಲ್ಲಿರುವ ತೆರಿಗೆ ಬಾಕಿದಾರರಾದ **ಶ್ರೀಯುತ ಆಶೋಕ್ ಪೋರ್ವಾಲ್** ಮತ್ತು **ಶ್ರೀಮತಿ ಜಿಮ್ಮಿ ಪೋರ್ವಾಲ್**ರವರು **ಮೆ: ಕನಕ ಪಾರ್ಶ್ವ ಗೋಲ್ಡ್ ಪ್ರೈ. ಲಿ.,** ಸಂಖ್ಯೆ 2, 1ನೇ ಮಹಡಿ, ನಗರತ್ ಪೇಟೆ, ಬೆಂಗಳೂರು–02, ರಲ್ಲಿ ಡೈರೆಕ್ಟರ್‌ಗಳಾಗಿ ವ್ಯಾಪಾರ ಮಾಡುತ್ತಿದ್ದು 2012–13 ಮತ್ತು 2013–14ನೇ ಸಾಲಿಗೆ ಅವರಿಂದ **ರೂ.48,97,383–00** ಗಳ ಮೊತ್ತದ ತೆರಿಗೆ ಬಾಕಿಯಿರುತ್ತದೆ ಮತ್ತು ಬಾಕಿದಾರರು ಸದರಿ ವಿಳಾಸದಲ್ಲಿಯೂ ಹಾಗೂ ಮನೆ ವಿಳಾಸದಲ್ಲಿಯೂ ಲಭ್ಯವಿರುವುದಿಲ್ಲ. ಆದ್ದರಿಂದ ಮೇಲ್ಕಾಣಿಸಿದ ಫೋಟೋದಲ್ಲಿರುವ ವ್ಯಕ್ತಿಗಳನ್ನು ಕಂಡಲ್ಲಿ ದೂರವಾಣಿ ಸಂಖ್ಯೆ: 080–23476653 ಮತ್ತು 080–23570382 (ವಾಣಿಜ್ಯ ತೆರಿಗೆ ಜಂಟಿ ಆಯುಕ್ತರವರ ಕಚೇರಿ)ಕ್ಕೆ ಕರೆ ಮಾಡಿ ಅಥವಾ ಮೇಲ್ಕಾಣಿಸಿದ ಯಶವಂತಪುರದ ಕಚೇರಿಗೆ ಖುದ್ದಾಗಿ ತಿಳಿಸಿ ಸರ್ಕಾರದ ರಾಜ್ಯ ಬೊಕ್ಕಸಕ್ಕೆ ಉಂಟಾಗುವ ನಷ್ಟವನ್ನು ತಪ್ಪಿಸಲು ಸಹಕರಿಸಬೇಕಾಗಿ ಸಾರ್ವಜನಿಕರಲ್ಲಿ (ಹೆಸರನ್ನು ಗೌಪ್ಯವಾಗಿ ಇಡಲಾಗುವುದು) ಕೋರಲಾಗಿದೆ.

DIPR/DDU/YC/1298/2021-22 ಸಹಿ/– ವಾಣಿಜ್ಯ ತೆರಿಗೆ ಅಧಿಕಾರಿ (ಲೆ.ಪ)–1.3, ಬೆಂಗಳೂರು

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನಗರಸಭಾ ಕಾರ್ಯಾಲಯ, ಕೋಲಾರ

ಸಂಖ್ಯೆ: ನಸಕೋ/ತಾಂತ್ರಿಕ/ಟೆಂಡರ್/ಸಿಆರ್/37/2021–22 ದಿನಾಂಕ:24.08.2021

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–1&3 ರ ನಿಬಂಧನೆಗಳಿಗೆ ಒಳಪಟ್ಟಂತೆ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಖಾಯಿದೆ 1999 ಮತ್ತು 2000ರ ಆಕ್ಟ್ ಪ್ರಕಾರ ಕೆಳಕಂಡಂತೆ ವಿವಿಧ ಅನುದಾನಗಳಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಏಕ/ದ್ವಿ–ಲಕೋಟೆ ಪದ್ಧತಿಯಲ್ಲಿ ಈ ಕೆಳಗೆ ನಮೂದಿಸಿರುವ ಇಂಡೆಂಟ್ ಸಂಖ್ಯೆ ಕಾಮಗಾರಿಗೆ ಅರ್ಹ ಗುತ್ತಿಗೆದಾರರು/ ಏಜೆನ್ಸಿದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಇಲಾಖಾ ವೆಬ್‌ಸೈಟ್ **http://eproc.karnataka.gov.in**ರಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು ಹಾಗೂ ವಿವರಗಳನ್ನು ಪಡೆಯಬಹುದಾಗಿದೆ.

ಕ್ರ. ಸಂ.	ಕಾಮಗಾರಿಯ ವಿವರ	ಟೆಂಡರಿಗಿಟ್ಟ ಮೊತ್ತ (ರೂ.ಗಳಲ್ಲಿ)	ಕಾಲಾವಧಿ
	2019–20ನೇ ಸಾಲಿನ 14ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನ		
1	DMA/2021-22/OW/WORK_INDENT119311	71,26,659.00	3 ತಿಂಗಳು
	2021–22ನೇ ಸಾಲಿನ ನಗರಸಭೆ ನಿಧಿ		
2	DMA/2021-22/OW/WORK_INDENT119436	88,600.00	5 ದಿನಗಳು
3	DMA/2021-22/WS/WORK_INDENT119256	15,91,313.50	2 ತಿಂಗಳು
4	DMA/2021-22/OWL/WORK_INDENT119271	2,67,672.41	2 ತಿಂಗಳು
5	CMC/TECH/VEHICLE/TENDER/34/2021-22/Call-2	10,80,000.00	12 ತಿಂಗಳು

1) ಪ್ಯಾಕೇಜ್ ಸಂಖ್ಯೆ 1 ಮತ್ತು 2 ಕ್ಕೆ ಸಂಬಂಧಿಸಿದಂತೆ ಖಾಲಿ ಟೆಂಡರ್ ಫಾರಂಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಪ್ರಕಾರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿ ಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸಲು **ದಿನಾಂಕ: 03.09.2021ರ ಸಂಜೆ 5:30 ಗಂಟೆ**ಯವರೆಗೆ. 2) ಪ್ಯಾಕೇಜ್ ಸಂಖ್ಯೆ 03, 04, ಮತ್ತು 05ಕ್ಕೆ ಸಂಬಂಧಿಸಿದಂತೆ ಖಾಲಿ ಟೆಂಡರ್ ಫಾರಂಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಪ್ರಕಾರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿ ಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸಲು **ದಿನಾಂಕ: 13.09.2021 ರ ಸಂಜೆ 5:30 ಗಂಟೆ**ಯವರೆಗೆ. 3) ಪ್ಯಾಕೇಜ್ ಸಂಖ್ಯೆ 1 ಮತ್ತು 2 ರ ಟೆಂಡರ್‌ನ್ನು ತೆರೆಯುವ **ದಿನಾಂಕ:06.09.2021 ರ ಬೆಳಿಗ್ಗೆ 10.30 ಗಂಟೆಗೆ.** 4) ಪ್ಯಾಕೇಜ್ ಸಂಖ್ಯೆ:03, 04, ಮತ್ತು 05ರ ಟೆಂಡರ್‌ನ್ನು ತೆರೆಯುವ **ದಿನಾಂಕ:15.09.2021 ರ ಬೆಳಿಗ್ಗೆ 10.30 ಗಂಟೆಗೆ**

ಸೂಚನೆ:– ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ತಾಂತ್ರಿಕ ವಿಭಾಗದಲ್ಲಿ ಕಛೇರಿಯಲ್ಲಿ ಸಂಪರ್ಕಿಸಬಹುದು ಹಾಗೂ ವೆಬ್‌ಸೈಟ್ **www.kolarcity.mrc.gov.in** ನಲ್ಲಿ ವೀಕ್ಷಿಸಬಹುದು.

ಸಹಿ/– ಅಧ್ಯಕ್ಷರು, | ಸಹಿ/– ಉಪಾಧ್ಯಕ್ಷರು, | ಸಹಿ/– ಸ್ಥಾಯಿ ಸಮಿತಿ ಅಧ್ಯಕ್ಷರು | ಸಹಿ/– ಪೌರಾಯುಕ್ತರು
ವಾಸಾಸಂಇ/ಕೋಲಾರ/ಜಿಎ/183/2021–22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕಟೀಲ್ ಸಾರಥ್ಯ; ಸಾರ್ಥಕ 2 ವರ್ಷ

ಸಂಘಟನಾ ಚತುರ ಕಟೀಲ್

ಬಿ.ಎಸ್. ಯಡಿಯೂರಪ್ಪ ಅವರಿಂದ ಪಕ್ಷದ ಧ್ವಜ ಸ್ವೀಕರಿಸುವ ಮೂಲಕ ನಳಿನ್ ಕುಮಾರ್ ಕಟೀಲ್ ಅವರು ರಾಜ್ಯ ಘಟಕದ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಸಂದರ್ಭ

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ರಾಜ್ಯ ಬಿಜೆಪಿಯ ಚುಕ್ಕಾಣಿ ಹಿಡಿದಿರುವ ಶ್ರೀ ನಳೀನ್ ಕುಮಾರ್ ಕಟೀಲ್ ಅವರು ಯಶಸ್ವಿಯಾಗಿ ಎರಡು ವರ್ಷ ಪೂರೈಸಿದ್ದಾರೆ. ತಮ್ಮ ಸಂಘಟನಾ ಚಾತುರ್ಯದಿಂದ ಪಕ್ಷದ ಹಿರಿಮೆಯನ್ನು ಇನ್ನಷ್ಟು ಹೆಚ್ಚಿಸಿದ ಕೀರ್ತಿ ಮತ್ತು ಯಶಸ್ಸು ಕಟೀಲ್ ಅವರಿಗೆ ಸಲ್ಲುತ್ತದೆ.

ಪಂಚರತ್ನ ಎಂಬ ವಿಶೇಷ ಕಾರ್ಯಕ್ರಮದ ಮೂಲಕ ಪಕ್ಷ ಸಂಘಟನೆ ನಡೆಸಿದ ಶ್ರೀ ಕಟೀಲ್ ಅವರು ಪಕ್ಷದ ರಾಜ್ಯಾಧ್ಯಕ್ಷರಾಗಿ ಇಂದಿಗೆ ಯಶಸ್ವಿ ಎರಡು ವರ್ಷ ಪೂರೈಸಿದ್ದಾರೆ. ರಾಜ್ಯಾಧ್ಯಕ್ಷ ಪದವಿಗೆ ನ್ಯಾಯ ಒದಗಿಸಿದ ಸಮರ್ಥ ಸಂಘಟಕರಾಗಿದ್ದಾರೆ.

ಲೋಕಸಭೆ, ವಿಧಾನಸಭೆಗಳ ಉಪಚುನಾವಣೆಗಳಿಂದ ಹಿಡಿದು ಗ್ರಾಮಪಂಚಾಯತ್ ಚುನಾವಣೆಯವರೆಗೂ ಕಟೀಲ್ ಅವರು ಪಕ್ಷದ ಗೆಲುವಿಗೆ ಶ್ರಮಿಸಿದ್ದಾರೆ. ಪ್ರತಿಯೊಂದು ಚುನಾವಣೆಯೂ ಕೂಡಾ ಪಕ್ಷದ ಬೆಳವಣಿಗೆಗೆ ಪ್ರತಿಷ್ಠೆ ಎಂದು ಕಾರ್ಯಕರ್ತರಲ್ಲಿ ಉತ್ಸಾಹ ತುಂಬುವ ಮೂಲಕ ಸಂಘಟನೆ ಬಲಪಡಿಸಲು ಪ್ರಯತ್ನಿಸಿದ್ದಾರೆ. 2019ರ ಆಗಸ್ಟ್‌ನಲ್ಲಿ ಅಧಿಕಾರ ಸ್ವೀಕರಿಸಿದ ಶ್ರೀ ನಳೀನ್ ಕುಮಾರ್ ಕಟೀಲ್ ಅವರು ಮಿಂಚಿನಂತೆ ರಾಜ್ಯದಾದ್ಯಂತ ಪ್ರವಾಸ ನಡೆಸಿ ಪಕ್ಷ ಸಂಘಟಿಸಿದ್ದಾರೆ.

18 ಬಾರಿ ರಾಜ್ಯ ಪ್ರವಾಸ ಮತ್ತು 11 ಬಾರಿ ಸಂಘಟನಾತ್ಮಕ ರಾಜ್ಯ ಪ್ರವಾಸ – 11 ಬಾರಿ ಹಾಗೂ ಮೂರು ಬಾರಿ ಚುನಾವಣಾ ಸಂಬಂಧ ರಾಜ್ಯ ಪ್ರವಾಸ ಕೈಗೊಂಡಿದ್ದಾರೆ. ಜತೆಗೆ, 3 ಬಾರಿ ಕೋವಿಡ್–19 ಸೇವಾ ಕಾರ್ಯ ಪ್ರವಾಸ ಮತ್ತು ಜಿಲ್ಲಾ ಕಾರ್ಯಾಲಯ ಕಟ್ಟಡಗಳ ನಿರ್ಮಾಣ ಪರಿಶೀಲನಾ ರಾಜ್ಯ ಪ್ರವಾಸ ನಡೆಸಿದ್ದಾರೆ. ರಾಜ್ಯದ 311 ಮಂಡಲಗಳ ಪೈಕಿ ಸುಮಾರು 300 ರಷ್ಟು ಮಂಡಲ ಪ್ರವಾಸ ಮಾಡಿದ್ದಾರೆ.

ಪ್ರತಿ ತಿಂಗಳು ಸರಾಸರಿ 15 ದಿನಗಳ ರಾಜ್ಯ ಪ್ರವಾಸ ನಡೆಸಿರುವ ನಳಿನ್ ಕುಮಾರ್ ಕಟೀಲ್ ಅವರು, ದಿನಂಪ್ರತಿ ಸರಾಸರಿ 350 ಕಿ.ಮೀ ಅಂದಾಜಿನಂತೆ 1,40,000 ಕಿಲೋ ಮೀಟರ್‌ಗಳಷ್ಟು ರಸ್ತೆ ಪ್ರಯಾಣ ನಡೆಸಿದ್ದಾರೆ.

ರಾಜ್ಯ ಘಟಕದ ಅಧ್ಯಕ್ಷರಾದ ಬಳಿಕ ಶ್ರೀ ನಳಿನ್ ಕುಮಾರ್ ಕಟೀಲ್ ಅವರು ಆದ್ಯತೆ ಮೇರೆಗೆ ಎಲ್ಲಾ ಜಿಲ್ಲೆಗಳ ಜಿಲ್ಲಾ ಪ್ರಮುಖರ ಸಭೆ ನಡೆಸುವ ಮೂಲಕ ಪಕ್ಷದ ಅತ್ಯಂತ ತಳಮಟ್ಟದ ಸ್ತರವಾದ ಬೂತ್ ಅಧ್ಯಕ್ಷರು ಮತ್ತು ಶಕ್ತಿ ಕೇಂದ್ರ ರಚನೆಯ ಬಗ್ಗೆ ಹೆಚ್ಚಿನ ಗಮನ ಹರಿಸಿ ಪಕ್ಷ ಸಂಘಟನೆಗೆ ಬಲ ತುಂಬಿದ್ದಾರೆ.

ರಾಜ್ಯದಲ್ಲೇ ಪ್ರಥಮ ಬಾರಿಗೆ ಒಂದು ರಾಷ್ಟ್ರೀಯ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರು ತಮ್ಮ ಪಕ್ಷದ ಬೂತ್ ಅಧ್ಯಕ್ಷರ ಮನೆಯಲ್ಲಿ ಪಕ್ಷದ ಧ್ವಜ ಅನಾವರಣಗೊಳಿಸಿ, ಬೂತ್ ಅಧ್ಯಕ್ಷರ ನಾಮಫಲಕವನ್ನು ಅಧಿಕೃತವಾಗಿ ಮನೆಗೆ ಅಳವಡಿಸಿ ತಳ ಮಟ್ಟದ ಕಾರ್ಯಕರ್ತರ ಮನೋಬಲ ಹೆಚ್ಚಿಸುವಂತಹ ಸಂಘಟನಾತ್ಮಕ ಕಾರ್ಯಕ್ರಮ ನಡೆಸಿದ್ದಾರೆ.

ರಾಜ್ಯದ 15 ವಿಧಾನಸಭಾ ಕ್ಷೇತ್ರಗಳ ಉಪಚುನಾವಣಾ ಪ್ರಚಾರದಲ್ಲಿ ರಾಜ್ಯಾಧ್ಯಕ್ಷ ಕಟೀಲ್ ಅವರು ತೊಡಗಿಸಿಕೊಂಡ ಪರಿಣಾಮ 12 ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಜಯಗಳಿಸಿತು. ಮಂಗಳೂರು ಮಹಾನಗರ ಪಾಲಿಕೆ ಚುನಾವಣಾ ಪ್ರಚಾರ ಯಶಸ್ವಿಗೊಳಿಸಿ, ಪಕ್ಷದ ಗೆಲುವಿನಲ್ಲಿ ಮಹತ್ವದ ಪಾತ್ರ ವಹಿಸಿದರು.

ರಾಜ್ಯಾಧ್ಯಕ್ಷರಾಗಿ ಅಧಿಕೃತ ಘೋಷಣೆಯಾದ ಕ್ಷಣದಿಂದಲೇ ರಾಜ್ಯ ಪ್ರವಾಸ ಆರಂಭಿಸಿದ ಅವರು ರಾಜ್ಯದಲ್ಲಿ ಮೊದಲ ಬಾರಿಗೆ ದಾಖಲೆಯೆಂಬಂತೆ ಎಲ್ಲಾ 37 ಸಂಘಟನಾತ್ಮಕ ಜಿಲ್ಲೆಗಳಿಗೆ ಪ್ರವಾಸ ಮಾಡಿದರು. ಈ ಪ್ರವಾಸದ ಮೂಲಕ ನೂತನ ಜಿಲ್ಲಾಧ್ಯಕ್ಷರ ಪದಗ್ರಹಣ ಕಾರ್ಯಕ್ರಮ ನಡೆಸಿ ಕಾರ್ಯಕರ್ತರಲ್ಲಿ ಉತ್ಸಾಹ ತುಂಬಿದ್ದಾರೆ.

ಕೋವಿಡ್ ಸಂಕಷ್ಟದ ಕಾಲದಲ್ಲಿ ಕಟೀಲ್ ಅವರ ನೇತೃತ್ವದಲ್ಲಿ ರಾಜ್ಯದಾದ್ಯಂತ ಪಕ್ಷದ ನಾಯಕರು ಮತ್ತು ಕಾರ್ಯಕರ್ತರ ಸಶಕ್ತ ಪಡೆಯು ಇಡೀ ರಾಜ್ಯದಲ್ಲಿ ಅದ್ಭುತವಾಗಿ ಕೋವಿಡ್ ಸಂಕಷ್ಟ ಸೇವಾ ಕಾರ್ಯದಲ್ಲಿ ತೊಡಗಿಕೊಂಡಿದ್ದು ಅಪಾರ ಮೆಚ್ಚುಗೆಗೆ ಪಾತ್ರವಾಯಿತು. ಈ ಮೂಲಕ ಜನರ ವಿಶ್ವಾಸ ಗಳಿಸುವಲ್ಲಿ ಯಶಸ್ವಿಯಾದರು.

ರಾಜ್ಯದಲ್ಲಿ ಅನ್‌ಲಾಕ್ ಘೋಷಣೆಯಾದ ತಕ್ಷಣವೇ ನಳಿನ್ ಕುಮಾರ್ ಕಟೀಲ್ ಅವರು ಎಲ್ಲಾ ಜಿಲ್ಲೆಗಳಿಗೆ ಪ್ರವಾಸ ನಡೆಸಿ ಕೋವಿಡ್ ಕಾಲದಲ್ಲಿ ನಡೆಸಲಾದ ಸೇವಾ ಚಟುವಟಿಗಳ ವಿವರಗಳನ್ನು ಎಲ್ಲಾ 311 ಮಂಡಲಗಳಿಂದಪಡೆದುಕೊಂಡಿದ್ದಾರೆ. ರಾಜ್ಯಾಧ್ಯಕ್ಷರ ಈ ಪ್ರವಾಸ ಕೋವಿಡ್ ಸೇವಾ ಕಾರ್ಯದಲ್ಲಿ ಭಾಗಿಯಾದ ಕಾರ್ಯಕರ್ತರಲ್ಲಿ ಹುಮ್ಮಸ್ಸು ಹೆಚ್ಚಿಸಿತು.

ಪ್ರತಿ ಜಿಲ್ಲೆಯ ಕೋರ್ ಕಮಿಟಿ ಸಭೆ ಮಾಡುವ ಮೂಲಕ ಸಂಘಟನೆಯನ್ನು ಬಲಪಡಿಸುವ ಕಾರ್ಯಕ್ಕೆ ಚಾಲನೆ ನೀಡಿದರು. ರಾಜ್ಯದ ಬಿಜೆಪಿ ಇತಿಹಾಸದಲ್ಲೇ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಕಾರ್ಯಕರ್ತರನ್ನು ಗೆಲ್ಲಿಸಬೇಕೆಂಬ ಒಂದೇ ಸದುದ್ದೇಶದಿಂದ ಪ್ರತಿ ಜಿಲ್ಲೆಯಲ್ಲಿ ಗ್ರಾಮ 'ಸುರಾಜ್ಯ ಸಮಾವೇಶ' ಮಾಡುವ ಮೂಲಕ 43 ಸಾವಿರಕ್ಕೂ ಹೆಚ್ಚು ಬಿಜೆಪಿ ಬೆಂಬಲಿತ ಗ್ರಾಮ ಪಂಚಾಯಿತಿ ಸದಸ್ಯರು ಗೆಲ್ಲಲು ಕಾರಣೀಭೂತರಾದರು. ಜತೆಗೆ, ಎರಡು ಸಾವಿರಕ್ಕೂ ಹೆಚ್ಚು ಗ್ರಾಮ ಪಂಚಾಯಿತಿಗಳಲ್ಲಿ ಅಧ್ಯಕ್ಷ, ಉಪಾಧ್ಯಕ್ಷರನ್ನು ಆಯ್ಕೆಯಾಗಲು ಶ್ರಮಿಸಿದರು. ಚುನಾವಣೆ ನಂತರ ಪಂಚಾಯಿತಿಯಲ್ಲಿ ಅಧ್ಯಕ್ಷರು ಉಪಾಧ್ಯಕ್ಷರ ಆಯ್ಕೆಯಾದ ನಂತರ ಪ್ರತಿ ಜಿಲ್ಲೆಯಲ್ಲಿ ಗ್ರಾಮ ಸೇವಕ ಸಮಾವೇಶ ಮಾಡುವ ಮೂಲಕ ಸಂಘಟನೆಗೆ ಮತ್ತೊಮ್ಮೆ ಒತ್ತು ನೀಡಿದರು.

ಬಿಜೆಪಿ ರಾಜ್ಯ ಅಧ್ಯಕ್ಷರೊಬ್ಬರು ಇತಿಹಾಸದಲ್ಲೇ ಪ್ರಥಮ ಬಾರಿಗೆ ಮಂಡಲ ಮಟ್ಟದ ಸಭೆಗಳಿಗೆ ಕಾರ್ಯಕ್ರಮಗಳಿಗೆ ಭಾಗವಹಿಸುವ ಮೂಲಕ ಸರಳ ಸಜ್ಜನಿಕೆಯ ರಾಜ್ಯಾಧ್ಯಕ್ಷರಾಗಿ ಕಾರ್ಯಕರ್ತರ ಮೆಚ್ಚುಗೆಗೆ ಪಾತ್ರರಾದರು. ಮುಂಬರುವ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಯ ರೂಪುರೇಷೆಗಳನ್ನು ಈಗಾಗಲೇ ನಿಶ್ಚಯಿಸಿ ಎರಡನೇ ಹಂತದ ನಾಯಕತ್ವದ ಬೆಳವಣಿಗೆಗೆ ಕಾರ್ಯ ಯೋಜನೆ ರೂಪಿಸಿರುವ ರಾಜ್ಯಾಧ್ಯಕ್ಷರ ಕಾರ್ಯಶೈಲಿ ಕಾರ್ಯಕರ್ತರಿಗೆ ಮೆಚ್ಚುಗೆಯಾಗಿದೆ. ಕಾರ್ಯಕರ್ತರಲ್ಲಿ ನಾಯಕತ್ವದ ಗುಣ ಬೆಳೆಸಿ ನಾಯಕರನ್ನಾಗಿ ರೂಪಿಸುತ್ತಿರುವ ಕಟೀಲ್ ಅವರ ಕಾರ್ಯವು ಯಶಸ್ಸಿನ ಪಥದಲ್ಲಿ ಸಾಗುತ್ತಿದೆ.



ಮಾತಿನ ಮೋಡಿಗಾರ, ಕೇಸರಿ ಕಣ್ಮಣಿ

ನುಡಿದರೆ ಮುತ್ತಿನ ಹಾರದಂತಿರಬೇಕು...
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು...
ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು..

ಎಂದು ಹೇಳಿದ ಬಸವಣ್ಣವರ ವಚನದಂತೆ ಹಿಂದುತ್ವವಾದಿ ನಳೀನ್ ಕುಮಾರ್ ಕಟೀಲ್ ಬಿಜೆಪಿಯ ನಿಷ್ಠಾವಂತ ಕಾರ್ಯಕರ್ತರಾಗಿ ಅವಿರತ ಸೇವೆಯನ್ನು ಸಲ್ಲಿಸಿ ಈಗ ರಾಜ್ಯ ಬಿಜೆಪಿ ಅಧ್ಯಕ್ಷರಾಗಿದ್ದಾರೆ. ಅವರು ಅಧ್ಯಕ್ಷರಾಗಿ ಈಗ ಯಶಸ್ವಿ ಎರಡು ವರ್ಷ. ನಿರಂಜನ್ ಶೆಟ್ಟಿ ಮತ್ತು ಸುಶೀಲಾ ಶೆಟ್ಟಿ ದಂಪತಿಯ ಪುತ್ರ ನಳೀನ್ ಕುಮಾರ್ ಕಟೀಲು ಅವರು ಮೂರನೇ ಬಾರಿಗೆ ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರದಿಂದ ಸಂಸದರಾಗಿ ಆಯ್ಕೆಯಾಗಿದ್ದಾರೆ.

ಆರ್‌ಎಸ್‌ಎಸ್‌ನ ಪೂರ್ಣಾವಧಿ ಪ್ರಚಾರಕರಾಗಿ 15 ವರ್ಷ ಸಂಘಟನೆಗಾಗಿ ದುಡಿದರು. ಅವರ ಶ್ರಮ, ಕೊಡುಗೆಯನ್ನು ಗುರುತಿಸಿದ ಪಕ್ಷದ ಕೇಂದ್ರದ ನಾಯಕರು ಎರಡು ವರ್ಷಗಳ ಹಿಂದೆ ಅಧ್ಯಕ್ಷರಾಗಿ ಮಾಡಿದರು. ಈ ಎರಡು ವರ್ಷದಲ್ಲಿ ಅವರ ಕಾರ್ಯ, ಸಾಧನೆ, ಕಾರ್ಯಕರ್ತರನ್ನು ಕೊಂಡೊಯ್ಯುವ ಸಾಮರ್ಥ್ಯ, ಮಾತಿನ ಸೂಕ್ಷ್ಮತೆ ಕಾಣಬಹುದಾಗಿದೆ.

ಕರ್ನಾಟಕದ ಮೂಲೆ, ಮೂಲೆಗಳಲ್ಲಿ ತಿರುಗಿ ಕಾರ್ಯಕರ್ತರನ್ನು ಸಂಘಟಿಸುವಲ್ಲಿ ಅವರು ಪಟ್ಟ ಶ್ರಮ ಅಗಣಿತ. ಸಾಮಾನ್ಯ ಕಾರ್ಯಕರ್ತರಾಗಿದ್ದ ಅಮಿತ್ ಶಾ ಅವರು ಬಿಜೆಪಿಯಲ್ಲಿ ರಾಷ್ಟ್ರಾಧ್ಯಕ್ಷರಾಗಿ, ಗೃಹ ಮಂತ್ರಿಯಾಗಿ ಬೆಳೆದರು. ಅದೇ ಸಾಲಿನಲ್ಲಿ ಉಪರಾಷ್ಟ್ರಪತಿ ವೆಂಕಯ್ಯನಾಯ್ಡು, ನಿತಿನ್ ಗಡ್ಕರಿ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸೇರಿ ಅನೇಕ ನಾಯಕರು ಬಿಜೆಪಿಯಲ್ಲಿ ಸಾಮಾನ್ಯ ಕಾರ್ಯಕರ್ತರಾಗಿ ದೊಡ್ಡ ಹುದ್ದೆಗೆ ಆಯ್ಕೆಯಾದರು. ಪಕ್ಷ ಈ ಎಲ್ಲರನ್ನು ಗುರುತಿಸಿದ್ದು ಅವರ ಶ್ರಮಕ್ಕಾಗಿ.

ಶ್ರಮಕ್ಕೆ ತಕ್ಕ ಫಲ ಸಿಕ್ಕೇ ಸಿಗುತ್ತದೆ ಎಂಬುದಕ್ಕೆ ಪಕ್ಷದಲ್ಲಿರುವ ಈ ನಾಯಕರೇ ಸಾಕ್ಷಿ. ಹಿರಿಯ ಹಾದಿಯಲ್ಲಿ ಕಿರಿಯರು ಎಂಬಂತೆ ಸಾಮಾನ್ಯ ಕಾರ್ಯಕರ್ತರಾಗಿದ್ದ ನಳೀನ್ ಕುಮಾರ್ ಕಟೀಲ್ ಸಾಗಿದ್ದಾರೆ. ರಾಜ್ಯ ಘಟಕದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಮೇಲೆ ಅನೇಕ ಸವಾಲುಗಳನ್ನೂ ಎದುರಿಸಿದ್ದಾರೆ. ಬಿಜೆಪಿಯನ್ನು ಉತ್ತಮವಾಗಿ ಸಂಘಟಿಸುತ್ತಿದ್ದಾರೆ. ದೇಶವನ್ನು 60 ವರ್ಷ ಆಳ್ವಿಕೆ ನಡೆಸಿದ ಒಂದೇ ಕುಟುಂಬದಲ್ಲಿ ಅಧಿಕಾರ ಕೇಂದ್ರೀಕೃತವಾಗಿಸಿತ್ತು.

ಆದರೆ ಬಿಜೆಪಿ ಕಾರ್ಯಕರ್ತರ ಪಕ್ಷ. ಇಲ್ಲಿ ಶ್ರಮಕ್ಕೆ ಫಲವಿದೆ. ಕುಗ್ರಾಮವಾದ ಪಾಲ್ತಾಡಿ ಗ್ರಾಮದ ಕುಂಜಾಡಿಯಿಂದ ಬೆಳೆದ ಬಾಲಕ ನಳೀನ್ ಕುಮಾರ್ ಕಟೀಲ್ ಇದಕ್ಕೆ ಸಾಕ್ಷಿ. ಪಕ್ಷದಲ್ಲಿ ಕಾರ್ಯಕರ್ತರಿಗೆ ನಿವೃತ್ತಿ ಇರುವುದಿಲ್ಲ. ಅಧಿಕಾರ ಹೋಗುತ್ತದೆ ಬರುತ್ತದೆ. ಆದರೆ ಮಾಡಿರುವ ಕಾರ್ಯಗಳೇ ಶಾಶ್ವತ. ಕಾರ್ಯಕರ್ತರಲ್ಲಿ ನಾಯಕತ್ವದ ಗುಣ ಬೆಳೆಸಿ ನಾಯಕರನ್ನಾಗಿ ಬೆಳೆಸುವ ಕಾರ್ಯದಲ್ಲಿ ಪಣತೊಟ್ಟು, ಅದಕ್ಕಾಗಿ ರಾಜ್ಯವ್ಯಾಪಿ ಪ್ರವಾಸ ನಡೆಸಿ ಕಾರ್ಯಕರ್ತರಿಗೆ ಸ್ಫೂರ್ತಿ ನೀಡುತ್ತಿರುವ ಕಟೀಲ್ ಅವರು ಈ ಕಾರ್ಯದಲ್ಲಿ ಯಶಸ್ವಿಯಾಗಲಿ. ಇದು, ಎಲ್ಲ ಕಾರ್ಯಕರ್ತರ ಹಾರೈಕೆ ಮತ್ತು ನಿರೀಕ್ಷೆ.

ಕಟೀಲ್ ಹೆಜ್ಜೆ ಗುರುತುಗಳು

- ರಾಜ್ಯ ಬಿಜೆಪಿ ಅಧ್ಯಕ್ಷರಾದ ಬಳಿಕ ರಾಜ್ಯದಾದ್ಯಂತ ಅತಿ ಹೆಚ್ಚು ಪ್ರವಾಸ ಮಾಡಿದ, ಎಲ್ಲ ಮಂಡಲ, ಶಕ್ತಿ ಕೇಂದ್ರಗಳಿಗೆ ಪ್ರವಾಸ ಮಾಡಿದ ಮೊದಲನೇ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್. ಕಾರ್ಯಕರ್ತರ ದಕ್ಷತೆ ಹೆಚ್ಚಳ ಮತ್ತು ನೈಪುಣ್ಯತೆ ತರಲು ಎಲ್ಲ ಮಂಡಲಗಳಲ್ಲಿ ಅಭ್ಯಾಸವರ್ಗಗಳನ್ನು ರಚಿಸಿದ್ದಾರೆ.
- ಕಾರ್ಯಕರ್ತರ ತರಬೇತಿ ಮತ್ತು ಅವರಲ್ಲಿ ಸಂಘಟನಾ ಬದ್ಧತೆಯನ್ನು ರೂಪಿಸಲು ಗ್ರಾಮ ಸ್ವರಾಜ್ಯ ಸಮಾವೇಶಗಳನ್ನು ಏರ್ಪಡಿಸಿದವರು.
- ಸಾಮಾನ್ಯ ಕಾರ್ಯಕರ್ತನನ್ನೂ ಜನಸೇವಕರನ್ನಾಗಿ ಪರಿವರ್ತಿಸಬೇಕೆಂಬ ಸಂಕಲ್ಪದೊಂದಿಗೆ ಜನಸೇವಕ ಯಾತ್ರೆಗಳ ಆಯೋಜನೆ. ರಾಜ್ಯದಾದ್ಯಂತ ಇಂಥ ಯಾತ್ರೆಗಳನ್ನು ಯಶಸ್ವಿಯಾಗಿ ಸಂಘಟಿಸಲಾಗಿದೆ.
- ಹಿರಿಯರಿಗೆ ಮತ್ತು ಪಕ್ಷದ ಪ್ರಮುಖರಿಗೆ ಹಾಗೂ ಸಮಾಜದ ವಿವಿಧ ವರ್ಗದ ಜನರಿಂದ ಆಶೀರ್ವಾದ ಪಡೆಯುವ ನಿಟ್ಟಿನಲ್ಲಿ 'ಜನಾಶೀರ್ವಾದ ಯಾತ್ರೆ' ಸಂಘನಟೆ, ಉತ್ತಮ ಪ್ರತಿಕ್ರಿಯೆ.
- ನಳಿನ್‌ಕುಮಾರ್ ಕಟೀಲ್ ಅವರು ಅಧ್ಯಕ್ಷರಾದ ಬಳಿಕ ಎಲ್ಲ ಚುನಾವಣೆಗಳಲ್ಲಿ ಪಕ್ಷಕ್ಕೆ ಗೆಲುವು ದಕ್ಕಿದ್ದು, ಇದಕ್ಕಾಗಿ ಅವರು ನಿರಂತರವಾಗಿ ಶ್ರಮಿಸಿದ್ದಾರೆ. ಲೋಕಸಭೆ ಉಪ ಚುನಾವಣೆ, ವಿಧಾನಸಭೆ ಉಪ ಚುನಾವಣೆಗಳು, ವಿಧಾನಪರಿಷತ್ ಅಭ್ಯರ್ಥಿಗಳ ಆಯ್ಕೆಗಾಗಿ ನಡೆದ ಚುನಾವಣೆ, ಮೈಸೂರಿನ ಮಹಾನಗರ ಪಾಲಿಕೆ ಮೇಯರ್ ಚುನಾವಣೆ, ನಗರ, ಪಟ್ಟಣ ಪಂಚಾಯತ್, ಸೇರಿದಂತೆ ನಗರ– ಗ್ರಾಮೀಣ ಸ್ಥಳೀಯ ಸಂಸ್ಥೆಗಳಲ್ಲಿ ಅತಿ ಹೆಚ್ಚು ಸ್ಥಾನ ಗೆಲ್ಲುವ ಮೂಲಕ ಭಾರತೀಯ ಜನತಾ ಪಾರ್ಟಿಯನ್ನು ಅತ್ಯುನ್ನತ ಸ್ಥಾನಕ್ಕೆ ತೆಗೆದುಕೊಂಡು ಹೋಗುವ ಕಾರ್ಯವಾಗಿದೆ.
- ಬೂತ್‌ಗಳಲ್ಲಿ ಪ್ರಮುಖರ ಪರಿಕಲ್ಪನೆಯ ಸಮರ್ಪಕ ಅನುಷ್ಠಾನ, ಬೂತ್ ಅಧ್ಯಕ್ಷರು, ಶಕ್ತಿ ಕೇಂದ್ರಗಳ ಅಧ್ಯಕ್ಷರು, ಮಹಾಶಕ್ತಿ ಕೇಂದ್ರಗಳ ಅಧ್ಯಕ್ಷರ ನೇಮಕ, ಪಂಚರತ್ನ ಸಮಿತಿ ರಚಿಸಿ ಪಕ್ಷವನ್ನು ರಾಜ್ಯದೆಲ್ಲೆಡೆ ಸದೃಢವಾಗಿ ಬೆಳೆಸಿದ್ದಾರೆ.
- ಪಕ್ಷದ 37 ಸಂಘಟನಾತ್ಮಕ ಜಿಲ್ಲೆಗಳಿದೆ. ನಳಿನ್‌ಕುಮಾರ್ ಕಟೀಲ್ ಅವರ ನೇತೃತ್ವದಲ್ಲಿ 9 ಜಿಲ್ಲಾ ಕಟ್ಟಡಗಳ ನಿರ್ಮಾಣ ಆಗಿದೆ. 11 ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲಾ ಕಾರ್ಯಾಲಯ ಕಟ್ಟಡಕ್ಕೆ ಶಿಲಾನ್ಯಾಸ ನಡೆಸಲಾಗಿದೆ. 17 ಜಿಲ್ಲೆಗಳಲ್ಲಿ ಭೂಮಿ ಖರೀದಿ ಸೇರಿದಂತೆ ಕಟ್ಟಡ ನಿರ್ಮಾಣಕ್ಕೆ ತಯಾರಿ ನಡೆದಿದೆ.
- ಸಾಮಾನ್ಯ ಕಾರ್ಯಕರ್ತರನ್ನು ಗುರುತಿಸಿ ಪಕ್ಷದ ಜನಪ್ರತಿನಧಿಯನ್ನಾಗಿ ನೇಮಿಸಲು ಅವಕಾಶ ಮಾಡಿಕೊಟ್ಟಿದ್ದಾರೆ. ಯುವಕ, ಮಹಿಳೆಯರಿಗೆ ಆದ್ಯತೆ ಕೊಟ್ಟಿದ್ದಾರೆ. ಉದಾಹರಣೆಗೆ– ಶಾಂತಾರಾಮ ಸಿದ್ದಿ ಅವರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ನೇಮಿಸಿದ್ದು, ಈರಣ್ಣ ಕಡಾಡಿ ಅವರನ್ನು ರಾಜ್ಯಸಭೆ ಸದಸ್ಯರಾಗಿ ಆಯ್ಕೆ ಮಾಡಿರುವುದು, ಶ್ರೀ ಕೆ.ನಾರಾಯಣ ಅವರನ್ನು ರಾಜ್ಯಸಭಾ ಸದಸ್ಯರನ್ನಾಗಿ ಆಯ್ಕೆ ಮಾಡಲು ಶಿಫಾರಸು ಮಾಡಿದ್ದು, ಅದೇ ರೀತಿ ಪ್ರತಾಪಸಿಂಹ ನಾಯಕ್ ಅವರನ್ನು ವಿಧಾನಪರಿಷತ್ ಸದಸ್ಯರನ್ನಾಗಿ ಆಯ್ಕೆ ಮಾಡಿರುವುದು.

ಅತ್ಯುತ್ತಮ ಸಂಘಟಕ, ಕಾರ್ಯಕರ್ತರಿಗೆ ಪ್ರೇರಕ

ಪಕ್ಷದ ಸಂಘಟನೆ, ಬಲವರ್ಧನೆಗೆ ಮಾದರಿ ಸೇವೆ

ರಾಜ್ಯ ಬಿಜೆಪಿ ಅಧ್ಯಕ್ಷರಾಗಿ ಎರಡು ವರ್ಷದ ಅಧಿಕಾರವಧಿ ಪೂರೈಸುತ್ತಿರುವ ಶ್ರೀ ನಳಿನ್ ಕುಮಾರ ಕಟೀಲ್ ಅವರಿಗೆ ಅಭಿನಂದನೆಗಳು. ರಾಜ್ಯದಲ್ಲಿ ಪಕ್ಷವನ್ನು ಕ್ರೀಯಾಶೀಲ ಹಾಗೂ ಸಂಘಟನಾತ್ಮಕವಾಗಿ ಬೆಳೆಸುವಲ್ಲಿ ಹಾಗೂ ವಿಶಿಷ್ಟ ರೀತಿಯಲ್ಲಿ ಕಾರ್ಯಚಟುವಟಿಕೆಯನ್ನು ಮಾಡುತ್ತಿರುವುದು ಅನ್ಯರಿಗೆ ಮಾದರಿಯಾಗಿದೆ

ರಾಜ್ಯದೆಲ್ಲೆಡೆ ಸಂಚರಿಸಿ ಪ್ರತಿಯೊಂದು ಜಿಲ್ಲೆಯ ಜಿಲ್ಲಾಧ್ಯಕ್ಷರ ಪದಗ್ರಹಣ ಸಮಾರಂಭದಲ್ಲಿ ಭಾಗವಹಿಸುವ ಮೂಲಕ ಅವರಲ್ಲಿ ಆತ್ಮವಿಶ್ವಾಸ ತುಂಬಲಾಗಿದೆ. ಕೊರೊನಾ ಅವಧಿಯಲ್ಲಿಯೂ ಕಾರ್ಯಕರ್ತರು ಕಾರ್ಯಕರ್ತರಲ್ಲಿ ಉತ್ಸಾಹ ಮೂಡಿಸಲು ಆನ್‌ಲೈನ್ ಮೂಲಕ ನಿರಂತರವಾಗಿ ಸಭೆಗಳನ್ನು ಮಾಡಿ, ಕೊರೊನಾ ವಿರುದ್ಧ ಹೋರಾಟದಲ್ಲಿ ಕಾರ್ಯಕರ್ತರು ಕೈಜೋಡಿಸುವಂತೆ ಮಾಡಿದ್ದಾರೆ. ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಬಳಿ, ಪಕ್ಷ ಮತ್ತು ಸರ್ಕಾರದ ನಡುವೆ ಉತ್ತಮವಾದ ಸಮನ್ವಯತೆ ತಂದಿದ್ದು, ಕೇಂದ್ರದಲ್ಲಿನ ನರೇಂದ್ರ ಮೋದಿಯವರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಜನಪರ ಯೋಜನೆಗಳನ್ನು ಜನರಿಗೆ ತಲುಪಿಸುವಲ್ಲಿ ಶ್ರಮಿಸಿದ್ದಾರೆ. ಹಲವು ಜಿಲ್ಲಾ ಕೇಂದ್ರದಲ್ಲಿ ನಡೆದಿರುವ ನಮ್ಮ ಬಿಜೆಪಿ ಕಾರ್ಯಾಲಯದ ನೂತನ ಕಟ್ಟಡ ನಿರ್ಮಾಣದ ಕೆಲಸ, ಕಾಮಗಾರಿಗಳನ್ನು ಪರಿಶೀಲಿಸಿದ್ದಾರೆ. ಇದೇ ವೇಳೆ ಕಾರ್ಯಕರ್ತರನ್ನು ಭೇಟಿಯಾಗಿ ಪಕ್ಷದ ಸಂಘಟನೆಗೆ ಸೂಕ್ತ ಸಲಹೆಗಳನ್ನು ಕೊಟ್ಟು ಶಕ್ತಿ ತುಂಬಿದ್ದಾರೆ. ಗ್ರಾಮ ಪಂಚಾಯಿತಿಯ ಚುನಾವಣೆಯ ವೇಳೆ ಕೈಗೊಂಡಿರುವ ಗ್ರಾಮ ಸ್ವರಾಜ್ ಯಾತ್ರೆ, ಇವರ ಕಾರ್ಯಕ್ಕೆ ಒಂದು ನಿದರ್ಶನ. ರಾಜ್ಯದಲ್ಲಿ 'ಜನ ಸೇವಕ ಸಮಾವೇಶ'ಗಳನ್ನು ಸಂಘಟಿಸಿದ್ದು, ಪಕ್ಷದ ಯಶಸ್ಸಿಗೆ ನೆರವಾಗಿದ್ದು, ಇವರ ಕ್ರಿಯಾಶೀಲ ಚಟುವಟಿಕೆಗೆ ಕಾರಣವಾಗಿದೆ.

ಅರುಣ್ ಸಿಂಗ್, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳು ಮತ್ತು ಕರ್ನಾಟಕದ ಉಸ್ತುವಾರಿಗಳು

ಕುಗ್ರಾಮದಿಂದ ಪಕ್ಷದ ಅಧ್ಯಕ್ಷ ಸ್ಥಾನವರೆಗೆ ಅವಿರತ ಸಾಧನೆ...

ಬಿಜೆಪಿ ಕಟ್ಟುವಲ್ಲಿ ದೊಡ್ಡ ದೊಡ್ಡ ನಾಯಕರ ಶ್ರಮವಿದೆ. ಸಾಮಾನ್ಯ ಕಾರ್ಯಕರ್ತನೂ ಪಕ್ಷದಲ್ಲಿ ಉನ್ನತ ಸ್ಥಾನ ತಲುಪಬಹುದು ಎಂಬುದಕ್ಕೆ ಉದಾಹರಣೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಅವರು. ಪುತ್ತೂರು ತಾಲ್ಲೂಕಿನ ಕುಂಜಾಡಿ ಎಂಬ ಪುಟ್ಟಹಳ್ಳಿಯಿಂದ ಬಂದ ನಳಿನ್ ಕುಮಾರ್ ಕಟೀಲ್ ಅವರು ಈಗ ರಾಜ್ಯ ಬಿಜೆಪಿ ಅಧ್ಯಕ್ಷರಾಗಿ ಎರಡು ವರ್ಷ ಪೂರೈಸಿದ್ದಾರೆ. ಅವರ ಹೆಸರಿನಲ್ಲಿಯೇ ಕಟೀಲ್ ಇದೆ. ಅವರ ತಾಯಿ ಉಳ್ಳಾಲ್ತಿಯ ಭಕ್ತ. ತಮ್ಮ ಬಹುತೇಕ ಭಾಷಣದ ಆರಂಭದಲ್ಲಿ ಅವರು 'ಕಟೀಲ್ ದ ಅಪ್ಪೆ ಉಳ್ಳಾಲ್ತಿನ್ ಸುಗಿತೊಂದು...' ಎಂದು ತುಳುವಿನಲ್ಲಿ ಹೇಳುತ್ತಾರೆ. ಕಟೀಲು ದೇವಿಯ ಪರಮ ಭಕ್ತ ಇವರು ಪುತ್ತೂರಿನಿಂದ ಹೊರ ಹೋದ ಬಳಿಕ ಆರೆಸ್ಸೆಸ್ ಕಾರ್ಯಕರ್ತರಾಗಿ ಮಂಗಳೂರಿನಲ್ಲಿ ಬೆಳೆದರು.

2009ರಲ್ಲಿ ಮಂಗಳೂರು ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಬಿಜೆಪಿ ಟಿಕೆಟ್ ಸಿಕ್ಕಿದಾಗ ರಾಜಕೀಯ ಆಸಕ್ತರೆಲ್ಲ ಅಚ್ಚರಿ ಪಟ್ಟಿದ್ದರು. ಕನಿಷ್ಠ ಗ್ರಾ.ಪಂ ಚುನಾವಣೆಯಲ್ಲೂ ಸ್ಪರ್ಧೆ ಮಾಡದ ಕಾರ್ಯಕರ್ತನಿಗೆ ಸಂಸತ್ ಸ್ಥಾನದ ಟಿಕೆಟ್ ಸಿಕ್ಕಾಗ ಪಕ್ಷದಲ್ಲಿ ಹೊಸ ಶಕೆಯೇ ಆರಂಭಗೊಂಡಿತ್ತು. ಅದು ಕಾರ್ಯಕರ್ತರ ಪ್ರಾತಿನಿಧ್ಯವಾಗಿತ್ತು

2014ರಲ್ಲಿ ಎರಡನೇ ಬಾರಿಗೆ, 2019 ರಲ್ಲು ಮೂರನೇ ಬಾರಿ ಸಂಸದರಾಗಿ ಆಯ್ಕೆಯಾದರು. ಸಂಘದ ಶಕ್ತಿ ಕೇಂದ್ರವಾದ ದಕ್ಷಿಣ ಕನ್ನಡದಲ್ಲಿ ಬಿಜೆಪಿ ಕೋಟೆ ಶಿಸ್ತುಬದ್ಧವಾಗಿ ಬೆಳೆದಿದ್ದು, ಇತರ ಜಿಲ್ಲೆಗಳ ಬಿಜೆಪಿ ಸಂಘಟನೆಗೆ ಮಾದರಿಯಾಗಿದೆ. ಈ ಅನುಭವ ನಳಿನ್ ಕುಮಾರ್ ಕಟೀಲ್ ಅವರಿಗೆ ರಾಜ್ಯದಲ್ಲಿ ಪಕ್ಷ ಕಟ್ಟಲು ನೆರವಾಯಿತು. ಅಧ್ಯಕ್ಷರಾಗಿ ಎರಡು ವರ್ಷ ಪೂರೈಸಿದ್ದಾರೆ. ಅವರ ನಿರ್ಧಾರಗಳು, ಭಾಷಣಗಳಿಂದಲೇ ಅದೆಷ್ಟೋ ಕಾರ್ಯಕರ್ತರು ಪ್ರಭಾವಿತರಾಗಿದ್ದಾರೆ. ಉಪ ಚುನಾವಣೆಗಳಲ್ಲಿ ಕಾಲಿಗೆ ಚಕ್ರಕಟ್ಟಿಕೊಂಡಂತೆ ಸಂಚರಿಸಿ, ಕಾರ್ಯಕರ್ತರನ್ನು ಸಂಘಟಿಸಿದ್ದಾರೆ. ಪಕ್ಷ ಅಧಿಕಾರಕ್ಕೆ ಬರುವಲ್ಲಿ ಅವರ ಶ್ರಮ ದೊಡ್ಡದು. ಅವರು ಬಿಜೆಪಿಯಲ್ಲಿ ಇನ್ನೂ ಎತ್ತರಕ್ಕೆ ಬೆಳೆದು ಪಕ್ಷಕ್ಕೆ ಅವರು ಆಸ್ತಿಯಾಗಲಿ.

ಸಿ.ಟಿ.ರವಿ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ

ಅತ್ಯುತ್ತಮ ಸಂಘಟಕ, ಕಾರ್ಯಕರ್ತರಿಗೆ ಸ್ಫೂರ್ತಿ

ರಾಜ್ಯ ಬಿಜೆಪಿ ಅಧ್ಯಕ್ಷರಾಗಿ ಎರಡು ವರ್ಷದ ಅಧಿಕಾರವನ್ನು ಯಶಸ್ವಿಯಾಗಿ ಪೂರೈಸಿರುವ ಶ್ರೀ ನಳೀನ್ ಕುಮಾರ್ ಕಟೀಲ್ ಅವರಿಗೆ ಅಭಿನಂದನೆಗಳು. ರಾಜ್ಯದಲ್ಲಿ ಪಕ್ಷದ ಸಂಘಟನೆ ಹಾಗೂ ಪಕ್ಷವು ಅಧಿಕಾರಕ್ಕೆ ಬರುವಲ್ಲಿ ಅವರ ಪಾತ್ರವೂ ಮಹತ್ತರವಾದುದು. ಈ ಎರಡು ವರ್ಷದಲ್ಲಿ ಅವರು ಕರ್ನಾಟಕದಲ್ಲಿ ಪ್ರತಿ ಮಂಡಲಗಳಿಗೆ ಭೇಟಿ ಕೊಟ್ಟು ನಿರಂತರವಾಗಿ ಕಾರ್ಯಕರ್ತರ ಜೊತೆ ಸಂಪರ್ಕದಲ್ಲಿದ್ದು ಕಾರ್ಯಕರ್ತರಿಗೆ ಉತ್ಸಾಹ ತುಂಬುವ ಕೆಲಸ ಮಾಡಿದ್ದಾರೆ. ಕೇಂದ್ರ ಮತ್ತು ರಾಜ್ಯದ ಎಲ್ಲ ಜನಪರ ಯೋಜನೆಗಳನ್ನು ಬೂತ್ ಮಟ್ಟಕ್ಕೆ ಕೊಂಡೊಯ್ದು ಅರ್ಹ ಫಲಾನುಭವಿಗಳಿಗೆ ಸವಲತ್ತುಗಳನ್ನು ತಲುಪಿಸುವ ಕೆಲಸ ಮಾಡಿದ್ದಾರೆ. ಈ ಎರಡು ವರ್ಷಗಳಲ್ಲಿ ರಾಜ್ಯದಲ್ಲಿ ನಡೆದ ಉಪ ಚುನಾವಣೆಗಳು, ಗ್ರಾಮ ಪಂಚಾಯಿತಿಯ ಚುನಾವಣೆಯಲ್ಲಿ ಇವರು ಪಕ್ಷ ಸಂಘಟನೆಗಾಗಿ ಕೈಗೊಂಡಿರುವ ಅವರು ಕೈಗೊಂಡಿದ್ದ ಕ್ರಮಗಳು ಫಲ ನೀಡಿವೆ. ಪಕ್ಷ ಬೆಂಬಲಿತ ಹೆಚ್ಚಿನ ಸದಸ್ಯರು ಗ್ರಾಮ ಪಂಚಾಯಿತಿಗಳಿಗೆ ಆಯ್ಕೆಯಾಗಿದ್ದಾರೆ. ಈ ಮೂಲಕ ನೆಲಮಟ್ಟದಿಂದ ಪಕ್ಷವು ರಾಜ್ಯದಾದ್ಯಂತ ಸಂಘಟನೆಯಾಗಲು ಕಾರಣರಾಗಿದ್ದಾರೆ. ಈ ಎರಡು ವರ್ಷದ ಅಧಿಕಾರವಧಿಯಲ್ಲಿ ರಾಜ್ಯದ ಬಹುತೇಕ ಎಲ್ಲ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ, ಕಾರ್ಯಕರ್ತರ ಒಲವು ಗಳಿಸಲು ಒತ್ತು ನೀಡಿದ್ದಾರೆ. ಪಕ್ಷದ ಎಲ್ಲ ಘಟಕಗಳು, ಮೋರ್ಚಾಗಳಲ್ಲಿ ಪಕ್ಷ ಕಟ್ಟುವ ಉತ್ಸಾಹ ಮೂಡಿಸುವಲ್ಲಿ ಇವರ ಶ್ರಮ ಕಾಣುತ್ತದೆ. ಇವರ ಅವಧಿಯಲ್ಲಿ ಪಕ್ಷವು ಇನ್ನು ಎತ್ತರಕ್ಕೆ ಬೆಳೆಯಲಿ ಎಂದು ಆಶಿಸುತ್ತೇನೆ.

ಬಿ.ಎಸ್.ಯಡಿಯೂರಪ್ಪ ನಿಕಟಪೂರ್ವ ಮುಖ್ಯಮಂತ್ರಿ, ಹಿರಿಯ ಮುಖಂಡ

2ನೇ ಹಂತದ ನಾಯಕರ ಬೆಳವಣಿಗೆಗೆ ಆದ್ಯತೆ

ನಳಿನ್ ಕುಮಾರ್ ಕಟೀಲ್ ಅವರು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾದ ದಿನದಿಂದಲೂ ಪಕ್ಷದ ಸಂಘಟನೆಯೇ ಇವರ ಗುರಿಯಾಗಿದೆ. ಅದಕ್ಕಾಗಿ ನಿರಂತರವಾಗಿ ಪ್ರವಾಸ ಮಾಡುತ್ತಿದ್ದಾರೆ. ಪ್ರತಿ ಜಿಲ್ಲೆಯಲ್ಲಿ ಕೋರ್ ಕಮಿಟಿ ಸಭೆಯನ್ನು ಮಾಡುವ ಮೂಲಕ ಸಂಘಟನೆಗೆ ಬಲ ನೀಡಿದ್ದಾರೆ. ಕರ್ನಾಟಕದ ಬಿಜೆಪಿ ಇತಿಹಾಸದಲ್ಲಿಯೇ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಕಾರ್ಯಕರ್ತರನ್ನು ಗೆಲ್ಲಿಸಬೇಕೆಂಬ ಸದುದ್ದೇಶದಿಂದ ಪ್ರತಿ ಜಿಲ್ಲೆಯಲ್ಲಿ "ಗ್ರಾಮ ಸುರಾಜ್ಯ ಸಮಾವೇಶ' ಮಾಡಿದ್ದು, ಸಾವಿರಾರು ಸಂಖ್ಯೆಯಲ್ಲಿ ಬಿಜೆಪಿ ಬೆಂಬಲಿತ ಸದಸ್ಯರು ಗ್ರಾಮ ಪಂಚಾಯಿತಿಗೆ ಆಯ್ಕೆಯಾಗಲು ಕಾರಣರಾಗಿದ್ದಾರೆ. 2 ಸಾವಿರಕ್ಕೂ ಹೆಚ್ಚು ಗ್ರಾಮ ಪಂಚಾಯಿತಿಗಳಲ್ಲಿ ಅಧ್ಯಕ್ಷ, ಉಪಾಧ್ಯಕ್ಷರಾಗಿ ಆಯ್ಕೆಯಾಗಲು ಕಾರ್ಯತಂತ್ರ ರೂಪಿಸಿದರು ಪಂಚಾಯಿತಿಯಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರ ಆಯ್ಕೆಯಾದ ನಂತರ ಪ್ರತಿ ಜಿಲ್ಲೆಯಲ್ಲಿ 'ಗ್ರಾಮ ಸೇವಕ ಸಮಾವೇಶ' ಮಾಡುವ ಮೂಲಕ ಸಂಘಟನೆಗೆ ಮತ್ತೆ ಒತ್ತು ಕೊಟ್ಟರು. ಉಪ ಚುನಾವಣೆಗಳಲ್ಲಿ ಅತಿ ಹೆಚ್ಚು ಸ್ಥಾನಗಳು ಗೆದ್ದಿದ್ದು, ಈ ಮೂಲಕ ಬಲಿಷ್ಠ ಅಧ್ಯಕ್ಷರಾಗಿ ರೂಪುಗೊಂಡರು. ಕೋವಿಡ್ ಸಂಕಷ್ಟಕಾಲದಲ್ಲಿ ವೆಬ್ ಆಧರಿತ ಸಭೆಗಳನ್ನು ಮಾಡಿ ಸಂಘಟನಾತ್ಮಕ ಕಾರ್ಯಕ್ರಮಗಳಿಗೆ ಒತ್ತು ನೀಡಿದರು. ಬಿಜೆಪಿ ರಾಜ್ಯ ಅಧ್ಯಕ್ಷರ ಇತಿಹಾಸದಲ್ಲೇ ಪ್ರಥಮ ಬಾರಿಗೆ ಮಂಡಲ ಮಟ್ಟದ ಸಭೆಗಳಿಗೆ ಭಾಗವಹಿಸಿದ್ದು, ಸರಳ ಹಾಗೂ ಸಜ್ಜನಿಕೆಯ ಅಧ್ಯಕ್ಷರಾಗಿ ಕಾರ್ಯಕರ್ತರ ಮೆಚ್ಚುಗೆಗೆ ಪಾತ್ರರಾದರು. ಪ್ರವಾಸ ಹಾಗೂ ಸಂಘಟನೆಯೇ ಇವರ ಗುರಿ. ಮುಂಬರುವ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗೂ ಆಗಲೇ ರೂಪುರೇಷೆ ನಿಶ್ಚಯಿಸಿ ಎರಡನೇ ಹಂತದ ನಾಯಕತ್ವದ ಬೆಳವಣಿಗೆಗೆ ಕಾರ್ಯಯೋಜನೆ ರೂಪಿಸಿದ್ದಾರೆ. ಕಟೀಲ್ ಅವರ ಕಾರ್ಯಶೈಲಿ ಕಾರ್ಯಕರ್ತರಿಗೆ ಮೆಚ್ಚುಗೆಗೆ ಪಾತ್ರವಾಗಿದೆ.

ಅಶ್ವತ್ಥನಾರಾಯಣ, ರಾಜ್ಯ ಪ್ರಧಾನ ಕಾರ್ಯದರ್ಶಿ

ಕುಶಲ ಸಂಘಟಕ, ಕಾರ್ಯಕರ್ತರ ಧ್ವನಿ



ಬಿಜೆಪಿ ರಾಜ್ಯ ಅಧ್ಯಕ್ಷರಾಗಿ ಯಶಸ್ವಿಯಾಗಿ ಎರಡು ವರ್ಷಗಳ ಅಧಿಕಾರವನ್ನು ಪೂರೈಸಿದ, ಕುಶಲ ಸಂಘಟಕ ಶ್ರೀ ನಳಿನ್ ಕುಮಾರ್ ಕಟೀಲ್ ಅವರಿಗೆ ತುಂಬು ಹೃದಯದ ಅಭಿನಂದನೆಗಳು. ರಾಜ್ಯದಾದ್ಯಂತ ಅತ್ಯಂತ ವೇಗವಾಗಿ ಹಗಲಿರುಳು ಪ್ರವಾಸವನ್ನು ಮಾಡಿ ಪಕ್ಷ ಸಂಘಟನೆಯನ್ನು ಅತ್ಯಂತ ಕುಶಲತೆಯಿಂದ ಯಶಸ್ವಿಯಾಗಿ ಮಾಡುತ್ತಿದ್ದಾರೆ.

ಪಕ್ಷದ ಎಲ್ಲ ಕಾರ್ಯಕರ್ತರ ಜೊತೆಗೆ ಉತ್ತಮವಾದ ಸಂಬಂಧ ಹೊಂದಿ, ಎಲ್ಲರ ಧ್ವನಿಯಾಗಿ, ನಮ್ಮೆಲ್ಲರ ಮನವನ್ನು ಗೆದ್ದು ಪಕ್ಷವನ್ನು ಬಲಪಡಿಸಲು ಶ್ರಮಿಸುತ್ತಿರುವುದು ಹೆಮ್ಮೆಯ ಸಂಗತಿ. ರಾಜ್ಯದಲ್ಲಿ ಈಚೆಗೆ ನಡೆದ ಉಪ ಚುನಾವಣೆಗಳು, ಗ್ರಾಮ ಪಂಚಾಯಿತಿ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಪಕ್ಷ ಇವರ ನೇತೃತ್ವದಲ್ಲಿ ಮೇಲುಗೈ ಸಾಧಿಸಿದೆ.

ಪಕ್ಷದ ರಾಜ್ಯ ಘಟಕ, ಎಲ್ಲ ಮೋರ್ಚಾಗಳು, ಪ್ರಕೋಷ್ಠಗಳು, ಜಿಲ್ಲಾ ಘಟಕಗಳು ಇವರ ನೇತೃತ್ವದಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ. ಪಕ್ಷ ಸಂಘಟನೆಯ ಬೇರುಗಳು ಬಲಿಷ್ಠವಾಗಿ ಬಳಗೊಳ್ಳುತ್ತಿವೆ. ಇವರ ಎರಡು ವರ್ಷದ ಶ್ರಮ ಉತ್ತಮ ಫಲ ನೀಡುತ್ತಿದೆ. ಅವರಿಗೆ ಮತ್ತೊಮ್ಮೆ ಶುಭ ಕೋರುತ್ತೇನೆ. ನಿಮ್ಮ ನೇತೃತ್ವದಲ್ಲಿ ರಾಜ್ಯದಲ್ಲಿ ಪಕ್ಷವು ಮತ್ತಷ್ಟು ಬೆಳೆಯಲಿ ಎಂದು ನಾನು ಪ್ರಾರ್ಥಿಸುತ್ತೇನೆ.

ಎನ್ ರವಿಕುಮಾರ್, ರಾಜ್ಯ ಪ್ರಧಾನ ಕಾರ್ಯದರ್ಶಿ.

ಬೆಟ್ಟವಾಗಿ ಬೆಳೆಯುತ್ತಿರುವ ಬಾಕಿ ಅರ್ಜಿ: ಆಹಾರ ಇಲಾಖೆಗೆ ಎಡತಾಕುತ್ತಿರುವ ಸಾರ್ವಜನಿಕರು

ಹೊಸ ಪಡಿತರ ಚೀಟಿಗೆ ತಡೆ: ಪರದಾಟ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಪಡಿತರ ಚೀಟಿಗೆ ಹೊಸದಾಗಿ ಸಲ್ಲಿಕೆಯಾಗುವ ಅರ್ಜಿ ಮತ್ತು ತಿದ್ದುಪಡಿ ಅರ್ಜಿಗಳ ವಿಲೇವಾರಿಗೆ ಆಹಾರ ನಿರೀಕ್ಷಕರಿಗೆ ಇದ್ದ ಅಧಿಕಾರವನ್ನು ಆಹಾರ ಇಲಾಖೆ ಹಿಂದಕ್ಕೆ ಪಡೆದಿದೆ. ಬಾಕಿ ಇರುವ ಹೊಸ ಅರ್ಜಿಗಳು ಬೆಟ್ಟದಂತೆ ಬೆಳೆಯುತ್ತಿದ್ದು, ಪಡಿತರ ಚೀಟಿಗಾಗಿ ಜನ ಪರದಾಡುವಂತಾಗಿದೆ.

ಪಡಿತರ ಚೀಟಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ವ್ಯವಸ್ಥೆ ಹಲವು ವರ್ಷಗಳಿಂದ ಜಾರಿಯಲ್ಲಿದೆ. ಅರ್ಜಿಗಳ ಜತೆಗೆ ಲಗತ್ತಿಸುವ ಆದಾಯ ಪ್ರಮಾಣ ಪತ್ರ ಮತ್ತು ವಾಸಸ್ಥಳ ಸಂಬಂಧದ ದಾಖಲೆಗಳನ್ನು ಪರಿಶೀಲಿಸಿ ಆ ಅರ್ಜಿಯನ್ನು ವಿಲೇವಾರಿ ಮಾಡುವ ಅಧಿಕಾರ ಆಹಾರ ನಿರೀಕ್ಷಕರಿಗೆ ಇತ್ತು.

ಅಂಕಿ–ಅಂಶ	
ರಾಜ್ಯದಲ್ಲಿನ ಒಟ್ಟು ಪಡಿತರ ಚೀಟಿ	1.47 ಕೋಟಿ
ಅಂತ್ಯೋದಯ	10 ಲಕ್ಷ
ಬಿಪಿಎಲ್	1.15 ಕೋಟಿ
ಎಪಿಎಲ್	21.18 ಲಕ್ಷ
ವಿಲೇವಾರಿಗೆ ಬಾಕಿ ಇರುವ ಅರ್ಜಿ	3.80 ಲಕ್ಷ

ಅನರ್ಹರಿಗೆ ಬಿಪಿಎಲ್ ಪಡಿತರ ಚೀಟಿ ನೀಡಲಾಗುತ್ತಿದೆ ಎಂಬ ಆರೋಪಗಳಿರುವ ಕಾರಣದಿಂದ ಸದ್ಯಕ್ಕೆ ಅರ್ಜಿಗಳ ವಿಲೇವಾರಿ ಅಧಿಕಾರವನ್ನು ಆರೋಗ್ಯ ನಿರೀಕ್ಷಕರಿಂದ ಮೊಟಕುಗೊಳಿಸಿ ಕೇಂದ್ರ ಕಚೇರಿಯಿಂದಲೇ ನಿರ್ವಹಿಸಲಾಗುತ್ತಿದೆ. ಇದರಿಂದಾಗಿ ಆಹಾರ ಇಲಾಖೆ ಕಚೇರಿಗಳ ಮುಂದೆ ಜನರ ಪಡಿಪಾಟಲು ಹೆಚ್ಚಾಗುತ್ತಿದೆ.

ಹೆಸರು ಸೇರ್ಪಡೆ, ಹೆಸರು ಕೈಬಿಡುವುದು, ವಿಳಾಸ ಬದಲು ಸೇರಿ ಹಲವು ತಿದ್ದುಪಡಿಗೆ ಅರ್ಜಿ ಸಲ್ಲಿಸಿರುವ ಜನ ಕಚೇರಿಗಳಿಗೆ ಎಡತಾಕುತ್ತಿದ್ದಾರೆ. ಅತೀ ಜರೂರು ಇರುವ ಅರ್ಜಿಗಳನ್ನು ಮಾತ್ರ ವಿಲೇವಾರಿ ಮಾಡಲು ಆಹಾರ ನಿರೀಕ್ಷಕರ ಲಾಗಿನ್‌ಗೆ ದಿನದಲ್ಲಿ ಅರ್ಧ ಗಂಟೆ ಅಥವಾ ಒಂದು ಗಂಟೆಯ ಅವಕಾಶ ನೀಡಲಾಗುತ್ತಿದೆ. ಈ ಸಮಯವನ್ನು ಮತ್ತೆ ಪ್ರಭಾವಿಗಳೇ ಬಳಕೆ ಮಾಡಿಕೊಳ್ಳುತ್ತಿದ್ದಾರೆ. ನಿಜವಾದ ಬಡವರು ಹೊಸದಾಗಿ ಪಡಿತರ ಚೀಟಿ ಪಡೆಯಲು ಅಥವಾ ತಿದ್ದುಪಡಿ ಮಾಡಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಆಹಾರ ಇಲಾಖೆಯ ಅಧಿಕಾರಿಗಳೇ ಹೇಳುತ್ತಾರೆ. ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ಪಡೆಯಲು ಪಡಿತರ ಚೀಟಿ ಕಡ್ಡಾಯ. ಅವಿಭಕ್ತ ಕುಟುಂಬದಿಂದ ಪ್ರತ್ಯೇಕಗೊಂಡು ಹೊಸ ಸಂಸಾರ ಆರಂಭಿಸಿದವರು ಬಹುತೇಕ ಹೊಸ ಅರ್ಜಿಗಳನ್ನು ಸಲ್ಲಿಸುತ್ತಾರೆ. ಅಂತವರಿಗೆ ಆರೋಗ್ಯ ಸಮಸ್ಯೆ ಎದುರಾದರೆ ತೊಂದರೆ ಅನುಭವಿಸುವಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

'ಕಂದಾಯ ಇಲಾಖೆಯಿಂದ ನೀಡುವ ಆದಾಯ ಪ್ರಮಾಣ ಪತ್ರ ಆಧರಿಸಿಯೇ ಪಡಿತರ ಚೀಟಿ ಮಂಜೂರು ಮಾಡಲಾಗುತ್ತದೆ. ಲೋಪಗಳಾಗಿದ್ದರೆ ಅದಕ್ಕೆ ಕಾರಣವಾದ ಆಹಾರ ನಿರೀಕ್ಷಕರ ವಿರುದ್ಧ ಕ್ರಮ ಕೈಗೊಳ್ಳಬಹುದಾಗಿದೆ. ಆದರೆ, ಅರ್ಜಿ ವಿಲೇವಾರಿಗೆ ಅವಕಾಶವನ್ನೇ ನೀಡದಿದ್ದರೆ ಹೇಗೆ' ಎಂಬುದು ಅವರ ಪ್ರಶ್ನೆ.

'ಇದರಿಂದ ಪಡಿತರ ಚೀಟಿ ಬಯಸಿ ಅರ್ಜಿ ಸಲ್ಲಿಸುವ ಅಮಾಯಕರು ತೊಂದರೆ ಅನುಭವಿಸುವಂತಾಗಿದೆ. ಕಚೇರಿಗಳ ಮುಂದೆ ಬಂದು ಅಳಲು ತೋಡಿಕೊಳ್ಳುವ ಜನರ ಸಂಖ್ಯೆಯೂ ಹೆಚ್ಚಾಗುತ್ತಿದೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಅಧಿಕಾರಿಯೊಬ್ಬರು ತಿಳಿಸಿದರು.

ಲೋಪ ಸರಿಪಡಿಸಲು ಪ್ರಯತ್ನ

'ಕೆಲವು ಲೋಪಗಳನ್ನು ಸರಿಪಡಿಸಲು ತಾತ್ಕಾಲಿಕವಾಗಿ ಅರ್ಜಿ ವಿಲೇವಾರಿ ತಡೆ ಹಿಡಿದಿದ್ದೇವೆ' ಎಂದು ಇಲಾಖೆಯ ಮಾಹಿತಿ ತಂತ್ರಜ್ಞಾನ ಶಾಖೆಯ ಜಂಟಿ ನಿರ್ದೇಶಕ ರಾಮೇಶ್ವರಪ್ಪ ತಿಳಿಸಿದರು. ಎಪಿಎಲ್ ಕಾರ್ಡ್ ಹಿಂಪಡೆದು, ಬಿಪಿಎಲ್ ಪಟ್ಟಿಗೆ ಸೇರಿಸುವುದು, ಯಾರದೋ ಹೆಸರನ್ನು ಪಟ್ಟಿಗೆ ಸೇರಿಸುವುದು ಸೇರಿ ಹಲವು ಅಕ್ರಮಗಳು ನಡೆಯುತ್ತಿವೆ. ಅವುಗಳನ್ನು ತಡೆಯಲು ಈ ಕ್ರಮ ಕೈಗೊಳ್ಳಲಾಗಿದೆ ಎಂದರು.

ವೈದ್ಯಕೀಯ ಮತ್ತು ಇತರೆ ಸರ್ಕಾರಿ ಸೌಲಭ್ಯ ಪಡೆಯಲು ಅತೀ ಜರೂರು ಇದ್ದವರ ಅರ್ಜಿಗಳನ್ನು ವಿಲೇವಾರಿ ಮಾಡಲು ಅವಕಾಶ ನೀಡಲಾಗುತ್ತಿದೆ. ಕೆಲವೇ ದಿನಗಳಲ್ಲಿ ಎಲ್ಲವೂ ಸರಿಯಾಗಲಿದೆ ಎಂದು ಸ್ಪಷ್ಟಪಡಿಸಿದರು.

ಸುದ್ದಿ 2 ನಿಮಿಷ

ಬಿಎಸ್‌ಎಫ್ ಸಬ್ ಇನ್‌ಸ್ಪೆಕ್ಟರ್ ವರ್ಗಾವಣೆ ಆದೇಶ ರದ್ದು

ಬೆಂಗಳೂರು: ಪತ್ನಿ ಬೆಂಗಳೂರಿನಲ್ಲಿ ಕ್ಯಾನ್ಸರ್‌ಗೆ ಚಿಕಿತ್ಸೆ ಪಡೆಯುತ್ತಿರುವ ಸಂದರ್ಭದಲ್ಲಿ ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಸಬ್ ಇನ್‌ಸ್ಪೆಕ್ಟರ್‌ಗೆ ನೀಡಿದ್ದ ವರ್ಗಾವಣೆ ಆದೇಶವನ್ನು ಹೈಕೋರ್ಟ್ ರದ್ದುಗೊಳಿಸಿದೆ. ಪರಿಸ್ಥಿತಿಯ ಗಂಭೀರತೆ ಪರಿಗಣಿಸಿ ಬಿಎಸ್‌ಎಫ್ ಸಹಾನುಭೂತಿ ತೋರಿಸಬೇಕು ಎಂದು ಹೇಳಿದೆ.

1986ರಲ್ಲಿ ಕಾನ್‌ಸ್ಟೆಬಲ್ ಆಗಿ ಬಿಎಸ್‌ಎಫ್‌ನಲ್ಲಿ ವೃತ್ತಿ ಆರಂಭಿಸಿದ್ದ ಅರ್ಜಿದಾರರು, ಜಮ್ಮು–ಕಾಶ್ಮೀರ ಸೇರಿ ದೇಶದ ಹಲವೆಡೆ 35 ವರ್ಷ ಸೇವೆ ಸಲ್ಲಿಸಿದ್ದಾರೆ. ಬಳಿಕ ಬೆಂಗಳೂರಿನಲ್ಲಿ ಸಬ್ ಇನ್‌ಸ್ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಪತ್ನಿ ಕ್ಯಾನ್ಸರ್‌ನಿಂದ ಬಳಲುತ್ತಿರುವ ಬಗ್ಗೆ ತಿಳಿಸಿದರೂ 2021ರ ಜ.9ರಂದು ಬೆಂಗಳೂರಿನಿಂದ ಕಾಶ್ಮೀರಕ್ಕೆ ವರ್ಗಾವಣೆ ಮಾಡಿ ಬಿಎಸ್‌ಎಫ್ ಆದೇಶ ಹೊರಡಿಸಿದೆ ಎಂದು ಆರೋಪಿಸಿ ಅವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.



ವೈದ್ಯಕೀಯ ಕಾರಣ ನೀಡಿದ್ದರಿಂದಲೇ ಅವರನ್ನು ಬೆಂಗಳೂರಿಗೆ ವರ್ಗಾವಣೆ ಮಾಡಲಾಗಿದೆ. ನಿಯಮಗಳ ಪ್ರಕಾರ ದೇಶದ ಬೇರೆ ಸ್ಥಳಕ್ಕೆ ಹೋಗಿ ಕೆಲಸ ಮಾಡಲು ಬಿಎಸ್‌ಎಫ್ ಸಿಬ್ಬಂದಿ ಸಿದ್ಧರಿರಬೇಕಾಗುತ್ತದೆ ಎಂದು ಬಿಎಸ್‌ಎಫ್ ಪರ ಹಾಜರಿದ್ದ ವಕೀಲರು ವಾದಿಸಿದರು.

2009ರಿಂದ ಕ್ಯಾನ್ಸರ್‌ಗೆ ತುತ್ತಾಗಿರುವ ಅರ್ಜಿದಾರರ ಪತ್ನಿ ಈಗಲೂ ಕಿದ್ವಾಯಿ ಆಸ್ಪತ್ರೆಯಲ್ಲಿ ಕ್ಯಾನ್ಸರ್‌ಗೆ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ರೀತಿಯ ವಿಲಕ್ಷಣ ಸಂದರ್ಭದಲ್ಲಿ ಬಿಎಸ್‌ಎಫ್ ಸಹಾನುಭೂತಿ ತೋರಿಸಬೇಕು ಎಂದು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ನೇತೃತ್ವದ ವಿಭಾಗೀಯ ಪೀಠ ತಿಳಿಸಿತು.

ಇಂದಿನಿಂದ ಪೀಠೋಪಕರಣ ಮೇಳ

ಬೆಂಗಳೂರು: ಜಯಮಹಲ್ ಅರಮನೆ ರಸ್ತೆಯಲ್ಲಿರುವ ಜಯಮಹಲ್ ಪ್ಯಾಲೇಸ್ ಹೋಟೆಲ್‌ನಲ್ಲಿ ಇದೇ 27ರಿಂದ 30ರವರೆಗೆ ಪೀಠೋಪಕರಣ ಮೇಳ ಹಮ್ಮಿಕೊಳ್ಳಲಾಗಿದೆ.

ಪ್ರತಿದಿನ ಬೆಳಿಗ್ಗೆ 10ರಿಂದ ರಾತ್ರಿ 8 ಗಂಟೆವರೆಗೆ ಪ್ರದರ್ಶನ ಇರಲಿದ್ದು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಬೇಕು. ಗೃಹ ಬಳಕೆ ಹಾಗೂ ವಾಣಿಜ್ಯೋದ್ದೇಶಕ್ಕಾಗಿ ಬಳಸುವ ಪೀಠೋಪಕರಣಗಳ ಮೇಲೆ ಶೇ 70ರಷ್ಟು ರಿಯಾಯಿತಿಯೂ ಇದ್ದು ಗ್ರಾಹಕರು ಇದರ ಪ್ರಯೋಜನ ಪಡೆದುಕೊಳ್ಳಬೇಕು ಎಂದು ಕೋರಲಾಗಿದೆ.

ಹೊಸ ಶೈಲಿಯ ಪೀಠೋಪಕರಣಗಳು, ಸೋಫಾ ಸೆಟ್‌ಗಳು, ಡೈನಿಂಗ್ ಟೇಬಲ್‌ಗಳು ಹಾಗೂ ಇತರ ವಸ್ತುಗಳು ಮೇಳದಲ್ಲಿ ಲಭ್ಯ ಇರುತ್ತವೆ ಎಂದು ಪ್ರಕಟಣೆ ತಿಳಿಸಿದೆ.

ಅಮೃತ ಸಮುದಾಯ ಅಭಿವೃದ್ಧಿ ಯೋಜನೆ ಆದೇಶ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಸ್ವಯಂ ಸೇವಕರನ್ನು ಬಳಸಿಕೊಂಡು ರಾಜ್ಯದ 750 ಗ್ರಾಮಗಳಲ್ಲಿ 'ಅಮೃತ ಸಮುದಾಯ ಅಭಿವೃದ್ಧಿ ಯೋಜನೆ' ಅನುಷ್ಠಾನಕ್ಕೆ ಆದೇಶ ಹೊರಡಿಸಲಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಕೆ.ಸಿ. ನಾರಾಯಣ ಗೌಡ ತಿಳಿಸಿದ್ದಾರೆ.

'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಆಗಸ್ಟ್ 15ರಂದು ಸ್ವಾತಂತ್ರ್ಯ ದಿನಾಚರಣೆ ಸಂದೇಶದಲ್ಲಿ ಈ ಯೋಜನೆಯನ್ನು ಪ್ರಕಟಿಸಿದ್ದರು. 750 ಗ್ರಾಮಗಳನ್ನು ಗುರುತಿಸಿ, ಅಲ್ಲಿ ಬಡತನ ನಿರ್ಮೂಲನೆ ಮತ್ತು ಜೀವನಮಟ್ಟ ಸುಧಾರಣೆಗೆ ಪೂರಕವಾದ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಆಗಸ್ಟ್ 24ರಂದು ಆದೇಶ ಹೊರಡಿಸಲಾಗಿದೆ' ಎಂದು ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

ನೀತಿ ಆಯೋಗದ ಅಂಕಿಅಂಶಗಳ ಪ್ರಕಾರ, ರಾಜ್ಯದ 30 ಲಕ್ಷ (ಶೇಕಡ 17.3) ಕುಟುಂಬಗಳು ಬಹು ಆಯಾಮದ ಬಡತನ ರೇಖೆಗಿಂತ ಕೆಳಗಿವೆ. 750 ಹಳ್ಳಿಗಳಲ್ಲಿ 1.27 ಲಕ್ಷ ಕುಟುಂಬಗಳು ಅತಿಯಾದ ಬಡತನ ಹೊಂದಿವೆ. ಈ ಕುಟುಂಬಗಳನ್ನು ಬಡತನ ರೇಖೆಗಿಂತ ಮೇಲೆ ತರಲು 'ಅಮೃತ ಸಮುದಾಯ ಅಭಿವೃದ್ಧಿ ಯೋಜನೆ' ಮೂಲಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಸಚಿವರು ಹೇಳಿದ್ದಾರೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಆಹಾರ ಮತ್ತು ನಾಗರಿಕ ಪೂರೈಕೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ವಸತಿ ಸೇರಿದಂತೆ ವಿವಿಧ ಇಲಾಖೆಗಳ ಯೋಜನೆಗಳಲ್ಲಿ ಅತಿಯಾದ ಬಡತನದ ಕುಟುಂಬಗಳಿಗೆ ಆದ್ಯತೆ ಮೇರೆಗೆ ಸೌಲಭ್ಯ ಕಲ್ಪಿಸಲು ಎನ್‌ಎಸ್‌ಎಸ್ ಘಟಕಗಳ ಸೇವೆಯನ್ನು ಬಳಸಿಕೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ನಿರ್ಮಲಾ ಸೀತಾರಾಮನ್‌ಗೆ ಮನವಿ ಮಾಡಿದ ಬೊಮ್ಮಾಯಿ

'ಜಿಎಸ್‌ಟಿ ಪರಿಹಾರ ಮುಂದುವರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರದಿಂದ ಜಿಎಸ್‌ಟಿ (ಸರಕು ಸೇವಾ ತೆರಿಗೆ) ಪರಿಹಾರವನ್ನು ಇನ್ನೂ ಮೂರು ವರ್ಷಗಳ ಅವಧಿಗೆ ಮುಂದುವರಿಸಬೇಕು ಮತ್ತು 15 ನೇ ಹಣಕಾಸು ಆಯೋಗದ ಅನುದಾನ ಹಂಚಿಕೆಯನ್ನೂ ಹೆಚ್ಚಿಸಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಮನವಿ ಮಾಡಿದರು.

ದೆಹಲಿಯಲ್ಲಿ ಶುಕ್ರವಾರ ನಿರ್ಮಲಾ ಅವರನ್ನು ಭೇಟಿ ಮಾಡಿದ ಬೊಮ್ಮಾಯಿ, 'ಕೋವಿಡ್ ಸಾಂಕ್ರಾಮಿಕದಿಂದ ರಾಜ್ಯಗಳ ತೆರಿಗೆ ಸಂಗ್ರಹ ಕಡಿಮೆಯಾಗಿದೆ. ಸಾಮಾನ್ಯ ಸ್ಥಿತಿಗೆ ಬರಲು ಕೆಲವು ವರ್ಷಗಳೇ ಬೇಕಾಗಬಹುದು. ಕಳೆದ ವರ್ಷ ಜಿಎಸ್‌ಟಿ ಪರಿಹಾರ ಸಾಲ ಒದಗಿಸಲಾಗಿತ್ತು. ಈ ವರ್ಷವೂ ಸೌಲಭ್ಯ ವಿಸ್ತರಿಸಲಾಗಿದೆ. ಆದರೆ, ರಾಜ್ಯಗಳ ಹಣಕಾಸು ಸ್ಥಿತಿ ಸುಧಾರಿಸುವವರೆಗೆ ಕೇಂದ್ರದ ನೆರವು ಅಗತ್ಯ' ಎಂದು ಮನವಿ ಮಾಡಿದರು.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮನವಿ ನೀಡಿದರು.

15 ನೇ ಹಣಕಾಸು ಆಯೋಗವು 2021 ರಿಂದ 2026 ರ ಅವಧಿಗೆ ರಾಜ್ಯಗಳಿಗೆ ತೆರಿಗೆ ಹಂಚಿಕೆಗೆ ಮಾಡಿದ ಶಿಫಾರಸ್ಸಿನ ಅನ್ವಯ ರಾಜ್ಯದ ಹಂಚಿಕೆ 14 ನೇ ಹಣಕಾಸು ಆಯೋಗ ಶಿಫಾರಸು ಮಾಡಿದ ಶೇ 4.71 ರಿಂದ ಶೇ 3.64 ಕ್ಕೆ ಇಳಿಕೆಯಾಗಿದೆ. ಇದರಿಂದ ಅನುದಾನ ಹಂಚಿಕೆಯಲ್ಲಿ ತೀವ್ರ ಇಳಿಕೆಯಾಗಿದೆ ಎಂದು ಬೊಮ್ಮಾಯಿ ವಿವರಿಸಿದರು.

'ಈ ಎಲ್ಲ ಕಾರಣಗಳಿಂದ ಅನುದಾನ ಹಂಚಿಕೆ ಮಾನದಂಡವನ್ನು ಬದಲಿಸುವಂತೆ ರಾಜ್ಯ ಸರ್ಕಾರ 15 ನೇ ಹಣಕಾಸು ಆಯೋಗಕ್ಕೆ ಈಗಾಗಲೇ ಮನವಿ ಸಲ್ಲಿಸಿದೆ. ಆದರೆ, ಆಯೋಗವು ನಮ್ಮ ಮನವಿಯನ್ನು ಪರಿಗಣಿಸಿಲ್ಲ. ಇದರಿಂದಾಗಿ ದಕ್ಷಿಣದ ಇತರ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದ ಮೇಲೆ ತೀವ್ರ ಪರಿಣಾಮ ಬೀರಿದೆ' ಎಂದು ಹೇಳಿದರು.

'15 ನೇ ಹಣಕಾಸು ಆಯೋಗವು ತನ್ನ ಶಿಫಾರಸಿನಲ್ಲಿ ರಾಜ್ಯ ನಿರ್ದಿಷ್ಟ ಅನುದಾನದಡಿ ರಾಜ್ಯಕ್ಕೆ ಬೆಂಗಳೂರಿನ ಜಲಮೂಲಗಳು ಹಾಗೂ ಪೆರಿಫೆರಲ್ ರಿಂಗ್ ರಸ್ತೆಗೆ ₹6,000 ಕೋಟಿ ನಿಗದಿಪಡಿಸಿದೆ. ಆದರೆ, ಕೇಂದ್ರ ಸರ್ಕಾರದ ಎಕ್ಸ್‌ಪ್ಲನೇಟರಿ ಮೆಮೊರಾಂಡಮ್‌ನಲ್ಲಿ ಹಣಕಾಸು ಆಯೋಗ ಈ ಶಿಫಾರಸನ್ನು ಪ್ರಸ್ತಾಪಿಸಿಲ್ಲ. ಇದರಿಂದ ಮೊದಲೇ ತೆರಿಗೆ ಹಂಚಿಕೆಯಲ್ಲಿ ಇಳಿಕೆಯಾಗಿರುವುದರಿಂದ ರಾಜ್ಯಕ್ಕೆ ಇನ್ನಷ್ಟು ಹಿನ್ನಡೆಯಾಗಲಿದೆ' ಎಂದೂ ಹೇಳಿದರು.

ಜಾತಿ ಪ್ರಮಾಣ ಪತ್ರ ಹೆಸರಲ್ಲಿ ವಂಚನೆ: ಕ್ರಮಕ್ಕೆ ಆಗ್ರಹ

ಕೆ.ಆರ್.ಪುರ: ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಮಾಡಿಸುವುದಾಗಿ ಹೆಚ್ಚಿನ ಹಣ ಪಡೆದು ಬಡವರಿಗೆ ವಂಚಿಸುತ್ತಿರುವ ಸಂಘ ಸಂಸ್ಥೆಗಳ ವಿರುದ್ಧ ಕ್ರಮ ಜರಗಿಸುವಂತೆ ಒತ್ತಾಯಿಸಿ ಆದಿಜಾಂಬವ ಜನ ಸಂಘ ಬೆಂಗಳೂರು ಯುವ ಘಟಕದ ಕಾರ್ಯಕರ್ತರು ಪೂರ್ವ ತಾಲ್ಲೂಕು ತಹಶೀಲ್ದಾರ್ ಅಜಿತ್ ಕುಮಾರ್ ಅವರಿಗೆ ಮನವಿ ಸಲ್ಲಿಸಿದರು.

ಆದಿಜಾಂಬವ ಜನ ಸಂಘದ ಬೆಂಗಳೂರು ಯುವ ಘಟಕ ಅಧ್ಯಕ್ಷ ವೇಣುಮಾದರ್ ಮಾತನಾಡಿ, 'ಮಹದೇವಪುರ ಕ್ಷೇತ್ರ ವ್ಯಾಪ್ತಿಯಲ್ಲಿ ಕೆಲವು ಸಂಸ್ಥೆಗಳು ದಲಿತರು ವಾಸಿಸುವ ಹಳ್ಳಿಗಳಿಗೆ ತೆರಳಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಮಾಡಿಸುವುದಾಗಿ ಹೇಳಿ ಬಡವರಿಂದ ಸಾವಿರಕ್ಕೂ ಹೆಚ್ಚಿನ ಹಣ ಪಡೆದು ವಂಚನೆ ಮಾಡುತ್ತಿವೆ. ಜನರಿಗೆ ಯಾವುದೇ ಮಾಹಿತಿ ನೀಡುತ್ತಿಲ್ಲ. ಅನುಮತಿ, ಪರವಾನಗಿ ಹೊಂದಿರುವ ಬಗ್ಗೆ ಸರಿಯಾದ ಮಾಹಿತಿ ನೀಡದೆ ದಲಿತರಿಂದ ಹಣ ಪಡೆದು ವಂಚಿಸುತ್ತಿರುವ ಸಂಸ್ಥೆಗಳ ವಿರುದ್ಧ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.

'ಆದಾಯ ಮತ್ತು ಜಾತಿ ಪ್ರಮಾಣ ಪತ್ರ ಮಾಡಿಸಲು ₹100 ರಿಂದ ₹300 ಮಾತ್ರ ಖರ್ಚು ಆಗುತ್ತದೆ. ಇಲ್ಲಿ ಬಡವರಿಂದ ₹1000 ಅಧಿಕ ಹಣ ವಸೂಲಿ ಮಾಡಲಾಗುತ್ತದೆ' ಎಂದರು.

ಮಹಾಲಕ್ಷ್ಮಿ ಲೇಔಟ್ ಪೊಲೀಸರ ಕಾರ್ಯಾಚರಣೆ • ಆರು ಆರೋಪಿಗಳ ಬಂಧನ

ಕಾರ್ಖಾನೆ ಸಿಬ್ಬಂದಿ ಅಪಹರಿಸಿ ₹20 ಲಕ್ಷಕ್ಕೆ ಬೇಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಹಾರ ತಯಾರಿಕೆ ಕಾರ್ಖಾನೆಯೊಂದರ ಸಿಬ್ಬಂದಿಯನ್ನು ಅಪಹರಿಸಿ, ಅವರ ಬಿಡುಗಡೆಗೆ ₹ 20 ಲಕ್ಷ ಬೇಡಿಕೆ ಇರಿಸಿದ್ದ ಪ್ರಕರಣದಲ್ಲಿ 'ಯೂಟ್ಯೂಬ್' ಚಾನೆಲ್‌ವೊಂದರ ಪ್ರತಿನಿಧಿ ಸೇರಿ ಆರು ಮಂದಿಯನ್ನು ಮಹಾಲಕ್ಷ್ಮಿಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಸಂತೋಷ್ ಕುಮಾರ್, ಕುಳ್ಳಿ ರಮೇಶ್, ದುರ್ಗೇಶ್, ಹರೀಶ್, ಅರವಿಂದ್ ಹಾಗೂ ವಿವೇಕ್ ಬಂಧಿತರು. 'ಸಾಯಿ ಫುಡ್' ಕಾರ್ಖಾನೆ ಮಾಲೀಕ ನೀಡಿದ್ದ ದೂರು ಆಧರಿಸಿ ಆರೋಪಿಗಳನ್ನು ಸೆರೆ ಹಿಡಿಯಲಾಗಿದೆ' ಎಂದು ಉತ್ತರ ವಿಭಾಗದ ಡಿಸಿಪಿ ಧರ್ಮೇಂದ್ರಕುಮಾರ್ ಮೀನಾ ತಿಳಿಸಿದರು.

'ಬಂಧಿತ ಕುಳ್ಳಿ ರಮೇಶ್‌ನ ಹೆಸರು ರೌಡಿ ಪಟ್ಟಿಯಲ್ಲಿದೆ. ಆತನ ವಿರುದ್ಧ 20ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಈತ ತನ್ನ ಸಹಚರರ ಜೊತೆ ಸೇರಿ ಕೃತ್ಯದಲ್ಲಿ ಭಾಗಿಯಾಗಿದ್ದ' ಎಂದೂ ತಿಳಿಸಿವೆ.

ಕಾರ್ಖಾನೆಗೆ ನುಗ್ಗಿ ಚಿತ್ರೀಕರಣ: 'ನಿತೇಶ್ ಎಂಬುವರು ಕುರುಬರಹಳ್ಳಿಯಲ್ಲಿ ಕಾರ್ಖಾನೆ ನಡೆಸುತ್ತಿದ್ದಾರೆ. ವ್ಯವಸ್ಥಾಪಕರಾಗಿ ಶ್ರೀನಿವಾಸ್ ಕೆಲಸ ಮಾಡುತ್ತಿದ್ದಾರೆ.'ನಾನು ಯೂಟ್ಯೂಬ್‌ನ 'ನ್ಯೂಸ್ 39 ಕನ್ನಡ 24x7' ಚಾನೆಲ್ ಪ್ರತಿನಿಧಿ' ಎಂದು ಹೇಳಿಕೊಂಡು ಕಾರ್ಖಾನೆಯೊಳಗೆ ನುಗ್ಗಿದ್ದ ಆರೋಪಿ ಸಂತೋಷ್ ಕುಮಾರ್, 'ಅವಧಿ ಮುಗಿದ ಆಹಾರ ಪದಾರ್ಥಗಳನ್ನು ಮಾರಾಟ ಮಾಡುತ್ತಿದ್ದೀರಿ' ಎಂದು ಆರೋಪಿಸಿದ್ದ. ವಿಡಿಯೊ ಚಿತ್ರೀಕರಣ ಮಾಡಿಕೊಂಡು ಪರಾರಿಯಾಗಿದ್ದ. ಈ ಸಂಗತಿ ದೂರಿನಲ್ಲಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕೆಲದಿನ ಬಿಟ್ಟು ವ್ಯವಸ್ಥಾಪಕರಿಗೆ ಕರೆ ಮಾಡಿದ್ದ ಸಂತೋಷ್‌ಕುಮಾರ್, 'ನಿಮ್ಮ ಕಾರ್ಖಾನೆ ವಿಡಿಯೊ ನನ್ನ ಬಳಿ ಇದೆ. ನಾನು ಕೇಳಿದಷ್ಟು ಹಣ ಕೊಡಬೇಕು. ಇಲ್ಲದಿದ್ದರೆ, ವಿಡಿಯೊವನ್ನು ರಾಜ್ಯಮಟ್ಟದ ಸುದ್ದಿವಾಹಿನಿಗಳಿಗೆ ನೀಡುತ್ತೇನೆ' ಎಂದು ಬೆದರಿಸಿದ್ದ. ಅದಕ್ಕೆ ವ್ಯವಸ್ಥಾಪಕ ಸೊಪ್ಪು ಹಾಕಿರಲಿಲ್ಲ.'

'ಜುಲೈ 17ರಂದು ಆಹಾರ ಸಾಮಗ್ರಿ ಸರಬರಾಜು ಮಾಡುತ್ತಿದ್ದ ಸಿಬ್ಬಂದಿಯನ್ನು ವಾಹನದ ಸಮೇತ ಆರೋಪಿಗಳು ಅಪಹರಿಸಿದ್ದರು. ಸಿಬ್ಬಂದಿಯಿಂದಲೇ ವ್ಯವಸ್ಥಾಪಕರಿಗೆ ಕರೆ ಮಾಡಿಸಿ ₹ 20 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದರು.ಈ ಬಗ್ಗೆ ಮಾಲೀಕ ಠಾಣೆಗೆ ದೂರು ನೀಡಿದ್ದರು. ವಿಷಯ ತಿಳಿಯುತ್ತಿದ್ದಂತೆ ಚಾನೆಲ್ ಮುಖ್ಯಸ್ಥ, ಆರೋಪಿ ಸಂತೋಷ್‌ಕುಮಾರ್‌ನನ್ನು ಪ್ರತಿನಿಧಿ ಕೆಲಸದಿಂದ ವಜಾ ಮಾಡಿದ್ದರು. ತಲೆಮರೆಸಿಕೊಂಡಿದ್ದ ಎಲ್ಲ ಆರೋಪಿಗಳು, ತಮಿಳುನಾಡಿಗೆ ಹೋಗಿದ್ದರು. ಅಲ್ಲಿಯೇ ಆರೋಪಿಗಳನ್ನು ಬಂಧಿಸಿ ನಗರಕ್ಕೆ ಕರೆತರಲಾಗಿದೆ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

'ಇದೇ ತಂಡ ಹಲವರನ್ನು ಬೆದರಿಸಿ ಹಣ ಸುಲಿಗೆ ಮಾಡಿರುವ ಮಾಹಿತಿ ಇದೆ. ಹಣ ಕಳೆದುಕೊಂಡವರು ಠಾಣೆಗೆ ದೂರು ನೀಡಬಹುದು' ಎಂದೂ ಮೂಲಗಳು ತಿಳಿಸಿವೆ.

ವೃದ್ಧನಿಗೆ ಗಾಯ; ಬಿಎಂಟಿಸಿ ನೌಕರರಿಬ್ಬರ ವಿರುದ್ಧ ಎಫ್‌ಐಆರ್

ಬೆಂಗಳೂರು: ತಂಗುದಾಣದಲ್ಲಿ ಬಸ್ ನಿಲ್ಲಿಸದೇ ನಿರ್ಲಕ್ಷ್ಯದಿಂದ ಚಾಲನೆ ಮಾಡಿ ವೃದ್ಧರೊಬ್ಬರು ಗಾಯಗೊಳ್ಳಲು ಕಾರಣವಾದ ಆರೋಪದಡಿ ಬಿಎಂಟಿಸಿ ನೌಕರರಿಬ್ಬರ ವಿರುದ್ಧ ಕಬ್ಬನ್ ಪಾರ್ಕ್ ಸಂಚಾರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಬನ್ನೇರುಘಟ್ಟ ರಸ್ತೆಯ ವೆಂಕಟಾದ್ರಿ ಬಡಾವಣೆ ನಿವಾಸಿ ಬಿ. ಶ್ರೀಪತಿ ರಾವ್ (69) ಎಂಬುವರು ದೂರು ನೀಡಿದ್ದಾರೆ. ಕೆಎ 01 ಎಫ್‌ಎ 1972ರ ಚಾಲಕ ಹಾಗೂ ನಿರ್ವಾಹಕನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಅವರಿಬ್ಬರನ್ನು ವಿಚಾರಣೆ ನಡೆಸಬೇಕಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಶ್ರೀಪತಿ ರಾವ್ ಅವರು ಆಗಸ್ಟ್ 23ರಂದು ಕ್ವೀನ್ಸ್ ರಸ್ತೆಯ ತಂಗುದಾಣದಲ್ಲಿ ಬಸ್ಸಿಗಾಗಿ ಕಾಯುತ್ತ ನಿಂತಿದ್ದರು. ಮಾರ್ಗ–155ರ ಬಸ್, ತಂಗುದಾಣ ಸಮೀಪಕ್ಕೆ ಬಂದಿತ್ತು. ಕೈ ಮಾಡಿದರೂ ಚಾಲಕ ಬಸ್ ನಿಲ್ಲಿಸಿರಲಿಲ್ಲ. ತುರ್ತು ಕೆಲಸಕ್ಕೆ ತೆರಳುತ್ತಿದ್ದ ದೂರುದಾರ, ಓಡಿಕೊಂಡೇ ಬಾಗಿಲು ಕಂಬಿ ಹಿಡಿದುಕೊಂಡು ಬಸ್ಸಿನೊಳಗೆ ಹತ್ತಲು ಯತ್ನಿಸಿದ್ದರು. ಬಲ ಕಾಲಿಗೆ ತೀವ್ರ ಪೆಟ್ಟಾಗಿತ್ತು' ಎಂದೂ ಮೂಲಗಳು ಹೇಳಿವೆ.

ಯುವಕನ ಕೊಲೆ: ಪಕ್ಕದ ಮನೆಯವನೇ ಆರೋಪಿ

ಬೆಂಗಳೂರು: ಸೋಲದೇವನಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಇತ್ತೀಚೆಗೆ ನಡೆದಿದ್ದ ರವಿಕುಮಾರ್ (28) ಎಂಬುವರ ಕೊಲೆ ಪ್ರಕರಣ ಸಂಬಂಧ ಐವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿ ಮಧುಸೂದನ್ ಹಾಗೂ ಆತನ ಸ್ನೇಹಿತರಾದ ಆನಂದ್, ಸೋಮಶೇಖರ್, ಮಹೇಶ್, ಆಂಜನಮೂರ್ತಿ ಬಂಧಿತರು. ಕೃತ್ಯದ ಬಳಿಕ ತಲೆಮರೆಸಿಕೊಂಡಿದ್ದ ಅವರನ್ನು ಚಿಕ್ಕಬಳ್ಳಾಪುರದಲ್ಲಿ ಬಂಧಿಸಿ, ನಗರಕ್ಕೆ ಕರೆತರಲಾಗಿದೆ' ಎಂದು ಪೊಲೀಸರು ಹೇಳಿದರು.

'ರವಿಕುಮಾರ್ ಅವರ ಪಕ್ಕದ ಮನೆಯಲ್ಲೇ ಆರೋಪಿ ಮಧುಸೂದನ್ ವಾಸವಿದ್ದ. ಅವರಿಬ್ಬರ ನಡುವೆ ಹಣಕಾಸು ವ್ಯವಹಾರವಿತ್ತು. ಅದರ ವಿಚಾರವಾಗಿ ಹಲವು ಬಾರಿ ಗಲಾಟೆ ಆಗಿತ್ತು. ಅದೇ ವೈಷಮ್ಯದಿಂದಲೇ ಮಧುಸೂದನ್, ತನ್ನ ಸ್ನೇಹಿತರ ಜೊತೆ ಸೇರಿ ರವಿಕುಮಾರ್ ಅವರನ್ನು ಚಾಕುವಿನಿಂದ ಇರಿದು ಕೊಲೆ ಮಾಡಿದ್ದನೆಂಬುದು ತನಿಖೆಯಿಂದ ಗೊತ್ತಾಗಿದೆ' ಎಂದೂ ತಿಳಿಸಿದರು.

ಅಪರಾಧ ಸುದ್ದಿ

ವಿವಿಧ ಪ್ರಕಾರಗಳ ಕ್ಯಾನ್ಸರ್‌ಗಳಿಗೆ ನಿಖರ ಚಿಕಿತ್ಸೆ ಒದಗಿಸಲು ಸಹಕಾರಿಯಾದ ಸಿಕ್ರೋನಿ ತಂತ್ರಜ್ಞಾನ ಒಳಗೊಂಡ ರಾಡಿಕ್ಸಾಕ್ಟ್ ಸಿಸ್ಟಮ್ ಅನ್ನು ಮಣಿಪಾಲ್ ಆಸ್ಪತ್ರೆಯು ಗುರುವಾರ ಅನಾವರಣ ಮಾಡಿತು. (ಎಡದಿಂದ) ರೋಗಿಯ ಪುತ್ರ ಹಿತೇಶ್ ಪ್ರಭು, ಆಸ್ಪತ್ರೆಯ ಅಧ್ಯಕ್ಷ ಡಾ. ಸುದರ್ಶನ್ ಬಲ್ಲಾಳ್, ಕ್ಯಾನ್ಸರ್ ತಜ್ಞ ಡಾ. ವಾದಿರಾಜ ಬಿ.ಎಂ. ಹಾಗೂ ಆಸ್ಪತ್ರೆಯ ನಿರ್ದೇಶಕ ಮನೀಶ್ ರೈ ಇದ್ದರು.

'ಅತ್ಯಾಚಾರಿಗಳಿಗೆ ಕಠಿಣ ಶಿಕ್ಷೆಯಾಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೈಸೂರಿನಲ್ಲಿ ಯುವತಿಯೊಬ್ಬರ ಮೇಲೆ ಸಾಮೂಹಿಕ ಅತ್ಯಾಚಾರವೆಸಗಲಾಗಿದೆ. ಈ ಕೃತ್ಯದಲ್ಲಿ ಭಾಗಿಯಾಗಿರುವ ಆರೋಪಿಗಳನ್ನು ಕೂಡಲೇ ಬಂಧಿಸಿ ಕಠಿಣ ಶಿಕ್ಷೆಗೆ ಒಳಪಡಿಸಬೇಕು' ಎಂದು ಅಖಿಲ ಭಾರತ ಡೆಮಾಕ್ರಟಿಕ್ ವಿದ್ಯಾರ್ಥಿ ಸಂಘಟನೆ (ಎಐಡಿಎಸ್‌ಒ) ಒತ್ತಾಯಿಸಿದೆ.

'ಈ ಘಟನೆಯಿಂದ ಮೈಸೂರಿನ ಜನ ಬೆಚ್ಚಿಬಿದ್ದಿದ್ದಾರೆ. ಪುಂಡರು, ಕಾಲೇಜು ವಿದ್ಯಾರ್ಥಿನಿಯರು ಹಾಗೂ ಯುವತಿಯರನ್ನು ಚುಡಾಯಿಸುವುದು ಹೆಚ್ಚುತ್ತಲೇ ಇದೆ. ಅವರನ್ನು ಹಿಂಬಾಲಿಸಿ ಕಿರುಕುಳ ನೀಡುವುದು ಮುಂದುವರಿದಿದೆ. ಇಂತಹ ಘಟನೆಗಳಿಂದ ಹೊರ ರಾಜ್ಯದ ಪೋಷಕರು ವ್ಯಾಸಂಗಕ್ಕಾಗಿ ತಮ್ಮ ಮಕ್ಕಳನ್ನು ಮೈಸೂರಿಗೆ ಕಳುಹಿಸಲು ಹಿಂದೇಟು ಹಾಕಬಹುದು. ಕೆಲವರು ಮಕ್ಕಳ ಶಿಕ್ಷಣವನ್ನೇ ಮೊಟಕುಗೊಳಿಸಿಬಿಡಬಹುದು. ಹೀಗಾಗಿ ಇಂತಹ ಘಟನೆಗಳು ಮತ್ತೆ ಮರುಕಳಿಸದಂತೆ ಜಿಲ್ಲಾಡಳಿತ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು' ಎಂದು ತಿಳಿಸಿದೆ.

'ಮೈಸೂರು ನಗರದ ವಿದ್ಯಾರ್ಥಿನಿಯರಿಗೆ ಸೂಕ್ತ ಭದ್ರತೆ ಒದಗಿಸಬೇಕು. ಅಗತ್ಯವಿರುವ ಕಡೆ ಪೊಲೀಸ್ ವಾಹನದ ಗಸ್ತು ಹೆಚ್ಚಿಸಬೇಕು' ಎಂದು ಆಗ್ರಹಿಸಿದೆ.

ಕೆಎಸ್‌ಸಿಎ ಪ್ರಥಮ ಡಿವಿಷನ್, ಮೊದಲ ಗುಂಪಿನಲ್ಲಿ ಚಾಂಪಿಯನ್ ಆದ ರಾಜಾಜಿನಗರ ಕ್ರಿಕೆಟರ್ಸ್ (ಎಡದಿಂದ ಬಲಕ್ಕೆ), ಕುಳಿತವರು: ಎಸ್. ಶಿವರಾಜ್, ಬಿ ಕಿರಣಕುಮಾರ್, ನಿಹಾಲ್ ಉಳ್ಳಾಲ (ನಾಯಕ), ಆರ್. ಕುಮಾರ್ (ಕಾರ್ಯದರ್ಶಿ), ಆರ್. ಕಿರಣ, ಎಚ್.ಎಸ್. ಶರತ್, ಮೆಲು ಕ್ರಾಂತಿಕುಮಾರ್. ನಿಂತವರು: ಸೌರಭ್ ಎಂ ಮುತ್ತೂರ, ಎಸ್.ಎಂ. ಶಮಂತ, ಫರ್ಹಾನ್ ಮಗಿ, ಎಸ್. ನಿತಿನ್, ನಿಶ್ಚಿತ್ ಎಸ್ ರಾವ್, ಪ್ರಜ್ವಲ್ ಕೃಷ್ಣ, ಶ್ರೀಹರಿ ಮದಿಯಾಳಕರ್, ಕೆ. ರೋಹಿತ್, ಎಸ್. ಭಾರ್ಗವ್, ಅಮೆ ಶಾನಭಾಗ್.

ಕ್ರಿಕೆಟ್: ರಾಜಾಜಿನಗರ ಚಾಂಪಿಯನ್

ಬೆಂಗಳೂರು: ರಾಜಾಜಿನಗರ ಕ್ರಿಕೆಟರ್ಸ್ ತಂಡವು ಸರ್ ಮಿರ್ಜಾ ಇಸ್ಮಾಯಿಲ್ ಶೀಲ್ಡ್ ಕ್ರಿಕೆಟ್ ಟೂರ್ನಿಯ ಮೊದಲ ಡಿವಿಷನ್ ಲೀಗ್‌ನ ಪ್ರಥಮ ಗುಂಪಿನ ಪ್ರಶಸ್ತಿ ಜಯಿಸಿತು.

ಗುರುವಾರ ನಡೆದ ಪಂದ್ಯದಲ್ಲಿ ಫರ್ಹಾನ್ ಮಗಿ (79) ಮತ್ತು ಕ್ರಾಂತಿಕುಮಾರ್ (ಔಟಾಗದೆ 85) ಅವರ ಬ್ಯಾಟಿಂಗ್ ಬಲದಿಂದ ರಾಜಾಜಿನಗರವು 5 ವಿಕೆಟ್‌ಗಳಿಂದ ಮಾಡರ್ನ್ ಕ್ರಿಕೆಟ್ ಕ್ಲಬ್ ಎದುರು ಗೆದ್ದಿತು.

ಸಂಕ್ಷಿಪ್ತ ಸ್ಕೋರು: ಮಾಡರ್ನ್ ಸಿಸಿ: 50 ಓವರ್‌ಗಳಲ್ಲಿ 6ಕ್ಕೆ 314 (ಮೊಹಮ್ಮದ್ ಅಕೀಬ್ ಜಾವೇದ್ 152, ಪೃಥ್ವಿ ಸದಾನಂದ 42, ಲೋಚನ್ ಅಪ್ಪಣ್ಣ 68, ಎಚ್.ಎಸ್. ಶರತ್ 55ಕ್ಕೆ2, ಎಸ್.ಎಂ. ಶಮಂತ್ 36ಕ್ಕೆ2) ರಾಜಾಜಿನಗರ ಕ್ರಿಕೆಟರ್ಸ್: 46.2 ಓವರ್‌ಗಳಲ್ಲಿ 5ಕ್ಕೆ 315 (ನಿಹಾಲ್ ಉಳ್ಳಾಲ 45, ಫರ್ಹಾನ್ ಮಾಗಿ 79, ಕ್ರಾಂತಿಕುಮಾರ್ ಔಟಾಗದೆ 85, ಶ್ರೀಹರಿ 28, ಶಿವರಾಜ್ ಔಟಾಗದೆ 62, ಆಯುಷ್ ಕುಮಾರ್ ಬಾರಿಕ್ 36ಕ್ಕೆ3) ಫಲಿತಾಂಶ: ರಾಜಾಜಿನಗರಕ್ಕೆ 5 ವಿಕೆಟ್‌ಗಳ ಜಯ.

ಕಳ್ಳತನ: 'ಇನ್‌ಸ್ಟಾಗ್ರಾಮ್' ಗೆಳೆಯ ಬಂಧನ

ಬೆಂಗಳೂರು: ಗಂಗಮ್ಮನಗುಡಿ ಠಾಣೆಯ ವ್ಯಾಪ್ತಿಯ ಮನೆಯೊಂದರಲ್ಲಿ ನಡೆದಿದ್ದ ಕಳ್ಳತನ ಪ್ರಕರಣ ಸಂಬಂಧ ಆರೋಪಿ ಅಭಿಗೌಡ ಅಲಿಯಾಸ್ ಘನಶ್ಯಾಮ್ (21) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'ಅಬ್ಬಿಗೆರೆಯ ಕೆಂಪೇಗೌಡ ಗಾರ್ಡನ್ ರಸ್ತೆಯಲ್ಲಿರುವ ಮನೆಯಲ್ಲಿ ಕಳ್ಳತನ ಆಗಿತ್ತು. ಮನೆ ಮಾಲೀಕ ನೀಡಿದ್ದ ದೂರಿನಡಿ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ. ಆತನಿಂದ ₹ 8 ಲಕ್ಷ ಮೌಲ್ಯದ 180 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಆರೋಪಿ ಅಭಿಗೌಡ, 'ಇನ್‌ಸ್ಟಾಗ್ರಾಮ್' ಆ್ಯಪ್‌ನಲ್ಲಿ ಖಾತೆ ಹೊಂದಿದ್ದಾನೆ. ಮನೆ ಮಾಲೀಕರ ಮಗಳು ಸಹ ಇನ್‌ಸ್ಟಾಗ್ರಾಮ್ ಆ್ಯಪ್ ಬಳಸುತ್ತಿದ್ದರು. ಆ್ಯಪ್ ಮೂಲಕ ಯುವತಿ ಸ್ನೇಹ ಸಂಪಾದಿಸಿದ್ದ ಆರೋಪಿ, ಹೆಚ್ಚು ಮಾತನಾಡಲಾರಂಭಿಸಿದ್ದ. ಅವರಿಬ್ಬರು ಹಲವು ಬಾರಿ ಭೇಟಿ ಆಗಿದ್ದರು. ಹಲವೆಡೆ ಸುತ್ತಾಡಿದ್ದರು' ಎಂದೂ ತಿಳಿಸಿದರು.

'ಯುವತಿ ಬಳಿಯ ಚಿನ್ನದ ಸರ ಪಡೆದಿದ್ದ ಆರೋಪಿ, ಅದನ್ನು ಅಡವಿಟ್ಟು ಹಣ ಪಡೆದಿದ್ದ. ಮೋಜು–ಮಸ್ತಿಗಾಗಿ ಹಣ ಖರ್ಚು ಮಾಡಿದ್ದ. ಮತ್ತಷ್ಟು ಹಣ ಬೇಕಾದಾಗ, ಚಿನ್ನದ ಸರಗಳನ್ನು ತಂದುಕೊಡುವಂತೆ ಕೇಳಿದ್ದ. ಅದಕ್ಕೆ ಯುವತಿ ಒಪ್ಪಿರಲಿಲ್ಲ. 'ಚಿನ್ನ ತರದಿದ್ದರೆ, ನಮ್ಮಿಬ್ಬರ ಸಂಬಂಧವನ್ನು ನಿಮ್ಮ ತಂದೆಗೆ ಹೇಳುತ್ತೇನೆ' ಎಂದು ಆರೋಪಿ ಬೆದರಿಸಿದ್ದ.' 'ಯುವತಿಯೊಬ್ಬಳೇ ಇರುವಾಗ ಮನೆಗೆ ಹೋಗಿದ್ದ ಆರೋಪಿ, ಮನೆಯಲ್ಲೆಲ್ಲ ಹುಡುಕಾಟ ನಡೆಸಿದ್ದ. ಬೀರುವಿನಲ್ಲಿಟ್ಟಿದ್ದ ಚಿನ್ನದ ಆಭರಣ ಕದ್ದುಕೊಂಡು ಹೋಗಿದ್ದ.ಆಭರಣವನ್ನು ಮಾರಿದ್ದ ಆತ, ಅದೇ ಹಣದಲ್ಲೇ ಮೋಜು–ಮಸ್ತಿ ಮಾಡುತ್ತಿದ್ದ' ಎಂದೂ ಪೊಲೀಸರು ಹೇಳಿದರು.

'ಪ್ರಕರಣ ದಾಖಲಾಗುತ್ತಿದ್ದಂತೆ ಮಾಲೀಕರ ಮಗಳನ್ನು ವಿಚಾರಿಸಲಾಯಿತು. ಆಕೆಯೇ ಆರೋಪಿ ಹೆಸರು ಹೇಳಿದ್ದಳು' ಎಂದೂ ವಿವರಿಸಿದರು.



ಆರೋಪಿಯಿಂದ ಜಪ್ತಿ ಮಾಡಲಾದ ಚಿನ್ನದ ಆಭರಣಗಳು

ಚಿನ್ನದ ಸರಕಳವು: ಮತ್ತೊಬ್ಬ ಸೆರೆ

ಬೆಂಗಳೂರು: ಚಾಮರಾಜಪೇಟೆಯಲ್ಲಿ ಚಿನ್ನದ ಸರ ಕಳವು ಮಾಡುತ್ತಿದ್ದ ವೇಳೆ ಸಾರ್ವಜನಿಕರ ಕೈಗೆ ಸಿಕ್ಕಿಬಿದ್ದಿರುವ ಆರೋಪಿ ಇಮ್ರಾನ್ ಖಾನ್‌ನನ್ನು ಪೊಲೀಸರು ವಿಚಾರಣೆ ನಡೆಸುತ್ತಿದ್ದು, ಇದೀಗ ಆತನ ಸಹಚರ ನಬೀರ್ ಪಾಷಾನನ್ನೂ ಬಂಧಿಸಿದ್ದಾರೆ.

'ಚಿನ್ನದ ಸರ ಕಳವು ಮಾಡಲು ಯತ್ನಿಸಿದ್ದ ಆರೋಪಿ ಇಮ್ರಾನ್ ಖಾನ್ ಎಂಬಾತನನ್ನು ಇತ್ತೀಚೆಗಷ್ಟೇ ಸಾರ್ವಜನಿಕರೇ ಹಿಡಿದು ಪೊಲೀಸರಿಗೆ ಒಪ್ಪಿಸಿದ್ದರು. ಇದೀಗ ಆತನ ಸಹಚರ ನಬೀರ್ ಪಾಷಾನನ್ನು ಬಂಧಿಸಲಾಗಿದ್ದು, ₹ 1.80 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ವಿಜಯನಗರ ಠಾಣೆ ವ್ಯಾಪ್ತಿಯ ಮನೆಯೊಂದಕ್ಕೆ ನುಗ್ಗಿದ್ದ ಆರೋಪಿಗಳು, ಚಿನ್ನದ ಸರ ಕದ್ದುಕೊಂಡು ಪರಾರಿಯಾಗಿದ್ದರು. ಅದೇ ಆರೋಪಿಗಳು ಬೈಕ್‌ನಲ್ಲಿ ಚಾಮರಾಜಪೇಟೆಗೆ ಬಂದು ಮಹಿಳೆಯೊಬ್ಬರ ಚಿನ್ನದ ಸರ ಕಳವು ಮಾಡಲು ಯತ್ನಿಸಿದ್ದರು. ಮಹಿಳೆ ರಕ್ಷಣೆಗಾಗಿ ಕೂಗುತ್ತಿದ್ದಂತೆ ಸಹಾಯಕ್ಕೆ ಬಂದ ಸಾರ್ವಜನಿಕರು, ಆರೋಪಿಗಳನ್ನು ಬೆನ್ನಟ್ಟಿ ಹಿಡಿದಿದ್ದರು. ಇಮ್ರಾನ್ ಖಾನ್ ಮಾತ್ರ ಸಿಕ್ಕಿಬಿದ್ದಿದ್ದ. ನಬೀರ್ ಪಾಷಾ ತಪ್ಪಿಸಿಕೊಂಡಿದ್ದ' ಎಂದೂ ತಿಳಿಸಿದರು.

ಪಂಚಮಸಾಲಿ ಲಿಂಗಾಯತ ಸಮುದಾಯಕ್ಕೆ 2ಎ ಮೀಸಲಾತಿ ನೀಡಬೇಕು ಎಂದು ಆಗ್ರಹಿಸಿ ಹಮ್ಮಿಕೊಂಡಿರುವ ಎರಡನೇ ಅಭಿಯಾನಕ್ಕೆ ಚಾಮರಾಜನಗರ ಜಿಲ್ಲೆಯ ಮಹದೇಶ್ವರ ಬೆಟ್ಟದಲ್ಲಿ ಗುರುವಾರ ಕೂಡಲ ಸಂಗಮದ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಚಾಲನೆ ನೀಡಿದರು

ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ಹೋರಾಟ

ಎರಡನೇ ಅಭಿಯಾನಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಮಹದೇಶ್ವರಬೆಟ್ಟ (ಚಾಮರಾಜನಗರ): ಪಂಚಮಸಾಲಿ ಲಿಂಗಾಯತ ಸಮುದಾಯಕ್ಕೆ 2 ಎ ಮೀಸಲಾತಿ ನೀಡಬೇಕೆಂದು ಆಗ್ರಹಿಸಿ ಹಮ್ಮಿಕೊಂಡಿರುವ ಎರಡನೇ ಸುತ್ತಿನ ಅಭಿಯಾನವನ್ನು ಕೂಡಲ ಸಂಗಮದ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಇಲ್ಲಿ ಗುರುವಾರ ಉದ್ಘಾಟಿಸಿದರು.

ನಂತರ ಮಾತನಾಡಿದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರು, 'ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ, 6 ತಿಂಗಳ ಕಾಲಾವಕಾಶ ಕೇಳಿದ್ದರು. ಸೆ.15ಕ್ಕೆ ಗಡುವು ಮುಗಿಯಲಿರುವುದರಿಂದ ಸರ್ಕಾರ ಎಚ್ಚರಿಸಲು ಅಭಿಯಾನ ನಡೆಸಲಾಗುತ್ತಿದೆ.' ಎಂದರು.

'ಪಂಚಮಸಾಲಿ ಸಮಾಜದಲ್ಲಿ ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದಿರುವ 80 ಲಕ್ಷಕ್ಕೂ ಹೆಚ್ಚು ಮಂದಿಯನ್ನು ಮೇಲೆತ್ತುವುದು ಅಭಿಯಾನದ ಉದ್ದೇಶ. ಈಗಾಗಲೇ ಕೂಡಲ ಸಂಗಮದಿಂದ ವಿಧಾನಸೌಧದವರೆಗೆ ಪಾದಯಾತ್ರೆ ನಡೆಸಿ ಬೆಂಗಳೂರಲ್ಲಿ ಬೃಹತ್ ಹೋರಾಟ ಮಾಡಲಾಗಿದೆ. ಸರ್ಕಾರ ಸ್ಪಂದಿಸುತ್ತದೆಂಬ ವಿಶ್ವಾಸವಿದೆ' ಎಂದು ಹೇಳಿದರು.

'ಯಡಿಯೂರಪ್ಪ ಅವರಿಗೆ ಮೀಸಲಾತಿ ಕೊಡುವ ಮನಸ್ಸಿತ್ತು. ಆದರೆ, ಅವರ ಮಗ ಬಿ.ವೈ. ವಿಜಯೇಂದ್ರ ಹೋರಾಟವನ್ನು ತಪ್ಪಾಗಿ ತಿಳಿದುಕೊಂಡು ಯಡಿಯೂರಪ್ಪನವರ ದಿಕ್ಕು ತಪ್ಪಿಸಿದರು' ಎಂದು ದೂರಿದರು.

ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ, ಕಾಂಗ್ರೆಸ್ ಮುಖಂಡ ಹಾಗೂ ಪಂಚಮಸಾಲಿ ಸಮುದಾಯದ ರಾಷ್ಟ್ರೀಯ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ, ಹರಿಹರದ ಜೆಡಿಎಸ್ ಮುಖಂಡ ಶಿವಶಂಕರ್ ಉಪಸ್ಥಿತರಿದ್ದರು.

ಗೌಡ ಲಿಂಗಾಯತ, ಮಲೆಗೌಡ ಲಿಂಗಾಯತ, ದೀಕ್ಷಾ ಲಿಂಗಾಯತರನ್ನು ಒಳಗೊಂಡ ಪಂಚಮಸಾಲಿ ಸಮುದಾಯದವರು 'ಪ್ರತಿಜ್ಞಾ ಪಂಚಾಯತ್' ಘೋಷ ವಾಕ್ಯದೊಂದಿಗೆ ಹಮ್ಮಿಕೊಂಡಿರುವ ಅಭಿಯಾನದ ಅಂಗವಾಗಿ ವಿವಿಧ ಜಿಲ್ಲೆಗಳಲ್ಲಿ ಜಾಗೃತಿ ಸಭೆ ನಡೆಸಲಿದೆ. ಅ.1ರಂದು ಬೆಂಗಳೂರಿನಲ್ಲಿ ಪ್ರತಿಭಟನಾ ಸಮಾವೇಶದ ಮೂಲಕ ತೆರೆ ಕಾಣಲಿದೆ.

ನಮ್ಮ ಮೆಟ್ರೊ– ಕೆಂಗೇರಿ ವಿಸ್ತರಿತ ಮಾರ್ಗ: 30ರಿಂದ ಸಾರ್ವಜನಿಕ ಸೇವೆಗೆ ಮುಕ್ತ • ಜನರಿಗೆ ಸಂಚಾರ ದಟ್ಟಣೆಯಿಂದ ಮುಕ್ತಿ ಪಡೆಯುವ ತವಕ

ನಿರೀಕ್ಷೆ ಹೊತ್ತು ಹೊರಟಿದೆ ಮೆಟ್ರೊ– ರಂಗೇರಿದೆ ಕೆಂಗೇರಿ

• ಗುರು ಪಿ.ಎಸ್.

ಪ್ರಜಾವಾಣಿ ವಿಶೇಷ

ಬೆಂಗಳೂರು: ನಗರದಲ್ಲಿ ಮೈಸೂರು ರಸ್ತೆ ಹಾದುಹೋಗುವ ಪ್ರದೇಶದಲ್ಲೀಗ ಮೆಟ್ರೊ ರೈಲನ್ನು ಬರಮಾಡಿಕೊಳ್ಳುವ ಸಂಭ್ರಮ. ಅನೇಕ ವರ್ಷಗಳಿಂದ ಅನುಭವಿಸುತ್ತಿರುವ 'ಸಂಚಾರ ದಟ್ಟಣೆ' ಕಿರಿಕಿರಿಯಿಂದ ಮುಕ್ತಿ ಪಡೆಯುವ ತವಕ. ಮೆಟ್ರೊ ನಿಲ್ದಾಣಗಳ ಬಳಿಯ ವರ್ತಕರಿಗೆ ವ್ಯಾಪಾರ–ವಹಿವಾಟು ಹೆಚ್ಚಳವಾದೀತು ಎಂಬ ಆಶಾಭಾವ. ಈ ಮಾರ್ಗದ ಅಕ್ಕ–ಪಕ್ಕದ ಭೂಮಿಗೆ 'ಚಿನ್ನದ ಬೆಲೆ' ಸಿಗುವ ನಿರೀಕ್ಷೆ ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ...

ಕೆಂಗೇರಿವರೆಗೆ ವಿಸ್ತರಣೆಗೊಂಡ ಎತ್ತರಿಸಿದ ಮಾರ್ಗದಲ್ಲಿ ಇದೇ 30ರಿಂದ ವಾಣಿಜ್ಯ ಸಂಚಾರ ಆರಂಭಿಸಲಿರುವ 'ನಮ್ಮ ಮೆಟ್ರೊ' ಹತ್ತಾರು ನಿರೀಕ್ಷೆಗಳನ್ನು ಹೊತ್ತು ತರುತ್ತಿದೆ. ಈ ಸಡಗರದ ಕಾರಣಕ್ಕಾಗಿಯೇ ಕೆಂಗೇರಿಯ ಪರಿಸರ ರಂಗೇರಿದೆ!

ಮೈಸೂರು ರಸ್ತೆ– ಕೆಂಗೇರಿ ವಿಸ್ತರಿತ ಮಾರ್ಗದ ನಿಲ್ದಾಣಗಳು ಮದುವೆ ಸಮಾರಂಭಕ್ಕೆ ಸಿದ್ಧವಾಗುತ್ತಿರುವ ಮನೆಗಳಂತೆ ಕಾಣುತ್ತಿವೆ. ನಿಲ್ದಾಣಗಳ ಹೊರಗಡೆ ಸುಣ್ಣ–ಬಣ್ಣ ಬಳಿಯುವ ಕೆಲಸ ಇನ್ನೂ ನಡೆಯುತ್ತಿದ್ದರೆ, ನಿಲ್ದಾಣಗಳ ಒಳಗಡೆ ಅಂತಿಮ ಸ್ಪರ್ಶ ನೀಡುವ ಕೆಲಸ ಪ್ರಗತಿಯಲ್ಲಿದೆ.

ಇದೇ 29ರಂದು ಬೆಳಿಗ್ಗೆ 10.30ಕ್ಕೆ ನಾಯಂಡಹಳ್ಳಿ ನಿಲ್ದಾಣದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಕೇಂದ್ರ ನಗರಾಭಿವೃದ್ಧಿ ಸಚಿವ ಹರ್‌ದೀಪ್‌ಸಿಂಗ್ ಪುರಿ ಅವರು ಹೊಸ ಮಾರ್ಗದ ವಾಣಿಜ್ಯ ಸೇವೆಗೆ ಹಸಿರು ನಿಶಾನೆ ತೋರಲಿದ್ದಾರೆ. ನಂತರ, ಕೆಂಗೇರಿ ಬಸ್ ಟರ್ಮಿನಲ್ ನಿಲ್ದಾಣದಲ್ಲಿ ಉದ್ಘಾಟನಾ ಕಾರ್ಯಕ್ರಮ ನಡೆಯಲಿದೆ.

ಬಿಡುವಿಲ್ಲದ ಕೆಲಸ: ಉದ್ಘಾಟನಾ ದಿನಾಂಕ ಘೋಷಣೆಯಾದ ದಿನದಿಂದ ಕಾರ್ಮಿಕರು ಹಗಲಿರುಳು ದುಡಿಯುತ್ತಿದ್ದಾರೆ. ಭಾನುವಾರದ ವೇಳೆಗೆ ಬಾಕಿ ಉಳಿದ ಎಲ್ಲ ಕೆಲಸ ಮುಗಿಸುವ ಒತ್ತಡ ಮತ್ತು ಉತ್ಸಾಹಗಳೆರಡೂ ಕಾರ್ಮಿಕರ ಮುಖಗಳಲ್ಲಿ ಕಾಣುತ್ತಿದೆ. ವಿದ್ಯುತ್ ಸಂಬಂಧಿತ ಕಾರ್ಯಗಳು ಸ್ವಯಂಚಾಲಿತ ಶುಲ್ಕ ಸಂಗ್ರಹ (ಎಎಫ್‌ಸಿ) ದ್ವಾರಗಳು, ನಿಲ್ದಾಣ ನಿಯಂತ್ರಕರ ಕೊಠಡಿಗಳಿಗೆ ಅಂತಿಮ ಸ್ಪರ್ಶ ನೀಡಲಾಗುತ್ತಿದೆ. ನಿಲ್ದಾಣಗಳ ಸ್ವಚ್ಛತಾ ಕಾರ್ಯವೂ ಬಿರುಸಿನಿಂದ ಸಾಗಿದೆ.

ಬೇರೆ ನಿಲ್ದಾಣಗಳಿಗೆ ಹೋಲಿಸಿದರೆ, ಕೆಂಗೇರಿ ಮತ್ತು ಕೆಂಗೇರಿ ಟರ್ಮಿನಲ್‌ನಲ್ಲಿ ಹೆಚ್ಚು ಕೆಲಸಗಳು ಬಾಕಿ ಉಳಿದಿವೆ. ಕೆಂಗೇರಿ ಬಸ್ ಟರ್ಮಿನಲ್‌ನಲ್ಲಿ ಎರಡು ಹಂತದ ವಾಹನ ನಿಲುಗಡೆ ಕೇಂದ್ರ ನಿರ್ಮಾಣವಾಗೇಕಿತ್ತು. 250 ದ್ವಿಚಕ್ರ ವಾಹನ ಹಾಗೂ 250 ಕಾರುಗಳ ನಿಲುಗಡೆಗೆ ಇಲ್ಲಿ ಅವಕಾಶ ಕಲ್ಪಿಸುವ ಉದ್ದೇಶವಿದೆ. ಆದರೆ, ಒಂದು ಮಹಡಿ ಮಾತ್ರ ಸಿದ್ಧವಾಗಿದ್ದು, ಮತ್ತೊಂದು ಮಹಡಿ ಪೂರ್ಣಗೊಳ್ಳಲು ಇನ್ನೂ ಒಂದೂವರೆ ತಿಂಗಳು ಬೇಕು ಎಂದು ನಿಗಮದ ಅಧಿಕಾರಿಯೊಬ್ಬರು ಹೇಳಿದರು.

ಏಳು ನಿಲ್ದಾಣಗಳ ಪೈಕಿ, ಕೆಂಗೇರಿ ಬಸ್ ಟರ್ಮಿನಲ್ ಹೊರತು ಪಡಿಸಿದರೆ, ನಾಯಂಡಹಳ್ಳಿ ನಿಲ್ದಾಣದಲ್ಲಿ ಮಾತ್ರ ಪ್ರಯಾಣಿಕರ ವಾಹನ ನಿಲುಗಡೆಗೆ ಅವಕಾಶ ಕಲ್ಪಿಸಲಾಗಿದೆ.

ಮಂದ ಬೆಳಕು: ಈ ಮಾರ್ಗದ ಮೆಟ್ರೊ ನಿಲ್ದಾಣಗಳ ಕೆಳಗೆ ಹೆಚ್ಚು ಕತ್ತಲು ಆವರಿಸಿರುತ್ತದೆ. ಕಾಮಗಾರಿ ನಡೆಯುತ್ತಿದ್ದ ವೇಳೆ ಸಾರ್ವಜನಿಕರು ಹೆಚ್ಚು ತೊಂದರೆ ಅನುಭವಿಸಬೇಕಾಗಿತ್ತು. ಈಗ ವಿದ್ಯುತ್ ದೀಪಗಳ ವ್ಯವಸ್ಥೆ ಮಾಡಲಾಗಿದೆ. ಆದರೂ, ಈ ಬೆಳಕು ಅಷ್ಟೊಂದು ಪ್ರಕಾಶಮಾನವಾಗಿಲ್ಲ. ಹೆಚ್ಚಿನ ವಿದ್ಯುತ್ ದೀಪಗಳ ವ್ಯವಸ್ಥೆ ಮಾಡಬೇಕು ಎಂದು ವಾಹನ ಸವಾರರು ಒತ್ತಾಯಿಸುತ್ತಾರೆ.

75 ಸಾವಿರ ಮಂದಿ ಪ್ರಯಾಣ: ಇದೇ 30ರಿಂದ ವಾಣಿಜ್ಯ ಸಂಚಾರ ಆರಂಭವಾಗಲಿದ್ದು, ನಿತ್ಯ 75 ಸಾವಿರ ಪ್ರಯಾಣಿಕರು ಈ ಮಾರ್ಗದಲ್ಲಿ ಸಂಚರಿಸುವ ನಿರೀಕ್ಷೆ ಇದೆ. ಬೈಯಪ್ಪನಹಳ್ಳಿಯಿಂದ ಕೆಂಗೇರಿ ಬಸ್ ಟರ್ಮಿನಲ್ ಮೆಟ್ರೊ ನಿಲ್ದಾಣದವರೆಗೆ ಗರಿಷ್ಠ ಪ್ರಯಾಣ ದರ ₹56 ನಿಗದಿ ಪಡಿಸುವ ಸಾಧ್ಯತೆ ಇದೆ.



ಮೈಸೂರು ರಸ್ತೆ ಕೆಂಗೇರಿ ವಿಸ್ತರಿತ ಮಾರ್ಗದಲ್ಲಿನ ಕೆಂಗೇರಿ ಟರ್ಮಿನಲ್ ಮೆಟ್ರೊ ನಿಲ್ದಾಣದಲ್ಲಿ ಅಂತಿಮ ಸಿದ್ಧತೆ ನಡೆಯುತ್ತಿರುವುದು (ಎಡಚಿತ್ರ) ಮೈಸೂರು ರಸ್ತೆ ವಿಸ್ತರಿತ ಮಾರ್ಗದಲ್ಲಿನ ಮೆಟ್ರೊ ನಿಲ್ದಾಣಗಳ ಕೆಳಗೆ ಮಂದ ಬೆಳಕಿದ್ದು ವಾಹನ ಚಾಲನೆಗೆ ತೊಂದರೆಯಾಗುತ್ತಿದೆ – ಪ್ರಜಾವಾಣಿ ಚಿತ್ರಗಳು

ಪ್ರತಿ 15 ನಿಮಿಷಕ್ಕೊಂದು ಫೀಡರ್ ಬಸ್

ಈ ಮಾರ್ಗದ ಮೆಟ್ರೊ ಪ್ರಯಾಣಿಕರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಮೆಟ್ರೊ ನಿಲ್ದಾಣಗಳಿಗೆ ಪ್ರತಿ 15 ನಿಮಿಷಕ್ಕೊಂದು ಫೀಡರ್ ಬಸ್ ಸೇವೆ ಒದಗಿಸಲು ಬಿಎಂಟಿಸಿ ನಿರ್ಧರಿಸಿದೆ. ಸೋಮವಾರದಿಂದಲೇ ಕಾರ್ಯಾಚರಣೆ ಆರಂಭವಾಗಲಿದೆ.

ರಾಜರಾಜೇಶ್ವರಿ ನಗರ ಪ್ರವೇಶದ್ವಾರ, ಬೆಂಗಳೂರು ವಿಶ್ವವಿದ್ಯಾಲಯ ಪ್ರವೇಶದ್ವಾರ, ಕೆಂಗೇರಿ ಟಿಟಿಎಂಸಿಗೆ ತಲುಪುವ ರೀತಿಯಲ್ಲಿ 10 ಮಾರ್ಗಗಳಿಂದ 42 ಫೀಡರ್ ಬಸ್‌ಗಳ ಸೇವೆಯನ್ನು ಬಿಎಂಟಿಸಿ ನೀಡಲಿದೆ.

ಮೆಟ್ರೊ ನಿಲ್ದಾಣಗಳಿಂದ 5 ಕಿ.ಮೀ.ನಿಂದ 18 ಕಿ.ಮೀ. ವ್ಯಾಪ್ತಿಯಲ್ಲಿನ ಪ್ರದೇಶಗಳ ನಿವಾಸಿಗಳು ನಿಲ್ದಾಣಗಳನ್ನು ತಲುಪಲು ಅನುಕೂಲವಾಗುವಂತೆ ಈ ಬಸ್‌ಗಳು ಕಾರ್ಯಾಚರಿಸಲಿವೆ. ಅಂದರೆ, ರಾಜರಾಜೇಶ್ವರಿ ನಗರ, ಪೂರ್ಣಪ್ರಜ್ಞ ಬಡಾವಣೆ, ರಾಮಚಂದ್ರ, ಉಳ್ಳಾಲ, ತಾವರಕೆರೆ, ರಘುವಿನಹಳ್ಳಿ, ಬಿಡದಿ ಹಾಗೂ ತಲಘಟ್ಟಪುರ ನಿವಾಸಿಗಳಿಗೆ ಇದರಿಂದ ಅನುಕೂಲವಾಗಲಿದೆ.

ವಿಸ್ತರಿತ ಮಾರ್ಗದಲ್ಲಿನ ಮೆಟ್ರೊ ನಿಲ್ದಾಣಗಳು

'ಪಾದಚಾರಿ ಮೇಲ್ಸೇತುವೆ ನಿರ್ಮಿಸಿ'

ಈ ವಿಸ್ತರಿತ ಮಾರ್ಗದಲ್ಲಿನ ಜ್ಞಾನಭಾರತಿ ಹಾಗೂ ಕೆಂಗೇರಿ ಬಸ್ ಟರ್ಮಿನಲ್ ಮೆಟ್ರೊ ನಿಲ್ದಾಣಗಳನ್ನು ಸಂಪರ್ಕಿಸಲು ಅನುವಾಗುವಂತೆ ಪಾದಚಾರಿ ಮೇಲ್ಸೇತುವೆ ನಿರ್ಮಾಣ ಮಾಡಬೇಕು ಎಂದು ಕೆಂಗೇರಿಯ ನಿವಾಸಿಗಳು ಒತ್ತಾಯಿಸಿದ್ದಾರೆ.

ಜ್ಞಾನಭಾರತಿ ಮೆಟ್ರೊ ನಿಲ್ದಾಣದ ಬಳಿಯಲ್ಲಿ ಇರುವ ರೈಲು ನಿಲ್ದಾಣದ ಮಧ್ಯೆ ಪಾದಚಾರಿ ಮೇಲ್ಸೇತುವೆ ನಿರ್ಮಾಣವಾಗಿಲ್ಲ. ಬಿಡದಿ, ರಾಮನಗರ, ಚನ್ನಪಟ್ಟಣ, ಮದ್ದೂರು, ಮಂಡ್ಯ ಮತ್ತು ಮೈಸೂರಿನಿಂದ ನಗರಕ್ಕೆ ಬರುವ ಬಹುತೇಕರು ಜ್ಞಾನಭಾರತಿ ರೈಲು ನಿಲ್ದಾಣದಲ್ಲಿ ಇಳಿಯುತ್ತಾರೆ. ಈ ಪ್ರಯಾಣಿಕರಿಗೆ ಮೆಟ್ರೊ ನಿಲ್ದಾಣ ಸಂಪರ್ಕಿಸಲು ಸರಿಯಾದ ವ್ಯವಸ್ಥೆ ಇಲ್ಲ. ಇಲ್ಲಿ ಪಾದಚಾರಿ ಮೇಲ್ಸೇತುವೆ ನಿರ್ಮಿಸಿದರೆ ಅನುಕೂಲವಾಗುತ್ತದೆ ಎಂದು ಸ್ಥಳೀಯ ನಿವಾಸಿ ಮಹಾಂತೇಶ್ ಹೇಳಿದರು.

'ಕೋವಿಡ್ ಕಾಣಿಸಿಕೊಳ್ಳುವುದಕ್ಕಿಂತ ಮೊದಲು, ಕೆಂಗೇರಿ ಬಸ್ ನಿಲ್ದಾಣದಲ್ಲಿ ನಿತ್ಯ 10,574 ಪ್ರಯಾಣಿಕರು ಬರುತ್ತಿದ್ದರು. ಇಲ್ಲಿಂದ ಎರಡು ಪಾದಚಾರಿ ಮೇಲ್ಸೇತುವೆ ನಿರ್ಮಿಸಿದರೆ ಅನುಕೂಲವಾಗುತ್ತದೆ. ಒಂದು, ಕೆಂಗೇರಿ ಬಸ್ ನಿಲ್ದಾಣದಿಂದ ಮೆಟ್ರೊ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸಲು ಹಾಗೂ ಮೈಸೂರು ರಸ್ತೆ ದಾಟಲು ಅನುವಾಗುವಂತೆ ಮತ್ತೊಂದು ಪಾದಚಾರಿ ಮೇಲ್ಸೇತುವೆ ನಿರ್ಮಿಸಬೇಕು' ಎಂದು ಕೆಲವು ಪ್ರಯಾಣಿಕರು ಒತ್ತಾಯಿಸಿದರು. 'ಜ್ಞಾನಭಾರತಿ ಮತ್ತು ಕೆಂಗೇರಿ ಬಸ್ ಟರ್ಮಿನಲ್ ಮೆಟ್ರೊ ನಿಲ್ದಾಣಕ್ಕೆ ಪಾದಚಾರಿ ಮೇಲ್ಸೇತುವೆ ನಿರ್ಮಿಸುವ ಯೋಜನೆ ಇದೆ. ವರ್ಷದೊಳಗೆ ಇದು ಕಾರ್ಯರೂಪಕ್ಕೆ ಬರುವ ನಿರೀಕ್ಷೆ ಇದೆ' ಎಂದು ನಿಗಮದ ಅಧಿಕಾರಿಯೊಬ್ಬರು ಹೇಳಿದರು.

ಸಾರ್ವಜನಿಕರು ಹೇಳುವುದೇನು ?

ರಿಯಲ್ ಎಸ್ಟೇಟ್ ಉದ್ಯಮ ವೃದ್ಧಿ

ವಿವಿಧ ಬಡಾವಣೆ ಅಥವಾ ಊರುಗಳಿಂದ ಸಂಪರ್ಕ ವ್ಯವಸ್ಥೆ ಸುಧಾರಿಸುವುದರಿಂದ ಪರೋಕ್ಷವಾಗಿ ರಿಯಲ್ ಎಸ್ಟೇಟ್ ಉದ್ಯಮವೂ ವೃದ್ಧಿಯಾಗಲಿದೆ. ಒಂದೂವರೆ ವರ್ಷದ ಹಿಂದೆ ಇಲ್ಲಿ ಪ್ರತಿ ಚದರ ಅಡಿ ನಿವೇಶನಕ್ಕೆ ₹1,500ದಿಂದ ₹2,000ದವರೆಗೆ ಇತ್ತು. ಈಗ ಅದು ₹3,000ಕ್ಕಿಂತ ಹೆಚ್ಚಾಗಿದೆ. ಕಾಲೇಜು, ಆಸ್ಪತ್ರೆ ಸೇರಿದಂತೆ ಹಲವು ಕಟ್ಟಡಗಳು ತಲೆ ಎತ್ತುತ್ತಿವೆ.

ಎನ್. ಪುಟ್ಟರಾಜು, ರಿಯಲ್ ಎಸ್ಟೇಟ್ ಉದ್ಯಮಿ

ಸುರಕ್ಷತೆಯ ಭಾವ

ಮನೆಯಿಂದ ಕಾಲ್ನಡಿಗೆ ದೂರದಲ್ಲಿ ಕೆಂಗೇರಿ ಮೆಟ್ರೊ ನಿಲ್ದಾಣವಿದೆ. ದೂರದಲ್ಲಿರುವ ಕಚೇರಿ ಕೆಲಸ ಮುಗಿಸಿ, ಸ್ವಂತ ವಾಹನ ಅಥವಾ ಬಸ್‌ನಲ್ಲಿ ಬರುವುದು ವಿಳಂಬವಾಗುತ್ತಿತ್ತು. ಮೆಟ್ರೊ ರೈಲು ಸೇವೆ ಸಿಗುವುದರಿಂದ ಸಂಜೆ 7 ಗಂಟೆಯೊಳಗೆ ಮನೆ ತಲುಪಬಹುದು. ಬಸ್ ಅಥವಾ ಆಟೊಗಿಂತ ಮೆಟ್ರೊ ರೈಲಿನಲ್ಲಿ ಸಂಚರಿಸುವುದು ಸುರಕ್ಷತೆಯ ಭಾವ ಮೂಡಿಸುತ್ತದೆ.

ಎಂ. ಸಿಂಚನಾ, ಕೆಂಗೇರಿ

ಉತ್ತಮ ವ್ಯಾಪಾರ ನಿರೀಕ್ಷೆ

ಮೆಟ್ರೊ ರೈಲು ನಿಲ್ದಾಣದ ಬಳಿಯೇ ಅಂಗಡಿ ಇದೆ. ಸುಮಾರು ಎರಡು ವರ್ಷಗಳಿಂದ ನಿಗಮದ ಕಾರ್ಮಿಕರೇ ಅಂಗಡಿಗೆ ಬರುತ್ತಿದ್ದರು. ಮುಂದೆ, ಪ್ರಯಾಣಿಕರು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಬರುವ ನಿರೀಕ್ಷೆ ಇದೆ. ಮೊದಲು ಹೆಚ್ಚು ದೂಳು ಇರುತ್ತಿತ್ತು. ಈಗ ಮೆಟ್ರೊ ರೈಲು ನಿಲ್ದಾಣಗಳ ಕೆಳಗಿನ ರಸ್ತೆಗಳು ಸ್ವಚ್ಛವಾಗಿದ್ದು, ವಿಶಾಲವಾಗಿ ಕಾಣುತ್ತಿವೆ.

ಎಂ.ಕೆ. ರವಿ, ನಾಯಂಡಹಳ್ಳಿ

ಎಲ್ಲರಿಗೂ ಅನುಕೂಲ

ಮುಂದಿನ ತಿಂಗಳು ಆರಂಭ, ಮುಂದಿನ ತಿಂಗಳು ಆರಂಭ ಎಂದು ಎರಡು ವರ್ಷಗಳಿಂದ ಹೇಳುತ್ತಿದ್ದರು. ಈಗ ಕಾಲ ಕೂಡಿ ಬಂದಿದೆ. ಸಂಚಾರ ದಟ್ಟಣೆ ಸಮಸ್ಯೆ ಇಲ್ಲಿ ತೀವ್ರವಾಗಿತ್ತು. ಈಗ ಮೆಟ್ರೊ ರೈಲು ಇರುವುದರಿಂದ ಎಲ್ಲರಿಗೂ ಅನುಕೂಲವಾಗಲಿದೆ.

ಬಾಲಕೃಷ್ಣ, ರಾಜರಾಜೇಶ್ವರಿ ನಗರ

ಪ್ರತಿ 10 ನಿಮಿಷಕ್ಕೊಂದು ರೈಲು

ಮೈಸೂರು ರಸ್ತೆಯಿಂದ–ಕೆಂಗೇರಿ ವಿಸ್ತರಿತ ಮಾರ್ಗದಲ್ಲಿ ಪ್ರತಿ 10 ನಿಮಿಷಕ್ಕೊಂದು ಮೆಟ್ರೊ ರೈಲು ಸಂಚರಿಸಲಿದೆ.

'ಎಲ್ಲ ಕಾರ್ಯಗಳು ತ್ವರಿತಗತಿಯಲ್ಲಿ ನಡೆಯುತ್ತಿವೆ. ಭಾನುವಾರದ ವೇಳೆಗೆ ಸಾರ್ವಜನಿಕರ ಸೇವೆಗೆ ಈ ಮಾರ್ಗವು ಸಿದ್ಧವಾಗಲಿದೆ. ಈ ವಿಸ್ತರಿತ ಮಾರ್ಗದಲ್ಲಿ ಪ್ರತಿ 10 ನಿಮಿಷಕ್ಕೊಂದರಂತೆ ರೈಲುಗಳು ಕಾರ್ಯಾಚರಣೆ ನಡೆಸಲಿವೆ. ಜನರ ದಟ್ಟಣೆ ಆಧರಿಸಿ, ರೈಲುಗಳು ಕಾರ್ಯಾಚರಣೆ ಅವಧಿಯಲ್ಲಿ ವ್ಯತ್ಯಾಸವಾಗಲಿದೆ' ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಮ್ ಪರ್ವೇಜ್ 'ಪ್ರಜಾವಾಣಿ'ಗೆ ತಿಳಿಸಿದರು.

ವಾಣಿಜ್ಯ ಸಂಸ್ಥೆ, ಕೈಗಾರಿಕೆ, ಹೋಟೆಲ್, ಕಚೇರಿಗಳ ಮಾಲೀಕರಿಗೆ ಬಿಬಿಎಂಪಿ ಸೂಚನೆ

'ಸಿಬ್ಬಂದಿಗೆ ಕಡ್ಡಾಯವಾಗಿ ಲಸಿಕೆ ಕೊಡಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಣಿಜ್ಯ ಸಂಸ್ಥೆಗಳು, ಕೈಗಾರಿಕೆಗಳು, ಹೋಟೆಲ್ ಮತ್ತು ರೆಸ್ಟೋರಂಟ್‌ಗಳು ಹಾಗೂ ಕಚೇರಿಗಳಲ್ಲಿ ಕಾರ್ಯನಿರ್ವಹಿಸುವ ಎಲ್ಲ ಸಿಬ್ಬಂದಿಗೆ ಕೋವಿಡ್ ಲಸಿಕೆಯನ್ನು ಕಡ್ಡಾಯವಾಗಿ ಹಾಕಿಸುವಂತೆ ಬಿಬಿಎಂಪಿಯ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಬುಧವಾರ ಸುತ್ತೋಲೆ ಹೊರಡಿಸಿದ್ದಾರೆ. ಎಲ್ಲ ಸಿಬ್ಬಂದಿಯೂ ಇದೇ 31ರೊಳಗೆ ಕೋವಿಡ್ ಲಸಿಕೆಯ ಕನಿಷ್ಠ ಒಂದು ಡೋಸ್ ಆದರೂ ಪಡೆದಿರಬೇಕು ಎಂದು ಅವರು ಸೂಚಿಸಿದ್ದಾರೆ.

'ನಗರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಕ್ಷೀಣಿಸಿರುವುದರಿಂದ ವಾಣಿಜ್ಯ ಸಂಸ್ಥೆಗಳು ಕೋವಿಡ್ ನಿಯಂತ್ರಣ ಮಾರ್ಗಸೂಚಿಗಳನ್ನು ಅಳವಡಿಸಿಕೊಂಡು ಕಾರ್ಯಾಚರಣೆ ನಡೆಸುವುದಕ್ಕೆ ರಾಜ್ಯ ಸರ್ಕಾರವು ಅನುವು ಮಾಡಿಕೊಟ್ಟಿದೆ. ಆದರೂ ಮುಚ್ಚಿದ ವಾತಾವರಣ ಇರುವ ಕಡೆ ಕೋವಿಡ್ ಹರಡುವಿಕೆ ಸಾಧ್ಯತೆ ಹೆಚ್ಚು. ಇಂತಹ ಕಡೆ ಕೊರೊನಾ ವೈರಾಣು ಹರಡುವುದನ್ನು ನಿಯಂತ್ರಿಸಲು ಮತ್ತು ನಗರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಮತ್ತೆ ಹೆಚ್ಚಳವಾಗುವುದನ್ನು ತಪ್ಪಿಸಲು ವಾಣಿಜ್ಯ ಸಂಸ್ಥೆಗಳು, ಕೈಗಾರಿಕೆಗಳು, ಹೋಟೆಲ್ ಮತ್ತು ಕಚೇರಿಗಳಲ್ಲಿ ಕಾರ್ಯನಿರ್ವಹಿಸುವ ಎಲ್ಲ ಸಿಬ್ಬಂದಿಗೆ ಸೋಂಕು ತಗಲದಂತೆ ಖಾತರಿಪಡಿಸಿಕೊಳ್ಳುವ ಅಗತ್ಯ ಇದೆ. ಸಿಬ್ಬಂದಿ ಮೂಲಕ ಗ್ರಾಹಕರಿಗೆ ಅಥವಾ ಅಂತಹ ಸ್ಥಳಗಳಿಗೆ ಭೇಟಿ ನೀಡುವ ಸಾರ್ವಜನಿಕರಿಗೆ ಸೋಂಕು ಹರಡುವುದನ್ನು ತಪ್ಪಿಸಬೇಕಿದೆ' ಎಂದು ಮುಖ್ಯ ಆಯುಕ್ತರು ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

'ಬಿಬಿಎಂಪಿ ವ್ಯಾಪ್ತಿಯಲ್ಲಿ ಸೋಂಕು ಹರಡುವುದನ್ನು ನಿಯಂತ್ರಿಸಲು ವಾಣಿಜ್ಯ ಸಂಸ್ಥೆಗಳು, ಕೈಗಾರಿಕೆಗಳು, ಹೋಟೆಲ್ ಮತ್ತು ಕಚೇರಿಗಳಲ್ಲಿ ಕೋವಿಡ್ ನಿಯಂತ್ರಣ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಅನುಸರಿಸಬೇಕು. ಇವುಗಳಲ್ಲಿ ಕಾರ್ಯನಿರ್ವಹಿಸುವ ಎಲ್ಲ ಸಿಬ್ಬಂದಿ ಸರ್ಕಾರಿ ಅಥವಾ ಬಿಬಿಎಂಪಿ ಲಸಿಕಾ ಕೇಂದ್ರಗಳಲ್ಲಿ ಉಚಿತವಾಗಿ ಲಸಿಕೆ ಹಾಕಿಸಿಕೊಳ್ಳಬಹುದು ಅಥವಾ ಮಾಲೀಕರು ಸ್ವಂತ ವೆಚ್ಚದಲ್ಲಿ ಎಲ್ಲ ಸಿಬ್ಬಂದಿಗೂ ಲಸಿಕೆ ಕೊಡಿಸಬಹುದು' ಎಂದು ಅವರು ಹೇಳಿದ್ದಾರೆ.

'ಸಿಬ್ಬಂದಿ ಲಸಿಕೆ ಹಾಕಿಸಿಕೊಂಡಿರುವ ಬಗ್ಗೆ ಮಾಲೀಕರು ದಾಖಲೆಗಳನ್ನು ಹೊಂದಿರಬೇಕು. ವಾಣಿಜ್ಯ ಸಂಸ್ಥೆ ಕಚೇರಿಗಳಿಗೆ ಭೇಟಿ ನೀಡಿ ದಾಖಲೆ ಪರಿಶೀಲನೆ ನಡೆಸಲು ಬಿಬಿಎಂಪಿಯು ಮಾರ್ಷಲ್‌ಗಳಿಗೆ ಹಾಗೂ ಆರೋಗ್ಯ ಅಧಿಕಾರಿಗಳಿಗೆ ಅಧಿಕಾರ ನೀಡಿದೆ. ಅವರು ಸೆ. 1ರಿಂದ ಕೆಲಸದ ಅವಧಿಯಲ್ಲಿ ಕಚೇರಿಗೆ ಭೇಟಿ ನೀಡಿ ಸಿಬ್ಬಂದಿ ಲಸಿಕೆ ಹಾಕಿಸಿಕೊಂಡಿರುವ ಬಗ್ಗೆ ವಿಚಾರಿಸಲಿದ್ದಾರೆ. ಆಗ ಈ ಕುರಿತ ದಾಖಲೆಗಳನ್ನು ಹಾಜರಿಪಡಿಸಬೇಕು. ಈ ಕುರಿತು ಯಾವುದೇ ಉಲ್ಲಂಘನೆಗಳಿಗೆ 1897ರ ಸಾಂಕ್ರಾಮಿಕ ರೋಗ ಕಾಯ್ದೆಯಡಿ ವ್ಯಾಖ್ಯಾನಿಸಿದಂತೆ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 188 ಅಡಿ ಶಿಕ್ಷೆ ಅಥವಾ ದಂಡ ವಿಧಿಸಬಹುದು' ಎಂದು ಮುಖ್ಯ ಆಯುಕ್ತರು ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

ಪ್ರತಿ ದಿನ ಐದು ಲಕ್ಷ ಡೋಸ್ ಭರವಸೆ

ಕರ್ನಾಟಕಕ್ಕೆ ಸೆಪ್ಟೆಂಬರ್‌ನಿಂದ ಪ್ರತಿ ದಿನ 5 ಲಕ್ಷ ಡೋಸ್ ಕೋವಿಡ್ ಲಸಿಕೆ ವಿತರಿಸುವುದಾಗಿ ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವಿಯಾ ಭರವಸೆ ನೀಡಿದ್ದಾರೆ.

'ಮುಂದಿನ ತಿಂಗಳಿಂದ ಪ್ರತಿ ದಿನ 5 ಲಕ್ಷ ಜನರಿಗೆ ಲಸಿಕೆ ಕೊಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. ಇದಕ್ಕಾಗಿ ಹೆಚ್ಚಿನ ಲಸಿಕೆಯ ಅಗತ್ಯವಿದೆ ಎಂದು ಕೇಂದ್ರ ಆರೋಗ್ಯ ಸಚಿವರಿಗೆ ಮನವರಿಕೆ ಮಾಡಿದ್ದೇನೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸುದ್ದಿಗಾರರಿಗೆ ತಿಳಿಸಿದರು.

ಮುಖ್ಯಾಂಶಗಳು

- ಸಿಬ್ಬಂದಿ ಕೋವಿಡ್ ಲಸಿಕೆ ಪಡೆದ ದಾಖಲೆ ಇಟ್ಟುಕೊಳ್ಳುವುದು ಕಡ್ಡಾಯ
- ಕಚೇರಿಗಳಿಗೆ ಭೇಟಿ ನೀಡಿ ದಾಖಲೆ ಪರಿಶೀಲನೆ ನಡೆಸಲಿದ್ದಾರೆ ಪಾಲಿಕೆ ಅಧಿಕಾರಿಗಳು
- ದಾಖಲೆ ಪರಿಶೀಲನೆಗೆ ಮಾರ್ಷಲ್‌ಗಳಿಗೆ/ ಆರೋಗ್ಯ ಅಧಿಕಾರಿಗಳಿಗೆ ಅಧಿಕಾರ
- ದಾಖಲೆ ಹಾಜರುಪಡಿಸದೇ ಹೋದರೆ ದಂಡ ವಿಧಿಸಲಿದೆ ಬಿಬಿಎಂಪಿ

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	21.51 ಕೋಟಿ ▲	3.26 ಕೋಟಿ ▲
ಸಕ್ರಿಯ ಪ್ರಕರಣ	1.82 ಕೋಟಿ ▲	3.38ಲಕ್ಷ ▲
ಗುಣಮುಖ	19.24 ಕೋಟಿ ▲	3.18 ಕೋಟಿ ▲
ಸಾವು	44.83ಲಕ್ಷ ▲	4.36 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	7.23 ಲಕ್ಷ ▲	44,509 ▼
ಗುಣಮುಖ	5.85 ಲಕ್ಷ ▼	32,887 ▼
ಸಾವು	11,301 ▲	493 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)



ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಎಲ್ಲಿ ಹೆಚ್ಚು ಸಾವು (ಒಟ್ಟು)

- 1.36 ಲಕ್ಷ ಮಹಾರಾಷ್ಟ್ರ
- 34,814 ▲ ತಮಿಳುನಾಡು
- 25,080 ದೆಹಲಿ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

- 64.42 ಮಹಾರಾಷ್ಟ್ರ ▲
- 39.13 ಕೇರಳ ▲
- 26.07 ತಮಿಳುನಾಡು ▲

ಜೋರು ಮಳೆ; ರಸ್ತೆಯಲ್ಲಿ ಹರಿದ ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವೆಡೆ ಗುರುವಾರ ಬಿರುಸಿನ ಮಳೆ ಆಯಿತು. ಪ್ರಮುಖ ರಸ್ತೆಗಳ ಮೇಲೆ ನೀರು ಹರಿಯಿತು.

ನಗರದಲ್ಲಿ ಬೆಳಿಗ್ಗೆಯಿಂದ ಬಿಸಿಲು ಇತ್ತು. ಮಧ್ಯಾಹ್ನ ಆಗಾಗ ಮೋಡ ಕವಿದ ವಾತಾವರಣ ಕಾಣಿಸಿಕೊಂಡಿತು. ಸಂಜೆ ಆರಂಭವಾದ ಮಳೆ, ರಾತ್ರಿಯವರೆಗೂ ಸುರಿಯಿತು.

ರಾಜರಾಜೇಶ್ವರಿನಗರ, ಕೆಂಗೇರಿ, ಬಸವನಗುಡಿ, ಹನುಮಂತ ನಗರ, ಗಿರಿನಗರ, ಜಯನಗರ, ಜೆ.ಪಿ. ನಗರ, ಬನಶಂಕರಿ, ದೀಪಾಂಜಲಿ ನಗರ, ವಿಜಯನಗರ, ಚಾಮರಾಜ ಪೇಟೆ, ರಾಜಾಜಿನಗರ, ಬಸವೇಶ್ವರನಗರ, ಯಶವಂತಪುರ, ಮಲ್ಲೇಶ್ವರ, ಪೀಣ್ಯ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಮಳೆ ಆಯಿತು.

ಮೈಸೂರು ರಸ್ತೆಯಲ್ಲಿ ಮಳೆ ಅಬ್ಬರ ಜೋರಾಗಿತ್ತು. ಈ ರಸ್ತೆಯಲ್ಲಿ ಕಾಮಗಾರಿ ಪ್ರಗತಿಯಲ್ಲಿದೆ. ಕಾಮಗಾರಿ ಸ್ಥಳದಲ್ಲಿ ನೀರು ಹರಿದು, ಇಡೀ ರಸ್ತೆಯನ್ನೇ ಆವರಿಸಿತ್ತು. ನೀರಿನಲ್ಲೇ ವಾಹನಗಳು ಸಂಚರಿಸಿದವು. ಕೆಲ ವಾಹನಗಳು ಗುಂಡಿಯಲ್ಲಿ ಸಿಲುಕಿ ಉರುಳಿಬಿದ್ದ ಘಟನೆಗಳೂ ನಡೆದವು.

ಬಳ್ಳಾರಿ ರಸ್ತೆಯ ಹೆಬ್ಬಾಳ, ಜಿಕೆವಿಕೆ, ಯಲಹಂಕ ಬಳಿಯೂ ಜೋರು ಮಳೆ ಇತ್ತು. ಪ್ರಮುಖ ರಸ್ತೆಗಳಲ್ಲಿ ನೀರು ತುಂಬಿ ಹರಿಯಿತು.

'ಜಾನ್ಸನ್ ಮಾರುಕಟ್ಟೆ ರಸ್ತೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿಯಿತು. ಸಿಬ್ಬಂದಿ ಸ್ಥಳಕ್ಕೆ ಹೋಗಿ ನೀರು ಹರಿದು ಹೋಗಲು ದಾರಿ ಮಾಡಿದರು. ಅದನ್ನು ಹೊರತುಪಡಿಸಿ ಬೇರೆ ಯಾವುದೇ ದೂರುಗಳು ಬಂದಿಲ್ಲ' ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

ನಗರದ ರಾಜಭವನ ರಸ್ತೆಯಲ್ಲಿ ಗುರುವಾರ ರಾತ್ರಿ ಸುರಿದ ಮಳೆಯಲ್ಲಿಯೇ ಸಾಗಿದ ವಾಹನ ಸವಾರರು –ಪ್ರಜಾವಾಣಿ ಚಿತ್ರ

ಲಸಿಕಾ ಮೇಳ ಇಂದು: 1.25 ಲಕ್ಷ ಮಂದಿಗೆ ಲಸಿಕೆ ವಿತರಣೆ ಗುರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರ ಇದೇ 27ರಂದು (ಶುಕ್ರವಾರ) ರಾಜ್ಯದಾದ್ಯಂತ 'ಕೋವಿಡ್ ಲಸಿಕಾ ಮೇಳ'ವನ್ನು ಹಮ್ಮಿಕೊಂಡಿದೆ. ಇದರ ಅಂಗವಾಗಿ ಬಿಬಿಎಂಪಿ ವ್ಯಾಪ್ತಿಯಲ್ಲಿ 1.25 ಲಕ್ಷ ಮಂದಿಗೆ ಕೋವಿಡ್ ಲಸಿಕೆ ಹಾಕುವ ಗುರಿ ಹೊಂದಲಾಗಿದೆ

'ಪ್ರತಿಯೊಂದು ವಲಯದಲ್ಲೂ ಇಂತಿಷ್ಟು ಮಂದಿಗೆ ಲಸಿಕೆ ಹಾಕಬೇಕು ಎಂದು ಬಿಬಿಎಂಪಿ ಗುರಿ ನಿಗದಿಪಡಿಸಿದೆ. ಈ ಗುರಿ ಸಾಧಿಸಲು ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ. ನಗರದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಹಾಗೂ ಲಸಿಕೆ ನೀಡುವ ಇತರ ಸ್ಥಳದಲ್ಲಿ ಯಾವುದೇ ಕೊರತೆ ಎದುರಾಗದಂತೆ ತಯಾರಿ ನಡೆಸಲಾಗಿದೆ. ಎಲ್ಲ ಕೇಂದ್ರಗಳಿಗೂ ಅವಶ್ಯಕ ಸಂಖ್ಯೆಯ ಲಸಿಕೆಗಳನ್ನು ಮುಂಚಿತವಾಗಿಯೇ ಪೂರೈಸಲಾಗುತ್ತದೆ. ಲಸಿಕೆ ನೀಡುವ ಸಲುವಾಗಿ ಹೆಚ್ಚು ಸೆಷನ್‌ಗಳನ್ನು ಆಯೋಜಿಸಲಾಗುತ್ತದೆ. ಇದಕ್ಕಾಗಿ ಅಗತ್ಯ ಪ್ರಮಾಣದಲ್ಲಿ ಸಿಬ್ಬಂದಿಯನ್ನೂ ನಿಯೋಜಿಸಲಾಗಿದೆ' ಎಂದು ಬಿಬಿಎಂಪಿ ತಿಳಿಸಿದೆ.

ಮೇಳದಲ್ಲಿ ಲಸಿಕೆ– ಯಾರಿಗೆಲ್ಲ ಆದ್ಯತೆ?

- ಇದುವರೆಗೆ ಒಂದೂ ಡೋಸ್ ಕೂಡ ಪಡೆಯದ ಆರೋಗ್ಯ ಕಾರ್ಯಕರ್ತರು ಮತ್ತು ಮುಂಚೂಣಿ ಕಾರ್ಯಕರ್ತರಿಗೆ
- 2ನೇ ಡೋಸ್‌ಗೆ ಬಾಕಿ ಇರುವ ಆರೋಗ್ಯ ಕಾರ್ಯಕರ್ತರು ಮತ್ತು ಮುಂಚೂಣಿ ಕಾರ್ಯಕರ್ತರಿಗೆ
- 60 ವರ್ಷ ಮೇಲ್ಪಟ್ಟವರಿಗೆ 1 ನೇ ಡೋಸ್ ಹಾಗೂ 2 ನೇ ಡೋಸ್
- ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳು, ಪದವಿ ಪೂರ್ವ ಕಾಲೇಜುಗಳ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ
- 18 ವರ್ಷ ಮೇಲ್ಪಟ್ಟ ಅರ್ಹ ಫಲಾನುಭವಿಗಳಿಗೆ

ಲಸಿಕೆ: ಅಂತರ ಕಡಿಮೆ ಮಾಡಲು ಚಿಂತನೆ

ನವದೆಹಲಿ (ಪಿಟಿಐ): ಕೋವಿಶೀಲ್ಡ್ ಲಸಿಕೆಯ ಎರಡು ಡೋಸ್‌ಗಳ ನಡುವಣ ಅಂತರವನ್ನು ಕಡಿಮೆ ಮಾಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಬಗ್ಗೆ ಲಸಿಕೆ ಕುರಿತಾದ ರಾಷ್ಟ್ರೀಯ ತಾಂತ್ರಿಕ ಸಲಹಾ ಸಮಿತಿ (ಎನ್‌ಟಿಎಜಿಐ) ಜತೆ ಚರ್ಚಿಸಲಾಗುವುದು ಎಂದು ತಿಳಿಸಿದ್ದಾರೆ.

ಆದರೆ, ಇಂತಹ ಯಾವುದೇ ಪ್ರಸ್ತಾವ ಸದ್ಯಕ್ಕೆ ಇಲ್ಲ ಎಂದು ಎನ್‌ಟಿಎಜಿಐ ಅಧ್ಯಕ್ಷ ಡಾ.ಎನ್.ಕೆ. ಅರೋರಾ ತಿಳಿಸಿದ್ದಾರೆ.

ಲಸಿಕೆಯ ಸಾಮರ್ಥ್ಯದ ಪರಿಶೀಲನೆಯನ್ನು ಹಲವಾರು ಅಧ್ಯಯನಗಳು ಮತ್ತು ಮಾಹಿತಿ ಸಂಗ್ರಹಿಸುವ ಮೂಲಕ ಕೈಗೊಳ್ಳಲಾಗುತ್ತದೆ. ನಿರಂತರವಾಗಿ ಲಸಿಕೆಯ ಪರಿಣಾಮಗಳ ಬಗ್ಗೆ ಎನ್‌ಟಿಎಜಿಐ ಪರಿಶೀಲನೆ ನಡೆಸುತ್ತಿದೆ ಎಂದು ಅರೋರಾ ವಿವರಿಸಿದ್ದಾರೆ.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ದಾನಿಗಳ ನೆರವಿನಿಂದ ಸಿದ್ಧತೆ

3ನೇ ಅಲೆ: ಅನ್ಯ ಕಾಯಿಲೆಗೆ ಐಸಿಯು ವ್ಯವಸ್ಥೆ

• ವರುಣ ಹೆಗಡೆ

ಬೆಂಗಳೂರು: ಸಂಭಾವ್ಯ ಕೋವಿಡ್ ಮೂರನೇ ಅಲೆಯ ಮುನ್ನೆಚ್ಚರಿಕಾ ಕ್ರಮವಾಗಿ ಕೋವಿಡೇತರ ಕಾಯಿಲೆಗಳನ್ನು ಎದುರಿಸುತ್ತಿರುವವರಿಗೆ ತುರ್ತು ಸಂದರ್ಭದಲ್ಲಿ ಚಿಕಿತ್ಸೆ ಒದಗಿಸಲು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ತೀವ್ರ ನಿಗಾ ಘಟಕ (ಐಸಿಯು) ಹಾಸಿಗೆಗಳನ್ನು ಅಳವಡಿಸಲಾಗುತ್ತಿದೆ.

ಕೋವಿಡ್ ಮೊದಲ ಹಾಗೂ ಎರಡನೇ ಅಲೆಯಲ್ಲಿ ಪ್ರಕರಣಗಳ ಸಂಖ್ಯೆ ಏರುಗತಿ ಪಡೆಯುತ್ತಿದ್ದಂತೆ ವಿಕ್ಟೋರಿಯಾ, ಸಿ.ವಿ. ರಾಮನ್ ಸೇರಿದಂತೆ ಬಹುತೇಕ ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಸಿಗೆಗಳನ್ನು ಪೂರ್ಣ ಪ್ರಮಾಣದಲ್ಲಿ ಕೋವಿಡ್ ಚಿಕಿತ್ಸೆಗೆ ಮೀಸಲಿಡಲಾಗಿತ್ತು. ಇದರಿಂದಾಗಿ ಕೋವಿಡೇತರ ಕಾಯಿಲೆಗಳನ್ನು ಎದುರಿಸುತ್ತಿರುವವರಿಗೆ ಚಿಕಿತ್ಸೆಯಲ್ಲಿ ವ್ಯತ್ಯಯವಾಗಿತ್ತು. ತುರ್ತು ಚಿಕಿತ್ಸೆಗಳನ್ನು ಹೊರತುಪಡಿಸಿ ಉಳಿದ ಚಿಕಿತ್ಸೆಗಳನ್ನು ಮುಂದೂಡುವಂತೆ ಆಸ್ಪತ್ರೆಗಳ ಮುಖ್ಯಸ್ಥರೇ ಮನವಿ ಮಾಡಿಕೊಂಡಿದ್ದರು.

ಕೋವಿಡ್ ಎರಡನೇ ಅಲೆಯಲ್ಲಿ ನಗರದ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಸರ್ಕಾರಿ ಕೋಟಾದಡಿ 7 ಸಾವಿರಕ್ಕೂ ಅಧಿಕ ಸಾಮಾನ್ಯ ಹಾಸಿಗೆಗಳನ್ನು ಮೀಸಲಿಡಲಾಗಿತ್ತು. 570 ಐಸಿಯು ಹಾಸಿಗೆ, 4,913 ಎಚ್‌ಡಿಯು ಹಾಗೂ 643 ವೆಂಟಿಲೇಟರ್ ಸಹಿತ ಐಸಿಯು ಹಾಸಿಗೆಗಳನ್ನು ಕೋವಿಡ್ ಚಿಕಿತ್ಸೆಗೆ ನಿಗದಿಪಡಿಸಲಾಗಿತ್ತು. ಹೀಗಾಗಿ, ಕೋವಿಡೇತರ ರೋಗಿಗಳು ತುರ್ತು ಸಂದರ್ಭದಲ್ಲಿ ಐಸಿಯು ಹಾಸಿಗೆಗಾಗಿ ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು.

ಸಂಭಾವ್ಯ ಮೂರನೇ ಅಲೆಯಲ್ಲಿ ಅನ್ಯ ಕಾಯಿಲೆ ಎದುರಿಸುತ್ತಿರುವವರಿಗೆ ಚಿಕಿತ್ಸೆ ಸಮಸ್ಯೆಯಾಗಬಾರದೆಂಬ ಉದ್ದೇಶದಿಂದ ಕಿದ್ವಾಯಿ ಆಸ್ಪತ್ರೆಯಲ್ಲಿ 30 ವೈದ್ಯಕೀಯ ಐಸಿಯು ಹಾಸಿಗೆಗಳನ್ನು ಸಿದ್ಧಗೊಳಿಸಲಾಗುತ್ತಿದೆ. ಈಗಾಗಲೇ ಮಕ್ಕಳಿಗಾಗಿಯೇ ಪ್ರತ್ಯೇಕವಾಗಿ 14 ಐಸಿಯು ಹಾಸಿಗೆಗಳನ್ನು ಪ್ರಾರಂಭಿಸಲಾಗಿದೆ.

ದಾನಿಗಳ ನೆರವಿನಿಂದ ನಿರ್ಮಾಣ: ಸಂಸ್ಥೆಯಲ್ಲಿ ಸದ್ಯ 25 ಶಸ್ತ್ರಚಿಕಿತ್ಸಾ ಐಸಿಯು, 10 ವೈದ್ಯಕೀಯ ಹಾಗೂ 14 ಮಕ್ಕಳ ಐಸಿಯು ಹಾಸಿಗೆಗಳಿವೆ. ಶಸ್ತ್ರಚಿಕಿತ್ಸಾ ಹಾಗೂ ವೈದ್ಯಕೀಯ ಐಸಿಯು ಸಂಖ್ಯೆಗಳನ್ನು ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿಯ (ಸಿಎಸ್‌ಆರ್) ನೆರವಿನಿಂದ ಏರಿಕೆ ಮಾಡಲು ಸಂಸ್ಥೆ ಮುಂದಾಗಿದೆ. ಐಸಿಯು ಹಾಸಿಗೆಗಳ ಒಟ್ಟು ಸಂಖ್ಯೆಯನ್ನು 100ಕ್ಕೆ ಏರಿಕೆ ಮಾಡಲು ಯೋಜನೆ ರೂಪಿಸಲಾಗಿದೆ.

'ವೈದ್ಯಕೀಯ ಐಸಿಯು ಹಾಸಿಗೆಗಳನ್ನು ಆರ್.ಕೆ.ಸಿಪಾನಿ ಮತ್ತು ಧನ್‌ರಾಜ್ ದಾಗಾ ಬ್ಲಾಕ್‌ನಲ್ಲಿ ನಿರ್ಮಿಸಲಾಗುತ್ತದೆ. ನೆರವು ನೀಡಲು ದಾನಿಗಳು ಮುಂದೆ ಬಂದಿದ್ದು, ಎರಡು ವಾರಗಳಲ್ಲಿ ನಿರ್ಮಿಸಲಾಗುವುದು' ಎಂದು ಸಂಸ್ಥೆಯ ನಿರ್ದೇಶಕ ಡಾ.ಸಿ. ರಾಮಚಂದ್ರ ತಿಳಿಸಿದರು.

ಸಂಭಾವ್ಯ ಕೋವಿಡ್ 3ನೇ ಅಲೆಯಲ್ಲಿ ಕ್ಯಾನ್ಸರ್ ಜೊತೆಗೆ ಅನ್ಯ ಕಾಯಿಲೆಗೂ ಚಿಕಿತ್ಸೆ ಒದಗಿಸಲು ಯೋಜನೆ ರೂಪಿಸಿದ್ದೇವೆ

ಡಾ.ಸಿ. ರಾಮಚಂದ್ರ
ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ

'ಸೋಂಕು ರೋಗಿಗಳಿಗೆ ದಾಖಲಾತಿಯಿಲ್ಲ'

ಸಂಸ್ಥೆಯಲ್ಲಿ ಪ್ರತಿವರ್ಷ 3 ಲಕ್ಷಕ್ಕೂ ಅಧಿಕ ಮಂದಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕೋವಿಡ್ ಕಾಣಿಸಿಕೊಂಡಾಗಿನಿಂದ ಚಿಕಿತ್ಸೆಗೆ ಬರುವ ಕ್ಯಾನ್ಸರ್ ರೋಗಿಗಳಿಗೆ ಕೋವಿಡ್ ಪರೀಕ್ಷೆ ನಡೆಸಿ, ಸೋಂಕು ಪತ್ತೆಯಾಗದಿದ್ದಲ್ಲಿ ರೇಡಿಯೋ ಥೆರಪಿ, ಕಿಮೋಥೆರಪಿ ಸೇರಿದಂತೆ ಅಗತ್ಯ ಚಿಕಿತ್ಸೆ ಹಾಗೂ ಶಸ್ತ್ರಚಿಕಿತ್ಸೆ ಮಾಡಲಾಗುತ್ತಿದೆ. ಸಂಭಾವ್ಯ ಮೂರನೇ ಅಲೆಯಲ್ಲಿ ಬೇರೆ ರೋಗಿಗಳನ್ನು ದಾಖಲಿಸಿಕೊಂಡರೂ ಸೋಂಕು ಸಂಬಂಧಿ ಅನ್ಯ ಕಾಯಿಲೆ ಎದುರಿಸುತ್ತಿರುವವರನ್ನು ದಾಖಲಿಸಿಕೊಳ್ಳದಿರಲು ಸಂಸ್ಥೆ ನಿರ್ಧರಿಸಿದೆ. ಆ ಸೋಂಕು ಕ್ಯಾನ್ಸರ್ ಪೀಡಿತರಿಗೆ ಅಪಾಯ ತಂದೊಡ್ಡುವ ಸಾಧ್ಯತೆ ಇರುವುದರಿಂದ ಸಂಸ್ಥೆ ಈ ನಿರ್ಧಾರ ಕೈಗೊಂಡಿದೆ.

ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

12,36,229 ▲ ಒಟ್ಟು ಸೋಂಕಿತರು (12,35,910 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
7,343 ▲	12,12,910 ▲	15,975 ▲

ದಿನದ ಏರಿಕೆ

ಹೊಸ ಪ್ರಕರಣ	319 ▲
ಗುಣಮುಖ	205 ▼
ಸಾವು	02 ▼

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕುಟುಂಬ ಸಮೇತ ಆತ್ಮಹತ್ಯೆಗೆ ಯತ್ನ; ಶಂಕೆ

ನಾಲೆಗೆ ಕಾರು ಬಿದ್ದು ಅಳಿಯ, ಅತ್ತೆ ಸಾವು

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ತರೀಕೆರೆ ತಾಲ್ಲೂಕಿನ ಮಳಲಿಚನ್ನೇನಹಳ್ಳಿ ಬಳಿ ನಾಲೆಗೆ ಬುಧವಾರ ತಡರಾತ್ರಿ ಕಾರು ಬಿದ್ದು ಇಬ್ಬರು ಮೃತಪಟ್ಟಿದ್ದಾರೆ.

ಒಂದೇ ಕುಟುಂಬದ ನಾಲ್ವರು ಕಾರಿನಲ್ಲಿದ್ದರು. ಅವರಲ್ಲಿ ಮಂಜುನಾಥ್ (47) ಹಾಗೂ ಸುನಂದಮ್ಮ (61) ಎಂಬುವರು ಮೃತಪಟ್ಟಿದ್ದಾರೆ. ಧ್ಯಾನ್ ಮತ್ತು ನೀತು ಅವರನ್ನು ರಕ್ಷಣೆ ಮಾಡಲಾಗಿದೆ. ಅಗ್ನಿ ಶಾಮಕ ಸಿಬ್ಬಂದಿ ಮತ್ತು ಪೊಲೀಸರು ಕಾರ್ಯಾಚರಣೆ ನಡೆಸಿ ಕಾರನ್ನು ಹೊರಕ್ಕೆ ತೆಗೆದಿದ್ದು, ಕಾರಿನಲ್ಲಿ ಸುನಂದಮ್ಮ ಅವರ ಶವ ಸಿಕ್ಕಿದೆ. ಶಿವಮೊಗ್ಗ ಜಿಲ್ಲೆಯ ಹೊಳೆಹೊನ್ನೂರು ಸಮೀಪದ ಸಿದ್ದಾಪುರ ಬಳಿ ನಾಲೆ ದಂಡೆಯಲ್ಲಿ ಮಂಜುನಾಥ್ ಅವರ ಮೃತದೇಹ ಸಿಕ್ಕಿದೆ.

ಬೆಂಗಳೂರಿನ ಗಿರಿನಗರದ ಮಂಜುನಾಥ್ ಅವರು ಪತ್ನಿ ನೀತು, ಪುತ್ರ ಧ್ಯಾನ್, ಅತ್ತೆ ಸುನಂದಮ್ಮ ಜತೆ ಶಿರಸಿಗೆ ಸಂಬಂಧಿಕರ ಮನೆಗೆ ಹೋಗಿ ವಾಪಸಾಗುವಾಗ ಈ ಅವಘಡ ಸಂಭವಿಸಿದೆ. ಕುಟುಂಬ ಸಮೇತ ಆತ್ಮಹತ್ಯೆಗೆ ಮಾಡಿರುವ ಯತ್ನ ಇದಾಗಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

ಹೃದಯಾಘಾತ 1.08 ಲಕ್ಷ, ವಯೋ ಸಹಜ ಕಾಯಿಲೆಗೆ 63 ಸಾವಿರ ಮಂದಿ ಮರಣ

ಕೋವಿಡ್ ಸಂಬಂಧಿ ಕಾಯಿಲೆಗಳಿಗೇ ಹೆಚ್ಚು ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 2020ರಲ್ಲಿ ಹೃದಯಾಘಾತದಿಂದ 1.08 ಲಕ್ಷ, ವಯೋಸಹಜ ಕಾರಣಗಳಿಂದ 63 ಸಾವಿರ ಮಂದಿ ಮೃತಪಟ್ಟಿದ್ದಾರೆ. ಇವರಲ್ಲಿ ಬಹುತೇಕರು ಕೋವಿಡ್ ಬಂದಿರುವುದು ಗೊತ್ತಿದ್ದೋ ಗೊತ್ತಿಲ್ಲದೆಯೋ ಸಾವಿಗೀಡಾಗಿರುವ ಸಾಧ್ಯತೆ ಹೆಚ್ಚಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಮಾಹಿತಿಯ ಪ್ರಕಾರ, 2020ರಲ್ಲಿ ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆ 22,320. ಆದರೆ, ಕೊರೊನಾ ಸೋಂಕಿಗೆ ಒಳಗಾಗಿ ವಿವಿಧ ರೀತಿಯ ಆರೋಗ್ಯ ಸಮಸ್ಯೆಗಳಿಗೆ ತುತ್ತಾಗಿ ಮೃತಪಟ್ಟವರ ಲೆಕ್ಕವನ್ನು ಕೋವಿಡ್ ಸಾವಿನ ಪಟ್ಟಿಗೆ ಸೇರಿಸಿಲ್ಲ. ಈ ಮೂಲಕ ಕೋವಿಡ್ ಸಾವಿನ ಲೆಕ್ಕ ಕಡಿಮೆ ಇದೆಯೆಂದು ಬಿಂಬಿಸಲು ಯತ್ನಿಸಲಾಗುತ್ತಿದೆ ಎಂಬುದು ಆರೋಗ್ಯ ವಿಶ್ಲೇಷಕರ ಅಭಿಮತ.

2020 ರಲ್ಲಿ ಕೋವಿಡ್ ಕಾಲಿಟ್ಟ ಬಳಿಕ ಹೃದಯಾಘಾತ ಮತ್ತು ಹೃದಯಕ್ಕೆ ಸಂಬಂಧಿಸಿದ ಸಮಸ್ಯೆಗಳಿಂದ 1,08,810 ಮಂದಿ ಮೃತಪಟ್ಟಿದ್ದಾರೆ. 2019ರಲ್ಲಿ ಈ ಸಂಖ್ಯೆ 70,277 ಇತ್ತು. ಇದಕ್ಕೆ ಹೋಲಿಸಿದರೆ 2020 ರಲ್ಲಿ 34,583 ಹೆಚ್ಚು ಸಾವು ಸಂಭವಿಸಿವೆ.

2020 ರಲ್ಲಿ ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆ 22,320 ಎಂಬ ಮಾಹಿತಿಯನ್ನು ಮರಣಗಳ ತುಲನಾತ್ಮಕ ಹೇಳಿಕೆಯಲ್ಲಿ ಸರ್ಕಾರ ವಿವರ ನೀಡಿದೆ. ಆದರೆ, 2020 ರ ಡಿಸೆಂಬರ್‌ನಲ್ಲಿ ಆರೋಗ್ಯ ಇಲಾಖೆ ತನ್ನ ಬುಲೆಟಿನ್‌ನಲ್ಲಿ ಕೋವಿಡ್‌ನಿಂದ ಸತ್ತವರ ಸಂಖ್ಯೆ 12,090 ಎಂದು ಹೇಳಿಕೊಂಡಿತ್ತು.

2019 ರಲ್ಲಿ ವಯೋಸಹಜವಾಗಿ ಮೃತಪಟ್ಟವರು 41,383 ಇದ್ದರೆ, 2020 ರಲ್ಲಿ 63,655. ಅಂದರೆ 22,272 ಅಧಿಕ ಜನರು ಮೃತಪಟ್ಟಿದ್ದಾರೆ. ಇತರ ಅಪಘಾತಗಳ ವಿಭಾಗದಲ್ಲಿ (ರಸ್ತೆ ಅಪಘಾತ ಬಿಟ್ಟು) 2019 ರಲ್ಲಿ 42,781 ಇದ್ದ ಸಾವಿನ ಪ್ರಮಾಣ 2020 ಕ್ಕೆ 63,655 ಕ್ಕೆ ಏರಿಕೆಯಾಗಿದ್ದು, 22,272 ಅಧಿಕ ಸಾವು ಸಂಭವಿಸಿದೆ.

‘ಕೋವಿಡ್‌ನಿಂದ ಹೃದಯಾಘಾತಕ್ಕೆ ಒಳಗಾಗಿ ಸಾಕಷ್ಟು ಜನ ಸಾವನ್ನಪ್ಪುತ್ತಿದ್ದಾರೆ’ ಎಂದು ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ.ಮಂಜುನಾಥ್ ಅವರು ಕೋವಿಡ್ ತಾರಕಕ್ಕೆ ಏರಿದ್ದ ಸಂದರ್ಭದಲ್ಲಿ ಹೇಳಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಏಳು ತಿಂಗಳಲ್ಲಿ 4.26 ಲಕ್ಷ ಮರಣ: 2021ರ ಜನವರಿಯಿಂದ ಜೂನ್‌ವರೆಗೆ ರಾಜ್ಯದಲ್ಲಿ ತಿಂಗಳಿಗೆ ಸರಾಸರಿ 70 ಸಾವಿರ ಮಂದಿ ಮೃತಪಟ್ಟಿದ್ದಾರೆ. ಏಪ್ರಿಲ್‌ನಿಂದ ಜೂನ್ ಅವಧಿಯಲ್ಲಿ ಅತ್ಯಧಿಕ ಸಾವು ಸಂಭವಿಸಿದ್ದು, ಜುಲೈವರೆಗೆ ಒಟ್ಟು 4.26 ಲಕ್ಷ ಮಂದಿ ಮರಣ ಹೊಂದಿದ್ದಾರೆ.

ಕೋವಿಡ್ ಪೂರ್ವದ ವರ್ಷಗಳಲ್ಲಿ ತಿಂಗಳ ಮರಣ ಪ್ರಮಾಣ ಸರಾಸರಿ 42 ಸಾವಿರ ಇತ್ತು. 2020 ಕ್ಕೆ ಸರಾಸರಿ ಪ್ರಮಾಣ 46 ಸಾವಿರಕ್ಕೇರಿರುವುದು, 2021 ರಲ್ಲಿ 70 ಸಾವಿರ ದಾಟಿರುವುದು ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ನೀಡಿರುವ ಮಾಹಿತಿಯಿಂದ ಗೊತ್ತಾಗಿದೆ.

ರಾಜ್ಯದ ಸರಾಸರಿ ಮರಣ ಪ್ರಮಾಣಕ್ಕಿಂತ 30 ಸಾವಿರ ಅಧಿಕ ಸಾವು ಪ್ರತಿತಿಂಗಳೂ ಸಂಭವಿಸಿವೆ. ಕೇವಲ ಏಳು ತಿಂಗಳಲ್ಲಿ ಮರಣ ಪ್ರಮಾಣ ಹೆಚ್ಚಾಗಿರುವುದು ಅಸಾಮಾನ್ಯ ಸಂಗತಿ. ಜೂನ್ ತಿಂಗಳಲ್ಲಿ ಸಂಭವಿಸಿದ ಸಾವು ಜುಲೈನಲ್ಲಿ ವರದಿ ನೀಡಲಾಗುತ್ತದೆ. ಜುಲೈ ವರದಿ ಆಗಸ್ಟ್‌ನಲ್ಲಿ ಬರಬೇಕಾಗಿದೆ. ಇದರಲ್ಲಿ ಕೋವಿಡ್ ಮತ್ತು ಇತರ ಆರೋಗ್ಯ ಸಮಸ್ಯೆಗಳಿಂದಾಗಿ ಮೃತಪಟ್ಟವರೇ ಹೆಚ್ಚು ಎಂಬುದು ಆರೋಗ್ಯ ತಜ್ಞರ ವಿಶ್ಲೇಷಣೆ.

ಮರಣ ಪ್ರಮಾಣದ ಸರಾಸರಿ: ದೇಶದಲ್ಲಿ ಮರಣ ಪ್ರಮಾಣದ ರಾಷ್ಟ್ರೀಯ ಸರಾಸರಿ 1,000 ಜನಸಂಖ್ಯೆಗೆ 7 ಮಂದಿ. ಅಂದರೆ, 10 ಸಾವಿರ ಜನಕ್ಕೆ 70 ಮಂದಿಯ ಸಾವು ಸಹಜ ಪ್ರಮಾಣ. ಅದನ್ನು ಮೀರಿ ಹೆಚ್ಚು ಸಾವುಗಳು ಸಂಭವಿಸಿದರೆ ಅಸಹಜ ಎನ್ನಬಹುದು. 2021 ರಲ್ಲಿ ಮರಣ ಈ ಅಸಹಜತೆ ಕಾಣಬಹುದು. 2021 ರಲ್ಲಿ ಏಳು ತಿಂಗಳಲ್ಲಿ ಸಂಭವಿಸಿದ 4.26 ಲಕ್ಷ ಸಾವು ಇದಕ್ಕೆ ನಿದರ್ಶನ. ರಾಷ್ಟ್ರೀಯ ಸರಾಸರಿ ಪ್ರಮಾಣ ತೆಗೆದುಕೊಂಡಿದ್ದರೆ ಅದು 2.20 ಲಕ್ಷ ಇರಬೇಕಿತ್ತು ಎನ್ನುತ್ತಾರೆ ತಜ್ಞರು.

2021 ರ ಸಾವಿನ ಪ್ರಮಾಣ

ಜನವರಿ	50,319
ಫೆಬ್ರುವರಿ	45,884
ಮಾರ್ಚ್	45,987
ಏಪ್ರಿಲ್	42,337
ಮೇ	77,221
ಜೂನ್	99,665
ಜುಲೈ	65,530
ಒಟ್ಟು	4,26,943

ದ.ಕ: ಸೆ.15ರ ವರೆಗೆ ಪದವಿ, ಸ್ನಾತಕೋತ್ತರ ಪದವಿ ತರಗತಿ ಇಲ್ಲ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೋವಿಡ್–19 ಪಾಸಿಟಿವಿಟಿ ದರ ಶೇ 2.4 ರಷ್ಟಿದ್ದು, ಸೆ. 15ರವರೆಗೂ ಸ್ನಾತಕ ಮತ್ತು ಸ್ನಾತಕೋತ್ತರ ಕಾಲೇಜುಗಳ ಭೌತಿಕ ತರಗತಿ ಆರಂಭಿಸಬಾರದು ಎಂದು ಜಿಲ್ಲಾಧಿಕಾರಿ ಡಾ. ರಾಜೇಂದ್ರ ಕೆ.ವಿ. ನಿರ್ದೇಶನ ನೀಡಿದರು. ಸೆ.15ರೊಳಗೆ ಪಾಸಿಟಿವಿಟಿ ದರ ಕಡಿಮೆಯಾದಲ್ಲಿ ಮತ್ತೊಮ್ಮೆ ಸಂಬಂಧಪಟ್ಟ ಕಾಲೇಜು ಶಿಕ್ಷಣ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಭೌತಿಕ ತರಗತಿ ಪ್ರಾರಂಭಿಸಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದರು. ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ತರಗತಿಗಳನ್ನು ಬ್ಯಾಚ್‌ಗಳ ಮೂಲಕ ಕೋವಿಡ್ ಮಾರ್ಗಸೂಚಿಯ ಅನುಸಾರವೇ ನಡೆಸಬೇಕು. ವಿಜ್ಞಾನ ವಿದ್ಯಾರ್ಥಿಗಳನ್ನು ಹೊರತುಪಡಿಸಿ ಇನ್ನುಳಿದ ವಿಭಾಗಗಳ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕವೇ ತರಗತಿಗಳನ್ನು ನಡೆಸುವಂತೆ ಸೂಚನೆ ನೀಡಿದರು.

1ರಿಂದ 8ನೇ ತರಗತಿಗೆ ಭೌತಿಕ ತರಗತಿ: ಆ.30ರಂದು ಸಭೆ

ಬೆಳಗಾವಿ/ ಕಿತ್ತೂರು: ‘ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನೇತೃತ್ವದಲ್ಲಿ ಕಾರ್ಯಪಡೆ ಸಭೆಯು ಆ.30ರಂದು ನಡೆಯಲಿದ್ದು, 1ರಿಂದ 8ನೇ ತರಗತಿ ಮಕ್ಕಳಿಗೆ ಭೌತಿಕ ತರಗತಿಗಳನ್ನು ಆರಂಭಿಸಬೇಕೋ ಬೇಡವೋ ಎಂಬ ಬಗ್ಗೆ ಚರ್ಚಿಸಿ ನಿರ್ಧರಿಸಲಾಗುವುದು’ ಎಂದು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದರು. ಇಲ್ಲಿ ಪತ್ರಕರ್ತರೊಂದಿಗೆ ಗುರುವಾರ ಮಾತನಾಡಿದ ಅವರು, ‘ಆ.23ರಿಂದ 9ರಿಂದ 12ನೇ ತರಗತಿಗಳನ್ನು ಆರಂಭಿಸಲಾಗಿದೆ. ಶಿಕ್ಷಕರು, ಪೋಷಕರು, ಶಿಕ್ಷಣ ತಜ್ಞರಿಂದ ಉತ್ತಮ ಅಭಿಪ್ರಾಯ ವ್ಯಕ್ತವಾಗಿದೆ. ಈ ಭೌತಿಕ ತರಗತಿಗಳ ಸಾಧಕ–ಬಾಧಕಗಳನ್ನು ಆಧರಿಸಿ 1ರಿಂದ 8ನೇ ತರಗತಿ ಆರಂಭಿಸುವ ಬಗ್ಗೆ ಪರಿಶೀಲಿಸಲಾಗುವುದು’ ಎಂದು ಹೇಳಿದರು. ‘ಪ್ರಾಥಮಿಕ ಹಂತದಿಂದಲೇ ಶಾಲೆಗಳನ್ನು ಆರಂಭಿಸಲು ಡಾ.ದೇವಿಶೆಟ್ಟಿ ನೇತೃತ್ವದ ತಜ್ಞರ ಸಮಿತಿ ಕೂಡ ಸಲಹೆ ನೀಡಿದೆ. ಆದರೆ, ತಾಂತ್ರಿಕ ಸಮಿತಿಯ ವರದಿ ಆಧರಿಸಿ ನಿರ್ಣಯ ಕೈಗೊಳ್ಳಲಾಗುವುದು. ಕೋವಿಡ್ 3ನೇ ಅಲೆ ವ್ಯಾಪಿಸಿದರೆ ಶಾಲೆಗಳನ್ನು ಬಂದ್ ಮಾಡುವ ನಿರ್ಧಾರ ತೆಗೆದುಕೊಳ್ಳಲಾಗುವುದು’ ಎಂದು ಪ್ರತಿಕ್ರಿಯಿಸಿದರು. ‘ಹೆಚ್ಚಿನ ಶಿಕ್ಷಕರಿಗೆ ಅನುಕೂಲ ಆಗುವಂತೆ ವರ್ಗಾವಣೆ ಪ್ರಕ್ರಿಯೆ ನಡೆಸಲಾಗುವುದು. ಸೆ. 5ರಿಂದ ಕೌನ್ಸೆಲಿಂಗ್ ಆರಂಭವಾಗಲಿದೆ’ ಎಂದರು.

ನಕಲಿ ಆರ್‌ಟಿಪಿಸಿಆರ್ ನೆಗೆಟಿವ್ ವರದಿ ಪತ್ತೆ: ಏಳು ಜನರ ಬಂಧನ

ಮಂಗಳೂರು: ಕೇರಳದಿಂದ ದಕ್ಷಿಣ ಕನ್ನಡ ಜಿಲ್ಲೆಗೆ ಪ್ರವೇಶಿಸಲು ನಕಲಿ ಆರ್‌ಟಿಪಿಸಿಆರ್ ನೆಗೆಟಿವ್ ವರದಿ ತಂದಿದ್ದ 4 ಪ್ರತ್ಯೇಕ ಪ್ರಕರಣಗಳನ್ನು ಪತ್ತೆ ಮಾಡಲಾಗಿದ್ದು, 7 ಮಂದಿಯನ್ನು ಬಂಧಿಸಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ತಿಳಿಸಿದ್ದಾರೆ.

ಬುಧವಾರ ನಾಲ್ವರನ್ನು ಬಂಧಿಸಲಾಗಿದ್ದು, ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ. ಗುರುವಾರ ಮತ್ತಿಬ್ಬರನ್ನು ಬಂಧಿಸಲಾಗಿದೆ. ಇದರ ಜೊತೆಗೆ ನಕಲಿ ದಾಖಲೆ ಸೃಷ್ಟಿಸಿ ಕೊಟ್ಟಿದ್ದ ಆರೋಪಿಯನ್ನೂ ಬಂಧಿಸಲಾಗಿದೆ.

‘ಇದಲ್ಲದೇ ಮೂವರು ಮಹಿಳೆಯರೂ ನಕಲಿ ಆರ್‌ಟಿಪಿಸಿಆರ್ ವರದಿಯೊಂದಿಗೆ ತಲಪಾಡಿಗೆ ಬಂದಿದ್ದರು. ತಮ್ಮ ಬಳಿ ಇರುವ ವರದಿಯು ನಕಲಿ ಎಂಬುದರ ಅರಿವು ಇಲ್ಲದೇ, ತಮ್ಮ ಕುಟುಂಬದ ಜತೆ ಬಂದಿದ್ದ ಕಾರಣ, ಪ್ರಕರಣ ದಾಖಲಿಸಿ, ಮರು ವಿಚಾರಣೆಗೆ ಹಾಜರಾಗುವಂತೆ ಹೇಳಿ ಅವರನ್ನು ಕಳುಹಿಸಲಾಗಿದೆ’ ಎಂದು ಹೇಳಿದರು.

‘ಬಂಧಿತರಲ್ಲಿ ಇಬ್ಬರು ವಿದ್ಯಾಭ್ಯಾಸಕ್ಕೆ ಬಂದಿರುವುದಾಗಿ ಹೇಳಿಕೊಂಡಿದ್ದಾರೆ. ಆದರೆ ಅವರಿಬ್ಬರೂ ಇಲ್ಲಿ ಕೆಲಸ ಮಾಡುತ್ತಿದ್ದು, ಅದಕ್ಕಾಗಿಯೇ ನಕಲಿ ಆರ್‌ಟಿಪಿಸಿಆರ್ ವರದಿ ತಂದಿದ್ದರು. ಈ ನಾಲ್ಕು ಪ್ರಕರಣಗಳಲ್ಲಿ ಒಟ್ಟು 9 ನಕಲಿ ಆರ್‌ಟಿಪಿಸಿಆರ್ ವರದಿಗಳನ್ನು ಪತ್ತೆ ಹಚ್ಚಲಾಗಿದೆ’ ಎಂದು ಮಾಹಿತಿ ನೀಡಿದರು.

ಬಂಧಿತರು ನೀಡಿರುವ ಆರ್‌ಟಿಪಿಸಿಆರ್ ವರದಿಗಳ ಕ್ಯೂರ್ ಕೋಡ್ ಸ್ಕ್ಯಾನ್ ಮಾಡಿದಾಗ ಅದು ತಾಳೆ ಆಗದಿರುವುದು, ದಿನಾಂಕದಲ್ಲಿ ವ್ಯತ್ಯಾಸಗಳು ಕಂಡುಬಂದಿವೆ. ತಾಂತ್ರಿಕ ಅಂಶಗಳ ಆಧಾರದಲ್ಲಿ ಈ ವರದಿಗಳು ನಕಲಿ ಎಂಬುದನ್ನು ಕಂದಾಯ, ಆರೋಗ್ಯ ಇಲಾಖೆಯ ಅಧಿಕಾರಿಗಳು ದೃಢಪಡಿಸಿದ್ದಾರೆ. ಸಾಂಕ್ರಾಮಿಕ ರೋಗ ನಿಯಂತ್ರಣ ಕಾಯ್ದೆ ಹಾಗೂ ನಕಲಿ ದಾಖಲೆ ಸೃಷ್ಟಿ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ ಎಂದು ಹೇಳಿದರು.

ಜಿಲ್ಲಾ ಪೊಲೀಸ್ ವ್ಯಾಪ್ತಿ ಹಾಗೂ ನಗರ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯ ಗಡಿ ಭಾಗದಲ್ಲಿ 17 ಚೆಕ್‌ಪೋಸ್ಟ್‌ಗಳಲ್ಲಿ ತಪಾಸಣೆ ನಡೆಸಲಾಗುತ್ತಿದೆ ಎಂದರು.

ಚಿಕಿತ್ಸೆ ಪಡೆಯುತ್ತಿರುವ ಸೋಂಕಿತರು

ಕೇರಳದ ಮಲಪ್ಪುರಂ ಜಿಲ್ಲೆಯ ಮಂಜೇರಿಯ ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಕೊರೊನಾ ವೈರಸ್ ಸೋಂಕಿತರು ಚಿಕಿತ್ಸೆಗೆ ದಾಖಲಾಗಿರುವುದು – ಚಿತ್ರ ರಾಯಿಟರ್ಸ್

ವಿಡಿಯೊ ಮಾಡಿದ ಆರೋಪಿಗಳು?

ಒಂದನೇ ಪುಟದಿಂದ

ಡಿಎನ್‌ಎ ಮಾದರಿಗಳ ಸಂಗ್ರಹ ಕಾರ್ಯವೂ ನಡೆದಿದೆ.ಘಟನೆ ನಡೆದ ಸ್ಥಳದ ಟವರ್ ಸಂಪರ್ಕಕ್ಕೆ ಬಂದಿದ್ದ ಮೊಬೈಲ್ ಫೋನ್ ಸಂಖ್ಯೆಗಳನ್ನು ಪೊಲೀಸರು ಜಾಲಾಡುತ್ತಿದ್ದು, ಸ್ಥಳದ ಸಮೀಪದ ನಾಲ್ಕು ರಸ್ತೆಗಳಲ್ಲಿರುವ ಸಿಸಿಟಿವಿ ಕ್ಯಾಮರಾಗಳ ದೃಶ್ಯಾವಳಿಗಳನ್ನೂ ಪರಿಶೀಲಿಸುತ್ತಿದ್ದಾರೆ. ಅವುಗಳನ್ನು ಆಧರಿಸಿಯೇ ಐದಕ್ಕೂ ಹೆಚ್ಚು ಮಂದಿಯ ವಿಚಾರಣೆ ನಡೆಸಿದ್ದಾರೆ. ಸಂತ್ರಸ್ತೆ ಹಾಗೂ ಆಕೆಯ ಸ್ನೇಹಿತ ಖಾಸಗಿ ಆಸ್ಪತ್ರೆಯಲ್ಲೇ ಚಿಕಿತ್ಸೆ ಪಡೆಯುತ್ತಿದ್ದು, ಆರೋಗ್ಯ ಸ್ಥಿರವಾಗಿದೆ ಎಂದು ಪೊಲೀಸರು ತಿಳಿಸಿದರು.

ಘಟನೆಯ ಸ್ಥಳದಲ್ಲಿ ಹಾಗೂ ಹತ್ತಿರದ ಖಾಲಿ ನಿವೇಶನಗಳಲ್ಲಿ ಮದ್ಯ ಹಾಗೂ ನೀರಿನ ಬಾಟಲಿಗಳು ಪತ್ತೆಯಾಗಿವೆ. ‘ಇಡೀ ಪ್ರದೇಶದಲ್ಲಿ ಸಂಜೆಯ ನಂತರ ಅನೈತಿಕ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಿವೆ’ ಎಂದು ಸ್ಥಳೀಯರೊಬ್ಬರು ಮಾಹಿತಿ ನೀಡಿದರು.

ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಪ್ರಮೀಳಾ ನಾಯ್ಡು ಸಂತ್ರಸ್ತೆಯ ಯೋಗಕ್ಷೇಮ ವಿಚಾರಿಸಿದರು.

ಇಂದು ಸಭೆ: ಆ. 27ರಂದು ಬೆಳಿಗ್ಗೆ 11ಕ್ಕೆ ನಗರ ಪೊಲೀಸ್ ಕಮಿಷನರ್ ಕಚೇರಿಯಲ್ಲಿ ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಹಿರಿಯ ಪೊಲೀಸ್ ಅಧಿಕಾರಿಗಳ ಸಭೆ ಕರೆದಿದ್ದಾರೆ.

ತೀವ್ರಗೊಂಡ ಆಕ್ರೋಶ

ಅತ್ಯಾಚಾರ ಘಟನೆಯನ್ನು ಖಂಡಿಸಿ ನಗರದಲ್ಲಿ ಗುರುವಾರ ವಿವಿಧ ಸಂಘಟನೆಗಳ ಕಾರ್ಯಕರ್ತರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಅಖಿಲ ಭಾರತ ಸಾಂಸ್ಕೃತಿಕ ಮಹಿಳಾ ಸಂಘಟನೆ, ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಜೇಶನ್, ಆಲ್ ಇಂಡಿಯಾ ಡೆಮಾಕ್ರಟಿಕ್ ಯೂತ್ ಆರ್ಗನೈಜೇಷನ್, ಮಹಿಳಾ ರಕ್ಷಣಾಪಡೆ, ಮಹಿಳಾ ಕಾಂಗ್ರೆಸ್, ಗಂಧದಗುಡಿ ಫೌಂಡೇಷನ್, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

‘ನಿರ್ಜನ ಪ್ರದೇಶಕ್ಕೆ ರಾತ್ರಿ ಹೋಗಬಾರದಿತ್ತು’

ಒಂದನೇ ಪುಟದಿಂದ

‘ಸಂತ್ರಸ್ತ ಯುವತಿ ನನ್ನ ಮಗಳು ಇದ್ದಂತೆ. ನಾನು ಆತಂಕದಿಂದ ಆ ಮಾತನ್ನು ಹೇಳಿದ್ದೇನೆಯೇ ಹೊರತು ಬೇರೆ ಯಾವುದೇ ಉದ್ದೇಶವಿಲ್ಲ. ಆ ಮಾತನ್ನು ಹಿಂತೆಗೆದುಕೊಳ್ಳುತ್ತೇನೆ. ಈ ಬಗ್ಗೆ ವಿಷಾದ ವ್ಯಕ್ತಪಡಿಸುತ್ತೇನೆ’ ಎಂದರು.

ಕಾಂಗ್ರೆಸ್‌ನವರಿಂದ ನನ್ನ ಮೇಲೆ ರೇಪ್: ‘ಸಚಿವ ಸ್ಥಾನಕ್ಕೆ ಆರಗ ಅವರು ರಾಜೀನಾಮೆ ನೀಡಬೇಕು’ ಎಂಬ ಕಾಂಗ್ರೆಸ್ ಆಗ್ರಹಕ್ಕೆ ಪ್ರತಿಕ್ರಿಯಿಸಿದ ಸಚಿವರು, ‘ರೇಪ್ ಆಗಿರುವುದು ಮೈಸೂರಿನಲ್ಲಿ. ಆದರೆ, ಕಾಂಗ್ರೆಸ್‌ನವರು ನನ್ನ ರೇಪ್ ಮಾಡೋ ಪ್ರಯತ್ನ ಮಾಡಿದ್ದಾರೆ. ಕಾಂಗ್ರೆಸ್ ಅವಧಿಯಲ್ಲಿ ಇಂತಹ ಘಟನೆಗಳು ನಡೆದಿರಲಿಲ್ಲವೇ’ ಎಂದು ಪ್ರಶ್ನಿಸಿದರು.

> **ಕಾಡು–ಗುಡ್ಡ ಪ್ರದೇಶಗಳಿಗೆ ಜೋಡಿಗಳು ಭೇಟಿ ಕೊಡಬಾರದು. ಈ ರೀತಿಯ ಸಾಕಷ್ಟು ಘಟನೆಗಳು ಬೆಳಕಿಗೆ ಬರುವುದಿಲ್ಲ. ಕೆಲವು ಗುಂಪುಗಳು ಈ ರೀತಿ ಬರುವವರ ಮೇಲೆ ಅನಾಹುತ ಎಸಗಿ, ಬ್ಲ್ಯಾಕ್ ಮೇಲ್, ಹಣ ವಸೂಲಿ ಮಾಡುತ್ತಾರೆ**
>
> **ಆನಂದ್ ಸಿಂಗ್,** ಪ್ರವಾಸೋದ್ಯಮ ಸಚಿವ

‘ಅತ್ಯಾಚಾರ ಪ್ರಕರಣ ದಾಖಲಿಸಿ’

ಬೆಂಗಳೂರು: ಕಾಂಗ್ರೆಸ್ ನಾಯಕರು ತಮ್ಮ ಮೇಲೆ ಅತ್ಯಾಚಾರ ನಡೆಸುತ್ತಿದ್ದಾರೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಆರೋಪಿಸಿದ್ದಾರೆ. ಅದು ನಿಜವೇ ಆಗಿದ್ದಲ್ಲಿ ದೌರ್ಜನ್ಯ ಎಸಗಿದವರ ವಿರುದ್ಧ ಪ್ರಕರಣ ದಾಖಲಿಸಬೇಕು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಗ್ರಹಿಸಿದರು.

ಕ್ವೀನ್ಸ್ ರಸ್ತೆಯಲ್ಲಿರುವ ಕೆಪಿಸಿಸಿ ಕಚೇರಿಯಲ್ಲಿ ಗುರುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಮೈಸೂರಿನಲ್ಲಿ ವಿದ್ಯಾರ್ಥಿನಿ ಮೇಲೆ ಸಾಮೂಹಿಕ ಅತ್ಯಾಚಾರ ನಡೆದ 48 ಗಂಟೆಗಳ ಬಳಿಕವೂ ಎಫ್‌ಐಆರ್ ದಾಖಲಿಸದೇ ಇರುವುದು ನಾಚಿಕೆಗೇಡಿನ ವಿಚಾರ. ಆದರೆ, ಕಾಂಗ್ರೆಸ್‌ನವರು ನನ್ನ ಮೇಲೆ ಅತ್ಯಾಚಾರ ನಡೆಸುತ್ತಿದ್ದಾರೆ ಎಂದು ಗೃಹ ಸಚಿವರು ಆರೋಪ ಮಾಡುತ್ತಿದ್ದಾರೆ. ಗೃಹ ಸಚಿವರ ಹೇಳಿಕೆ ಈ ಸರ್ಕಾರದ ಕಾರ್ಯವೈಖರಿಗೆ ಸಾಕ್ಷಿ ಒದಗಿಸುತ್ತಿದೆ’ ಎಂದರು.

ಕರ್ನಾಟಕದ ನಾಗರತ್ನ ‘ಸುಪ್ರೀಂ’ ನ್ಯಾಯಮೂರ್ತಿ

ಒಂದನೇ ಪುಟದಿಂದ

ಎರಡನೇ ತಲೆಮಾರಿನವರು ಕೂಡ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಹುದ್ದೆ ವಹಿಸಿಕೊಳ್ಳುವ ಎರಡನೇ ನಿದರ್ಶನ ಇದು ಎನಿಸಿಕೊಳ್ಳಲಿದೆ. ಸುಪ್ರೀಂ ಕೋರ್ಟ್‌ನಲ್ಲಿ ಈಗ ನ್ಯಾಯಮೂರ್ತಿ ಆಗಿರುವ ಡಿ.ವೈ. ಚಂದ್ರಚೂಡ ಅವರು 2022ರ ನವೆಂಬರ್‌ನಲ್ಲಿ ಮುಖ್ಯ ನ್ಯಾಯಮೂರ್ತಿ ಹುದ್ದೆಗೆ ಏರಲಿದ್ದಾರೆ. ಅವರ ತಂದೆ ವೈ.ವಿ. ಚಂದ್ರಚೂಡ ಅವರು 1978ರಿಂದ 1985ರ ಅವಧಿಯಲ್ಲಿ ಮುಖ್ಯ ನ್ಯಾಯಮೂರ್ತಿ ಆಗಿದ್ದರು.

ಹಿರಿಯ ವಕೀಲ ಮತ್ತು ಮಾಜಿ ಹೆಚ್ಚುವರಿ ಸಾಲಿಸಿಟರ್ ಜನರಲ್ ಪಿ.ಎಸ್. ನರಸಿಂಹ ಅವರನ್ನು ನ್ಯಾಯಮೂರ್ತಿಯಾಗಿ ನೇಮಕ ಮಾಡಲಾಗಿದೆ. ವಕೀಲ ವೃಂದದಿಂದ ನೇರವಾಗಿ ನೇಮಕವಾದ ಒಂಬತ್ತನೇ ವ್ಯಕ್ತಿ ಇವರು ಎನಿಸಿಕೊಂಡಿದ್ದಾರೆ.

ತೆಲಂಗಾಣ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಹಿಮಾ ಕೊಹ್ಲಿ, ಗುಜರಾತ್ ಹೈಕೋರ್ಟ್ ನ್ಯಾಯಮೂರ್ತಿ ಬೆಲಾ ತ್ರಿವೇದಿ ಈ ಬಾರಿ ನೇಮಕ ಆಗಿರುವ ಇನ್ನಿಬ್ಬರು ಮಹಿಳೆಯರು. ಸುಪ್ರೀಂ ಕೋರ್ಟ್‌ಗೆ ನೇಮಕವಾಗಿರುವ ಇತರರೆಂದರೆ, ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಅಭಯ್ ಕುಮಾರ್ ಓಕಾ, ಸಿಕ್ಕಿಂ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಜೆ.ಕೆ. ಮಹೇಶ್ವರಿ, ಕೇರಳ ಹೈಕೋರ್ಟ್ ನ್ಯಾಯಮೂರ್ತಿ ಸಿ.ಟಿ.ರವಿಕುಮಾರ್, ಮದ್ರಾಸ್ ಹೈಕೋರ್ಟ್ ನ್ಯಾಯಮೂರ್ತಿ ಎಂ.ಎಂ. ಸುಂದರೇಶ್.

ಒಂದು ಹುದ್ದೆ ಖಾಲಿ

ಸುಪ್ರೀಂ ಕೋರ್ಟ್‌ಗೆ ಮಂಜೂರಾಗಿರುವ ನ್ಯಾಯಮೂರ್ತಿ ಹುದ್ದೆಗಳು 34. ಈಗ ಇರುವ ಮಹಿಳಾ ನ್ಯಾಯಮೂರ್ತಿಯೆಂದರೆ ಇಂದಿರಾ ಬ್ಯಾನರ್ಜಿ ಮಾತ್ರ. ಅವರು 2022ರ ಸೆಪ್ಟೆಂಬರ್‌ನಲ್ಲಿ ನಿವೃತ್ತರಾಗಲಿದ್ದಾರೆ. ಒಂಬತ್ತು ನ್ಯಾಯಮೂರ್ತಿಗಳ ನೇಮಕದೊಂದಿಗೆ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳ ಸಂಖ್ಯೆಯು 33ಕ್ಕೆ ಏರುತ್ತದೆ. ಒಂದು ಹುದ್ದೆ ಮಾತ್ರ ಖಾಲಿ ಉಳಿಯುತ್ತದೆ. ಒಮ್ಮೆಗೆ ಮೂವರು ಮಹಿಳಾ ನ್ಯಾಯಮೂರ್ತಿಗಳ ನೇಮಕವೂ ವಿಶೇಷವಾಗಿದೆ.

ಒಟ್ಟು ಪ್ರಕರಣಗಳಲ್ಲಿ ಶೇ 58.2ರಷ್ಟು ಕೇರಳದಲ್ಲಿ ದಾಖಲು

ಕೋವಿಡ್: ಇನ್ನೂ 2 ತಿಂಗಳು ನಿರ್ಣಾಯಕ

ನವದೆಹಲಿ (ಪಿಟಿಐ): ಕೋವಿಡ್ ಪರಿಸ್ಥಿತಿ ನಿರ್ವಹಣೆಯ ಹಿನ್ನೆಲೆಯಲ್ಲಿ ಸೆಪ್ಟೆಂಬರ್, ಅಕ್ಟೋಬರ್ ತಿಂಗಳು ನಿರ್ಣಾಯಕವಾಗಿದ್ದು, ಹಬ್ಬಗಳನ್ನು ಮಾರ್ಗಸೂಚಿಗೆ ಅನುಗುಣವಾಗಿ ಎಚ್ಚರಿಕೆಯಿಂದ ಆಚರಿಸಬೇಕು ಎಂದು ಕೇಂದ್ರ ಸರ್ಕಾರ ಹೇಳಿದೆ.

ಸುದ್ದಿಗೋಷ್ಠಿಯಲ್ಲಿ ಈ ಮಾತು ಹೇಳಿದ ಕೇಂದ್ರ ಆರೋಗ್ಯ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಭೂಷಣ್, ದೇಶವು ಇನ್ನೂ ಕೋವಿಡ್ ಎರಡನೇ ಅಲೆಯಿಂದ ಸಂಪೂರ್ಣವಾಗಿ ಹೊರಬಂದಿಲ್ಲ ಎಂದು ಸ್ಪಷ್ಟಪಡಿಸಿದರು.

ಐಸಿಎಂಆರ್‌ನ ಪ್ರಧಾನ ನಿರ್ದೇಶಕ ಬಲರಾಂ ಭಾರ್ಗವ ಅವರು, ‘ಲಸಿಕೆಗಳು ರೋಗಗಳನ್ನು ತಡೆಯುವುದಿಲ್ಲ. ಅವುಗಳನ್ನು ಪರಿವರ್ತಿಸುತ್ತವೆ. ಹೀಗಾಗಿ, ಲಸಿಕೆ ಪಡೆದ ನಂತರವೂ ಮಾಸ್ಕ್ ಧರಿಸುವುದು ಉತ್ತಮ’ ಎಂದು ಅಭಿಪ್ರಾಯಪಟ್ಟರು. ರಾಜೇಶ್ ಭೂಷಣ್ ಅವರು, ‘ಕೋವಿಡ್ ಪ್ರಕರಣಗಳ ಏರುಗತಿ ಇನ್ನೂ ಕಡಿಮೆ ಆಗಿಲ್ಲ. ಎರಡನೇ ಅಲೆ ಇನ್ನೂ ಉಳಿದಿದೆ. ನಾವು ಅಗತ್ಯ ಮುನ್ನೆಚ್ಚರಿಕೆಯನ್ನು ಪಾಲಿಸಲೇಬೇಕು. ಮುಖ್ಯವಾಗಿ ಹಬ್ಬಗಳ ಆಚರಣೆಯ ಸಂದರ್ಭದಲ್ಲಿ, ನಂತರ ಸೋಂಕು ಪ್ರಮಾಣ ಏರಿಕೆಯಾಗಲಿದೆ ಎಂಬ ಹಿನ್ನೆಲೆಯಲ್ಲಿ ಹೆಚ್ಚಿನ ಜಾಗ್ರತೆ ವಹಿಸುವುದು ಅಗತ್ಯ’ ಎಂದು ಪ್ರತಿಪಾದಿಸಿದರು.

ಈ ದೃಷ್ಟಿಯಿಂದ ಮುಂಬರುವ ಸೆಪ್ಟೆಂಬರ್, ಅಕ್ಟೋಬರ್ ತಿಂಗಳು ನಿರ್ಣಾಯಕವಾಗಿದೆ. ಈ ತಿಂಗಳುಗಳಲ್ಲಿ ಕೆಲವು ಹಬ್ಬಗಳು ಬರುತ್ತವೆ. ಕೋವಿಡ್ ಎಚ್ಚರಿಕೆಯನ್ನು ಗಮನದಲ್ಲಿಟ್ಟುಕೊಂಡೇ ಇವುಗಳನ್ನು ಆಚರಿಸಬೇಕು ಎಂದು ಸಲಹೆ ಮಾಡಿದರು.

ದೇಶದಲ್ಲಿ ಒಟ್ಟು 41 ಜಿಲ್ಲೆಗಳಲ್ಲಿ ಕೋವಿಡ್‌ನ ವಾರದ ಸೋಂಕು ದೃಢೀಕರಣ ಪ್ರಮಾಣ ಶೇ 10ಕ್ಕೂ ಹೆಚ್ಚಿದೆ ಎಂದು ಅವರು ತಿಳಿಸಿದರು.

ಕೇರಳ: ಕೊರೊನಾ ಪ್ರಕರಣ ಹೆಚ್ಚಳ

24 ಗಂಟೆಗಳಲ್ಲಿ ದೇಶದಲ್ಲಿ 46,164 ಹೊಸ ಕೋವಿಡ್ ಪ್ರಕರಣಗಳು ದೃಢಪಟ್ಟಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 3,33,725 ಕ್ಕೆ ಏರಿದೆ ಕೇಂದ್ರ ಆರೋಗ್ಯ ಇಲಾಖೆಯ ಪ್ರಕಟಣೆ ತಿಳಿಸಿದೆ. ಇದೇ ಅವಧಿಯಲ್ಲಿ ದೇಶದಾದ್ಯಂತ 607 ಮಂದಿ ಮೃತಪಟ್ಟಿದ್ದಾರೆ.

ಕೇರಳ ರಾಜ್ಯ ಒಂದರಲ್ಲೇ 31,445 ಹೊಸ ಪ್ರಕರಣ ಮತ್ತು 215 ಸಾವು ಸಂಭವಿಸಿರುವುದು ದೇಶದ ದೈನಂದಿನ ಕೋವಿಡ್ ಸಂಖ್ಯೆ ಹೆಚ್ಚಳಕ್ಕೆ ಕಾರಣವಾಗಿದೆ.

ಸರ್ಕಾರದ ಅಂಕಿ ಅಂಶಗಳ ಪ್ರಕಾರ, ಕಳೆದ ವಾರ ದೇಶದಲ್ಲಿ ದಾಖಲಾದ ಒಟ್ಟು ಕೋವಿಡ್ ಪ್ರಕರಣಗಳಲ್ಲಿ ಶೇ 58.4ರಷ್ಟು ಪ್ರಕರಣಗಳು ಕೇರಳ ರಾಜ್ಯದಲ್ಲಿಯೇ ವರದಿಯಾಗಿವೆ.

ಕೇರಳದಲ್ಲಿ ಸದ್ಯ 1 ಲಕ್ಷಕ್ಕೂ ಹೆಚ್ಚು ಕೋವಿಡ್ ಸಕ್ರಿಯ ಪ್ರಕರಣಗಳಿವೆ. ಉಳಿದಂತೆ ನಾಲ್ಕು ರಾಜ್ಯಗಳಲ್ಲಿ 10 ಸಾವಿರದಿಂದ 1 ಲಕ್ಷ ಪ್ರಕರಣಗಳಿದ್ದರೆ, 31 ರಾಜ್ಯಗಳಲ್ಲಿ 10 ಸಾವಿರಕ್ಕೂ ಕಡಿಮೆ ಸಕ್ರಿಯ ಪ್ರಕರಣಗಳಿವೆ.

ಮನೆಗಳಲ್ಲಿ ಕೋವಿಡ್ -19 ಹರಡದಂತೆ ಎಚ್ಚರ ವಹಿಸಿ

ತಿರುವನಂತಪುರ(ಪಿಟಿಐ): ಕೋವಿಡ್ -19 ಸೋಂಕು ಮನೆಗಳ ಒಳಾಂಗಣದಲ್ಲೂ ಪಸರಿಸದಂತೆ ಎಚ್ಚರ ವಹಿಸುವಂತೆ ಮತ್ತು ರೋಗವನ್ನು ದೂರವಿರಿಸಲು ಸರ್ಕಾರದ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಕೇರಳ ಆರೋಗ್ಯ ಸಚಿವೆ ವೀಣಾ ಜಾರ್ಜ್ ಗುರುವಾರ ಜನರನ್ನು ಒತ್ತಾಯಿಸಿದರು.

ಆರೋಗ್ಯ ಇಲಾಖೆಯ ಇತ್ತೀಚಿನ ಅಧ್ಯಯನ ಉಲ್ಲೇಖಿಸಿದ ಅವರು, ರಾಜ್ಯದ ಶೇ 35ರಷ್ಟು ಜನರು ಮನೆಯೊಳಗೇ ಈ ರೋಗಕ್ಕೆ ತುತ್ತಾಗಿರುವುದು ಪತ್ತೆಯಾಗಿದೆ. ಸದ್ಯದ ಪರಿಸ್ಥಿತಿಯು ಮನೆಯಲ್ಲಿ ಒಬ್ಬ ವ್ಯಕ್ತಿಗೆ ಸೋಂಕು ತಗುಲಿದಾಗ, ಇತರ ಸದಸ್ಯರಿಗೂ ರೋಗ ಹರಡುತ್ತದೆ ಎಂದು ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಹೋಮ್ ಕ್ವಾರಂಟೈನ್ ಮಾರ್ಗಸೂಚಿಗಳನ್ನು ಉಲ್ಲಂಘಿಸುತ್ತಿರುವುದು ಈ ಪರಿಸ್ಥಿತಿಗೆ ಕಾರಣವೆಂದು ದೂಷಣೆ ಮಾಡಿದ ಸಚಿವೆ, ಮನೆಗಳಲ್ಲಿ ಅಗತ್ಯ ಸೌಲಭ್ಯಗಳನ್ನು ಹೊಂದಿರುವವರು ಮಾತ್ರ ಹೋಂ ಕ್ವಾರಂಟೈನ್‌ಗೆ ಆದ್ಯತೆ ನೀಡಬೇಕು. ಉಳಿದವರು ವಸತಿ ಕೋವಿಡ್-ಕೇರ್ ಕೇಂದ್ರಗಳಿಗೆ (ಡಿಸಿಸಿ) ಹೋಗಬೇಕು. ಹೋಂಕ್ವಾರಂಟೈನ್‌ನಲ್ಲಿರುವವರು ತಮ್ಮ ಕೊಠಡಿಯಿಂದ ಹೊರ ಹೋಗಬಾರದು. ಒಳಾಂಗಣ ಪ್ರಸರಣದ ಅಪಾಯ ತಪ್ಪಿಸಲು ಮನೆಯ ಎಲ್ಲ ಸದಸ್ಯರು ಮಾಸ್ಕ್ ಧರಿಸಬೇಕು ಎಂದು ಹೇಳಿದರು.

ರೋಗದ ವಿರುದ್ಧ ಹೋರಾಡಲು ಜನರು ಅನುಸರಿಸಬೇಕಾದ ನಿರ್ದೇಶನಗಳ ಕೈಪಿಡಿಯನ್ನು ಸಚಿವೆ ಇದೇ ಸಂದರ್ಭ ಬಿಡುಗಡೆ ಮಾಡಿದರು.

ನ್ಯಾಯಮೂರ್ತಿ ಬಿ.ವಿ.ನಾಗರತ್ನಗೆ ಪದೋನ್ನತಿ, ತಂದೆಯ ನಂತರ ಮಗಳಿಗೆ ಗೌರವ

ಇಂಗಲಗುಪ್ಪೆ ಛತ್ರದಿಂದ ಸುಪ್ರೀಂ ಕೋರ್ಟ್‌ವರೆಗೆ

● ಎಂ.ಎನ್.ಯೋಗೇಶ್

ಮಂಡ್ಯ: ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ಪದೋನ್ನತಿ ಪಡೆದಿರುವ ನ್ಯಾಯಮೂರ್ತಿ ಬಿ.ವಿ. ನಾಗರತ್ನ ಅವರು ಪಾಂಡವಪುರ ತಾಲ್ಲೂಕು ಇಂಗಲಗುಪ್ಪೆ ಛತ್ರ ಗ್ರಾಮದವರು. ತಂದೆ ಇ.ಎಸ್. ವೆಂಕಟರಾಮಯ್ಯ ನಂತರ ಅವರು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗುತ್ತಿರುವುದು ವಿಶೇಷ.



ಬಿ.ವಿ.ನಾಗರತ್ನ

ಸುಪ್ರೀಂ ಕೋರ್ಟ್ ಕೊಲಿಜಿಯಂ ಶಿಫಾರಸು ಮಾಡಿದ್ದ 9 ನ್ಯಾಯಮೂರ್ತಿಗಳ ಪದೋನ್ನತಿಗೆ ಗುರುವಾರ ರಾಷ್ಟ್ರಪತಿ ರಾಮನಾಥ ಕೋವಿಂದ್ ಅನುಮೋದನೆ ನೀಡಿದ್ದಾರೆ. ಹಿರಿತನದ ಆಧಾರದ ಮೇಲೆ ಬಿ.ವಿ. ನಾಗರತ್ನ ಅವರು 2027ರ ವೇಳೆಗೆ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಲಿದ್ದಾರೆ. ಆ ಮೂಲಕ ದೇಶದ ಮೊದಲ ಮಹಿಳಾ ಮುಖ್ಯ ನ್ಯಾಯಮೂರ್ತಿ ಎಂಬ ಹಿರಿಮೆಯೂ ಅವರ ಮುಡಿಗೇರಲಿದೆ.

ನಾಗರತ್ನ ಅವರ ತಂದೆ ದಿ.ಇ.ಎಸ್. ವೆಂಕಟರಾಮಯ್ಯ ಅವರು 1989ರಲ್ಲಿ 6 ತಿಂಗಳು ದೇಶದ 19ನೇ ಮುಖ್ಯನ್ಯಾಯಮೂರ್ತಿಯಾಗಿ ಕರ್ತವ್ಯ ನಿರ್ವಹಿಸಿದ್ದರು. ಅವರು ಕರ್ನಾಟಕದಿಂದ ಆಯ್ಕೆಯಾಗಿದ್ದ ಮೊದಲ ಮುಖ್ಯನ್ಯಾಯಮೂರ್ತಿಯಾಗಿದ್ದರು. 2027ರ ವೇಳೆಗೆ ನಾಗರತ್ನ ಅವರು ಸಿಜೆಐ ಹುದ್ದೆಗೇರಿದರೆ ದೇಶದಲ್ಲಿ ಮೊದಲ ಬಾರಿಗೆ ತಂದೆ–ಮಗಳು ಮುಖ್ಯನ್ಯಾಯಮೂರ್ತಿಯಾದ ಇತಿಹಾಸವೂ ನಿರ್ಮಾಣವಾಗಲಿದೆ. 1962 ಅಕ್ಟೋಬರ್ 30ರಂದು ಜನಿಸಿದ ನಾಗರತ್ನ ಅವರು ಎಸ್‌ಎಸ್‌ಎಲ್‌ಸಿವರೆಗೂ ಬೆಂಗಳೂರಿನ ಸೋಫಿಯಾ ಶಾಲೆಯಲ್ಲಿ ಓದಿದ್ದರು. ತಂದೆ ಸುಪ್ರೀಂಕೋರ್ಟ್ ನ್ಯಾಯಮೂರ್ತಿಯಾಗಿ ದೆಹಲಿಗೆ ತೆರಳಿದ ನಂತರ ಮುಂದಿನ ಶಿಕ್ಷಣವನ್ನು ಅಲ್ಲಿಯೇ ಪೂರ್ಣಗೊಳಿಸಿದ್ದರು. 1987ರಲ್ಲಿ ದೆಹಲಿ ಕಾನೂನು ಕಾಲೇಜಿನಲ್ಲಿ ಪದವಿ ಪಡೆದು ಕರ್ನಾಟಕ ಹೈಕೋರ್ಟ್‌ನಲ್ಲಿ ವಕೀಲರಾಗಿ ವೃತ್ತಿ ಆರಂಭಿಸಿದ್ದರು.

2008ರಲ್ಲಿ ಕರ್ನಾಟಕ ಹೈಕೋರ್ಟ್ ಹೆಚ್ಚುವರಿ ನ್ಯಾಯಮೂರ್ತಿಯಾಗಿ ಆಯ್ಕೆಯಾಗಿ, 2010ರಿಂದ ಪೂರ್ಣಾವಧಿ ನ್ಯಾಯಮೂರ್ತಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು.



ಪಾಂಡವಪುರ ತಾಲ್ಲೂಕು ಇಂಗಲಗುಪ್ಪೆ ಛತ್ರ ಗ್ರಾಮದಲ್ಲಿರುವ ನ್ಯಾಯಮೂರ್ತಿ ಬಿ.ವಿ.ನಾಗರತ್ನ ಅವರ ಮನೆ

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು

ಎಂಜಿನಿಯರಿಂಗ್ ಪದವಿ ಹಾಗೂ ಉದ್ಯೋಗಾವಕಾಶಗಳು
ಭಾಗವಹಿಸುವವರು: ಬೆಂಗಳೂರಿನ ಅಮೃತಾ ಸ್ಕೂಲ್ ಆಫ್ ಎಂಜಿನಿಯರಿಂಗ್‌ನ ಪ್ರಾಧ್ಯಾಪಕಿ **ಡಾ. ರಶ್ಮಿ ಎಂ. ಆರ್.**
facebook LIVE ಇಂದು ಸಂಜೆ 4ಕ್ಕೆ

ಪಾಡ್‌ಕಾಸ್ಟ್:
ದಿನದ ವಿಶೇಷ: **ಸಿನಿ ಮ್ಯಾಟನಿ**
ಪ್ರತೀ ದಿನ: **ವಚನವಾಣಿ, ದಿನದ ಸೂಕ್ತಿ, ಪ್ರಜಾವಾಣಿ ವಾರ್ತೆ, ಸಂಪಾದಕೀಯ, ಪ್ರಚಲಿತ**
ಪ್ರಜಾವಾಣಿ ಕನ್ನಡ ಧ್ವನಿ

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ
ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು **‘Deccan Herald-Prajavani Relief Trust’** ಹೆಸರಿಗೆ ಕಳುಹಿಸಬಹುದು.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ
https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ
‘Deccan Herald-Prajavani Relief Trust’
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ: ದೇಣಿಗೆ ನೀಡುವವರು ಲಕೋಟೆ ಮೇಲೆ ‘ಶೈಕ್ಷಣಿಕ ನೆರವಿಗೆ ಕೊಡುಗೆ’ ಎಂದು ನಮೂದಿಸಲು ಮನವಿ.
ವಿಳಾಸ: ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ
2021ರ ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ ‘ಶೈಕ್ಷಣಿಕ ನೆರವಿಗೆ ಅರ್ಜಿ’ ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

ವಿದ್ಯಾರ್ಥಿಗಳ ಅನಿಸಿಕೆ

ಶುಲ್ಕ ಪಾವತಿಗೆ ನೆರವಾಯಿತು

ಸ್ಕಾಲರ್‌ಶಿಪ್ ಹಣದಿಂದ ಕಾಲೇಜಿನ ಪ್ರವೇಶ ಶುಲ್ಕ ಕಟ್ಟಿದೆ. ಆರ್ಥಿಕ ಕಷ್ಟದ ಸಂದರ್ಭದಲ್ಲಿ ‘ಪ್ರಜಾವಾಣಿ’ಯು ನನ್ನ ವಿದ್ಯಾಭ್ಯಾಸಕ್ಕೆ ನೆರವಾಗಿದೆ. ಅದರ ಋಣವನ್ನು ಎಂದಿಗೂ ಮರೆಯುವುದಿಲ್ಲ.
ನಂದಾದೇವಿ ಕಣವಿ, ಹುಬ್ಬಳ್ಳಿ

ದಾಖಲಾತಿಗೆ ಅನುಕೂಲ

ಸ್ಕಾಲರ್‌ಶಿಪ್ ಕೊಡುತ್ತೇವೆ ಎಂದು ಪತ್ರಿಕೆಯಲ್ಲಿ ಬಂದ ಮಾಹಿತಿ ನೋಡಿದೆ. ಪಿಯುಸಿಗೆ ದಾಖಲಾಗಲು ₹ 20 ಸಾವಿರ ಅಗತ್ಯವಿತ್ತು. ಪ್ರಜಾವಾಣಿಯು ನೀಡಿದ ಸ್ಕಾಲರ್‌ಶಿಪ್ ನನ್ನ ಕಾಲೇಜು ದಾಖಲಾತಿಗೆ ಅನುಕೂಲವಾಯಿತು. ಥ್ಯಾಂಕ್ಸ್ ಪ್ರಜಾವಾಣಿ
ತಂಜೀಲ್ ಅಹಮ್ಮದ್, ಹೊಸೂರು, ಗೌರಿಬಿದನೂರು

ನಿಧನ ವಾರ್ತೆ

ಗುಡಿಹಳ್ಳಿ ನಾಗರಾಜ

ಬೆಂಗಳೂರು: ಹಿರಿಯ ಪತ್ರಕರ್ತ, ರಂಗಕರ್ಮಿ ಗುಡಿಹಳ್ಳಿ ನಾಗರಾಜ್ (67) ಗೋವಿಂದರಾಜನಗರದ ಸ್ವಗೃಹದಲ್ಲಿ ನಿಧನರಾದರು. ಅವರು ಕೆಲಕಾಲದಿಂದ ಅನಾರೋಗ್ಯದಿಂದ ಬಳಲುತ್ತಿದ್ದರು.

ಅವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ.

ಬಳ್ಳಾರಿ ಜಿಲ್ಲೆ ಹರಪನಹಳ್ಳಿ, ತಾಲ್ಲೂಕು ಗುಡಿಹಳ್ಳಿಯವರಾದ ನಾಗರಾಜ್ ಅವರು, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಎಂ.ಎ.ಇಂಗ್ಲಿಷ್ ಪದವಿ ಪಡೆದು, ಹರಪನಹಳ್ಳಿಯಲ್ಲಿ ಮೂರು ವರ್ಷ ಉಪನ್ಯಾಸಕರಾಗಿದ್ದರು. 1983ರಲ್ಲಿ ‘ಪ್ರಜಾವಾಣಿ’ ಪತ್ರಿಕಾ ಸಮೂಹ ಸೇರಿದ ಅವರು ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿ ‘ಸುಧಾ’ ವಾರಪತ್ರಿಕೆ ಸುದ್ದಿ ಸಂಪಾದಕರಾಗಿ ನಿವೃತ್ತರಾಗಿದ್ದರು.

ರಂಗಭೂಮಿ: ರಂಗಭೂಮಿ ಕುರಿತ ಗುಡಿಹಳ್ಳಿ ಅವರ ಬರಹಗಳು ಗಮನಾರ್ಹವಾದವು. ಹದಿನೈದಕ್ಕೂ ಹೆಚ್ಚು ರಂಗಕೃತಿಗಳನ್ನು ಬರೆದಿದ್ದಾರೆ. ರಾಜ್ಯದ ನಾಲ್ಕು ರಂಗ ತಂಡಗಳ ನೇತೃತ್ವವನ್ನೂ ವಹಿಸಿಕೊಂಡಿದ್ದರು. ‘ರಂಗ ನೇಪಥ್ಯ’ ಎಂಬ ಮಾಸ ಪತ್ರಿಕೆ ಪ್ರಕಟಿಸುತ್ತಿದ್ದರು.

‘ರಂಗನಾಟಕ ಪ್ರಯೋಗ ಸಾರ್ಥಕತೆ’, ‘ತೆರೆ ಸರಿದಾಗ’ (ಮಾಲತಿಶ್ರೀ ಮೈಸೂರು ಆತ್ಮಕತೆ), ‘ರಂಗಸಿರಿ’ (ಮರಿಯಮ್ಮನಹಳ್ಳಿ ಡಾ.ನಾಗರತ್ನಮ್ಮ ಆತ್ಮಕತೆ), ‘ಗುಬ್ಬಿ ವೀರಣ್ಣ’, ‘ಡಾ. ಲಕ್ಷ್ಮಣದಾಸ್’, ‘ಗಾನಕೋಗಿಲೆ’, ‘ಅನುಪಮ ಅಭಿನೇತ್ರಿ ಸುಭದ್ರಮ್ಮ ಮನ್ಸೂರು’, ‘ಮೇಕಪ್‌ಮನ್ ಸುಬ್ಬಣ್ಣ’, ‘ರಂಗನೇವರಿಕೆ’, ‘ರಂಗಸಂದರ್ಶನ’, ‘ರಂಗದಿಗ್ಗಜರು’, ‘ಚಿಂದೋಡಿ ಲೀಲಾ’, ‘ಕಲಾಗ್ರಾಮ’, ‘ಜನಪರ ರಂಗಭೂಮಿ’, ‘ರಂಗಸೆಲೆ’ ಅವರ ಪ್ರಮುಖ ಕೃತಿಗಳು.

ಕರ್ನಾಟಕ ನಾಟಕ ಅಕಾಡೆಮಿಯ ಜಿಲ್ಲಾ ರಂಗಮಾಹಿತಿ ಮಾಲಿಕೆ, ಹಾಗೂ ರಂಗಸಂಪನ್ನರು ಮಾಲಿಕೆಯ 40 ಕೃತಿಗಳು, ‘ವೃತ್ತಿ ರಂಗದ ಮಹತ್ತರ ನಾಟಕಗಳು’ (ರಾಮಕೃಷ್ಣ ಮರಾತೆ ಜತೆಗೆ), ‘ಶತಮಾನದ ಶಕಪುರುಷ ಏಣಗಿ ಬಾಳಪ್ಪ’ (ಈ ಮೂರೂ ಸರಣಿ ನಾಟಕ ಅಕಾಡೆಮಿ ಪ್ರಕಟಣೆ), ‘ಪಿ.ಬಿ.ಧುತ್ತರಗಿ ಆಯ್ದ ನಾಟಕಗಳು’ (ಪುಸ್ತಕ ಪ್ರಾಧಿಕಾರದ ಪ್ರಕಟಣೆ) ಸೇರಿದಂತೆ ಹಲವಾರು ಸಂಪಾದಿತ ಕೃತಿಗಳು ಪ್ರಕಟವಾಗಿವೆ.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಘಟಕದ ಅಧ್ಯಕ್ಷರಾಗಿ, ಬಂಡಾಯ ಸಾಹಿತ್ಯ ಸಂಘಟನೆಯ ರಾಜ್ಯ ಸಂಚಾಲಕರಾಗಿ, ಕರ್ನಾಟಕ ನಾಟಕ ಅಕಾಡೆಮಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು.

ರಾಜ್ಯೋತ್ಸವ ಪ್ರಶಸ್ತಿ, ಕೆಂಪೇಗೌಡ, ಮುರುಘರಾಜೇಂದ್ರ, ನಾಟಕ ಅಕಾಡೆಮಿ ಸೇರಿದಂತೆ ಹಲವು ಪ್ರಶಸ್ತಿಗಳು ಅವರಿಗೆ ಸಂದಿವೆ.

ಮಹಿಳಾ ಆಯೋಗದಿಂದ ಸ್ವಯಂಪ್ರೇರಿತ ಪ್ರಕರಣ ದಾಖಲು

ಮೈಸೂರು: ‘ಸಾಮೂಹಿಕ ಅತ್ಯಾಚಾರ ಘಟನೆ ಕುರಿತು ರಾಜ್ಯ ಮಹಿಳಾ ಆಯೋಗವು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದೆ’ ಎಂದು ಆಯೋಗದ ಅಧ್ಯಕ್ಷೆ ಪ್ರಮೀಳಾ ನಾಯ್ಡು ತಿಳಿಸಿದರು.

‘ಆರೋಪಿಗಳು ಮದ್ಯ ಸೇವಿಸಿದ್ದರು ಎಂಬ ಮಾಹಿತಿ ಲಭ್ಯವಾಗಿದೆ. ಶೀಘ್ರ ತನಿಖೆ ನಡೆಸುವಂತೆ ನಗರ ಪೊಲೀಸ್ ಕಮಿಷನರ್ ಅವರಿಗೆ ಸೂಚಿಸಲಾಗಿದೆ’ ಎಂದರು.

ಯಾರೊಂದಿಗೂ ಮಾತಾಡಲ್ಲ: ‘ಸಂತ್ರಸ್ತೆ ಇನ್ನೂ 2 ದಿನ ಯಾರೊಡನೆಯೂ ಮಾತನಾಡಲಾರೆ ಎಂದು ಹೇಳಿದ್ದಾರೆ. ಮಧ್ಯಾಹ್ನದ ನಂತರ ಅವರು ಚೇತರಿಸಿಕೊಂಡು ಆಹಾರ ಸೇವಿಸಿದ್ದಾರೆ. ಅವರ ಪೋಷಕರು ಸಹ ಯಾರನ್ನೂ ಭೇಟಿಯಾಗಲು ಇಚ್ಛಿಸುತ್ತಿಲ್ಲ’ ಎಂದು ಸಚಿವೆ ಶಶಿಕಲಾ ಜೊಲ್ಲೆ ತಿಳಿಸಿದರು.

ಯೂನಿಫಾರ್ಮ್ ಬಿಟ್ಟು

ಬಣ್ಣ ಹಚ್ಚಿದ ರಾಜೀವ್

ರಾಜೀವ್

ಸುಬ್ರಮಣ್ಯ ಎಚ್.ಎಂ.

ಚನ್ನಪಟ್ಟಣದ ಈ ಚೆಲುವ ಸಿನಿಮಾ ಮೋಹಿ. ಸಿನಿಮಾ ಪ್ಯಾಷನ್‌ಗೋಸ್ಕರವೇ ಪೊಲೀಸ್ ಕೆಲಸಕ್ಕೆ ಗುಡ್‌ಬೈ ಹೇಳಿದವರು. ಸಿನಿಮಾ ಮೇಲಿನ ಪ್ರೀತಿ, ನಟನಾಗಬೇಕೆಂಬ ಹಂಬಲದಿಂದ ಚಂದನವನ ಪ್ರವೇಶಿಸಿದ ರಾಜೀವ್ ಅವರಿಗೆ ಪೊಲೀಸ್ ಕೆಲಸ ಕಳೆದುಕೊಂಡಿದ್ದಕ್ಕೆ ಸ್ವಲ್ಪವೂ ಬೇಜಾರು ಇಲ್ಲವಂತೆ. 'ಉಸಿರೇ ಉಸಿರೇ' ಚಿತ್ರವು ಸೆಟ್ಟೇರಿರುವ ಹಿನ್ನೆಲೆಯಲ್ಲಿ ಅವರ ಮನದ ಮಾತು.

• ಕ್ರಿಕೆಟ್ ನಂಟು ಇದ್ದವರು ಸಿನಿಮಾ ಕ್ಷೇತ್ರಕ್ಕೆ ಇಳಿದದ್ದು ಹೇಗೆ?

ಹೌದು ನನ್ನ ಸಿನಿ ಪಯಣ ಕ್ರಿಕೆಟ್‌ನೊಂದಿಗೆ ಸಖ್ಯ ಹೊಂದಿದೆ. 2008ರಲ್ಲಿ ದಾವಣಗೆರೆಯಲ್ಲಿ ನಡೆದ ರಾಜ್ ಕ್ರಿಕೆಟ್ ಕಪ್ ಪಂದ್ಯದಲ್ಲಿ ಕಿಚ್ಚ ಸುದೀಪ್ ಅವರೊಂದಿಗೆ ಆಡಿದ್ದು ಸಿನಿಮಾ ನಂಟು ಬೆಳೆಯಲು ಕಾರಣವಾಯಿತು. ಸಿಸಿಎಲ್‌ನ ಕಿಚ್ಚ ಸುದೀಪ್ ನೇತೃತ್ವದ ಕರ್ನಾಟಕ ಬುಲ್ಡೋಜರ್ಸ್ ತಂಡದಲ್ಲಿ ಪ್ರಭಾವಿ ಆಟಗಾರನೆಂದೇ ಹೆಸರಾಗಿದ್ದೆ. ಸುದೀಪ್ ಅವರೊಂದಿಗೂ ಕ್ರಿಕೆಟ್ ಆಡಿದ್ದೇನೆ. ನನ್ನ ಆಟವನ್ನು ಸುದೀಪ್ ಬಹುವಾಗಿ ಮೆಚ್ಚಿಕೊಂಡಿದ್ದಾರೆ. ಕ್ರಿಕೆಟ್ ಮೂಲಕ ಪರಿಚಯವಾದ ನಿರ್ದೇಶಕ ನಂದಕಿಶೋರ್, ನಿರ್ಮಾಪಕ ಶಂಕರೇಗೌಡ ಸಿನಿಮಾದ ಗಾಡ್‌ಫಾದರ್‌ಗಳು.

• ಪೊಲೀಸ್ ಸಮವಸ್ತ್ರ ಬಿಟ್ಟು ಬಣ್ಣ ಹಚ್ಚಲು ಕಾರಣ?

ಪೊಲೀಸ್ ಕುಟುಂಬದ ನನಗೆ ಪೊಲೀಸ್ ಉದ್ಯೋಗ ಅರಸಿ ಬಂದಿತ್ತು. ನಾನು ಪೊಲೀಸ್ ಇಲಾಖೆಯಲ್ಲಿ ಬೆರಳಚ್ಚು ತಜ್ಞ. ತುಂಬಾ ಒಳ್ಳೆಯ ಹುದ್ದೆಯಲ್ಲಿದ್ದೆ. ಆದರೆ, ಸಿನಿಮಾದವರ ನಂಟು ಹಾಗೆಯೇ ಇತ್ತು. ನಾನೊಮ್ಮೆ (2011) ವಿಶಾಖಪಟ್ಟಣದಲ್ಲಿ ನಡೆದ ಕ್ರಿಕೆಟ್ ಪಂದ್ಯದಲ್ಲಿ ಉತ್ತಮ ಪ್ರದರ್ಶನ ನೀಡಿದೆ. ಪತ್ರಿಕೆಯೊಂದರಲ್ಲಿ ಫೋಟೊ ಕೂಡ ಪ್ರಕಟವಾಯಿತು. ಇದನ್ನು ನೋಡಿದ ಮೇಲಾಧಿಕಾರಿ ನನ್ನನ್ನು ಮಂಗಳೂರಿಗೆ ವರ್ಗಾವಣೆಗೆ ಮಾಡಿದರು. ಕ್ರಿಕೆಟ್ ಮೇಲಿನ ಪ್ರೀತಿ, ಸಿನಿಮಾ ಹುಚ್ಚಿನಿಂದ ಕೆಲಸಕ್ಕೆ ರಾಜೀನಾಮೆ ನೀಡಿದೆ. ನಂತರ, ಖಾಸಗಿ ಕಂಪನಿಯಲ್ಲಿ ಕೆಲಸಕ್ಕೆ ಸೇರಿದೆ. ಅದೂ ಬಹಳ ಕಾಲ ಮುಂದುವರಿಯಲಿಲ್ಲ. ನಂತರ ಹೋಟೆಲ್ ವ್ಯಾಪಾರ ಶುರು ಮಾಡಿ ಕಣ್ಣು ಬಿಡುವಷ್ಟರಲ್ಲಿ ಕೋವಿಡ್‌ನಿಂದ ಹೋಟೆಲ್‌ಗೆ ಬೀಗ ಬಿತ್ತು. ಆರ್ಥಿಕವಾಗಿ ದಿವಾಳಿಯೂ ಆದೆ. ಆದರೂ ಕನಸು ಬಿಡಲಿಲ್ಲ. ಈಗ ಇಲ್ಲಿಯವರೆಗೆ ಬಂದಿದ್ದೇನೆ.

ಬಿಗ್‌ಬಾಸ್ ಮನೆ ಬಗ್ಗೆ?

ಬಿಗ್‌ಬಾಸ್‌ಗೆ ಹೋಗುವ ಮುನ್ನ ಯಾವುದೇ ನಿರ್ದಿಷ್ಟ ಗೇಮ್ ಪ್ಲ್ಯಾನ್ ಅಥವಾ ಆಲೋಚನೆ ಹೊತ್ತುಕೊಂಡು ಹೋಗಿರಲಿಲ್ಲ. ಬಾಲ್ ಹೇಗೆ ಬರುತ್ತದೆಯೋ ಹಾಗೆ ಆಡುವುದು ಕ್ರಿಕೆಟಿಗನ ಕಾರ್ಯ ಅಲ್ವಾ. ಬಿಗ್‌ಬಾಸ್‌ನಲ್ಲಿಯೂ ಹಾಗೆಯೇ ಇದ್ದೆ. ಪರಿಸ್ಥಿತಿಗೆ ತಕ್ಕಂತೆ ವರ್ತನೆ ನನ್ನ ಮನೋಧರ್ಮ.

• ಇದುವರೆಗಿನ ಚಿತ್ರಗಳು?

ನಾಯಕ ನಟನಾಗಿ ಅಭಿನಯಿಸಿದ ಮೊದಲ ಚಿತ್ರ 'ಸ್ತ್ರೀಶಕ್ತಿ'. 'ಗುಬ್ಬಿ', 'ಗೆಸ್ಟ್‌ಹೌಸ್', 'ಕೆಂಪೇಗೌಡ', 'ವರದನಾಯಕ', 'ಆರ್‌ಎಕ್ಸ್ ಸೂರಿ', 'ಅಮಾವಾಸ್ಯೆ', 'ಬೆಂಗಳೂರು–560023' ಸಿನಿಮಾಗಳಲ್ಲಿ ನಟಿಸಿದ್ದೇನೆ. ಈಗ 'ಉಸಿರೇ ಉಸಿರೇ' ಸಿನಿಮಾದ ಫಸ್ಟ್ ಲುಕ್ ಬಿಡುಗಡೆ ಆಗಿದೆ. ಕಿಚ್ಚ ಸುದೀಪ್ ಅವರ ಹುಚ್ಚ ಸಿನಿಮಾದ 'ಉಸಿರೇ ಉಸಿರೇ' ಹಾಡಿನ ಸಾಲು ಈ ಸಿನಿಮಾದ ಶೀರ್ಷಿಕೆ ಗೀತೆ. ಈ ಸಿನಿಮಾಕ್ಕೆ ಸುದೀಪ್ ಸಾಥ್ ನೀಡಿದ್ದಾರೆ.

• ಉಸಿರೇ... ಚಿತ್ರವಾಗಿ ತೆರೆದುಕೊಂಡ ಬಗೆ ಹೇಗೆ?

ನಾನು ಸುದೀಪ್ ಅವರ ಜತೆ ಕಾರಿನಲ್ಲಿ ಬರುತ್ತಿದ್ದಾಗ, ಅವರ ನಟನೆಯ ಚಿತ್ರದ 'ಉಸಿರೇ ಉಸಿರೇ' ಹಾಡು ಕೇಳಿದ್ದೆ. ನನಗೆ ಈ ಚಿತ್ರದ ಬಗ್ಗೆ ಗೊತ್ತಿದ್ದರಿಂದ ನಿರ್ದೇಶಕರಿಗೆ ಫೋನ್ ಮಾಡಿ ಚಿತ್ರಕ್ಕೆ ಇದೇ ಶೀರ್ಷಿಕೆ ಇಡೋಣ. ಈಗಲೇ ನೋಂದಾಯಿಸಿ ಎಂದು ಹೇಳಿದೆ. ಚಿತ್ರಕ್ಕಾಗಿ ಹೆಚ್ಚು ವರ್ಕ್‌ಔಟ್ ಏನೂ ಮಾಡಿಲ್ಲ. ಸಹಜವಾಗಿರುವ ಪಾತ್ರ. ನಾಲ್ಕು ವರ್ಷಗಳ ಶ್ರಮಕ್ಕೆ ಈಗ ಉತ್ತಮ ಕಾಲ ಕೂಡಿ ಬಂದಿದೆ.

• ಉಸಿರೇ...ಯ ತಿರುಳು ಏನು? ಸಾಮಾನ್ಯ ಪ್ರೇಮಕಥೆಯೇ?

ಹೌದು ಇದು ಪಕ್ಕಾ ಪ್ರೇಮಕಥೆ. ಇಲ್ಲಿಯವರೆಗೂ ಅನೇಕ ಪ್ರೇಮಕಥೆಯುಳ್ಳ ಚಿತ್ರಗಳು ಬಂದಿವೆಯಾದರೂ ಇದು ವಿಭಿನ್ನ. ಅಮರಪ್ರೇಮಿಗಳು ಎಂದರೆ ಎಲ್ಲರೂ ರೋಮಿಯೋ - ಜೂಲಿಯೆಟ್, ಸಲೀಂ - ಅನಾರ್ಕಲಿ ಅನ್ನುತ್ತಾರೆ. ಈ ಚಿತ್ರ ನೋಡಿದ ಮೇಲೆ ಪ್ರೇಕ್ಷಕರು ಕಥಾನಾಯಕ - ನಾಯಕಿಯನ್ನು ಈ ಸಾಲಿಗೆ ಸೇರಿಸಬಹುದು.

• ರಾಜೀವ್ ವ್ಯಕ್ತಿತ್ವ ಹಾಗೂ ಕುಟುಂಬದ ಬಗ್ಗೆ?

ನಾನೊಬ್ಬ ಶಾಂತ ಸ್ವಭಾವದ ವ್ಯಕ್ತಿ. ಆದರೆ, ತಪ್ಪು ಮಾಡಿದವರನ್ನು ಕಂಡಾಗ ನನ್ನದು ದಂಡಂ ದಶಗುಣಂ ವ್ಯಕ್ತಿತ್ವ. ಏಕೆಂದರೆ, ಪೊಲೀಸ್ ಶೈಲಿ ನನ್ನ ವ್ಯಕ್ತಿತ್ವದಲ್ಲಿ ಬೆರೆತು ಹೋಗಿದೆ. ಪ್ರತಿದಿನ ವರ್ಕ್‌ಔಟ್ ಮಾಡುವುದು, ಅಡುಗೆ, ಇಷ್ಟವಾದ ಚಿಕನ್ ಚಪ್ಪರಿಸುವುದು ನನಗಿಷ್ಟ. ರೇಷ್ಮಾ ಅವರನ್ನು ಪ್ರೀತಿಸಿ ಮದುವೆಯಾದೆ. ಮೂಲತಃ ಚನ್ನಪಟ್ಟಣದವರಾದ ನನ್ನ ತಂದೆ ಹನುಮಂತಯ್ಯ ನಿವೃತ್ತ ಪೊಲೀಸ್ ಇನ್‌ಸ್ಪೆಕ್ಟರ್, ತಾಯಿ ಅನಸೂಯಾ ಶಿಕ್ಷಕಿ ಆಗಿದ್ದಾರೆ. ❖

ಕಿರುತೆರೆ

'ಲಕ್ಷಣ'ದಲ್ಲಿ ಮಿನುಗುವ ನಕ್ಷತ್ರ ವಿಜಯಲಕ್ಷ್ಮಿ

ಅಭಿಲಾಷ್ ಪಿ.ಎಸ್.

ಬಿಳಿಯಷ್ಟೇ ಸುಂದರವಾದ ಬಣ್ಣ ಕಪ್ಪು. ಇಂತಹ ವಿಭಿನ್ನವಾದ ವಿಷಯದೊಂದಿಗೆ ಕಪ್ಪಗಿದ್ದರೂ ಲಕ್ಷಣವಾಗಿರುವ, ಸ್ವಾಭಿಮಾನಿ ಹುಡುಗಿಯ ಕಥೆಯೊಂದನ್ನು ಹೊತ್ತು ಬಂದಿದೆ ಕಲರ್ಸ್ ಕನ್ನಡದಲ್ಲಿ ಪ್ರಸಾರವಾಗುತ್ತಿರುವ 'ಲಕ್ಷಣ' ಧಾರಾವಾಹಿ. ಇದರಲ್ಲಿ 'ನಕ್ಷತ್ರ' ಎಂಬ ಪಾತ್ರ ಹುಡುಗಿಯರೆಲ್ಲರಿಗೂ ಮಾದರಿ ಎನ್ನುತ್ತಾರೆ ಪಾತ್ರಕ್ಕೆ ಬಣ್ಣಹಚ್ಚಿರುವ ವಿಜಯಲಕ್ಷ್ಮಿ ಎಂ.ಆರ್. ಅವರು.

ಸ್ನಾತಕೋತ್ತರ ಪದವಿ ಪಡೆದ ವರ್ಷವೇ ಕಿರುತೆರೆಗೆ ಮೊದಲ ಹೆಜ್ಜೆ ಇಟ್ಟಿರುವ ವಿಜಯಲಕ್ಷ್ಮಿ ತಮ್ಮ ಪಯಣ ನೆನಪಿಸಿಕೊಳ್ಳುತ್ತಾ 'ಸಿನಿಮಾ ಪುರವಣಿ' ಜೊತೆಗೆ ಮಾತಿಗಿಳಿದರು...

ನಾನು ಕೋಲಾರ ಜಿಲ್ಲೆಯ ಮಾಲೂರಿನವಳು. ಅಪ್ಪ ಊರಿನಲ್ಲೇ ಕಿರಾಣಿ ಅಂಗಡಿ ಇಟ್ಟುಕೊಂಡಿದ್ದಾರೆ. ಪ್ರಾಥಮಿಕ ಹಾಗೂ ಕಾಲೇಜು ಶಿಕ್ಷಣವನ್ನು ಅದೇ ಊರಿನಲ್ಲಿ ಪೂರ್ಣಗೊಳಿಸಿ, ಪದವಿ ಹಾಗೂ ಸ್ನಾತಕೋತ್ತರ ಪದವಿ ಪಡೆಯಲು ಬೆಂಗಳೂರಿಗೆ ಬಂದವಳು ನಾನು. ಕಾಲೇಜು ದಿನಗಳಲ್ಲೇ ನಾನು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿದ್ದೆ. ಪದವಿ ಓದುತ್ತಿರುವಾಗ ಕಾಲೇಜು ಮಟ್ಟದ ಸಂಗೀತ ಸ್ಪರ್ಧೆಯಲ್ಲಿ ಭಾಗವಹಿಸುತ್ತಿದ್ದೆ. ಜೊತೆಗೆ ನಟನೆಯಲ್ಲೂ ಆಸಕ್ತಿ ಇದ್ದ ಕಾರಣ ಹಲವು ಕಡೆ ಆಡಿಷನ್‌ಗಳನ್ನು ನೀಡಿದ್ದೆ. ಸರ್ಕಾರಿ ವಿಜ್ಞಾನ ಕಾಲೇಜಿನಲ್ಲಿ ಗಣಿತದಲ್ಲಿ ಎಂಎಸ್ಸಿಯನ್ನು 2020ರಲ್ಲಷ್ಟೇ ಪೂರ್ಣಗೊಳಿಸಿದ್ದೆ. ಈ ಸಂದರ್ಭದಲ್ಲೇ ಒದಗಿದ ಅವಕಾಶ 'ಲಕ್ಷಣ'. ಮೊದಲ ಆಡಿಷನ್‌ನಲ್ಲೇ ನಾನು ಪಾತ್ರಕ್ಕೆ ಆಯ್ಕೆಯಾಗಿದ್ದೆ.

'ರಂಗವಿಜಯ'ದ ವೇದಿಕೆ

ಕಾಲೇಜು ದಿನಗಳಲ್ಲಿ ನನಗೆ ನಟನೆಯ ಆಸಕ್ತಿ ಹುಟ್ಟಿಸಿದ್ದು ನಮ್ಮದೇ ಊರಿನಲ್ಲಿದ್ದ ಹವ್ಯಾಸಿ ರಂಗಭೂಮಿ ಕಲಾವಿದರ 'ರಂಗವಿಜಯ' ತಂಡ. ತಂಡದ ಮುಖ್ಯಸ್ಥರಾಗಿದ್ದ ವಿಜಯ್ ಅವರು ನನ್ನಲ್ಲಿನ ಕಲಾವಿದೆಯನ್ನು ಗುರುತಿಸಿದ್ದರು. ಜಿಲ್ಲಾಮಟ್ಟದಲ್ಲಿ ಹಲವು ನಾಟಕಗಳಲ್ಲಿ ನನಗೆ ಅವಕಾಶ ನೀಡಿದರು. ಬಿಎಸ್ಸಿ ಮಾಡುವ ಸಂದರ್ಭದಲ್ಲಿ ಕಿರುತೆರೆಗೆ ಬರಬೇಕು ಎನ್ನುವ ಆಸೆ ಹುಟ್ಟಿಕೊಂಡಿತು.

ವಿಜಯಲಕ್ಷ್ಮಿ 'ನಕ್ಷತ್ರ'ಳಾಗಿದ್ದು

'ಲಕ್ಷಣ' ಪ್ರೊಜೆಕ್ಟ್‌ಗೆ ಒಂದು ವರ್ಷದಿಂದ ಕಾಯುತ್ತಿದ್ದೆ. 2020ರಲ್ಲಿ ಕಪ್ಪಗಿದ್ದರೂ ಲಕ್ಷಣವಾಗಿರುವ ಹುಡುಗಿ ಬೇಕು ಎನ್ನುವ ಆಡಿಷನ್ ಕಾಲ್ ಬಂದಿತು. ಆಡಿಷನ್‌ನಲ್ಲಿ ಆಯ್ಕೆಯಾಗಿದ್ದರೂ ಮುಂದಿನ ಯೋಜನೆ ಬಗ್ಗೆ ಗೊಂದಲವಿತ್ತು. ಏಕೆಂದರೆ ಬಿಗ್‌ಬಾಸ್ ರಿಯಾಲಿಟಿ ಶೋ ಆರಂಭವಾಯಿತು. ಲಾಕ್‌ಡೌನ್ ಕಾರಣದಿಂದಾಗಿ ಬಿಗ್‌ಬಾಸ್ ಸ್ಥಗಿತವಾಯಿತು. ಅಂದಾಜು ಮೂರು ತಿಂಗಳ ಬಳಿಕ ಮತ್ತೆ ಶೋ ಆರಂಭವಾಯಿತು. ಬಿಗ್‌ಬಾಸ್ ಮುಗಿದ ಬಳಿಕ ಮತ್ತೆ ಲಾಕ್‌ಡೌನ್ ಆದರೆ ನಮ್ಮ ಧಾರಾವಾಹಿ ಪ್ರಾರಂಭವಾಗುತ್ತದೆಯೋ ಇಲ್ಲವೋ ಎನ್ನುವ ಸಂಶಯವೂ ಇತ್ತು. ಈಗ ಎಲ್ಲ ಗೊಂದಲಗಳೂ ಬಗೆಹರಿದು 15 ಸಂಚಿಕೆಗಳ ಚಿತ್ರೀಕರಣ ಪೂರ್ಣಗೊಳಿಸಿದ್ದೇವೆ.

'ನಕ್ಷತ್ರ' ಹೀಗಿದ್ದಾಳೆ

ಕಪ್ಪು ಹುಡುಗಿಯ ಮೇಲೆಯೇ ಧಾರಾವಾಹಿಯ ಚಿತ್ರಕಥೆ ಇದೆ. ತೆರೆಯ ಮೇಲೆ ಬೆಳ್ಳಗೆ, ಚೆಂದವಾಗಿ ಕಾಣಬೇಕು ಎನ್ನುವ ಆಸೆ ಎಲ್ಲರಿಗೂ ಇರುತ್ತದೆ. 'ನಕ್ಷತ್ರ' ಸ್ವಾಭಿಮಾನಿ ಹುಡುಗಿ. ಕಪ್ಪಗಿದ್ದರೂ ಯಾರ ಮುಂದೆಯೂ ಬಾಗುವುದಿಲ್ಲ. ನೋವಿದ್ದರೂ ಅದನ್ನು ಬೇರೆಯವರ ಮುಂದೆ ತೋರಿಸುವುದಿಲ್ಲ. ಅದನ್ನೆಲ್ಲ ಮನಸ್ಸಲ್ಲಿ ಇಟ್ಟುಕೊಂಡೆ ಸದಾ ಮುಗುಳ್ನಗುವ ಹುಡುಗಿ. ಹೆಸರಿಗೆ ತಕ್ಕ ಹಾಗೆ ಚುರುಕಿನ, ಹೊಳೆಯುವ ಹುಡುಗಿ ಆಕೆ. ಕಪ್ಪಗಿರುವ ಹುಡುಗಿಯರೆಲ್ಲರಿಗೂ ಈ ಪಾತ್ರ ಮಾದರಿ ಎನ್ನುತ್ತೇನೆ. ಏಕೆಂದರೆ, ಲಕ್ಷಣವಾಗಿಯೇ ಇರಬೇಕು ಎಂದಿಲ್ಲ. ಈ ಪಾತ್ರವನ್ನು ತಮ್ಮ ಜೀವನದಲ್ಲಿ ಅನ್ವಯಿಸಿದರೆ ಹಲವು ಬದಲಾವಣೆ ಸಾಧ್ಯ. ಸೌಂದರ್ಯ ಮುಖ್ಯವಲ್ಲ, ತಮ್ಮೊಳಗಿರುವ ಸಾಮರ್ಥ್ಯ, ಪ್ರತಿಭೆ ಮುಖ್ಯ ಎನ್ನುವುದೇ ಈ ಪಾತ್ರದ ಜೀವಾಳ. ❖

ಮುಂದಿನ ಹೆಜ್ಜೆ

ನಾನು ಸಾಂಪ್ರದಾಯಿಕ ಕುಟುಂಬದಿಂದ ಬಂದವಳು. ನಟನೆಯ ಕ್ಷೇತ್ರಕ್ಕೆ ಪ್ರವೇಶಿಸುವ ವಿಚಾರದಲ್ಲಿ ಮೊದಲು ಅಷ್ಟೊಂದು ಪ್ರೋತ್ಸಾಹ ಕುಟುಂಬದಿಂದ ಇರಲಿಲ್ಲ. ಅವರಿಗೆ ಹಿಂಜರಿಕೆ ಇತ್ತು. ಒಂದು ವರ್ಷ ನನಗೆ ಅವಕಾಶ ನೀಡಿ. ಈ ವರ್ಷ ಯಶಸ್ಸು ಸಿಗಲಿಲ್ಲ ಎಂದರೆ ಬೇರೆ ಉದ್ಯೋಗ ನೋಡಿಕೊಳ್ಳುತ್ತೇನೆ ಎಂದಿದ್ದೆ. ಈಗ ಅವರೂ ನನ್ನ ಸಾಧನೆಯನ್ನು ಮೆಚ್ಚಿದ್ದಾರೆ. ಸದ್ಯಕ್ಕೆ ಈ ಪ್ರೊಜೆಕ್ಟ್‌ನಲ್ಲೇ ಸಂಪೂರ್ಣವಾಗಿ ತೊಡಗಿಸಿಕೊಳ್ಳಬೇಕು. ಜನ ನನ್ನ ಪಾತ್ರವನ್ನು ಇಷ್ಟಪಡುತ್ತಿದ್ದಾರೆ. ಯಾವುದೇ ಇತರೆ ತೊಡಕುಗಳಿಲ್ಲದೆ ಇದನ್ನು ಪೂರ್ಣಗೊಳಿಸಬೇಕು ಎನ್ನುವುದೇ ನನ್ನ ಗುರಿ.

ಸಿನಿ ಸಂಕ್ಷಿಪ್ತ

ಚಿತ್ರಮಂದಿರ ಸಂಸ್ಕೃತಿ ನಾಶವಾಗದಿರಲಿ: ರವಿಚಂದ್ರನ್

'ದೃಶ್ಯ–2', 'ರವಿ ಬೋಪಣ್ಣ'... ಚಿತ್ರಗಳು ಬಿಡುಗಡೆಗೆ ಸಿದ್ಧವಾಗಿವೆ. ಆದರೆ, ನಮ್ಮ ಚಿತ್ರಗಳ ಬಿಡುಗಡೆಗೆ ಚಿತ್ರಮಂದಿರವೇ ಬೇಕು. ಚಿತ್ರಮಂದಿರ ಸಂಸ್ಕೃತಿ ನಾಶವಾಗಬಾರದು.

ಇದು ನಟ ವಿ.ರವಿಚಂದ್ರನ್ ಅವರ ಸ್ಪಷ್ಟ ಮಾತು. 'ದೃಶ್ಯ – 2' ಚಿತ್ರದ ಕುರಿತ ಪತ್ರಿಕಾಗೋಷ್ಠಿಯಲ್ಲಿ ಈ ವಿಚಾರ ಹೇಳಿದರು.

'ಜನರಿಗೆ ಸುಮಾರು 6 ಗಂಟೆಗಳ ಕಾಲ (ಮೂರು ಗಂಟೆ ಚಿತ್ರಮಂದಿರದ ಹೊರಗೆ, ಮೂರು ಗಂಟೆ ಚಿತ್ರ ಮಂದಿರಗಳ ಒಳಗೆ) ಪರಿಪೂರ್ಣ ಮನೋರಂಜನೆ ಅಗ್ಗದ ದರದಲ್ಲಿ ನೀಡುವುದು ಚಿತ್ರಮಂದಿರಗಳ ಸಿನಿಮಾ ಮಾತ್ರ. ಒಟಿಟಿ ಅಲ್ಲ. ಮೊದಲು ಜನರ ಆತಂಕ ನಿವಾರಣೆಯಾಗಬೇಕು' ಎಂದರು ರವಿಚಂದ್ರನ್. ದೃಶ್ಯ–2 ಬಗ್ಗೆ ಮಾತನಾಡಿದ ನಿರ್ದೇಶಕ ಪಿ.ವಾಸು, 'ಜುಲೈ 12ರಿಂದ ಚಿತ್ರೀಕರಣ ಆರಂಭಿಸಿ 38 ದಿನಗಳಲ್ಲಿ ಮುಗಿಸಿದ್ದೇವೆ. ಚಿತ್ರವು ಒಂದಿಷ್ಟು ನವಿರುತನ, ಗಂಭೀರ ಮತ್ತು ಭಾವನಾತ್ಮಕ ಸನ್ನಿವೇಶಗಳಿಂದ ಕೂಡಿದೆ' ಎಂದರು. ನವ್ಯಾ ನಾಯರ್ (ಸೀತಾ ಪಾತ್ರ) ಬಗ್ಗೆ ಅಭಿಮಾನದಿಂದ ಮಾತನಾಡಿದ ರವಿಚಂದ್ರನ್, 'ನವ್ಯಾ ಅದ್ಭುತವಾದ ಭರತನಾಟ್ಯ ಕಲಾವಿದೆ. ನಾವೆಲ್ಲರೂ ನಟಿಸುವ ಹಾಗೆ ಮಾಡುವ ಸಾಮರ್ಥ್ಯ ಅವರಲ್ಲಿ ಇದೆ. ಶೂಟಿಂಗ್‌ಗೆ ಬರೋದು ಮಾತ್ರ ಸ್ವಲ್ಪ ಲೇಟು' ಎಂದು ಮೆಲ್ಲನೆ ಕಾಲೆಳೆದರು.

ನವ್ಯಾ ಮಾತನಾಡಿ, 'ದೃಶ್ಯ – 2 ಸಿನಿಮಾದಲ್ಲಿ ನಟಿಸುವಾಗ ನಾನು ಬೇರೆ ಭಾಷೆಯವಳು ಎಂದು ಅನಿಸಲೇ ಇಲ್ಲ. ನಾನು ಮಲಯಾಳಂನಲ್ಲೇ ಮಾತನಾಡುತ್ತಿದ್ದೆ. ಚಿತ್ರತಂಡದವರು ಅರ್ಥಮಾಡಿಕೊಂಡು ಸ್ಪಂದಿಸುತ್ತಿದ್ದರು. ಇದೊಂದು ತುಂಬಾ ಭಾವನಾತ್ಮಕ, ಗಂಭೀರ ವಸ್ತು ಉಳ್ಳ ಸಿನಿಮಾ. ಮೊದಲ ಅರ್ಧ ಭಾಗದಲ್ಲಿ ಗಂಡ ಹೆಂಡತಿಯ ನಡುವಿನ ತಮಾಷೆಯನ್ನು ತೋರಿಸುತ್ತದೆ. ನಿರ್ದೇಶಕರು ನಮಗೆ ಮುಕ್ತ ಅವಕಾಶ ನೀಡಿದ್ದಾರೆ. ನಮ್ಮ ಉಚ್ಚಾರ, ಮಾತಿನ ಶೈಲಿ ಮಲಯಾಳಂನದ್ದೇ ಬಂದಾಗಲೂ ಸಾಕಷ್ಟು ಆತ್ಮವಿಶ್ವಾಸ ತುಂಬಿ ಬೆನ್ನುತಟ್ಟಿದ್ದಾರೆ' ಎಂದರು. 'ರವಿಚಂದ್ರನ್ ಅವರ 'ಯಮ್ಮ ಯಮ್ಮಾ ನೋಡ್ದೇ ನೋಡ್ದೆ...', 'ನವಿಲೇ ನವಿಲೇ ಹಾಡು' ನನಗೆ ತುಂಬಾ ಇಷ್ಟ. ರವಿಚಂದ್ರನ್ ಒಬ್ಬ ತುಂಬಾ ಮಾನವೀಯ ವ್ಯಕ್ತಿ' ಎಂದು ನವ್ಯಾ ಅಭಿಮಾನದಿಂದ ಹೇಳಿದರು. ❖

'ಕೃಷ್ಣ ಟಾಕೀಸ್' ಮತ್ತೆ ಓಪನ್

ಇಂದು ತೆರೆಗೆ

ಲಾಕ್‌ಡೌನ್‌ಗೆ ಮುಂಚೆ ಬಿಡುಗಡೆಯಾಗಿದ್ದ ಅಜೇಯ್ ರಾವ್ ಹಾಗೂ ಅಪೂರ್ವ ಅಭಿನಯದ 'ಕೃಷ್ಣ ಟಾಕೀಸ್' ಮತ್ತೆ ಮರುಬಿಡುಗಡೆಗೆ ಸಜ್ಜಾಗಿದೆ.

ಆ.27ರಂದು ಈ ಚಿತ್ರವು ಮರುಬಿಡುಗಡೆ ಆಗಲಿದೆ. 'ಏಪ್ರಿಲ್ 16ರಂದು ಬಿಡುಗಡೆಯಾದ ನಮ್ಮ 'ಕೃಷ್ಣ ಟಾಕೀಸ್' ಸಿನಿಮಾದ ಬಗ್ಗೆ ಒಳ್ಳೆಯ ಅಭಿಪ್ರಾಯ ಪ್ರೇಕ್ಷಕರಿಂದ ಲಭ್ಯವಾಗಿತ್ತು. ಸರ್ಕಾರ ಶೇ 100ರಷ್ಟು ಪ್ರೇಕ್ಷಕರ ಭರ್ತಿಗೆ ಅವಕಾಶ ನೀಡಬಹುದು ಎಂದು ಮರುಬಿಡುಗಡೆಗೆ ಇಷ್ಟು ದಿನ ಕಾದಿದ್ದೆವು. ಆದರೆ ಸರ್ಕಾರ ಈ ಕುರಿತು ಯಾವುದೇ ನಿರ್ಧಾರ ಕೈಗೊಂಡಿಲ್ಲ. ಹೀಗಾಗಿ ಒಂದೊಳ್ಳೆ ಸಿನಿಮಾ ಜನರಿಗೆ ತಲುಪಬೇಕು ಎನ್ನುವ ಉದ್ದೇಶದಿಂದ ರಾಜ್ಯದಾದ್ಯಂತ ಇರುವ 40–45 ಚಿತ್ರಮಂದಿರಗಳಲ್ಲಿ ಸಿನಿಮಾ ಮರುಬಿಡುಗಡೆ ಮಾಡುತ್ತಿದ್ದೇವೆ. ಬೆಂಗಳೂರಿನಲ್ಲೇ 6–7 ಚಿತ್ರಮಂದಿರ ಹಾಗೂ ಮಲ್ಟಿಪ್ಲೆಕ್ಸ್‌ಗಳಲ್ಲಿ ಚಿತ್ರ ತೆರೆಕಾಣಲಿದೆ' ಎನ್ನುತ್ತಾರೆ ನಿರ್ದೇಶಕ ವಿಜಯಾನಂದ್. ❖

ಧ್ರುವ ಸರ್ಜಾಗೆ ಜೋಗಿ ಪ್ರೇಮ್ ಆ್ಯಕ್ಷನ್ ಕಟ್!

'ಪೊಗರು' ಚಿತ್ರದ ಬಳಿಕ ನಟ ಧ್ರುವ ಸರ್ಜಾ ಅವರು ನಿರ್ದೇಶಕ ಎ.ಪಿ. ಅರ್ಜುನ್ ನಿರ್ದೇಶನದ 'ಮಾರ್ಟಿನ್' ಚಿತ್ರದಲ್ಲಿ ನಟಿಸಲಿದ್ದಾರೆ ಎನ್ನುವುದು ಈಗಾಗಲೇ ಗಾಂಧಿನಗರದಲ್ಲಿ ಸುದ್ದಿಯಾಗಿದೆ. ಇದಾದ ನಂತರದಲ್ಲಿ ಆ್ಯಕ್ಷನ್ ಪ್ರಿನ್ಸ್‌ನ ಮುಂದಿನ ಪ್ರೊಜೆಕ್ಟ್ ಯಾವುದು ಎನ್ನುವ ಕುತೂಹಲ ಅಭಿಮಾನಿಗಳಲ್ಲಿತ್ತು.

ಇದಕ್ಕೆ ಈಗ ಉತ್ತರ ದೊರೆತಿದ್ದು, ಕೆ.ವಿ.ಎನ್. ಪ್ರೊಡಕ್ಷನ್ಸ್ ನಿರ್ಮಾಣದ ನಾಲ್ಕನೇ ಚಿತ್ರದಲ್ಲಿ ಧ್ರುವ ಸರ್ಜಾ ನಾಯಕರಾಗಿ ಕಾಣಿಸಿಕೊಳ್ಳಲಿದ್ದು, ನಟ, ನಿರ್ದೇಶಕ ಜೋಗಿ ಪ್ರೇಮ್ ಆ್ಯಕ್ಷನ್ ಕಟ್ ಹೇಳಿದ್ದಾರೆ. ಇದು ಪ್ರೇಮ್ ಅವರ ನಿರ್ದೇಶನದ 9ನೇ ಚಿತ್ರ. ಅರ್ಜುನ್ ನಿರ್ದೇಶನದ 'ಅದ್ದೂರಿ' ಮುಖಾಂತರ ಧ್ರುವ 2012ರಲ್ಲಿ ಚಂದನವನಕ್ಕೆ ಪ್ರವೇಶಿಸಿದ್ದರು. ಇದಾದ ನಂತರ 'ಬಹದ್ದೂರ್', 'ಭರ್ಜರಿ', 'ಪೊಗರು' ಚಿತ್ರದಲ್ಲಿ ಧ್ರುವ ಮಿಂಚಿದ್ದರು. 'ಮಾರ್ಟಿನ್' ಬಳಿಕ ಇದು ಧ್ರುವ ಸರ್ಜಾ ಅವರ ಆರನೇ ಸಿನಿಮಾ ಆಗಿರಲಿದೆ.

'ಯುದ್ಧದಲ್ಲಿ ಹುತಾತ್ಮನಾದರೆ ಸ್ವರ್ಗವು ಆತನನ್ನು ಸ್ವಾಗತಿಸುತ್ತದೆ. ಯುದ್ಧದಲ್ಲಿ ಜಯಿಸಿದರೆ ಸಿಂಹಾಸನವು ಅವನಿಗಾಗಿ ಕಾಯುತ್ತದೆ. ಆದ್ದರಿಂದ ಯುದ್ಧ ಯಾವತ್ತೂ ಒಳ್ಳೆಯದೇ. ಯುದ್ಧ ಈಗ ಪ್ರಾರಂಭ. ಯುದ್ಧದ ಮುನ್ನುಡಿ ಇಲ್ಲಿಂದ ಆರಂಭ' ಎಂದು ಪ್ರೇಮ್ ಇತ್ತೀಚೆಗೆ ಟ್ವೀಟ್ ಮಾಡಿದ್ದಾರೆ. 'ಶೀಘ್ರದಲ್ಲೇ ಚಿತ್ರದ ಶೀರ್ಷಿಕೆ ಅನಾವರಣಗೊಳಿಸಲಿದ್ದೇವೆ' ಎಂದು ಚಿತ್ರತಂಡವು ತಿಳಿಸಿದೆ. ❖

ಪ್ರಿಯಾಂಕಾ ಉಪೇಂದ್ರ ಈಗ ಡಿಟೆಕ್ಟಿವ್!

'ಸೆಕೆಂಡ್ ಹಾಫ್' ಚಿತ್ರದಲ್ಲಿ ಪೊಲೀಸ್ ಕಾನ್‌ಸ್ಟೇಬಲ್ ಆಗಿ ಕಾಣಿಸಿಕೊಂಡಿದ್ದ ನಟಿ ಪ್ರಿಯಾಂಕಾ ಉಪೇಂದ್ರ, ಇನ್ನಷ್ಟೇ ಬಿಡುಗಡೆಯಾಗಬೇಕಾಗಿರುವ 'ಉಗ್ರಾವತಾರ' ಚಿತ್ರದಲ್ಲಿ ಪೊಲೀಸ್ ಅಧಿಕಾರಿ ಪಾತ್ರಕ್ಕೆ ಬಣ್ಣಹಚ್ಚಿದ್ದಾರೆ. ಈ ರೀತಿ ವಿಭಿನ್ನ ಪಾತ್ರಗಳನ್ನು ನಿರ್ವಹಿಸುತ್ತಿರುವ ಪ್ರಿಯಾಂಕಾ ಈ ಬಾರಿ ಡಿಟೆಕ್ಟಿವ್ ಪಾತ್ರವೊಂದಕ್ಕೆ ಬಣ್ಣಹಚ್ಚಲಿದ್ದಾರೆ.

ತ್ರಿವಿಕ್ರಮ ರಘು ನಿರ್ದೇಶನದ ಮೊದಲ ಚಿತ್ರದಲ್ಲಿ ಪ್ರಿಯಾಂಕಾ ಅವರು ಡಿಟೆಕ್ಟಿವ್ ತೀಕ್ಷ್ಣ ಎಂಬ ಪಾತ್ರವನ್ನು ಮಾಡಲಿದ್ದಾರೆ. ಚಿತ್ರದ ಶೀರ್ಷಿಕೆಯನ್ನು ಶೀಘ್ರದಲ್ಲೇ ಘೋಷಣೆ ಮಾಡುವುದಾಗಿ ಚಿತ್ರತಂಡವು ತಿಳಿಸಿದೆ. ತ್ರಿವಿಕ್ರಮ ರಘು ಅವರೇ ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಬರೆದಿರುವ ಈ ಚಿತ್ರವನ್ನು ಗೌತಮ್ ಸಿನಿಮಾಸ್ ಪ್ರೈವೇಟ್ ಲಿಮಿಟೆಡ್ ಹಾಗೂ ಶ್ರೀದೇವಿ ಚಾಮುಂಡಿ ಸಿನಿ ಕ್ರಿಯೇಷನ್ಸ್ ನಿರ್ಮಾಣ ಮಾಡುತ್ತಿದೆ.

'ಚಿತ್ರದ ನಾಯಕಿ, ಹೆಚ್ಚು ಬುದ್ಧಿಶಕ್ತಿಯುಳ್ಳವಳು. ಎಲ್ಲರ ಮನಸ್ಸನ್ನು ಗ್ರಹಿಸುವ ಸಾಮರ್ಥ್ಯ ಹೊಂದಿರುತ್ತಾಳೆ. ಅಪರಾಧಿಗಳನ್ನು ಚಾಣಾಕ್ಷತನದಿಂದ ಹೇಗೆ ಪತ್ತೆಹಚ್ಚುತ್ತಾಳೆ ಎನ್ನುವುದೇ ಚಿತ್ರಕಥೆ. ಪ್ರಿಯಾಂಕಾ ಅವರು ಎಲ್ಲೂ ಈ ರೀತಿಯ ಪಾತ್ರ ಮಾಡಿಲ್ಲ. ಕನ್ನಡ ಮತ್ತು ತೆಲುಗು ಭಾಷೆಗೆ ಹೊಂದುವಂತಹ ಶೀರ್ಷಿಕೆ ಇಡಲಾಗುವುದು. ಮುಹೂರ್ತದ ದಿನದಂದು ಶೀರ್ಷಿಕೆ ಅನಾವರಣಗೊಳಿಸುತ್ತೇವೆ' ಎನ್ನುತ್ತಾರೆ ರಘು. ಮನುದಾಸಪ್ಪ ಛಾಯಾಗ್ರಹಣ ಚಿತ್ರಕ್ಕಿದ್ದು, ಬೆಂಗಳೂರು, ಮೂಡಿಗೆರೆ, ಚಿಕ್ಕಮಗಳೂರು ಮತ್ತು ಉಪ್ಪಿನಂಗಡಿ ಸುತ್ತಮುತ್ತ ಚಿತ್ರೀಕರಣ ನಡೆಸಲು ಚಿತ್ರತಂಡವು ನಿರ್ಧರಿಸಿದೆ. ❖

'ಹೆಡ್‌ಬುಷ್'ನಲ್ಲಿ ಹೀಗಿದ್ದಾರೆ ಡಾಲಿ ಧನಂಜಯ್



ಅಗ್ನಿ ಶ್ರೀಧರ್ ಅವರ ಆತ್ಮಕಥೆ 'ದಾದಾಗಿರಿಯ ಆ ದಿನಗಳು' ಕೃತಿಯನ್ನು ಆಧರಿಸಿ ನಿರ್ಮಾಣಗೊಳ್ಳುತ್ತಿರುವ ಚಿತ್ರ 'ಹೆಡ್‌ಬುಷ್'–ದಿ ರೈಸ್ ಆ್ಯಂಡ್ ರೈಸ್ ಆಫ್ ಬೆಂಗಳೂರು ಅಂಡರ್‌ವರ್ಲ್ಡ್ ಭಾಗ–1ರ ಟೀಸರ್ ಹಾಗೂ ಫಸ್ಟ್‌ಲುಕ್ ಬಿಡುಗಡೆಯಾಗಿದೆ. ಎಂ.ಪಿ ಜಯರಾಜ್ ಪಾತ್ರದಲ್ಲಿ ನಟ 'ಡಾಲಿ' ಧನಂಜಯ್ ಕಾಣಿಸಿಕೊಂಡಿದ್ದಾರೆ.

ಟೀಸರ್‌ನಲ್ಲಿ 'ಜಯರಾಜ್‌ನನ್ನು ರಾಜಕಾರಣಿ ಎಂದು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಅವನೊಬ್ಬ ನಟೋರಿಯಸ್ ರೌಡಿ. ಅವನನ್ನು ಮಟ್ಟ ಹಾಕಲು ಸರ್ಕಾರದ ಬೆಂಬಲ ಬೇಕಾಗಿದೆ ಎಂದು ಬೆಂಗಳೂರು ನಗರ ಪೊಲೀಸ್ ಆಯುಕ್ತ ಗರುಡಾಚಾರ್ ತಿಳಿಸಿದ್ದಾರೆ' ಎನ್ನುವ ಸುದ್ದಿಯ ಹಿನ್ನೆಲೆಯಲ್ಲಿ ಜನರೆದುರು ಆಗಮಿಸುವಂತೆ ಎಂ.ಪಿ ಜಯರಾಜ್ ಪಾತ್ರವನ್ನು ಪರಿಚಯಿಸಲಾಗಿದೆ. ಎರಡು ಭಾಗದಲ್ಲಿ ಈ ಚಿತ್ರ ತೆರೆಕಾಣಲಿದೆ. 'ಹೆಡ್‌ಬುಷ್'ನಲ್ಲಿನ ಪಾತ್ರಕ್ಕಾಗಿ ಧನಂಜಯ್ ಅವರು ತೂಕ ಹೆಚ್ಚಿಸಿಕೊಂಡಿದ್ದು, ನಡೆಯಲ್ಲೂ ಬದಲಾವಣೆ ಮಾಡಿಕೊಂಡಿದ್ದಾರೆ. ಡಾಲಿ ಪಿಕ್ಚರ್ಸ್ ಮತ್ತು ಸೋಮಣ್ಣ ಟಾಕೀಸ್ ಜಂಟಿಯಾಗಿ ನಿರ್ಮಾಣ ಮಾಡುತ್ತಿರುವ ಈ ಚಿತ್ರಕ್ಕೆ, ಅಗ್ನಿ ಶ್ರೀಧರ್ ಅವರು ಕಥೆ, ಚಿತ್ರಕಥೆ ಬರೆದಿದ್ದಾರೆ. ❖

THE BIG DISCOUNT SALE
All New 2021 Collection at Mill Rate

Opening Today
Credit Cards Accepted
SINCE 1960 ® hakoba
Embroidery beyond your imagination
CHIKAN EMBROIDERIES
Check out the Export Dress Materials, Punjabi Suit Fabrics, Sarees, Organdi, Voile, Terrene, Shiffon, Taspa, Swiss Voile, Ready-made Palazzo Pant, Kurtis, Legging Embroidered & Dupattas
HEAVY DISCOUNT UPTO 50%
Shop online at www.hakoba.in
Venue :
THE CANARA UNION
No. 42, 8th Main, 13th Cross, Canara Union Road, Bangalore - 03.
KALAVISION

ಸುಭಾಷಿತ

ನಮಗೆ ವರ ಸಿಕ್ಕಂತೆ ಕೆಲವರು ನಮ್ಮ ಜೀವನದಲ್ಲಿ ಬರುತ್ತಾರೆ. ಇನ್ನು ಕೆಲವರು, ನಮಗೆ ಪಾಠ ಕಲಿಸುವ ಸಲುವಾಗಿಯೇ ಬರುತ್ತಾರೆ.

-ಮದರ್ ತೆರೇಸಾ

ಸಾಮೂಹಿಕ ಅತ್ಯಾಚಾರ: ದುಷ್ಕರ್ಮಿಗಳಿಗೆ ಕ್ಷಿಪ್ರವಾಗಿ ಕಠಿಣ ಶಿಕ್ಷೆ ಆಗುವಂತೆ ನೋಡಿಕೊಳ್ಳಿ

ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಪ್ರವಾಸಿ ಕೇಂದ್ರವಾಗಿ ಹೆಸರುವಾಸಿ ಆಗಿರುವ ಮೈಸೂರು ನಗರ ಈಗ ಕೆಟ್ಟ ಕಾರಣಕ್ಕಾಗಿ ಸುದ್ದಿಯಲ್ಲಿದೆ. ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಲಲಿತಾದ್ರಿಪುರ ಗುಡ್ಡದಲ್ಲಿ ಮಂಗಳವಾರ ರಾತ್ರಿ 7.30ರ ಸುಮಾರಿಗೆ ಎಂಬಿಎ ವಿದ್ಯಾರ್ಥಿನಿಯೊಬ್ಬರ ಮೇಲೆ ದುಷ್ಕರ್ಮಿಗಳು ಸಾಮೂಹಿಕ ಅತ್ಯಾಚಾರ ನಡೆಸಿದ್ದಾರೆ. ಆಕೆಯ ಜೊತೆಗಿದ್ದ ಸಹಪಾಠಿ ಗೆಳೆಯನ ಮೇಲೆ ದುಷ್ಕರ್ಮಿಗಳು ಹಲ್ಲೆ ನಡೆಸಿದ್ದು ಇಬ್ಬರೂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಹಲ್ಲೆಗೊಳಗಾದ ವಿದ್ಯಾರ್ಥಿ ನೀಡಿರುವ ಹೇಳಿಕೆ ಆಧರಿಸಿ ಎಫ್‌ಐಆರ್ ದಾಖಲಿಸಿರುವ ಪೊಲೀಸರು, ದುಷ್ಕರ್ಮಿಗಳ ಪತ್ತೆಗೆ ವಿಶೇಷ ತನಿಖಾ ದಳ ರಚಿಸಿದ್ದಾರೆ. ಈ ಪೈಶಾಚಿಕ ಕೃತ್ಯವನ್ನು ಗಂಭೀರವಾಗಿ ಪರಿಗಣಿಸಿರುವುದಾಗಿ ಹೇಳಿರುವ ರಾಜ್ಯದ ಗೃಹ ಸಚಿವ ಆರಗ ಜ್ಞಾನೇಂದ್ರ ಅವರು, ತನಿಖಾ ಪ್ರಗತಿಯ ಪರಿಶೀಲನೆಗೆ ಮೈಸೂರಿಗೆ ಭೇಟಿ ನೀಡಿರುವುದು ಸೂಕ್ತವಾಗಿದೆ. ಆದರೆ, ನಿರ್ಜನ ಪ್ರದೇಶಕ್ಕೆ ಯುವತಿ-ಯುವಕ ರಾತ್ರಿ 7.30ರ ಸಮಯದಲ್ಲಿ ಹೋಗಬಾರದಿತ್ತು ಎಂದು ಗೃಹ ಸಚಿವರು ಹೇಳಿರುವುದು ಸಂವೇದನೆರಹಿತವಾದ ನಡವಳಿಕೆ. ಶಾಂತಿ-ಸುವ್ಯವಸ್ಥೆ ಕಾಪಾಡುವ ಹೊಣೆ ಹೊತ್ತವರ ಇಂತಹ ಹೊಣೆಗೇಡಿ ಹೇಳಿಕೆಯು ಸಂತ್ರಸ್ತೆಯನ್ನೇ ಅಪರಾಧಿ ಸ್ಥಾನದಲ್ಲಿ ನಿಲ್ಲಿಸುತ್ತದೆ. ಇದನ್ನು ಲಿಂಗತಾರತಮ್ಯ ಮತ್ತು ಅಮಾನವೀಯವಾದ ಹೇಳಿಕೆ ಎಂದೇ ಪರಿಗಣಿಸಬೇಕಾಗುತ್ತದೆ. ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರು ಇದೇ ರೀತಿಯ ಹೇಳಿಕೆಯನ್ನು ಇತ್ತೀಚೆಗಷ್ಟೇ ನೀಡಿ ವಿವಾದಕ್ಕೆ ಒಳಗಾಗಿದ್ದರು. ಅಷ್ಟಾಗಿಯೂ ನಮ್ಮ ಗೃಹ ಸಚಿವರು ಈ ವಿಚಾರದಲ್ಲಿ ಸಂವೇದನೆ ತೋರದೇ ಇದ್ದುದು ಖಂಡನೀಯ. ಆಘಾತಕ್ಕೆ ಒಳಗಾಗಿರುವ ವಿದ್ಯಾರ್ಥಿನಿಯ ಹೇಳಿಕೆಯನ್ನು ಪೊಲೀಸರು ಇನ್ನಷ್ಟೇ ಪಡೆಯಬೇಕಾಗಿದೆ. ಮೈಸೂರು ಸಾಂಸ್ಕೃತಿಕ ಕೇಂದ್ರ ಮಾತ್ರವಲ್ಲ, ಶೈಕ್ಷಣಿಕ ಕೇಂದ್ರವಾಗಿಯೂ ದೇಶ-ವಿದೇಶಗಳ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿದೆ. ಈ ಆಕರ್ಷಣೆಗೆ ಇಲ್ಲಿರುವ ವಿಶ್ವವಿದ್ಯಾಲಯ ಮಾತ್ರವಲ್ಲದೆ, ಹಲವು ಖಾಸಗಿ ಶಿಕ್ಷಣ ಸಂಸ್ಥೆಗಳ ಗುಣಮಟ್ಟವೂ ಕಾರಣ. ನಗರದಲ್ಲಿ ಸಾವಿರಕ್ಕೂ ಹೆಚ್ಚು ವಿದೇಶಿ ವಿದ್ಯಾರ್ಥಿಗಳಿದ್ದಾರೆ. ಹೊರರಾಜ್ಯಗಳ ಎರಡು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಮೈಸೂರು ಶಾಂತಿಪ್ರಿಯ ನಗರವಾಗಿದ್ದು ಹೊರ ರಾಜ್ಯ ಮತ್ತು ವಿದೇಶಗಳಿಂದ ಬರುವ ವಿದ್ಯಾರ್ಥಿಗಳಿಗೆ ಸುರಕ್ಷಿತ ತಾಣವೂ ಹೌದು ಎನ್ನುವ ಭಾವನೆ ಹಿಂದಿನಿಂದಲೂ ಇದೆ. ಆದರೆ, ಈಗ ನಡೆದಿರುವ ಸಾಮೂಹಿಕ ಅತ್ಯಾಚಾರ ಪ್ರಕರಣವು ಇಂತಹ ನಂಬಿಕೆಗಳಿಗೆ ಪೆಟ್ಟು ಕೊಡಬಹುದು. ದೇಶ-ವಿದೇಶಗಳ ಪ್ರವಾಸಿಗರು ಅತಿದೊಡ್ಡ ಸಂಖ್ಯೆಯಲ್ಲಿ ಬರುವ ಕರ್ನಾಟಕದ ಎರಡು ಕೇಂದ್ರಗಳೆಂದರೆ ಹಂಪಿ ಮತ್ತು ಮೈಸೂರು. ಹಂಪಿ ಮುಖ್ಯವಾಗಿ ವಿದೇಶಿಯರ ಆಕರ್ಷಣೆಯ ಕೇಂದ್ರವಾಗಿದ್ದರೆ, ಮೈಸೂರು ವಿದೇಶಿಯರು ಮಾತ್ರವಲ್ಲದೆ, ನೆರೆ ರಾಜ್ಯಗಳ ಮಕ್ಕಳ ಶೈಕ್ಷಣಿಕ ಪ್ರವಾಸಕ್ಕೂ ಹೆಸರುವಾಸಿ. ಈ ಹಿನ್ನೆಲೆಯಲ್ಲಿ ಮೈಸೂರಿನ ಮಹತ್ವವನ್ನು ಅರಿತುಕೊಂಡು ಇಲ್ಲಿ ಕಾನೂನು ಮತ್ತು ಶಾಂತಿ- ಸುವ್ಯವಸ್ಥೆಯನ್ನು ಬಲಪಡಿಸುವ ಕೆಲಸ ಆದ್ಯತೆಯ ಮೇಲೆ ನಡೆಯಬೇಕಿದೆ.

ಮೈಸೂರಿನ ಪೊಲೀಸ್ ವ್ಯವಸ್ಥೆಯನ್ನು ಬಲಪಡಿಸುವ ಮತ್ತು ಪುನರ್‌ರೂಪಿಸುವ ಅಗತ್ಯ ಎದ್ದು ಕಾಣುತ್ತಿದೆ

ಮೈಸೂರಿನಲ್ಲಿ ಕೊಲೆ, ಸುಲಿಗೆಯಂತಹ ಪ್ರಕರಣಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿರುವುದು ಆತಂಕಕಾರಿ ಸಂಗತಿ. ಆರು ತಿಂಗಳ ಹಿಂದೆ ಭಿಕ್ಷುಕಿಯೊಬ್ಬರ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿದ್ದು, ಆಕೆಯ ಜೊತೆಗೇ ಭಿಕ್ಷುಕರಾಗಿದ್ದ ಆರೋಪಿಗಳನ್ನು ಬಂಧಿಸಲಾಗಿದೆ. ಕಳೆದ ವಾರ ಚಿನ್ನಾಭರಣ ಮಾರಾಟ ಮಳಿಗೆಯೊಂದರ ಮೇಲೆ ದಾಳಿ ನಡೆಸಿದ ದರೋಡೆಕೋರರ ಗುಂಡಿಗೆ ಗ್ರಾಹಕರೊಬ್ಬರು ಬಲಿಯಾಗಿದ್ದಾರೆ. ಆ ಪ್ರಕರಣದ ಆರೋಪಿಗಳಲ್ಲಿ ಕೆಲವರನ್ನು ಬಂಧಿಸಲಾಗಿದೆ, ಇನ್ನು ಕೆಲವರ ಪತ್ತೆ ಕೆಲಸ ಮುಂದುವರಿದಿದೆ. ಲಲಿತಾದ್ರಿಪುರದ ಗುಡ್ಡದ ಬದಿಯ ರಸ್ತೆಯಲ್ಲೇ ಕಳೆದ ವಾರ ಆಟೊ ಚಾಲಕನ ಮೇಲೆ ಹಲ್ಲೆಗೈದು ಆಟೊ ಮತ್ತು ಹಣವನ್ನು ದರೋಡೆ ಮಾಡಿರುವ ಪ್ರಕರಣದಲ್ಲಿ ಆರೋಪಿಗಳು ಇನ್ನೂ ಪತ್ತೆಯಾಗಿಲ್ಲ. ಸಣ್ಣ ಪುಟ್ಟ ಕಳ್ಳತನಗಳಂತೂ ಮೈಸೂರಿನಲ್ಲಿ ಸಾಮಾನ್ಯ ಎಂಬಂತಾಗಿದೆ. ಇದರ ಮಧ್ಯೆ 'ಮೀಟರ್ ಬಡ್ಡಿ' ವ್ಯವಹಾರದ ಗ್ಯಾಂಗ್‌ಗಳ ನಡುವಣ ಕಲಹ, ಹೊಡೆದಾಟ ಕೂಡಾ ನಗರದ ಶಾಂತಿಯನ್ನು ಕದಡುತ್ತಿದೆ. ಈ ಎಲ್ಲ ಅಂಶಗಳನ್ನೂ ಗಮನಿಸಿದರೆ, ಮೈಸೂರಿನ ಪೊಲೀಸ್ ವ್ಯವಸ್ಥೆಯನ್ನು ಬಲಪಡಿಸುವ ಮತ್ತು ಪುನರ್‌ರೂಪಿಸುವ ಅಗತ್ಯ ಎದ್ದು ಕಾಣುತ್ತದೆ. ಮೈಸೂರು ನಗರ ಮತ್ತು ಹೊರವಲಯದಲ್ಲಿ ಪೊಲೀಸರು ಸತತವಾಗಿ ಕಠಿಣ ಗಸ್ತು ನಡೆಸಿ, ನಾಕಾಬಂದಿ ಹಾಕಬೇಕಿದೆ. ಯಾವುದೋ ದರೋಡೆಯೊಂದು ನಡೆದಾಗ ನಾಕಾಬಂದಿ ಹಾಕುವುದರ ಬದಲಿಗೆ, ನಗರದ ಕಾನೂನು ಸುವ್ಯವಸ್ಥೆಯ ಸಮಗ್ರ ಪುನರವಲೋಕನ ಈಗ ನಡೆಯಬೇಕಿರುವ ಕೆಲಸ. ವಿದ್ಯಾರ್ಥಿನಿ ಮೇಲಿನ ಸಾಮೂಹಿಕ ಅತ್ಯಾಚಾರದ ಆರೋಪಿಗಳನ್ನು ಶೀಘ್ರವೇ ಬಂಧಿಸಿ, ಅಪರಾಧಿಗಳಿಗೆ ಕ್ಷಿಪ್ರವಾಗಿ ಕಠಿಣ ಶಿಕ್ಷೆ ಆಗುವಂತೆ ಮಾಡದಿದ್ದರೆ, ಹೊರರಾಜ್ಯಗಳಿಂದ ಬರುವ ವಿದ್ಯಾರ್ಥಿ ಸಮುದಾಯಕ್ಕೆ ತಪ್ಪು ಸಂದೇಶ ಹೋಗುವ ಸಾಧ್ಯತೆ ಇದೆ. ಸಾಮೂಹಿಕ ಅತ್ಯಾಚಾರ ಎನ್ನುವುದು ಸಮಷ್ಟಿಯೇ ಮಾನಸಿಕ ಅಸ್ವಸ್ಥ ಸ್ಥಿತಿಗೆ ತೆರಳುತ್ತಿರುವುದರ ಮುನ್ಸೂಚನೆ. ಪೊಲೀಸರ ಬಿಗಿ ಕ್ರಮದ ಜೊತೆಗೆ, ಸಮಾಜದಲ್ಲಿ ಇಂತಹ ಹೇಯ ಪ್ರವೃತ್ತಿ ಬೆಳೆಯದಂತೆ ಮೈಸೂರಿನ ನಾಗರಿಕರೂ ಎಚ್ಚರ ಮೂಡಿಸಬೇಕಾದ ಅಗತ್ಯವಿದೆ. ಕನ್ನಡ ನಾಡಿನ ಸಾಂಸ್ಕೃತಿಕ ಹೆಮ್ಮೆಯ ಶಾಂತಿಪ್ರಿಯ ಮೈಸೂರಿನ ಹೆಗ್ಗಳಿಕೆಗೆ ಕುಂದು ಉಂಟಾಗುವುದನ್ನು ತಡೆಯಲು ಆಡಳಿತವೂ ಚುರುಕುಗೊಳ್ಳಬೇಕಿದೆ.

ದಿನದ ಟ್ವೀಟ್

ದೌರ್ಜನ್ಯಕ್ಕೆ ಪರವಾನಗಿಯೇ?

ಮದುವೆ ಎಂಬುದು ಪತ್ನಿಯ ಮೇಲಿನ ಅತ್ಯಾಚಾರಕ್ಕೆ ಸಿಕ್ಕ ಪರವಾನಗಿ ಎಂದೇ ಹೆಚ್ಚಿನ ಸಂದರ್ಭಗಳಲ್ಲಿ ಪುರುಷರು ಭಾವಿಸುತ್ತಾರೆ. ಮದುವೆ ಎಂಬ ಪರವಾನಗಿಯ ಹೆಸರಿನಲ್ಲಿ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯ ಊಹಿಸಲು ಅಸಾಧ್ಯ. ಹೀಗೆ ನರಳುತ್ತಿರುವ ಕೆಲವು ವಿವಾಹಿತ ಮಹಿಳೆಯರೊಂದಿಗೆ ಮತ್ತು ವಿಚ್ಛೇದನಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ ತೊಡಗಿಸಿಕೊಂಡಿರುವ ವಕೀಲರೊಂದಿಗೆ ಮಾತನಾಡಿ ನೋಡಿ, ಭಯಾನಕ ಕಥೆಗಳನ್ನು ಅವರು ನಿಮಗೆ ಹೇಳುತ್ತಾರೆ.

ನಿಶಾ ದೇವ್, ಅಧ್ಯಾಪಕಿ, ರೈತ ಮಹಿಳೆ

ಕಿಡಿನುಡಿ

ಭಾರತ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ ತಕ್ಷಣ ಸಚಿನ್ ತೆಂಡೂಲ್ಕರ್ ಅವರಿಗೆ ಕರೆ ಮಾಡಬೇಕು. ತಮ್ಮ ಬ್ಯಾಟಿಂಗ್ ವೈಫಲ್ಯದಿಂದ ಹೊರಬರಲು ಸಲಹೆ ಪಡೆಯಬೇಕು. ಕೊಹ್ಲಿ ಔಟಾಗುತ್ತಿರುವ ರೀತಿಯು ಚಿಂತೆ ಮೂಡಿಸಿದೆ.

ಸುನೀಲ್ ಗಾವಸ್ಕರ್, ಮಾಜಿ ಕ್ರಿಕೆಟಿಗ, ವೀಕ್ಷಕ ವಿವರಣೆಗಾರ

25 ವರ್ಷಗಳ ಹಿಂದೆ

ಮಂಗಳವಾರ, 27-8-1996

- **ಬೆಂಗಳೂರಿನಲ್ಲಿ ವಿಶ್ವ ಸುಂದರಿ ಸ್ಪರ್ಧೆ**

ಬೆಂಗಳೂರು, ಆಗಸ್ಟ್ 26- ಬೆಂಗಳೂರನ್ನು ವಿಶ್ವದಾದ್ಯಂತ 120 ರಾಷ್ಟ್ರಗಳಲ್ಲಿ ಬೆಳಗಿಸುವ 'ವಿಶ್ವ ಸುಂದರಿ' ಆಯ್ಕೆಯ ವರ್ಣರಂಜಿತ ಕಾರ್ಯಕ್ರಮಕ್ಕೆ ಇಲ್ಲಿ ಇಂದು ಹಸಿರು ನಿಶಾನೆ ತೋರಲಾಯಿತು.

'ವಿಶ್ವ ಸುಂದರಿ' ಸ್ಪರ್ಧೆ ನಡೆಸುವುದರಿಂದ ಹಿಡಿದು ಅದಕ್ಕೆ ಸಂಬಂಧಿಸಿದ ಎಲ್ಲಾ ವಿಚಾರಗಳ ಸಾರಾಸಗಟು ಗುತ್ತಿಗೆ ಪಡೆದಿರುವ ಅಮಿತಾಭ್ ಬಚ್ಚನ್ ಕಾರ್ಪೊರೇಷನ್ ಲಿಮಿಟೆಡ್ (ಎಬಿಸಿಎಲ್) ಸಂಸ್ಥೆ ಬರುವ ನವೆಂಬರ್‌ನಲ್ಲಿ ನಿರ್ವಹಿಸಲಿರುವ ಈ ದೃಶ್ಯ ವೈಭವಕ್ಕೆ ರಾಜ್ಯದ ಒಟ್ಟಾರೆ ಹಿತದೃಷ್ಟಿಯಿಂದ ಸರ್ಕಾರ ಎಲ್ಲಾ ರೀತಿಯ ಸಹಕಾರ-ನೆರವು ನೀಡಲಿದೆ ಎಂದು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಪ್ರಕಟಿಸುವುದರೊಂದಿಗೆ ಈ ಕಾರ್ಯಕ್ರಮ ವಿಧ್ಯುಕ್ತ ಚಾಲನೆ ಪಡೆಯಿತು.

50 ವರ್ಷಗಳ ಹಿಂದೆ

ಶುಕ್ರವಾರ, 27-8-1971

- **ಮಳೆಯಾಗಿರುವ ಬಗೆಗೆ ಅರಸು ಹರ್ಷ: ಪರಿಹಾರ ಕಾರ್ಯ ನಿಲ್ಲಿಸದಿರುವ ಸಲಹೆ**

ಬೆಂಗಳೂರು, ಆಗಸ್ಟ್ 26- ಹೆಚ್ಚು ಕಡಿಮೆ ರಾಜ್ಯದ ಎಲ್ಲ ಕಡೆಗಳಲ್ಲಿ ಮಳೆ ಬಿದ್ದಿರುವ ಬಗ್ಗೆ ಸಂತೋಷವನ್ನು ವ್ಯಕ್ತಪಡಿಸಿದ ಆಡಳಿತ ಕಾಂಗ್ರೆಸ್ಸಿನ ಪ್ರದೇಶ ಸಮಿತಿ ಅಧ್ಯಕ್ಷ ಡಿ. ದೇವರಾಜ ಅರಸು ಅವರು, 'ಈ ಮಳೆ ಕಾರಣ ಪರಿಹಾರ ಕಾರ್ಯಗಳನ್ನು ನಿಲ್ಲಿಸಬಾರದು' ಎಂದು ಸರ್ಕಾರಕ್ಕೆ ಸಲಹೆ ಮಾಡಿದರು.

'ಈ ಮಳೆಯಿಂದಾಗಿ 15 ದಿನ ಅಥವಾ ಒಂದು ತಿಂಗಳ ಕಾಲ ರೈತ ಕಾರ್ಮಿಕರು ಕೃಷಿ ಚಟುವಟಿಕೆಗಳಿಗೆ ಗಮನ ಕೊಡಬಹುದು. ಪರಿಹಾರ ಕಾರ್ಯ ಅಗತ್ಯವಾಗುವ ಕಾಲ ಮತ್ತೆ ಉಂಟಾಗಬಹುದು. ಈ ಅಂಶವನ್ನು ಸರ್ಕಾರ ಗಮನದಲ್ಲಿಡಬೇಕು' ಎಂದು ಅವರು ಹೇಳಿದರು.

- **ಚೀನಾಕ್ಕೆ ರಷ್ಯಾದ ದಾಳಿ ಭೀತಿ, ತೀವ್ರ ಕಳವಳ**

ಹಾಂಕಾಂಗ್, ಆಗಸ್ಟ್ 26- ರಷ್ಯಾ ತನ್ನ ಮೇಲೆ ದಾಳಿ ನಡೆಸುವ ಸಾಧ್ಯತೆಯಿದೆಯೆಂದು ಕಳವಳಗೊಂಡಿರುವ ಕಮ್ಯುನಿಸ್ಟ್ ಚೀನಾ ರಕ್ಷಣಾ ಸಿದ್ಧತೆಗಳಲ್ಲಿ ತೊಡಗಿದೆ.

ಬೀಜಿಂಗ್ ಮತ್ತಿತರ ಪ್ರಮುಖ ನಗರಗಳಲ್ಲಿ ರಕ್ಷಣಾ ಸಿದ್ಧತೆಗಳು ಭರದಿಂದ ನಡೆದಿವೆಯೆಂದು ಚೀನಾದಲ್ಲಿ ಏಳು ವಾರಗಳ ಪ್ರವಾಸ ಮುಗಿಸಿ ಇಂದು ಇಲ್ಲಿಗೆ ಆಗಮಿಸಿದ 'ನ್ಯೂಯಾರ್ಕ್ ಟೈಮ್ಸ್' ಪತ್ರಿಕೆ ಬರಹಗಾರರಾದ ಅಮೆರಿಕದ ಪತ್ರಕರ್ತ ಜೇಮ್ಸ್ ಅವರು ಇಂದು ತಿಳಿಸಿದರು.

ಮೂಲಭೂತವಾದದ ಅಂತಿಮ ಫಲಿತ ಹೀಗಲ್ಲದೇ ಇನ್ನು ಹೇಗೆ ಇರಲು ಸಾಧ್ಯ?

ಚೌಕಟ್ಟಿನೊಳಗಿರುವ ಹಿಂಸೆಯ ಬೀಜ

ವಿಶ್ಲೇಷಣೆ

ಸಬಿತಾ ಬನ್ನಾಡಿ

'ಕೋ ಎಜುಕೇಶನ್' ಅನ್ನು ನಿಲ್ಲಿಸಬೇಕು. ಎಲ್ಲ ಅನಿಷ್ಟಗಳ ಮೂಲ ಈ ಕೋ ಎಜುಕೇಶನ್' ಎಂದು ತಾಲಿಬಾನಿಯೊಬ್ಬ ಅಪ್ಪಣೆ ಕೊಡಿಸಿದ್ದಾನೆ. ಗಂಡಿಗೆ ಸರಿಸಮಾನವಾಗಿ ಹೆಣ್ಣು ಇರುವುದನ್ನು ಸಹಿಸದ ಮನಃಸ್ಥಿತಿಯನ್ನು ಈ ಮಾತುಗಳು ಸ್ಪಷ್ಟವಾಗಿ ವಿವರಿಸುತ್ತವೆ. ಯಾವುದು ಅನಿಷ್ಟ? ಗಂಡು ಕಲಿಯುವ ವಿದ್ಯೆಯನ್ನೇ ಹೆಣ್ಣು ಕಲಿಯುವುದು, ಅವಳು ಅವನಿಗಿಂತ ಜಾಣಳಾಗಿ ಹುದ್ದೆಗಳನ್ನು ಗಳಿಸುವುದು, ಅವಳ ಮಾತುಗಳಿಗೂ ಧ್ವನಿ ಬರುವುದು, ಅವಳು ಉಡುಗೆಯಲ್ಲಿ ಆಯ್ಕೆ ಬಯಸುವುದು, ಬಾಳಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವುದು, ಕೀಲಿ ಕೊಟ್ಟ ಗೊಂಬೆಯಂತಾಡದೆ ಸ್ವಂತಿಕೆಯನ್ನು ಹೊಂದುವುದು ಮತ್ತು ಅಭಿವ್ಯಕ್ತಿಸುವುದು, ಎಲ್ಲಕ್ಕಿಂತ ಹೆಚ್ಚಾಗಿ ಯಾವುದು ಶೋಷಣೆ ಎನ್ನುವುದನ್ನು ಸ್ವತಃ ಅರಿತು ಅದರಂತೆ ಸ್ವಯಂ ನಿರ್ಧಾರಗಳನ್ನು ಹೊಂದಬಲ್ಲವಳಾಗುವುದು, ಇವುಗಳೇ?

ಈ ಸ್ವಾವಲಂಬನೆಯ ದಾರಿಗಳನ್ನು, ಹೆಣ್ಣನ್ನು ಸಮಾನಳು ಎಂದು ಒಪ್ಪದಿರುವವರು ಅನಿಷ್ಟಗಳೆಂಬಂತೆಯೇ ಬಿಂಬಿಸುತ್ತಾರೆ. ಅದು ಯಾಜಮಾನ್ಯದ ರಾಜಕಾರಣ. ತಮ್ಮ ಇಷ್ಟಗಳನ್ನು ಮಾತ್ರ ಮೌಲ್ಯೀಕರಿಸಿ ಇತರರ ಸರಿನಡೆಗಳನ್ನೂ ಅಪಮೌಲ್ಯ ಮಾಡುವುದು ಇಂತಹ ಕು-ರಾಜಕಾರಣದ ಮೊದಲ ಹಂತ.

ಸಂಸತ್ತಿಗೆ ಭಾರತ ಸರ್ಕಾರವೇ ಇತ್ತೀಚೆಗೆ ನೀಡಿದ ಮಾಹಿತಿಯಂತೆ, ಕಳೆದ ಐದು ವರ್ಷಗಳಲ್ಲಿ ಭಾರತದಲ್ಲಿ 1.76 ಲಕ್ಷ ಅತ್ಯಾಚಾರ ಪ್ರಕರಣಗಳು ದಾಖಲಾಗಿವೆ. ಮಧ್ಯಪ್ರದೇಶದ ಶಿವಪುರಿಯಲ್ಲಿ 'ಧದೀಚಾ' ಎಂಬ ಸಂಪ್ರದಾಯದಲ್ಲಿ ಏಳು ವರ್ಷದಿಂದ ಆರಂಭಿಸಿ ಹೆಣ್ಣು ಮಕ್ಕಳನ್ನು ಕೆಲವು ಸಾವಿರ, ಲಕ್ಷಗಳಿಗೆ ಪೋಷಕರೇ ಬಾಡಿಗೆ ನೀಡುವ ಅಮಾನುಷ ಪದ್ಧತಿ ಈ ಕ್ಷಣದಲ್ಲೂ ಜಾರಿಯಲ್ಲಿದೆ. ಇವೆಲ್ಲವೂ ಹೆಣ್ಣಿನ ಮೇಲೆ ಅನಿರ್ಬಂಧಿತ ಕ್ರೌರ್ಯಕ್ಕೆ ಪರವಾನಗಿ ನೀಡುವ ರಚನೆಗಳು ಎಂಬುದೇ ಇನ್ನೂ ನಮ್ಮೊಳಗನ್ನು ಹೊಕ್ಕಿಲ್ಲ. ಕೇವಲ ಕೆಲವರ 'ಒಳ್ಳೆಯತನ'ದಿಂದಷ್ಟೇ ಈ ಸ್ಥಿತಿಗಳನ್ನು ಸುಧಾರಿಸಲು ಸಾಧ್ಯವಿಲ್ಲ. ಬದಲಿಗೆ ಚೌಕಟ್ಟುಗಳೇ ಬದಲಾಗಬೇಕಿದೆ.

ಧರ್ಮದ ಹೆಸರಿನಲ್ಲಿ ಹೆಂಗಸರ ಎಲ್ಲ ಸಹಜ ಬಾಳ್ವೆಗಳನ್ನು ನಿರಾಕರಿಸಿ, ಅವಳ ಮೇಲೆಸಗುವ ಎಲ್ಲ ಕ್ರೌರ್ಯಗಳನ್ನು ಪುರಸ್ಕರಿಸಿ, ಅವಳೊಂದು ಮೂಕ ಪಶುವಿನಂತೆ ಇರಬೇಕು ಎನ್ನುವುದನ್ನು ಬಲವಂತವಾಗಿ ಒಪ್ಪಿಸಿ, ಅವಳನ್ನು ಅಸಹಾಯಕಳನ್ನಾಗಿಸುವ ಮೂಲಕ ಅಧಿಕಾರದ ಎಲ್ಲ ಶಸ್ತ್ರಗಳನ್ನು ತಮ್ಮದಾಗಿಸಿಕೊಳ್ಳಲಾಗುತ್ತದೆ. ಯಾವುದೇ ಜಾತಿ, ಧರ್ಮ 'ಪಾವಿತ್ರ್ಯ'ದ ಬಗೆಗೆ ಮಾತಾಡಿದಾಗಲೂ ಅದನ್ನು ಸಾಧಿಸಿಕೊಳ್ಳುವ ಬಗೆಯೆಂದರೆ, ತಮ್ಮ ತಮ್ಮ ಜಾತಿಯ, ಧರ್ಮದ ಹೆಣ್ಣು ಮಕ್ಕಳಿಗೆ ಲೈಂಗಿಕ ನಿಯಂತ್ರಣಗಳನ್ನು ಏಕಪಕ್ಷೀಯವಾಗಿ ಹೇರುವುದು. ಮತ್ತದನ್ನು ಪ್ರಶ್ನೆಯೇ ಇಲ್ಲದೆ ಒಪ್ಪಿಕೊಳ್ಳುವಂತೆ ಭೀತಿಗೆ ಒಳಪಡಿಸುವುದು.

ಮೂಲಭೂತವಾದಿಗಳು ಇನ್ನೂ ಮುಂದಕ್ಕೆ ಹೋಗಿ, ಈ ಚೌಕಟ್ಟಿನಲ್ಲಿ ಒಳ-ಹೊರಗು ಎಂಬ ಯಾವ ಬಾಗಿಲಿಗೂ ಅವಕಾಶ ನೀಡುವುದಿಲ್ಲ. ಹೆಣ್ಣು ವಿದ್ಯೆ ಪಡೆಯುವುದು ಮತ್ತು ಉದ್ಯೋಗಕ್ಕೆ ಹೋಗುವುದು ಕೂಡಾ ಅವರ ಪ್ರಕಾರ ಬಾಗಿಲುಗಳೇ.

ಅಫ್ಗಾನಿಸ್ತಾನವು ನಿರಂತರ ಯುದ್ಧದ ಮೇಲಾಟಗಳಿಗೆ ಬಲಿಯಾಗಿದೆ. ಯುದ್ಧದ ಮೇಲಾಟವೆಂದರೆ ಅತ್ಯಂತ ಖಚಿತವಾಗಿ ಪುರುಷಾಹಂಕಾರದ ಮೇಲಾಟವೇ ಆಗಿದೆ. ಎಲ್ಲೆಲ್ಲಾ ಈ ಪುರುಷಾಹಂಕಾರವನ್ನು ಮೀರಿ ಮಾನವೀಯ ನೆಲೆಯಲ್ಲಿ ವರ್ತಿಸುವ ಪುರುಷರು ಅಧಿಕಾರ ಪಡೆದಿದ್ದಾರೋ ಅಲ್ಲೆಲ್ಲಾ ಒಂದು ಹಂತದ ಮಟ್ಟಿಗೆ 'ರಿಲ್ಯಾಕ್ಸೇಶನ್' ಸಿಕ್ಕುತ್ತದೆ. ಮತ್ತು ಹೆಂಗಸರು ಇದಕ್ಕಾಗಿ ಸದಾ ಪುನೀತರೂ, ಕೃತಜ್ಞರೂ ಆಗಿರಬೇಕು ಎಂದು ಹೆಂಗಸರೂ, ಗಂಡಸರೂ ನಂಬುವ ಸ್ಥಿತಿಯ ತನಕವಷ್ಟೇ ನಾವಿಂದು ತಲುಪಿರುವುದು. ಹೀಗಿರುವಾಗ ತಾಲಿಬಾನ್‌ನ ಆಕ್ರಮಣ ಈ ಚೂರು ಪಾರು ಆಶಾಕಿರಣವನ್ನೂ ಹೊಸಕಿ ಹಾಕುತ್ತದೆ. ಆದರೆ ದುರಂತವೆಂದರೆ, ಇಂತಹ ಸನ್ನಿವೇಶವನ್ನು ಕೂಡಾ ರಾಜಕಾರಣದ ಬೇಳೆ ಬೇಯಿಸಿಕೊಳ್ಳುವುದಕ್ಕಾಗಿ ಬಳಸಿಕೊಳ್ಳಲು ನಿಜ ಚರಿತ್ರೆಯನ್ನು ಮರೆಮಾಚಲಾಗುತ್ತಿದೆಯಲ್ಲಾ, ಅದು ಕೂಡಾ ಸ್ತ್ರೀವಿರೋಧಿ ಸಂಗತಿಯೇ ಆಗಿದೆ.

ಯಾವ ಅಮೆರಿಕವನ್ನು ಬದಲಾವಣೆಯ ಹರಿಕಾರ ಎಂದು ಬಿಂಬಿಸಲಾಗುತ್ತಿದೆಯೋ ಅದೇ ಅಮೆರಿಕವು ಕಮ್ಯುನಿಸ್ಟರನ್ನು ಮಟ್ಟ ಹಾಕುವ ಏಕೈಕ ಉದ್ದೇಶದಿಂದ ತಾಲಿಬಾನ್ ಅನ್ನು ಬೆಂಬಲಿಸಿ ಅಫ್ಗಾನಿಸ್ತಾನವನ್ನು ನರಕವಾಗಿಸಿತು ಎನ್ನುವುದನ್ನು ಪಾಠವಾಗಿ ನಾವು ನೋಡುತ್ತಿದ್ದೇವೆಯೇ? ಮೂಲಭೂತವಾದದ ವ್ಯಕ್ತ ಕ್ರೌರ್ಯವನ್ನು ಇಸ್ಲಾಮಿಕ್ ಉಗ್ರರು ಮಾಡುತ್ತಿರುವುದನ್ನು ಖಂಡಿಸುವುದರ ಜೊತೆಗೇ ನಾವಿಂದು ಎಲ್ಲಾ ಮೂಲಭೂತವಾದದ ಅಂತಿಮ ಫಲಿತ ಇದೇ ಆಗಿರುತ್ತದೆ ಎನ್ನುವುದಕ್ಕೂ ಒತ್ತು ಕೊಡಬೇಕಾಗಿದೆ.

1920ರಿಂದ ಈಚೆಗಿನ ಅಫ್ಗಾನಿಸ್ತಾನದ ರಾಜಕೀಯದಲ್ಲಾದ ಏರುಪೇರು ಮತ್ತು ಅಲ್ಲಿನ ಮಹಿಳೆಯರ ಬದುಕಿನಲ್ಲಾದ ಏರುಪೇರುಗಳನ್ನು ಗಮನಿಸಿದರೆ ಇದನ್ನು ಸ್ಪಷ್ಟವಾಗಿ ಗುರುತಿಸಬಹುದು. 1919ರಲ್ಲಿ ಅಧಿಕಾರಕ್ಕೆ ಬಂದ ರಾಜ ಅಮಾನುಲ್ಲಾ ಕಾಲದಲ್ಲಿ ಪ್ರಯತ್ನಪೂರ್ವಕವಾಗಿ ಹಲವು ಬದಲಾವಣೆಗಳಿಗೆ ಒತ್ತು ನೀಡಿ ಸ್ತ್ರೀಯರ ವಿದ್ಯಾಭ್ಯಾಸ, ಉದ್ಯೋಗ, ಆಧುನಿಕ ಉಡುಪುಗಳನ್ನು ಪ್ರೋತ್ಸಾಹಿಸುವುದರೊಂದಿಗೆ ಬಲವಂತದ ಮದುವೆ, ಬಾಲ್ಯವಿವಾಹ, ವಧುದಕ್ಷಿಣೆ ಹಾಗೂ ಬಹುಪತ್ನಿತ್ವಗಳನ್ನು ನಿಷೇಧಿಸಿ ಕಾನೂನುಗಳನ್ನು ತರಲಾಯಿತು. ರಾಣಿ ಸೊರಾಯಾ ಅಫ್ಗನ್‌ನ ಮೊತ್ತಮೊದಲ ಮಹಿಳಾ ಮ್ಯಾಗಜಿನ್ ಹೊರತಂದಳಲ್ಲದೆ, ಮಹಿಳಾ ಸಂಘಟನೆಯನ್ನು ಹುಟ್ಟುಹಾಕಿ ಸಾಮಾಜಿಕ ಬದಲಾವಣೆಗಳಿಗೆ ಮುನ್ನುಡಿ ಬರೆದಳು. ಸಾರ್ವಜನಿಕವಾಗಿ ತಲೆಯ ಮೇಲಿನ ಮುಸುಕನ್ನು ತೆಗೆದು ಆಕೆ ಕಾಣಿಸಿಕೊಂಡಿದ್ದು ಇತರರಿಗೂ ಸ್ಫೂರ್ತಿ ನೀಡಿತು.

ಮುಂದೆ ಬಂದ ಸರ್ಕಾರಗಳು ಮಹಿಳೆಯರಿಗೆ ಮತದಾನದ ಹಕ್ಕಿನಿಂದ ಶುರುವಾಗಿ ಹೆಣ್ಣು ಎರಡನೇ ದರ್ಜೆ ಪ್ರಜೆಯಲ್ಲ ಎಂದು ಸಾರುವ ಎಲ್ಲ ಹೆಜ್ಜೆಗಳನ್ನಿಟ್ಟವು. ರಾಣಿಯರು ಮತ್ತು ಪ್ರಧಾನಿಯ ಪತ್ನಿ ತಲೆಮುಸುಕು ಧರಿಸದೇ ಇರುವುದನ್ನು ಇಸ್ಲಾಮಿಕ್ ಗುಂಪೊಂದು ಪ್ರತಿಭಟಿಸಿ, ಶರಿಯತ್ ಪಾಲನೆ ಆಗಬೇಕು ಎಂದಾಗ, 1953ರಿಂದ ಪ್ರಧಾನಿಯಾಗಿದ್ದ ಮೊಹಮದ್ ದಾವುದ್ ಖಾನ್ ಮುಕ್ತ ಚರ್ಚೆಗೆ ಆಹ್ವಾನಿಸಿ, ಶರಿಯತ್‌ನಲ್ಲಿ ಎಲ್ಲಿ ಈ ನಿಯಮ ಇದೆ ತೋರಿಸಿ ಎಂದಾಗ, ತೋರಿಸಲು ಈ ಗುಂಪು ವಿಫಲವಾಯಿತು. ಆಗ ಪರ್ದಾ ನಿಷೇಧದ ಬಗೆಗೂ ಸರ್ಕಾರ ಯೋಚಿಸಿತು.

1978ರಲ್ಲಿ ಬಂದ ಕಮ್ಯುನಿಸ್ಟ್ ಸರ್ಕಾರವು ಮಹಿಳಾ ಸಮಾನತೆಯ ಕೆಲಸಗಳನ್ನು ವ್ಯಾಪಕವಾಗಿ ಆರಂಭಿಸಿತು. ಇದು, ಮಹಿಳೆಯರು ತಮ್ಮ ಬಾಳಸಂಗಾತಿಯನ್ನು ಮತ್ತು ತಮ್ಮ ಉದ್ಯೋಗಗಳನ್ನು ತಾವೇ ಆಯ್ಕೆ ಮಾಡಿಕೊಳ್ಳುವ ಹಕ್ಕನ್ನೂ ನೀಡಿತು. ಬದಲಾವಣೆ ಗ್ರಾಮೀಣ ಭಾಗಗಳಿಗೂ ಪಸರಿಸಿತು. ಇದು, ಮೂಲಭೂತವಾದಿ ಮುಜಾಹಿದೀನ್ ಪಡೆಯ ಅಸಹನೆಯನ್ನು ಹೆಚ್ಚಿಸಿತು. ಮುಂದೆ ಸೋವಿಯತ್ ಬೆಂಬಲಿತ ಕಮ್ಯುನಿಸ್ಟರ ವಿರುದ್ಧ ಅಮೆರಿಕ ಇದೇ ಮುಜಾಹಿದೀನ್‌ಗಳಿಗೆ ಬೆಂಬಲ ನೀಡಿದ್ದೇ ಮೂಲಭೂತವಾದಿಗಳು ಇಂದಿನ ತಾಲಿಬಾನ್ ತನಕ ಭೂತಾಕಾರವಾಗಿ ಬೆಳೆಯಲು ಕಾರಣವಾಯಿತು. ಕಳೆದ ಇಪ್ಪತ್ತು ವರ್ಷಗಳಲ್ಲಿ ಮಹಿಳೆಯರು ಮತ್ತೆ ಬೀದಿಗಳಲ್ಲಿ, ಪಾರ್ಲರ್‌ಗಳಲ್ಲಿ, ವಿರಳವಾಗಿ ಶಾಲೆ ಕಾಲೇಜುಗಳಲ್ಲಿ, ಉದ್ಯೋಗಗಳಲ್ಲಿ ಕಾಣಿಸಿದರಾದರೂ ನಿರಂತರವಾಗಿ ಅಲ್ಲಿ ಮಹಿಳೆಯರ ಅಪಹರಣ, ಅತ್ಯಾಚಾರ, ಕೊಲೆಗಳು ನಡೆದಿವೆ. 2017ರಿಂದ 2019ರ ತನಕ ಹೆಣ್ಣುಮಕ್ಕಳ ಶಾಲೆಗಳ ಮೇಲೆ ಮುನ್ನೂರಕ್ಕೂ ಹೆಚ್ಚು ಬಾಂಬ್ ದಾಳಿ ನಡೆದಿದೆ. 2019ರೊಂದರಲ್ಲೇ ಮಹಿಳೆಯರ ಮೇಲಿನ ಹಿಂಸೆಯ 4,639 ಕೇಸುಗಳು ದಾಖಲಾಗಿವೆ.

'ಕಾಬೂಲಿವಾಲಾನ ಬೆಂಗಾಲಿ ಹೆಂಡತಿ' ಎಂಬ ಆತ್ಮಚರಿತ್ರೆ ಬರೆದಿದ್ದ, ತಾಲಿಬಾನ್ ಆಡಳಿತದಲ್ಲಿದ್ದಾಗ ಅಲ್ಲಿಂದ ತಪ್ಪಿಸಿಕೊಂಡು ಬಂದಿದ್ದ, ಕೋಲ್ಕತ್ತದ ಸುಶ್ಮಿತಾ ಬ್ಯಾನರ್ಜಿ 2013ರಲ್ಲಿ ಮತ್ತೆ ಅಲ್ಲಿಗೆ ತೆರಳಿದ ಸಂದರ್ಭದಲ್ಲಿ ಉಗ್ರರಿಂದ ಆಕೆಯ ಹತ್ಯೆಯಾಯಿತು. ಹೆಣ್ಣಿನ ಕುರಿತಾದ ಮೂಲಭೂತ ತಿಳಿವಳಿಕೆ ಅಲ್ಲಿನ್ನೂ ಬದಲಾಗಿರಲಿಲ್ಲ. ಮೇಲ್ನೋಟದ ಬದಲಾವಣೆ ಮಾತ್ರ ಪುನಃ ಅಲ್ಲಿ ಕಾಣಿಸಿತ್ತು. ತಾಲಿಬಾನೀಯರ ಕುಕೃತಿ ಮತ್ತು ವಿಕೃತಿಗಳಿಗೆ ಸಮರ್ಥನೆ ಹಾಗೂ ಮಾನ್ಯತೆಯನ್ನು ಅದಾಗಲೇ ಉತ್ಪಾದಿಸಲಾಗಿತ್ತು. ಹೀಗಾಗಿ ಹೆಣ್ಣಿನ ಸಹಜ ಪ್ರಕೃತಿಯ ಮೇಲೆ ಆಕ್ರಮಣಕ್ಕೂ ಸಮ್ಮತಿಯನ್ನು ಉತ್ಪಾದಿಸಲಾಗಿತ್ತು. ಇಂತಹ ಸಮ್ಮತಿ ವಿಶ್ವದ ಹಲವೆಡೆ ಇದೆ. ಕೆಲವು ಭೀಕರವಾಗಿರುತ್ತವೆ. ಇನ್ನು ಕೆಲವು ಪ್ರಜಾಪ್ರಭುತ್ವದೊಳಗಡೆ ಅಗೋಚರವಾಗಿರುತ್ತವೆ.

ಸಮತೆಯೇ ಸಹಜವೆನ್ನಿಸುವ ಬೇರುಮಟ್ಟದ ಬದಲಾವಣೆ ಮನುಷ್ಯ ಚರಿತ್ರೆಯಲ್ಲಿ ಅಡಕಗೊಳ್ಳುವ ತನಕ ಈ ಹಿಂಸೆಗಳ ರೌದ್ರ ನರ್ತನ ಜೋಕಾಲಿಯಾಡುತ್ತಲೇ ಇರುತ್ತದೆ.

ಲೇಖಕಿ: ಪ್ರಾಧ್ಯಾಪಕಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತರೀಕೆರೆ

ಚುರುಮುರಿ

ಶಿಷ್ಯೋಪದೇಶ!

- ಎಸ್.ಬಿ.ರಂಗನಾಥ್

ಒಂದೂವರೆ ವರ್ಷದ ನಂತರ ಪುನರಾರಂಭಗೊಂಡ ನಮ್ಮ ಹಳ್ಳಿ ಹೈಸ್ಕೂಲ್ ಸುಣ್ಣಬಣ್ಣದಿಂದ ಕಂಗೊಳಿಸುತ್ತಿತ್ತು. ಪುಷ್ಪವೃಷ್ಟಿಯ ನಂತರ ದೊರೆತ ಸಿಹಿತಿಂಡಿ ಚಪ್ಪರಿಸುತ್ತಾ ವಿದ್ಯಾರ್ಥಿಗಳು ಸಂಭ್ರಮಿಸುತ್ತಿದ್ದರು. ಮಾಸ್ಕ್ ಧರಿಸಿದ್ದ ಅವರು ಅಂತರ ಪಾಲನೆ ಮಾಡುತ್ತಾ ದೂರವಿದ್ದುದರಿಂದ ಹಾಗೂ ದೀರ್ಘಕಾಲ ಸಂಪರ್ಕ ತಪ್ಪಿದ್ದರಿಂದ, ನಿವೃತ್ತಿಯ ಅಂಚಿನಲ್ಲಿದ್ದ ಕ್ಲಾಸ್ ಮೇಷ್ಟ್ರು ಅವರ ಹೆಸರುಗಳನ್ನು ತಪ್ಪಾಗಿ ಕರೆಯುತ್ತಿದ್ದರು.

ವಿದ್ಯಾರ್ಥಿಗಳು ಮುಸಿಮುಸಿ ನಗುತ್ತಿದ್ದುದನ್ನು ಕಂಡ ಮೇಷ್ಟ್ರು ಅಸಹನೆಯಿಂದ 'ಇವತ್ತು ಪಾಠ ಬೇಡ. ಕೊರೊನಾ ಅವಧಿಯ ನಿಮ್ಮ ಅನುಭವ ಕುರಿತು ಪ್ರಬಂಧ ಬರೆಯಿರಿ' ಎಂದರು. ಅವರು ಸುಮ್ಮನಿದ್ದುದನ್ನು ಗಮನಿಸಿ ಕೇಳಿದರು- 'ಬರೆಯಲು ನೋಟ್‌ಬುಕ್ ಏಕೆ ತಂದಿಲ್ಲ?'

'ಸಾರ್, ನಾವೆಲ್ಲ ಆನ್‌ಲೈನ್ ಪಾಠ ಕೇಳಿ ಪರೀಕ್ಷೆ ಬರೆಯದೆ ಪಾಸಾದವರು. ಓದುವ ಬರೆಯುವ ಅಭ್ಯಾಸ ತಪ್ಪಿಹೋಗಿದೆ' ಎಂದ ಸೋಮು. 'ಈಗ ಶಾಲೆ ಆರಂಭವಾಯ್ತಲ್ಲ, ನೀವು ಪುಸ್ತಕ, ನೋಟ್‌ಬುಕ್ಸ್ ತರಬೇಕು'.

'ನಾವು ಆನ್‌ಲೈನ್ ಕ್ಲಾಸ್‌ಗೆ ಒಗ್ಗಿಕೊಂಡಿದೀವಿ. ಮೊಬೈಲ್‌ನಲ್ಲೇ ಉತ್ತರ ಬರೀತೀವಿ' ಎನ್ನುತ್ತಾ ರಾಮು ಜೇಬಿನಿಂದ ಮೊಬೈಲ್ ತೆಗೆದ. 'ಇನ್ನೊಮ್ಮೆ ಪ್ರಶ್ನೆ ಜೋರಾಗಿ ಹೇಳಿ ಸಾರ್, ವಾಯ್ಸ್ ರೆಕಾರ್ಡ್ ಮಾಡ್ಕೊಳ್ತೀವಿ' ಎಂದಳು ಜಾನಕಿ. ಚಿಂತಾಕ್ರಾಂತರಾದ ಮೇಷ್ಟ್ರನ್ನು ಗಮನಿಸಿದ ಸರಳ ಹೇಳಿದಳು- 'ಸಾರ್, ನಮ್ಮ ಮೊಬೈಲ್‌ಗಳಲ್ಲಿ ಆಟೊ ಕರೆಕ್ಷನ್ ಮತ್ತು ಆಟೊ ವ್ಯಾಲ್ಯುಯೇಷನ್ ಆ್ಯಪ್ ಇದೆ, ಚಿಂತಿಸಬೇಡಿ'.

'ಕಂಪ್ಯೂಟರ್ ಕಲಿಕೆಯನ್ನು ಸರ್ಕಾರ ಕಡ್ಡಾಯ ಮಾಡಿದೆಯಲ್ಲಾ. ನಿಮ್ಗೆ ಕಲಿಸಿಕೊಡ್ತೀವಿ, ಬನ್ನಿ' ಎಂದ ಶ್ರೀನಿವಾಸ. ಮೊಬೈಲ್‌ನಲ್ಲಿ ವಾಟ್ಸ್‌ಆ್ಯಪ್, ಎಸ್ಸೆಮ್ಮೆಸ್, ಟ್ವಿಟರ್, ಫೇಸ್‌ಬುಕ್, ಯುಟ್ಯೂಬ್, ಇನ್‌ಸ್ಟಾಗ್ರಾಂ ಬಗ್ಗೆ ವಿದ್ಯಾರ್ಥಿಗಳಿಂದ ಮೇಷ್ಟ್ರಿಗೆ ಶಿಷ್ಯೋಪದೇಶ ಆಯಿತು!

ಮೇಷ್ಟ್ರನ್ನು ರಾಮು ಕೇಳಿದ- 'ಈಗ ಟೆಸ್ಟ್ ಮಾಡುವ ಸರದಿ ನಮ್ಮದು- ಎಸ್ಸೆಮ್ಮೆಸ್ ಅಂದ್ರೇನು?'

ಮೇಷ್ಟ್ರು 'ಈ ಕೊರೊನಾ, ಕಂಪ್ಯೂಟರ್, ಮೊಬೈಲ್‌ಗಳ ಕಿರುಕುಳದಿಂದ 'ಸೇವ್ ಮೈ ಸೋಲ್'- ನನ್ನನ್ನು ಕಾಪಾಡಿ ಅಂತ' ಎಂದಾಗ ವಿದ್ಯಾರ್ಥಿಗಳೆಲ್ಲಾ ಜೋರಾಗಿ ಚಪ್ಪಾಳೆ ತಟ್ಟಿದರು!

ಸಂಗತ

ಸಂಸ್ಕೃತ ಭಾಷೆ: ಹೀಗಿದೆ ವಾಸ್ತವಾಂಶ

ಜನಬಳಕೆಯಲ್ಲಿರುವ ಯಾವುದೇ ಭಾಷೆಯಲ್ಲಿ ಬದಲಾವಣೆ ಅನಿವಾರ್ಯ

- ಡಾ. ಆರ್.ಲಕ್ಷ್ಮೀನಾರಾಯಣ

ಸಂಸ್ಕೃತ ಭಾಷೆಯ ಶ್ರೀಮಂತಿಕೆ, ಹಿರಿಮೆಯ ಬಗ್ಗೆ ಯೋಗಾನಂದ ಬಹಳ ಉತ್ಸಾಹ, ಅಭಿಮಾನಗಳಿಂದ ಬರೆದಿದ್ದಾರೆ (ಸಂಗತ, ಆ. 24). ಸಂಸ್ಕೃತ ಭಾಷೆಯಲ್ಲಿ ರಚಿತವಾಗಿರುವ ಶಾಸ್ತ್ರ ವಿಷಯಗಳು, ಅಡಕವಾಗಿರುವ ಜ್ಞಾನಭಂಡಾರ ಮಹತ್ವದವೇ ಎನ್ನುವುದರಲ್ಲಿ ಎರಡು ಮಾತಿಲ್ಲ. ಅದರ ಉಪಯೋಗವನ್ನು ನಾವೆಲ್ಲರೂ ಪಡೆದುಕೊಳ್ಳಬೇಕೆಂಬುದೂ ಸರಿಯೆ.

ಸಂಸ್ಕೃತ ಭಾಷೆಯ ಮೇಲಿನ ಪ್ರೀತಿಯಿಂದ ಅದನ್ನು ಕಲಿಯುವುದಕ್ಕೆ ಯಾರ ಆಕ್ಷೇಪವೂ ಇಲ್ಲ. ಆದರೆ ಈಗಾಗಲೇ ವಿಜ್ಞಾನ, ತಾಂತ್ರಿಕ ವಿಷಯಗಳು, ಇನ್ನಿತರ ವಿಷಯಗಳ ಜ್ಞಾನಕ್ಕೆ ಬೆಳಕಿಂಡಿಯಾಗಿರುವ ಇಂಗ್ಲಿಷಿನ ಬದಲಾಗಿಯಾಗಲೀ, ಮಕ್ಕಳ ಸಹಜ ಬೌದ್ಧಿಕ ವಿಕಾಸಕ್ಕೆ ಮಾತೃಕಾ ಸ್ವರೂಪದಲ್ಲಿರುವ ಮಾತೃಭಾಷೆ ಅಥವಾ ಪ್ರಾಂತ್ಯಭಾಷೆಯ ಬದಲಾಗಿಯಾಗಲೀ ಸಂಸ್ಕೃತದ ಕಲಿಕೆ ಖಂಡಿತಾ ಅಲ್ಲ ಮತ್ತು ಆಗಬಾರದು.

ಸಂಸ್ಕೃತ ಎಂದರೇನೆ ಸಂಸ್ಕರಿಸಲ್ಪಟ್ಟದ್ದು ಎಂಬ ಅರ್ಥ ಬಂದದ್ದು, ಜನಭಾಷೆಯಾಗಿದ್ದ ಪ್ರಾಕೃತವು ಪಾಣಿನಿಯ ವ್ಯಾಕರಣದ ನಿಯಮಗಳಿಗೆ ಒಳಪಟ್ಟು ಹಲವಾರು ಸಂಸ್ಕಾರಗಳನ್ನು ಪಡೆದುಕೊಂಡಿತೆಂಬ ಕಾರಣಕ್ಕಾಗಿ. ಎಂದೇ ಸಂಸ್ಕೃತ ಎಂಬ ಹೆಸರು ಬಂದದ್ದು. ಹಾಗೆ ವ್ಯಾಕರಣದ ನಿಯಮಗಳಿಗೆ ಒಳಪಟ್ಟ ಮೇಲೆ ಅದರಲ್ಲಿ ಏನೊಂದು ವ್ಯತ್ಯಾಸವೂ ಆಗಿಲ್ಲ. 'ಸಂಸ್ಕೃತ ಭಾಷೆ ಸಹಸ್ರಾರು ವರ್ಷಗಳಿಂದ ಬದಲಾಗದೆ ಉಳಿದಿದೆ' ಎಂಬ ಲೇಖಕರ ಮಾತು ಅದನ್ನೇ ದೃಢಪಡಿಸುತ್ತದೆ. ಒಂದು ಭಾಷೆ ಹಾಗೆ ಸಹಸ್ರಾರು ವರ್ಷ ಬದಲಾಗದೆ ಉಳಿದಿದೆ ಎಂದರೆ ಅದು ಜನವ್ಯವಹಾರದಲ್ಲಿ ಉಳಿದಿಲ್ಲ ಮತ್ತು ಅದು ಯಾರ ಮಾತೃಭಾಷೆಯೂ ಆಗಿ ಉಳಿದಿಲ್ಲ ಎಂದೇ ಅರ್ಥ.

ಜನಬಳಕೆಯಲ್ಲಿರುವ ಯಾವುದೇ ಭಾಷೆಯಲ್ಲಿ ಬದಲಾವಣೆ ಅನಿವಾರ್ಯ. ವ್ಯಾಕರಣದ ನಿಯಮಗಳನ್ನು ಜನಭಾಷೆ ಮೀರುತ್ತದಾದ ಕಾರಣ, ಜನರಾಡುವ ಭಾಷೆ ಹೀಗಿರಬೇಕೆಂದು ಹೇಳದೆ, ಜನರು ಆಡುತ್ತಿರುವ ಭಾಷೆಗೆ ವ್ಯಾಕರಣವನ್ನು ವ್ಯಾಕರಣಕಾರರು ಕಾಲದಿಂದ ಕಾಲಕ್ಕೆ ರಚಿಸುತ್ತ ಹೋಗುತ್ತಾರೆ. ಹಾಗೆ ಭಾಷೆ ಬದಲಾಗದೆ ಉಳಿಯುವುದು ಅದರ ಶ್ರೇಷ್ಠತೆಯೂ ಅಲ್ಲ, ಅಪೇಕ್ಷಣೀಯವೂ ಅಲ್ಲ. ಯಾವತ್ತಾದರೂ ಸಂಸ್ಕೃತ ಜನಬಳಕೆಯಲ್ಲಿತ್ತೇ ಎಂಬುದೇ ಅನುಮಾನ. ಜನಬಳಕೆಯಲ್ಲಿದ್ದ ಭಾಷೆಗಳು ಪ್ರಾಕೃತಭಾಷೆಗಳು. ಮುಂದೆ ಇವು ಸಂಸ್ಕರಣಕ್ಕೆ ಒಳಗಾದುವು. ಹಾಗೆ ಜನಬಳಕೆಯಲ್ಲಿದ್ದದ್ದೇ ಸಂದೇಹವಾಗಿರುವ, ಯಾರ ಮಾತೃಭಾಷೆಯೂ ಯಾವ ಕಾಲಕ್ಕೂ ಬಹುಶಃ ಆಗಿರದ ಸಂಸ್ಕೃತವನ್ನು ಇಂದು ಮತ್ತೆ ಜನಬಳಕೆಯ ಭಾಷೆ ಮಾಡುತ್ತೇವೆಂದು ಹೊರಡುವುದು ಬೆಟ್ಟಕ್ಕೆ ಕಲ್ಲು ಹೊತ್ತಂತೆ. ಮತ್ತು ಅದೊಂದು ವ್ಯರ್ಥ ಸಾಹಸವಲ್ಲದಿದ್ದರೂ ಅನಗತ್ಯ ಪ್ರಯತ್ನ.

ಭಾಷಾ ಸಂಸ್ಥೆಗಳಿಗೆ (ಲ್ಯಾಂಗ್ವೇಜ್ ಇನ್‌ಸ್ಟಿಟ್ಯೂಟ್) ಹೋಗಿ ಕಲಿತರೆ ಇಂಗ್ಲಿಷೂ ಸೇರಿದಂತೆ ಸಂಭಾಷಣೆ ಅಥವಾ ವ್ಯವಹಾರಕ್ಕೆ ಅಗತ್ಯವಾದಷ್ಟನ್ನು ಎರಡು ವರ್ಷಗಳೇಕೆ ಇನ್ನೂ ಕಡಿಮೆ ಅವಧಿಯಲ್ಲೇ ಕಲಿಯಬಹುದು ಎಂಬುದು ಭಾಷಾ ವಿಜ್ಞಾನಿಗಳ ಹೇಳಿಕೆ. ಕೇವಲ ಭಾವೇ ಪ್ರಯೋಗಗಳಿಗೆ ಸೀಮಿತಗೊಂಡ, ಇಲ್ಲವೆ ಕೃದಂತ ರೂಪಗಳ ಹಾಗೂ ಪರಿಮಿತ ಶಬ್ದಗಳ ಬಳಕೆಗೆ ಒಳಪಟ್ಟು ಮತ್ತೂರು, ಹೊಸಳ್ಳಿ ಅಥವಾ ಇನ್ನಿತರ ಒಂದೆರಡು ಪ್ರದೇಶಗಳಲ್ಲಿ ಸಂಸ್ಕೃತವನ್ನು ಜನ ತಮ್ಮ ನಿತ್ಯ ವ್ಯವಹಾರಕ್ಕೆ ಬಳಸುತ್ತಾರೆಂದರೆ ಅಂಥ ಗಿಳಿ ಪಾಠದ ಸಂಸ್ಕೃತದಿಂದ ಏನುತಾನೆ ಉಪಯೋಗ?

ಒಂದು ಜೀವಂತ ಭಾಷೆ ಜನಬಳಕೆಗೆ ಒಳಪಟ್ಟಾಗ ಅದರಲ್ಲಿ ಜನರ ಅನುಭವ ಬೆಳೆದಂತೆಲ್ಲ ಮತ್ತು ಅಗತ್ಯಕ್ಕೆ ತಕ್ಕಂತೆಲ್ಲ ಹೊಸ ಹೊಸ ಶಬ್ದಗಳು ರೂಪುಗೊಳ್ಳುತ್ತ ಹೋಗುತ್ತವೆ, ಸಿದ್ಧ ವ್ಯಾಕರಣದ ನಿಯಮಗಳನ್ನು ಆ ಭಾಷೆ ಮೀರುತ್ತ ಹೋಗುತ್ತದೆ ಎಂಬುದಕ್ಕೆ ಹೆಚ್ಚು ಪುರಾವೆಯೇನೂ ಬೇಕಾಗುವುದಿಲ್ಲ. ಸಹಸ್ರಾರು ವರ್ಷಗಳ ಯಾವುದೇ ದೇಶ ಭಾಷೆಯ ಇತಿಹಾಸವೂ ಅದಕ್ಕೆ ನಿದರ್ಶನವಾಗಬಲ್ಲುದು. ಬುದ್ಧ, ಮಹಾವೀರರ ಕಾಲಕ್ಕೇ ಸಂಸ್ಕೃತ ಜನಬಳಕೆಯಲ್ಲಿರಲಿಲ್ಲ. ಎಂದೇ ಅವರು ಪಾಳಿ ಮತ್ತು ಪ್ರಾಕೃತ ಭಾಷೆಗಳಲ್ಲಿ ತಮ್ಮ ಧರ್ಮಗಳನ್ನು ಬೋಧಿಸಿದರು.

ಸಂಸ್ಕೃತವನ್ನು ಲೀಲಾಜಾಲವಾಗಿ ಮಾತನಾಡಲು ಸಾಧ್ಯವಾಗಿದ್ದರೆ ಹಾಗೆ ಅದು ಜನಬಳಕೆಯಿಂದ ಮರೆಯಾಗಲು ಸಾಧ್ಯವೇ ಇರಲಿಲ್ಲ. ಆ ಕಾಲಕ್ಕೆ ಅದನ್ನು ಬಳಸದಿರಲು ಯಾವ ರಾಜಕೀಯ ಒತ್ತಡವೂ ಇದ್ದಂತಿಲ್ಲ. ಅದಕ್ಕೆ ಕಾರಣವೇನು ಎಂಬ ಬಗ್ಗೆ ಕುತೂಹಲಕ್ಕಾಗಿ ಸಂಶೋಧನೆ ಮಾಡಬಹುದು.

ಏಕಾಗ್ರತೆ, ಧ್ವನಿಶುದ್ಧಿ, ಸಹನಶೀಲತೆಯು ಸಂಸ್ಕೃತ ಕಲಿಕೆಯಿಂದ ಮಕ್ಕಳಲ್ಲಿ ಪ್ರಾಪ್ತವಾಗುತ್ತವೆ ಎಂಬ ಲೇಖಕರ ಹೇಳಿಕೆ ನಿರಾಧಾರವಾದ ಒಂದು ಬೀಸು ಹೇಳಿಕೆ. ನಮ್ಮ ಭಾಷೆಗಳಲ್ಲಿ ಸೇರಿಹೋಗಿರುವ ಸಂಸ್ಕೃತ ಶಬ್ದಗಳನ್ನು ಉಚ್ಚರಿಸುವ ಮಟ್ಟಿನ ಧ್ವನಿಶುದ್ಧಿ ಅದರಿಂದ ಬರಬಹುದು. ಅದರ ಕಠಿಣವಾದ ವ್ಯಾಕರಣ ನಿಯಮಗಳನ್ನು ನೆನಪಿನಲ್ಲಿಟ್ಟುಕೊಳ್ಳಲು ಸಹನಶೀಲತೆ ಬರುತ್ತದೋ ಇಲ್ಲವೋ ತಿಳಿಯದು. ಆದರೆ ಜ್ಞಾಪಕಶಕ್ತಿ ಬೇಕು ಮತ್ತು ಅದು ಇನ್ನಷ್ಟು ಹೆಚ್ಚಬಹುದೇನೋ. ಏನನ್ನು ಕಲಿಯಬೇಕಾದರೂ ಏಕಾಗ್ರತೆ ಬೇಕೇ ಬೇಕು. ಅದು ಸಂಸ್ಕೃತ ಕಲಿಕೆಯಿಂದ ಬರುತ್ತದೆಂಬುದಕ್ಕೆ ಯಾವ ಪುರಾವೆಯೂ ಇಲ್ಲ. ಶಾಲಾ ಕಾಲೇಜುಗಳಲ್ಲಿ ಸಂಸ್ಕೃತವನ್ನು ಈಗ ಕಲಿಸುತ್ತಿರುವ ರೀತಿಯಲ್ಲಿ ಕಲಿಸುತ್ತಾ ಹೋದರೆ ಅವರೆಂದೆಂದೂ ಸ್ವತಂತ್ರವಾಗಿ ಸಂಸ್ಕೃತದಲ್ಲಿ ನಿರರ್ಗಳವಾಗಿ ಮಾತನಾಡಲು ಅಸಾಧ್ಯ ಎಂಬುದಂತೂ ನಿಜ.

ಸದ್ಯ ಕನ್ನಡಿಗರು ಮೊದಲು ಕನ್ನಡದ ವಿಷಯಕ್ಕೆ ಅತ್ಯುತ್ಸಾಹ ತೋರಿ ಆಪ್ತವಾಗಿಸಿಕೊಳ್ಳಲಿ. ಆಮೇಲೆ ಬೇಕಾದರೆ ಸಂಸ್ಕೃತವನ್ನೂ ಆಪ್ತವಾಗಿಸಿಕೊಳ್ಳಲಿ. ಯಾರು ಬೇಡ ಎನ್ನುತ್ತಾರೆ?

ವಾಚಕರ ವಾಣಿ

ಪ್ರಸಕ್ತ ವ್ಯವಸ್ಥೆ ಹೊಸ ಆಶಯ ಒಳಗೊಳ್ಳಲಿ

'ಕೃಷಿ ಆದಾಯ ಹೆಚ್ಚಳಕ್ಕೆ ರೈತರ ಸಮಿತಿ' ಸುದ್ದಿ (ಪ್ರ.ವಾ., ಆ. 26) ಓದಿ ಆಶ್ಚರ್ಯವಾಯಿತು. ಮುಖ್ಯಮಂತ್ರಿಯವರು ಈ ಕಾರ್ಯಕ್ಕೆ ಪೂರಕವಾಗಿ ಇನ್ನೊಂದು ನಿರ್ದೇಶನಾಲಯ ಸ್ಥಾಪಿಸುವ ಬಗೆಗೂ ಹೇಳಿದ್ದಾರೆ. ಕೇಂದ್ರ ಸರ್ಕಾರದ ಮೂಲ ಘೋಷಣೆಯ ಪ್ರಕಾರ, ಮುಂದಿನ ವರ್ಷದ ಹೊತ್ತಿಗೆ ರೈತರ ಆದಾಯ ದ್ವಿಗುಣಗೊಳ್ಳಬೇಕು, ಅದು ಅಸಂಭವ. ಹೊಸ ಸಮಿತಿ, ಸಂರಚನೆ ಆರಂಭಿಸುವ ಮೊದಲು ಈಗಿರುವ ವ್ಯವಸ್ಥೆಯನ್ನು ಹೇಗೆ ಮರುಹೊಂದಿಸಬೇಕು ಎಂದು ಪರಿಶೀಲಿಸಬೇಕು. ಪ್ರಸ್ತುತ ಕಮಿಷನರೇಟ್, ನಿರ್ದೇಶನಾಲಯ, ವಿಶ್ವವಿದ್ಯಾಲಯ ಇವುಗಳ ಸಿಬ್ಬಂದಿ, ಸೇವೆಗಳು ಹೊಸ ಆಶಯಗಳನ್ನೂ ಒಳಗೊಳ್ಳಬಹುದಲ್ಲವೆ? ಅವುಗಳ ವೆಬ್‌ಸೈಟ್ ನೋಡಿದರೆ ನೇಮಕಾತಿ, ಸಬ್ಸಿಡಿ ಇಂತಹವೇ ಹೆಚ್ಚು ಕಾಣುತ್ತವೆ.

ಕೃಷಿ ವಿಶ್ವವಿದ್ಯಾಲಯಗಳ ವಿಶ್ರಾಂತ ಕುಲಪತಿಗಳು, ತಜ್ಞರು ಕೊಟ್ಟಿರುವ ಅನೇಕ ವರದಿಗಳನ್ನು ಹೊಸ ಮಾಹಿತಿಯೊಂದಿಗೆ ಬಳಸಿಕೊಳ್ಳಬಹುದಾಗಿದೆ. ರೈತರ ಆದಾಯ ದ್ವಿಗುಣಗೊಳಿಸುವುದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ರಚಿಸಿರುವ ಉನ್ನತಾಧಿಕಾರ ಸಮಿತಿಯ ಅಧ್ಯಕ್ಷರಾಗಿರುವ ನಿವೃತ್ತ ಐಎಎಸ್ ಅಧಿಕಾರಿಯು ರಾಜ್ಯಕ್ಕೆ ಅನ್ವಯವಾಗುವ ಹೊಸ ಅಂಶಗಳನ್ನೇನಾದರೂ ಹೇಳಿದ್ದರೆ ಮಂತ್ರಿ ಮಟ್ಟದಲ್ಲಿ ಅದನ್ನು ಪರಿಗಣಿಸಬಹುದು. ಕೃಷಿ ಉತ್ಪಾದನೆ ಇದ್ದರೇ ಆದಾಯ. ಈಗ ಮಳೆಯಲ್ಲಿ ಆಗುತ್ತಿರುವ ಏರುಪೇರು ಅವೆರಡನ್ನೂ ಕುಂಠಿತಗೊಳಿಸಬಹುದು. ಬಂದ ಉತ್ಪನ್ನಕ್ಕೆ ಬೇಗ ತಕ್ಕ ಮಾರುಕಟ್ಟೆ ವ್ಯವಸ್ಥೆ ಮಾಡಲು ಈ ಹೊಸ ಘೋಷಣೆಗಳು ಹೇಗೆ ಸಹಾಯಕ? 'ಥ್ರೀ ಟ್ರಿಲಿಯನ್ ಎಕಾನಮಿ'ಯಂತೆ ಆಗಬಹುದಷ್ಟೆ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಇಳಿಯುವುದೇ?

ಮುಖ್ಯಮಂತ್ರಿಯವರ
ಪಯಣ ಮತ್ತೊಮ್ಮೆ
ದೆಹಲಿಗೆ,
ಅಸಮಾಧಾನ, ಭಿನ್ನಮತ
ಬಿಟ್ಟು ಇಳಿಯುವುದೇ ಸರ್ಕಾರ
ಅಭಿವೃದ್ಧಿಯ ಹಳಿಗೆ?

ಮಹಾಂತೇಶ ಮಾಗನೂರ, ಬೆಂಗಳೂರು

ಕಾಳಿಂಗ ಸರ್ಪ ಸಂರಕ್ಷಣೆಗೆ ಆಕ್ಷೇಪ ಸಲ್ಲ

ಕಾಳಿಂಗ ಸರ್ಪ ದಟ್ಟ ಕಾಡುಗಳಲ್ಲಿ ಇರುವ ಸರೀಸೃಪ. ಇದರ ಮೊಟ್ಟೆ ಸಂರಕ್ಷಣೆ ಮಾಡಿದ್ದಕ್ಕೆ ಕೆಲವರು ಅಪಸ್ವರ ಎತ್ತಿದ್ದಾರೆ (ಪ್ರ.ವಾ., ಆ. 25). ಪಶ್ಚಿಮಘಟ್ಟಗಳಲ್ಲಿ ಮಾತ್ರ ವಾಸಿಸುವ ಇವುಗಳ ಸಂತತಿ ಉಳಿಯಬೇಕಿದೆ. ಅನಾಥವಾಗಿದ್ದ ಮೊಟ್ಟೆಗಳಿಗೆ ಕಾವು ಕೊಟ್ಟು ಮರಿಯಾದ ನಂತರ ಕಾಡಿಗೆ ಬಿಡಲಾಗಿದೆ. ಅರಣ್ಯ ಇಲಾಖೆಯ ಅನುಮತಿ ಮತ್ತು ಉಸ್ತುವಾರಿಯಲ್ಲಿ ಈ ಕಾರ್ಯ ನಡೆದಿದೆ.

ಈ ರೀತಿಯ ಒಳ್ಳೆಯ ಕೆಲಸವನ್ನು ಕೆಲವರು ಮಾಡುತ್ತಿರುವುದರಿಂದ ಹಲವು ಜೀವಿಗಳು ಸ್ವಲ್ಪವಾದರೂ ಸಂರಕ್ಷಿಸಲ್ಪಟ್ಟಿವೆ. ಪಶ್ಚಿಮಘಟ್ಟಗಳನ್ನು ಹಾಳುಮಾಡುತ್ತಿರುವ ಬೃಹತ್ ಯೋಜನೆಗಳಿಗೆ ಏನೂ ಹೇಳದೆ, ಅಳಿವಿನಂಚಿನಲ್ಲಿರುವ ಪ್ರಭೇದಗಳನ್ನು ಸಂರಕ್ಷಿಸಿದ್ದಕ್ಕೆ ಆಪಾದನೆ ಮಾಡುವುದು ಸರಿಯಲ್ಲ.

ಡಾ. ಎಸ್.ಶಿಶುಪಾಲ, ದಾವಣಗೆರೆ

ಆಗ ಎದುರಾಗದ ನೈತಿಕ ಪ್ರಶ್ನೆ...

ಇಂದಿರಾ ಕ್ಯಾಂಟೀನ್ ಹೆಸರಿನಲ್ಲಿ 'ಇಂದಿರಾ' ತೆಗೆದು 'ಅನ್ನಪೂರ್ಣೇಶ್ವರಿ' ಹೆಸರಿಡಬೇಕು ಎಂದು ಬಿಜೆಪಿಯ ಕೆಲವು ನಾಯಕರು ಒತ್ತಾಯಿಸುತ್ತಿರುವ ಸಂಬಂಧ ಅನಗತ್ಯ ವಿವಾದ ಸೃಷ್ಟಿಯಾಗಿದೆ. ಈ ವಿವಾದದ ಚರ್ಚೆಯಲ್ಲಿ ಕೆಲವರು 'ಹೆಸರಲ್ಲೇನಿದೆ' ಎನ್ನುತ್ತಾರೆ. ನಿಜ, 'ಇಂದಿರಾ', 'ಅನ್ನಪೂರ್ಣೇಶ್ವರಿ' ಯಾವುದೇ ಹೆಸರಿಟ್ಟರೂ ಸದುದ್ದೇಶದ ಅನ್ನ ನೀಡುವಿಕೆ ಮುಖ್ಯ! ಈ ಹಿಂದೆ ಅಧಿಕಾರದಲ್ಲಿದ್ದ ಕಾಂಗ್ರೆಸ್, ಕನ್ನಡ ಸಾಹಿತ್ಯ ಪರಿಷತ್ತು ನೀಡುತ್ತಿದ್ದ 'ರಾಷ್ಟ್ರಕವಿ' ಪುರಸ್ಕಾರವನ್ನು ರಾಜಪ್ರಭುತ್ವದ ಕುರುಹು ಎಂಬ ಕುಂಟುನೆಪವೊಡ್ಡಿ ಯೋಜನೆಯನ್ನೇ ಧಿಕ್ಕರಿಸಿತಲ್ಲವೇ? ಆಗ ಕಾಂಗ್ರೆಸ್‌ಗೆ ಎದುರಾಗದ ನೈತಿಕ ಪ್ರಶ್ನೆ ಈಗೇಕೆ ಕಾಡುತ್ತಿದೆ? ತಾವು ಅಧಿಕಾರದಲ್ಲಿದ್ದಾಗ ಕುಬ್ಜವಾಗಿ ಯೋಚಿಸಿ ಮತ್ತೊಬ್ಬರಿಂದ ವಿಶಾಲ ಮನಃಸ್ಥಿತಿಯನ್ನು ಅಪೇಕ್ಷಿಸುವುದು ಇಬ್ಬಗೆ ನೀತಿಯ ಪ್ರತ್ಯಕ್ಷ ದರ್ಶನ ಮಾಡಿಕೊಟ್ಟಂತೆ ತಾನೆ?

ಆರ್.ವೆಂಕಟರಾಜು, ಬೆಂಗಳೂರು

ಬಾಲಿಶ ಹೇಳಿಕೆ ಸಾಕುಮಾಡಿ

ಮೈಸೂರಿನಲ್ಲಿ ಯುವತಿಯೊಬ್ಬಳ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿರುವುದು ಖಂಡನೀಯ. ಈ ಸಂಬಂಧ ಗೃಹ ಸಚಿವರು 'ಕಾಂಗ್ರೆಸ್‌ನವರು ನನ್ನ ಮೇಲೆ ರೇಪ್ ಮಾಡಲು ಹೊರಟಿದ್ದಾರೆ' ಎಂಬ ಬಾಲಿಶವಾದ ಹೇಳಿಕೆಯನ್ನು ನೀಡಿದ್ದಾರೆ (ಟೀಕೆ ವ್ಯಕ್ತವಾದ ಬಳಿಕ ಹೇಳಿಕೆ ಹಿಂದಕ್ಕೆ ಪಡೆದಿದ್ದಾರೆ). ಜೊತೆಗೆ ಆ ಯುವತಿ ಆ ಹೊತ್ತಿನಲ್ಲಿ ಅಲ್ಲಿಗೆ ಹೋಗಬಾರದಿತ್ತು ಎಂಬರ್ಥದಲ್ಲಿ ಮಾತನಾಡಿದ್ದಾರೆ. ಇದು ಸಂವೇದನಾರಹಿತ ಹೇಳಿಕೆ. ಇಡೀ ರಾಜ್ಯ ತಮ್ಮ ಮಾತನ್ನು ಕೇಳಿದೆ ಎಂಬುದು ಸಚಿವರ ಗಮನದಲ್ಲಿ ಇರಲಿ.

ವಿರೋಧ ಪಕ್ಷಗಳು ತಮ್ಮ ಕರ್ತವ್ಯವನ್ನು ಮಾಡುತ್ತಿವೆ. ಸಚಿವರ ಈಗಿನ ಹೇಳಿಕೆಯು ಸರ್ಕಾರವನ್ನು ಯಾರೂ ಪ್ರಶ್ನಿಸಬಾರದು ಎಂದು ಹೇಳಿದಂತಿದೆ. ಸಾವಿರಾರು ಹೆಣ್ಣುಮಕ್ಕಳು ಎಲ್ಲಾ ಕ್ಷೇತ್ರಗಳಲ್ಲಿ ಪುರುಷರಿಗೆ ಸರಿಸಮಾನರಾಗಿ ದುಡಿಯುತ್ತಿದ್ದಾರೆ. ತಪ್ಪಿತಸ್ಥರು ಎಷ್ಟೇ ಬಲಾಢ್ಯರಾದರೂ ಸರಿ ಅವರನ್ನು ಬಂಧಿಸಿ, ಹೆಣ್ಣುಮಕ್ಕಳು ಮುಕ್ತವಾಗಿ ಓಡಾಡುವಂತೆ ರಕ್ಷಣೆ ಕೊಡಿ.

ಡಾ. ಮಲ್ಲತ್ತಹಳ್ಳಿ ಎಚ್. ತುಕಾರಾಂ, ಬೆಂಗಳೂರು

ಬಸ್‌ಪಾಸ್ ಬಗ್ಗೆಯೂ ಗಮನವಿರಲಿ

ಕೋವಿಡ್ ಮೂರನೇ ಅಲೆಯ ಭೀತಿಯ ನಡುವೆಯೂ ಸರ್ಕಾರ ಶಾಲಾ ಕಾಲೇಜು ಆರಂಭಿಸಿರುವುದು ಸ್ವಾಗತಾರ್ಹ. ಇದರಿಂದ ಆನ್‌ಲೈನ್ ಪಾಠದ ಸಂದರ್ಭದಲ್ಲಿ ಎದುರಾಗುತ್ತಿದ್ದ ಅನೇಕ ಸಮಸ್ಯೆಗಳಿಂದ ತಾತ್ಕಾಲಿಕ ಮುಕ್ತಿ ದೊರೆತಂತಾಗಿದೆ. ಆದರೆ ಹಳ್ಳಿಗಳಿಂದ ಸಮೀಪದ ನಗರ, ಪಟ್ಟಣದ ಶಾಲೆಗಳಿಗೆ ಹೋಗಲು ಮಕ್ಕಳು, ಸರ್ಕಾರ ನೀಡುವ ರಿಯಾಯಿತಿ ದರದ ಪಾಸನ್ನೇ ಅವಲಂಬಿಸಿದ್ದಾರೆ. ಶಾಲೆ ಪ್ರಾರಂಭಿಸಿರುವ ಸರ್ಕಾರ, ಬಸ್‌ಪಾಸ್‌ಗೆ ಸಂಬಂಧಿಸಿದಂತೆ ಇದುವರೆಗೂ ಯಾವುದೇ ಸ್ಪಷ್ಟ ಕ್ರಮ ತೆಗೆದುಕೊಂಡಿಲ್ಲ. ಕೋವಿಡ್‌ನಿಂದ ಆರ್ಥಿಕ ಸಂಕಷ್ಟ ಎದುರಿಸುತ್ತಿರುವ ಪಾಲಕರಿಗೆ ಮಕ್ಕಳ ಪ್ರಯಾಣ ವೆಚ್ಚವನ್ನು ಭರಿಸಲಾಗುತ್ತಿಲ್ಲ. ಹೀಗಾಗಿ ಸಾರಿಗೆ ಸಚಿವರು ಸೂಕ್ತ ಕ್ರಮ ಕೈಗೊಂಡು, ಸುಗಮ ಶೈಕ್ಷಣಿಕ ಚಟುವಟಿಕೆಗೆ ಅವಕಾಶ ಮಾಡಿಕೊಡಲಿ.

ರೇಣುಕಾ ಬಿ. ಗೊಡಚಿ, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ತೆರವಿಗೆ ನೆರವಾದ ದುಶಾಂಬೆ ವಾಯುನೆಲೆ

ಅಫ್ಗಾನಿಸ್ತಾನದಲ್ಲಿ ಸಿಲುಕಿರುವ ಭಾರತೀಯರು ಮತ್ತು ಮಿತ್ರರಾಷ್ಟ್ರಗಳ ಪ್ರಜೆಗಳನ್ನು ಸುರಕ್ಷಿತವಾಗಿ ತೆರವು ಮಾಡುವ ಹೊಣೆಯನ್ನು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಹೊತ್ತಿದೆ. ವಾಯುಪಡೆ ಮತ್ತು ಏರ್ ಇಂಡಿಯಾದ ಸಹಯೋಗದಲ್ಲಿ ಈ ಕಾರ್ಯಾಚರಣೆ ನಡೆಯುತ್ತಿದೆ. ಆದರೆ ಪ್ರತಿ ಬ್ಯಾಚ್‌ನಲ್ಲಿಯೂ ಕೆಲವೇ ಮಂದಿಯನ್ನಷ್ಟೇ ಕರೆತರಲು ಸಾಧ್ಯವಾಗುತ್ತಿದೆ.

ಈ ಕಾರ್ಯಾಚರಣೆಯ ಮೇಲ್ನೋಟಕ್ಕೆ ಕಂಡಷ್ಟು ಸರಳವಾಗಿಲ್ಲ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರರು ವಿವರಿಸಿದ್ದಾರೆ. ಹಲವು ಬ್ಯಾಚ್‌ಗಳಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಈವರೆಗೆ 800 ಜನರನ್ನು ಸುರಕ್ಷಿತವಾಗಿ ಭಾರತಕ್ಕೆ ಕರೆತರಲಾಗಿದೆ. ಇದರಲ್ಲಿ ಭಾರತೀಯರು, ಭಾರತೀಯ ರಾಯಭಾರ ಕಚೇರಿ ಸಿಬ್ಬಂದಿ, ಅಫ್ಗನ್ ಪ್ರಜೆಗಳು ಮತ್ತು ನೇಪಾಳದ ಪ್ರಜೆಗಳೂ ಸೇರಿದ್ದಾರೆ. ಇನ್ನು ಕೆಲವೇ ಮಂದಿಯನ್ನು ಮಾತ್ರ ತೆರವು ಮಾಡಬೇಕಿದೆ ಎಂದು ಸಚಿವಾಲಯವು ಹೇಳಿದೆ.

ಭಾರತವು ಜುಲೈ 16ರಂದು ತನ್ನ ಮೊದಲ ಕಾರ್ಯಾಚರಣೆಯನ್ನು ನಡೆಸಿತು. ಆ ಕಾರ್ಯಾಚರಣೆಯಲ್ಲಿ ಕರೆತರಲು ಸಾಧ್ಯವಾಗಿದ್ದು 40 ಜನರನ್ನು ಮಾತ್ರ. ವಿಮಾನದ ಸಾಮರ್ಥ್ಯ ಹೆಚ್ಚಾಗಿದ್ದರೂ, ಕಡಿಮೆ ಜನರನ್ನು ಕರೆತರಲು ಮಾತ್ರ ಸಾಧ್ಯವಾಗಿರುವುದು ಕಾರ್ಯಾಚರಣೆಯ ಸಂಕೀರ್ಣತೆಯನ್ನು ತೋರಿಸುತ್ತದೆ. ಮೊದಲ ಕಾರ್ಯಾಚರಣೆಯಲ್ಲಿ ಕರೆತಂದವರನ್ನು ತಾಲಿಬಾನ್ ಸೈನಿಕರ ಕಾವಲಿನಲ್ಲಿ ವಿಮಾನ ನಿಲ್ದಾಣಕ್ಕೆ ಕರೆತರಲಾಗಿತ್ತು.

ಕಾಬೂಲ್ ವಿಮಾನ ನಿಲ್ದಾಣದಲ್ಲಿ ಹಾರಾಟ ನಡೆಸಲು ಈಗ ಸೇನಾ ವಿಮಾನಗಳಿಗೆ ಮಾತ್ರವೇ ಅವಕಾಶ ನೀಡಲಾಗುತ್ತಿದೆ. ದೇಶವನ್ನು ತೊರೆಯಲು ಸಾವಿರಾರು ಮಂದಿ ನಿಲ್ದಾಣದ ಸುತ್ತ ಕಿಕ್ಕಿರಿದು ತುಂಬಿದ್ದಾರೆ. ಅವರನ್ನು ತಪಾಸಣೆ ನಡೆಸಿ ಒಳಗೆ ಬಿಡುವ ಕಾರ್ಯ ಸುಲಭದ್ದಲ್ಲ. ಆರಂಭದ ಕೆಲವು ದಿನ ನೂಕುನುಗ್ಗಲು ಉಂಟಾಗಿ, ಸಾವಿರಾರು ಜನರು ವಿಮಾನಗಳಿಗೆ ಮುಗಿಬಿದ್ದಿದ್ದರು. ರನ್‌ವೇಯಲ್ಲಿ ಓಡುತ್ತಿದ್ದ ವಿಮಾನಗಳಿಗೆ ಸಿಲುಕಿ ಹಲವರು ಸತ್ತಿದ್ದಾರೆ. ಹೀಗೆ ಕಿಕ್ಕಿರಿದು ತುಂಬಿರುವ ಜನರ ಮಧ್ಯೆ ಭಾರತೀಯರನ್ನಷ್ಟೇ ಗುರುತಿಸಿ, ವಿಮಾನಕ್ಕೆ ಹತ್ತಿಸಿಕೊಳ್ಳುವ ಕೆಲಸ ಭಾರಿ ಸವಾಲಿನದ್ದು. ಹೀಗಾಗಿಯೇ ಪ್ರತಿ ಕಾರ್ಯಾಚರಣೆಯಲ್ಲೂ ಕೆಲವೇ ಮಂದಿಯನ್ನು ತೆರವು ಮಾಡಲಾಗುತ್ತಿದೆ.

3,450 ಮೀಟರ್ ಉದ್ದದ ಏಕ ರನ್‌ವೇ ಹೊಂದಿರುವ ಕಾಬೂಲ್ ವಿಮಾನ ನಿಲ್ದಾಣವನ್ನು ಈಗ ಅಮೆರಿಕದ ಸೇನೆ, ನ್ಯಾಟೊ ಪಡೆಗಳು ನಿರ್ವಹಣೆ ಮಾಡುತ್ತಿವೆ. 45ಕ್ಕೂ ಹೆಚ್ಚು ದೇಶಗಳು ತೆರವು ಕಾರ್ಯಾಚರಣೆ ನಡೆಸುತ್ತಿವೆ. ವಾಣಿಜ್ಯ ವಿಮಾನಗಳ ಹಾರಾಟಕ್ಕೆ ನಿರ್ಬಂಧ ಇರುವ ಕಾರಣ ಸಣ್ಣ ಸೇನಾ ವಿಮಾನಗಳನ್ನಷ್ಟೇ ಬಳಸಲಾಗುತ್ತಿದೆ.

ಕಾಬೂಲ್‌ನಿಂದ ನೇರವಾಗಿ ಭಾರತಕ್ಕೆ ಹಾರಾಟ ನಡೆಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ತೆರವು ಕಾರ್ಯಾಚರಣೆ ದೀರ್ಘವಾಗುತ್ತಿದೆ. ಕಾಬೂಲ್‌ನಿಂದ ನೇರವಾಗಿ ಭಾರತದತ್ತ ಹಾರಾಟ ನಡೆಸಲು, ಪಾಕಿಸ್ತಾನದ ವಾಯುಗಡಿಯನ್ನು ಪ್ರವೇಶಿಸಬೇಕು. ಪಾಕಿಸ್ತಾನದ ಗಡಿ ಪ್ರವೇಶಿಸಲು ಸೇನಾ ವಿಮಾನಕ್ಕೆ ಅವಕಾಶವಿಲ್ಲ. ಹೀಗಾಗಿ ವಿಮಾನವು ಕಾಬೂಲ್‌ನಿಂದ ಇರಾನ್ ಪ್ರವೇಶಿಸಿ, ನಂತರ ಅರಬ್ಬಿ ಸಮುದ್ರದ ಮೇಲೆ ಹಾರುತ್ತಾ ಗುಜರಾತ್‌ನ ಜಾಮ್‌ನಗರ ವಿಮಾನ ನಿಲ್ದಾಣ ಪ್ರವೇಶಿಸಬೇಕು. ಜಾಮ್‌ನಗರದಲ್ಲಿ ವಿಮಾನಕ್ಕೆ ಇಂಧನ ಭರ್ತಿ ಮಾಡಿಕೊಂಡು, ನಂತರ ದೆಹಲಿಯತ್ತ ಹಾರಾಟ ಮುಂದುವರಿಸಬೇಕು. ನೇರ ವಾಯುಮಾರ್ಗಕ್ಕಿಂತ ಈ ಮಾರ್ಗದ ಉದ್ದ ದುಪ್ಪಟ್ಟಾಗುತ್ತದೆ.

ಆಧಾರ: ಪಿಟಿಐ, ಎಎಫ್‌ಪಿ, ರಾಯಿಟರ್ಸ್, ವಿದೇಶಾಂಗ ವ್ಯವಹಾರಗಳ ಸಚಿವಾಲಯ

ಕಾಬೂಲ್-ದುಶಾಂಬೆ-ದೆಹಲಿ

ನೇರಮಾರ್ಗದ ಕಾರ್ಯಾಚರಣೆ ಕಾರ್ಯಸಾಧುವಲ್ಲದ ಕಾರಣ, ತಜಿಕಿಸ್ತಾನದಲ್ಲಿರುವ ಭಾರತದ ಮೊದಲ ವಿದೇಶಿ ವಾಯುನೆಲೆ ದುಶಾಂಬೆ ಮೂಲಕ ಕಾರ್ಯಾಚರಣೆ ನಡೆಸಲಾಗುತ್ತಿದೆ. ಕಾಬೂಲ್‌ನ ಹಮೀದ್ ಕರ್ಜೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸ್ಥಳಾವಕಾಶದ ಕೊರತೆ ಮತ್ತು ತೀವ್ರ ಗದ್ದಲವಿರುವ ಕಾರಣ ಭಾರತವು ತನ್ನ ಎಲ್ಲಾ ತೆರವು ಕಾರ್ಯಾಚರಣೆಯನ್ನು ದುಶಾಂಬೆ ವಾಯುನೆಲೆಯಿಂದ ನಡೆಸುತ್ತಿದೆ.

ಕಾರ್ಯಾಚರಣೆಗೆ ಬಳಸುತ್ತಿರುವ ಸಿ-17 ಗ್ಲೋಬ್‌ಮಾಸ್ಟರ್ ಮತ್ತು ಸಿ-13 ಸೇನಾ ವಿಮಾನಗಳನ್ನು ದುಶಾಂಬೆಯಲ್ಲಿ ನಿಲ್ಲಿಸಲಾಗಿದೆ. ಕಾಬೂಲ್‌ನಲ್ಲಿ ಇಳಿಯಲು ಅವಕಾಶ ದೊರೆತಾಗ ವಿಮಾನಗಳು ಇಲ್ಲಿಂದ ಹೊರಡುತ್ತವೆ ಮತ್ತು ಜನರನ್ನು ಕರೆದುಕೊಂಡು ವಾಪಸ್ ಇಲ್ಲಿಗೇ ಬರುತ್ತವೆ. ಇಲ್ಲಿಂದ ಏರ್ ಇಂಡಿಯಾ ವಿಶೇಷ ವಿಮಾನದ ಮೂಲಕ ದೆಹಲಿಗೆ ಕರೆತರಲಾಗುತ್ತಿದೆ.

ತಜಿಕಿಸ್ತಾನ ಈಗ ತಟಸ್ಥ ರಾಷ್ಟ್ರವಾಗಿರುವ ಕಾರಣ ಭಾರತದ ವಿಮಾನಗಳಿಗೆ ಯಾವುದೇ ಅಪಾಯವಿಲ್ಲ. ಜತೆಗೆ ಭಾರತದ್ದೇ ವಾಯುನೆಲೆ ಇರುವ ಕಾರಣ ವಿಮಾನಗಳ ನಿರ್ವಹಣೆ, ಇಂಧನ ಭರ್ತಿಗೆ ಅವಕಾಶ ದೊರೆಯುತ್ತಿದೆ. ಇದೇ ವಿಮಾನ ನಿಲ್ದಾಣದಿಂದ ವಾಣಿಜ್ಯ ವಿಮಾನಗಳ ಮೂಲಕ ತೆರವು ಕಾರ್ಯಾಚರಣೆ ಮುಂದುವರಿಸಲಾಗುತ್ತಿದೆ.

ಜರ್ಮನಿ ವಾಯುಪಡೆಯ ವಿಮಾನದಲ್ಲಿ ಅಫ್ಗಾನಿಸ್ತಾನ ನಿರಾಶ್ರಿತರು –ರಾಯಿಟರ್ಸ್ ಚಿತ್ರ

ಅಫ್ಗಾನಿಸ್ತಾನದಿಂದ ಭಾರತೀಯ ವಾಯುಪಡೆ ವಿಮಾನ ಮೂಲಕ ಕರೆತರಲಾದವರನ್ನು ಜಾಮ್‌ನಗರ ವಾಯುನೆಲೆಯಲ್ಲಿ ಅಧಿಕಾರಿಗಳು ಬರಮಾಡಿಕೊಂಡರು ಪಿಟಿಐ ಚಿತ್ರ

ತೆರವು ಸ್ಥಿತಿಗತಿ

ಅಫ್ಗಾನಿಸ್ತಾನದಿಂದ ತೆರಳುವವರನ್ನು ಆಗಸ್ಟ್ 31ರ ಒಳಗೆ ತೆರವು ಮಾಡಬೇಕು ಎಂದು ತಾಲಿಬಾನ್ ಗಡುವು ವಿಧಿಸಿದೆ. ಈವರೆಗೆ 88,000 ಜನರನ್ನು ವಿವಿಧ ದೇಶಗಳು ತೆರವು ಮಾಡಿವೆ. ಇನ್ನೂ ಸಾವಿರಾರು ಮಂದಿಯನ್ನು ತೆರವು ಮಾಡಬೇಕಿದೆ

- **ಅಮೆರಿಕ:** ಅಮೆರಿಕವು ಈಗಾಗಲೇ 4,400 ನಾಗರಿಕರನ್ನು ತೆರವು ಮಾಡಿದೆ. 'ಆಗಸ್ಟ್ 31ರ ಒಳಗೇ ತೆರವು ಕಾರ್ಯಾಚರಣೆಯನ್ನು ಪೂರ್ಣಗೊಳಿಸಲು ಯತ್ನಿಸಲಾಗುತ್ತದೆ. ಅನಿವಾರ್ಯ ಅನಿಸಿದರೆ 31ರ ನಂತರವೂ ತೆರವು ಕಾರ್ಯಾಚರಣೆ ಮುಂದುವರಿಸಲಾಗುವುದು. ಆದರೆ 31ರ ನಂತರ ಸೈನಿಕರು, ಸೇನಾ ವಾಹನಗಳು, ಶಸ್ತ್ರಾಸ್ತ್ರ ಮತ್ತು ಸೇನಾ ಸಲಕರಣೆಗಳ ತೆರವಿಗೆ ಆದ್ಯತೆ ನೀಡಲಾಗುತ್ತದೆ' ಎಂದು ಅಮೆರಿಕ ಹೇಳಿದೆ. ಅಂದಾಜು ಇನ್ನೂ 2,500 ಅಮೆರಿಕನ್ನರು ಅಫ್ಗಾನಿಸ್ತಾನದಲ್ಲಿ ಇದ್ದಾರೆ ಎನ್ನಲಾಗಿದೆ.
- **ಬ್ರಿಟನ್:** ಆಗಸ್ಟ್ 31ರಂದು ಅಮೆರಿಕದ ಕೊನೆಯ ವಿಮಾನ ಹೊರಡುವುದಕ್ಕೂ ಮುನ್ನವೇ ಬ್ರಿಟನ್ ಸೈನಿಕರು ತೆರವು ಕಾರ್ಯಾಚರಣೆ ಪೂರ್ಣಗೊಳಿಸಲಿದ್ದಾರೆ ಎಂದು ಬ್ರಿಟನ್ ಹೇಳಿದೆ. ಆದರೆ ನಿಗದಿತ ದಿನಾಂಕವನ್ನು ಘೋಷಿಸಿಲ್ಲ. ಈವರೆಗೆ 12,279 ಮಂದಿಯನ್ನು ತೆರವು ಮಾಡಲಾಗಿದ್ದು, ಇನ್ನೂ 400 ಜನರಷ್ಟೇ ಅಫ್ಗಾನಿಸ್ತಾನದಲ್ಲಿ ಉಳಿದಿದ್ದಾರೆ.
- **ಜರ್ಮನಿ:** ಗುರುವಾರ ಬೆಳಿಗ್ಗೆವರೆಗೆ 5,193 ಜನರನ್ನು ಜರ್ಮನಿ ತೆರವು ಮಾಡಿತ್ತು. ಇದರಲ್ಲಿ 540 ಜನರು ಮಾತ್ರವೇ ಜರ್ಮನ್ನರು. ಇನ್ನೂ 200 ಜರ್ಮನ್ ಪ್ರಜೆಗಳು ಕಾಬೂಲ್‌ನಲ್ಲಿ ಇದ್ದು, ಅವರನ್ನು ಶೀಘ್ರವೇ ತೆರವು ಮಾಡಲಾಗುವುದು. ತಾಲಿಬಾನ್‌ನಿಂದ ಸೇಡಿನ ಕ್ರಮದ ಆತಂಕ ಎದುರಿಸುತ್ತಿರುವ 10,000 ಸರ್ಕಾರಿ ಸಿಬ್ಬಂದಿ, ಪತ್ರಕರ್ತರು ಮತ್ತು ಮಾನವ ಹಕ್ಕುಗಳ ಕಾರ್ಯಕರ್ತರನ್ನು ಜರ್ಮನಿ ಗುರುತಿಸಿದೆ. ಅಷ್ಟೂ ಜನರನ್ನು ತೆರವು ಮಾಡಲು ಯತ್ನಿಸಲಾಗುತ್ತದೆ. 'ಸಾಧ್ಯವಿರುವವರೆಗೂ ತೆರವು ಕಾರ್ಯಾಚರಣೆ ಮುಂದುವರಿಸಲಾಗುತ್ತದೆ' ಎಂದು ಜರ್ಮನಿ ಸರ್ಕಾರ ಹೇಳಿದೆ.
- **ಫ್ರಾನ್ಸ್:** ಶುಕ್ರವಾರ ಸಂಜೆ ವೇಳೆಗೆ ತೆರವು ಕಾರ್ಯಾಚರಣೆಯನ್ನು ಪೂರ್ಣಗೊಳಿಸುವುದಾಗಿ ಫ್ರಾನ್ಸ್ ಸರ್ಕಾರ ಹೇಳಿದೆ. 100 ಫ್ರಾನ್ಸ್ ಪ್ರಜೆಗಳು ಮತ್ತು 2,000 ಅಫ್ಗನ್ ಪ್ರಜೆಗಳನ್ನು ಈವರೆಗೆ ತೆರವು ಮಾಡಲಾಗಿದೆ. ಇನ್ನೂ ಎಷ್ಟು ಜನರನ್ನು ತೆರವು ಮಾಡಲಾಗುತ್ತದೆ ಎಂಬುದರ ಮಾಹಿತಿಯನ್ನು ಫ್ರಾನ್ಸ್ ನೀಡಿಲ್ಲ.
- **ಕತಾರ್:** ಈವರೆಗೆ ಕಾಬೂಲ್‌ನಿಂದ ದೋಹಾಗೆ 40,000 ಜನರನ್ನು ತೆರವು ಮಾಡಲು ಕತಾರ್ ನೆರವಾಗಿದೆ. 'ನಮ್ಮ ಮಿತ್ರರಾಷ್ಟ್ರಗಳು ತೆರವು ಮುಂದುವರಿಸುವವರೆಗೂ, ನಾವು ನೆರವು ನೀಡುತ್ತೇವೆ' ಎಂದು ಕತಾರ್ ಘೋಷಿಸಿದೆ.
- **ಬೆಲ್ಜಿಯಂ:** ಬುಧವಾರ ರಾತ್ರಿವರೆಗೆ ಬೆಲ್ಜಿಯಂ ಒಟ್ಟು 1,400 ಜನರನ್ನು ತೆರವು ಮಾಡಿದೆ. ಕಾಬೂಲ್ ವಿಮಾನ ನಿಲ್ದಾಣದ ಮೇಲೆ ಬಾಂಬ್ ದಾಳಿ ನಡೆಯಬಹುದು ಎಂದು ಅಮೆರಿಕವು ಎಚ್ಚರಿಕೆ ನೀಡಿದ ನಂತರ ತೆರವು ಕಾರ್ಯಾಚರಣೆಯನ್ನು ಬೆಲ್ಜಿಯಂ ಸ್ಥಗಿತಗೊಳಿಸಿದೆ.
- **ಟರ್ಕಿ:** 1,000 ಟರ್ಕಿ ನಾಗರಿಕರು ಸೇರಿದಂತೆ, ಒಟ್ಟು 1,400 ಜನರನ್ನು ಟರ್ಕಿ ಈವರೆಗೆ ತೆರವು ಮಾಡಿದೆ. ಈಗ ಅಫ್ಗಾನಿಸ್ತಾನದಲ್ಲಿರುವ ಟರ್ಕಿ ಸೈನಿಕರನ್ನು ತೆರವು ಮಾಡುವ ಕಾರ್ಯಾಚರಣೆ ಆರಂಭಿಸಲಾಗಿದೆ. ಒಂದೆರಡು ದಿನಗಳಲ್ಲಿ ತೆರವು ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಾಗುತ್ತದೆ ಎಂದು ಟರ್ಕಿ ಹೇಳಿದೆ.
- ಪೋಲೆಂಡ್ ಈವರೆಗೆ 900 ಜನರನ್ನು ತೆರವು ಮಾಡಿದೆ. ಅದರಲ್ಲಿ 300 ಮಕ್ಕಳು, 300 ಮಹಿಳೆಯರು ಸೇರಿದ್ದಾರೆ. ಗುರುವಾರ ರಾತ್ರಿ ವೇಳೆಗೆ ತೆರವು ಕಾರ್ಯಾಚರಣೆ ಸ್ಥಗಿತಗೊಳ್ಳಲಿದೆ ಎಂದು ಪೋಲೆಂಡ್ ಸರ್ಕಾರ ಹೇಳಿದೆ. ಈವರೆಗೆ 36,500 ಜನರನ್ನು ತೆರವು ಮಾಡಲು ಯುಎಇ ನೆರವು ನೀಡಿದೆ. ಅದರಲ್ಲಿ 8,500 ಜನರು ಯುಎಇಯಲ್ಲಿ ನೆಲೆಸಿದ್ದಾರೆ.
- ಹಂಗರಿ ಈವರೆಗೆ 540 ಜನರನ್ನು ತೆರವು ಮಾಡಿದೆ
- ಡೆನ್ಮಾರ್ಕ್ ಈವರೆಗೆ 1,000 ಜನರನ್ನು ತೆರವು ಮಾಡಿದ್ದು, ಬುಧವಾರ ಸಂಜೆಗೆ ತೆರವು ಕಾರ್ಯಾಚರಣೆ ಸ್ಥಗಿತಗೊಳಿಸಲಾಗಿದೆ
- ಸ್ವಿಟ್ಜರ್ಲೆಂಡ್ ಮತ್ತು ಆಸ್ಟ್ರಿಯಾ ತೆರವು ಕಾರ್ಯಾಚರಣೆಗಾಗಿ ಜರ್ಮನಿಯನ್ನು ಆಶ್ರಯಿಸಿವೆ. ಎರಡೂ ದೇಶಗಳ ಇನ್ನೂ ಹಲವು ಮಂದಿ ಕಾಬೂಲ್‌ನಲ್ಲಿ ಉಳಿದಿದ್ದಾರೆ. ಜರ್ಮನಿ ಸೇನೆ ಅವರನ್ನು ತೆರವು ಮಾಡಲಿದೆ

ಭಾರತದ ಜತೆ ದುಶಾಂಬೆಯ ಬಂಧ

ಭಾರತದ ಮೊದಲ ಸಾಗರೋತ್ತರ ವಾಯುನೆಲೆ ಎಂದು ಹೆಸರಾಗಿರುವುದು ತಜಿಕಿಸ್ತಾನದ ರಾಜಧಾನಿ ದುಶಾಂಬೆ ಬಳಿಯಿರುವ ಗಿಸ್ಸಾರ್ ಮಿಲಿಟರಿ ಏರೋಡ್ರೋಮ್ (ಜಿಎಂಎ). ಅಫ್ಗನ್ ಬಿಕ್ಕಟ್ಟಿನ ಈ ಸಮಯದಲ್ಲಿ ಭಾರತ ಹೆಚ್ಚಾಗಿ ಅವಲಂಬಿಸಿದ್ದು ಈ ವಾಯುನೆಲೆಯನ್ನು. ಸುಮಾರು ಎರಡು ದಶಕಗಳಿಂದ ತಜಿಕಿಸ್ತಾನದ ಜೊತೆ ಸೇರಿ ಈ ವಾಯುನೆಲೆಯನ್ನು ಭಾರತ ನಿರ್ವಹಿಸುತ್ತಿದೆ. ಸೇನಾ ಕಾರ್ಯಾಚರಣೆಗಳು ಮತ್ತು ತರಬೇತಿಗಾಗಿ ಇದನ್ನು ಸ್ಥಾಪಿಸಲಾಗಿತ್ತು. ಸೋವಿಯತ್ ನಿರ್ಮಿತ ವಾಯುನೆಲೆಯನ್ನು ಭಾರತವು ₹525 ಕೋಟಿ (ಸುಮಾರು 70 ಮಿಲಿಯನ್ ಡಾಲರ್) ವೆಚ್ಚದಲ್ಲಿ ನವೀಕರಿಸಿತು. 2010ರಲ್ಲಿ ತಜಿಕಿಸ್ತಾನ ರಕ್ಷಣಾ ಸಚಿವಾಲಯಕ್ಕೆ ಹಸ್ತಾಂತರಿಸಲಾಯಿತು.

ಭಾರತದ ಕಾರ್ಯತಂತ್ರ ಏನು?

ಕಾರ್ಯತಂತ್ರದ ದೃಷ್ಟಿಯಿಂದ ಭಾರತೀಯ ಸೇನೆಗೆ ಜಿಎಂಎ ಅತಿಮುಖ್ಯವಾದುದು. ತಜಿಕಿಸ್ತಾನವು ಚೀನಾ ಮತ್ತು ಪಾಕಿಸ್ತಾನದೊಂದಿಗೆ ಗಡಿಗಳನ್ನು ಹಂಚಿಕೊಂಡಿದೆ. ಜತೆಗೆ ಅಫ್ಗಾನಿಸ್ತಾನದ ವಖಾನ್ ಕಾರಿಡಾರ್‌ಗೆ ಹೊಂದಿಕೊಂಡಿದೆ. ಈ ಕಾರಿಡಾರ್ ಪಾಕ್ ಆಕ್ರಮಿತ ಕಾಶ್ಮೀರದಿಂದ (ಪಿಒಕೆ) ಕೇವಲ 20 ಕಿಮೀ ದೂರದಲ್ಲಿದೆ. ಹೀಗಾಗಿ ತಜಿಕಿಸ್ತಾನದಿಂದ ಕಾರ್ಯನಿರ್ವಹಿಸುವ ಅವಕಾಶವು ಸೇನೆಗೆ ಸಿಗುತ್ತದೆ. ವಾಯುಪಡೆ ಯೋಧರು ತಜಿಕಿಸ್ತಾನವನ್ನು ನೆಲೆಯಾಗಿಸಿಕೊಂಡು, ಪಕ್ಕದ ಪಾಕಿಸ್ತಾನದ ಪೇಶಾವರವನ್ನು ಗುರಿಯಾಗಿಸಿಕೊಳ್ಳಬಹುದು. ಚೀನಾಕ್ಕೂ ಸವಾಲು ಒಡ್ಡಬಹುದು.

ತಜಿಕಿಸ್ತಾನದ ಜೊತೆ ಸಂಬಂಧ

ಅಫ್ಗಾನಿಸ್ತಾನದಲ್ಲಿ ಪ್ರಾಬಲ್ಯ ಸಾಧಿಸಲು ಭಾರತವು ಮಧ್ಯ ಏಷ್ಯಾದ ದೇಶಗಳ ಜೊತೆ ಕಳೆದ ಎರಡು ದಶಕಗಳಿಂದ ನಿಕಟ ಒಡನಾಟ ಇಟ್ಟುಕೊಂಡಿದೆ. ಕಾಬೂಲ್ ಜೊತೆ ಹೊಂದಿರುವ ವಿಶೇಷ ಸಂಬಂಧ ಹಾಗೂ ದುಶಾಂಬೆಯ ಸಾಮೀಪ್ಯದ ಕಾರಣ, ತಜಿಕಿಸ್ತಾನಕ್ಕೆ ಭಾರತ ವಿಶೇಷ ಗಮನ ನೀಡಿದೆ. ವಾಯುನೆಲೆ ನವೀಕರಣಕ್ಕೆ ಉಭಯ ದೇಶಗಳ ಸಂಬಂಧ ಸೀಮಿತವಾಗಿಲ್ಲ. 2003ರಲ್ಲಿ ಮಧ್ಯ ಏಷ್ಯಾದ ಮೊದಲ ಸೇನಾ ಕಸರತ್ತನ್ನು ತಜಿಕಿಸ್ತಾನದ ಜತೆ ಭಾರತ ನಡೆಸಿತ್ತು. ತಜಿಕಿಸ್ತಾನ ರಕ್ಷಣಾ ಸಚಿವಾಲಯಕ್ಕೆ ಭಾರತ ಸಾಕಷ್ಟು ದೇಣಿಗೆ ನೀಡಿದೆ. ಎರಡು ಎಂಐ-8 ಹೆಲಿಕಾಪ್ಟರ್‌ಗಳು, ಬಿಡಿಭಾಗಗಳು, ಟ್ರಕ್‌ಗಳು, ಇತರ ವಾಹನಗಳು, 10,000 ಸಮವಸ್ತ್ರಗಳು ಮತ್ತು ಕಂಪ್ಯೂಟರ್‌ಗಳನ್ನು ಕೊಟ್ಟಿದೆ.

ವಿದೇಶದಲ್ಲಿ ಭಾರತದ ಸೇನಾ ನೆಲೆಗಳು

- **ತಜಿಕಿಸ್ತಾನ:** ರಾಜಧಾನಿ ದುಶಾಂಬೆಯ ಸನಿಹದಲ್ಲಿದೆ. ಭಾರತೀಯ ವಾಯುಪಡೆ ಹಾಗೂ ತಜಿಕಿಸ್ತಾನ ವಾಯುಪಡೆಗಳು ಜಂಟಿಯಾಗಿ ಇದನ್ನು ನಿರ್ವಹಿಸುತ್ತಿವೆ. ಇದು ವಿದೇಶದಲ್ಲಿರುವ ಭಾರತದ ಮೊದಲ ಸೇನಾ ನೆಲೆಯಾಗಿದೆ.
- **ಭೂತಾನ್:** ಭಾರತೀಯ ಸೇನಾ ತರಬೇತಿ ಕೇಂದ್ರವು (ಐಎಂಟಿಆರ್‌ಎಟಿ) ಭೂತಾನ್‌ನ ಹಾ ಜಾಂಗ್‌ನಲ್ಲಿದೆ. ಇದು ರಾಯಲ್ ಭೂತಾನ್ ಆರ್ಮಿ (ಆರ್‌ಬಿಎ) ಮತ್ತು ರಾಯಲ್ ಬಾಡಿಗಾರ್ಡ್ ಆಫ್ ಭೂತಾನ್ (ಆರ್‌ಬಿಜಿ) ಸಿಬ್ಬಂದಿಗೆ ತರಬೇತಿ ನೀಡುವ ಜವಾಬ್ದಾರಿಯನ್ನು ಹೊತ್ತಿದೆ.
- **ಮಡಗಾಸ್ಕರ್:** ಸಾಗರದಲ್ಲಿನ ಹಡಗುಗಳ ಚಲನೆಯ ಮೇಲೆ ಕಣ್ಣಿಡಲು ಮತ್ತು ಕಡಲ ಸಂವಹನಗಳನ್ನು ಕೇಳಿಸಿಕೊಳ್ಳಲು ಉತ್ತರ ಮಡಗಾಸ್ಕರ್‌ನಲ್ಲಿ ಮೇಲ್ವಿಚಾರಣಾ ಕೇಂದ್ರವನ್ನು ಭಾರತ ಸ್ಥಾಪಿಸಿದೆ. ಇತರ ನೌಕಾಪಡೆಯ ಕಾರ್ಯಾಚರಣೆಯ ಗುಪ್ತಚರ ಮಾಹಿತಿಯನ್ನು ಸಂಗ್ರಹಿಸಲು ಭಾರತೀಯ ನೌಕಾಪಡೆಯ ಆಲಿಸುವಿಕೆ ಕೇಂದ್ರ (ಲಿಸನಿಂಗ್ ಪೋಸ್ಟ್) 2007ರಲ್ಲಿ ಪ್ರಾರಂಭವಾಯಿತು.
- **ಮಾರಿಷಸ್:** ಉತ್ತರ ಅಗಲೇಗಾ ದ್ವೀಪದಲ್ಲಿ ಕರಾವಳಿ ಕಣ್ಗಾವಲು ರೇಡಾರ್ ವ್ಯವಸ್ಥೆ ಇರುವ ಸೇನಾ ನೆಲೆಯನ್ನು ಭಾರತ ಅಭಿವೃದ್ಧಿಪಡಿಸಿದೆ. ಹಿಂದೂ ಮಹಾಸಾಗರದಲ್ಲಿ ನೆಲೆಗೊಂಡಿರುವ ದ್ವೀಪವನ್ನು ಭಾರತ-ಮಾರಿಷಸ್ ಸೇನಾ ಸಹಕಾರದ ಭಾಗವಾಗಿ, ಭಾರತೀಯ ಸೇನೆಗೆ ಗುತ್ತಿಗೆಗೆ ನೀಡಲಾಗಿದೆ.
- **ಸೀಶೆಲ್ಸ್:** ಚೀನಾದ ಸ್ಟ್ರಿಂಗ್ ಆಫ್ ಪರ್ಲ್ಸ್ ತಂತ್ರವನ್ನು ಎದುರಿಸಲು, ಅಸಂಪ್ಷನ್ ದ್ವೀಪದಲ್ಲಿ ನೌಕಾನೆಲೆಯನ್ನು ನಿರ್ಮಿಸಲು ಭಾರತ ಹಾಗೂ ಸೀಶೆಲ್ಸ್ ರಕ್ಷಣಾ ಒಪ್ಪಂದಕ್ಕೆ ಸಹಿ ಹಾಕಿದವು. ಇದಕ್ಕಾಗಿ ಭಾರತವು ಸೀಶೆಲ್ಸ್‌ಗೆ ₹750 ಕೋಟಿ ಸಾಲ ಮತ್ತು ಡಾರ್ನಿಯರ್ ವಿಮಾನವನ್ನು ನೀಡಿತು. ಭಾರತವು ಸೀಶೆಲ್ಸ್‌ನಲ್ಲಿ ಕರಾವಳಿ ಕಣ್ಗಾವಲು ರೇಡಾರ್ ವ್ಯವಸ್ಥೆಯನ್ನು ನಿರ್ವಹಿಸುತ್ತದೆ.
- **ಒಮಾನ್:** ಭಾರತವು ರಾಸ್ ಅಲ್ ಹಾಡ್‌ನಲ್ಲಿ ಆಲಿಸುವ ಕೇಂದ್ರ ನಿರ್ಮಿಸಿದೆ. ಭಾರತವು ಮೂರು ನೌಕಾ ನೆಲೆಗಳನ್ನು ಮತ್ತು ಒಮಾನ್‌ನಲ್ಲಿ ಒಂದು ವಾಯುನೆಲೆಯನ್ನು ಹೊಂದಿದೆ.
- **ಇರಾನ್:** ಒಮಾನ್ ಕೊಲ್ಲಿಯಲ್ಲಿ ಚಾಬಹರ್ ಬಂದರು ನಿರ್ಮಾಣವಾಗಿದೆ. 2018ರಿಂದ ಇಲ್ಲಿ ಭಾರತ ಕಾರ್ಯಾಚರಣೆ ಆರಂಭಿಸಿದೆ.
- **ನೇಪಾಳ:** ಸುರ್‌ಖೇತ್ ಎಂಬಲ್ಲಿ ಭಾರತವು ಏರ್‌ಸ್ಟ್ರಿಪ್ ನಿರ್ಮಿಸಿದೆ. ವಾಯುದಾಳಿ ಬೆದರಿಕೆಗಳಿಂದ ಇದು ರಕ್ಷಣೆ ನೀಡುತ್ತದೆ.
- **ಸಿಂಗಪುರ:** ಮಲಕ್ಕಾ ಜಲಸಂಧಿಯಲ್ಲಿ ಚೀನಾ ಪ್ರಾಬಲ್ಯ ನಿಯಂತ್ರಣಕ್ಕೆ ಭಾರತ-ಸಿಂಗಪುರ 2017ರಲ್ಲಿ ಸಹಿ ಹಾಕಿದವು. ಈ ಒಪ್ಪಂದವು ಚೀನಾದ ವ್ಯಾಪಾರ ಮಾರ್ಗದಲ್ಲಿ (ಮಲಕ್ಕಾ) ಭಾರತದ ಸೇನಾ ಉಪಸ್ಥಿತಿಯನ್ನು ಸಾಧ್ಯವಾಗಿಸುತ್ತದೆ. ಸಿಂಗಪುರದ ಚಾಂಗಿ ನೌಕಾನೆಲೆಯು ಭಾರತದ ನೌಕಾನೆಲೆಯಾಗಿಯೂ ಬಳಕೆಯಾಗುತ್ತಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಇತ್ತೀಚೆಗೆ ಕೆಲವರ ಮೊಬೈಲ್‌ಗೆ ಸಂದೇಶವೊಂದು ಬರುತ್ತಿದೆ. 'ನಿಮ್ಮ ಖಾತೆಗೆ ₹2.67 ಲಕ್ಷ ಜಮಾ ಮಾಡಲಾಗಿದೆ' ಎಂಬ ಉಲ್ಲೇಖ ಸಂದೇಶಗಳಲ್ಲಿದೆ. ಈ ಸಂದೇಶವನ್ನು ಸ್ನೇಹಿತರು, ಸಂಬಂಧಿಕರಿಗೆ ಫಾರ್ವರ್ಡ್ ಮಾಡಿ, ಈ ಸಂದೇಶ ನಿಮಗೆ ಬಂದಿದೆಯೇ ಎಂದು ಕೇಳುತ್ತಿದ್ದಾರೆ. 'ಸರ್ಕಾರಿ ಯೋಜನೆ' ಅಡಿಯಲ್ಲಿ ಬ್ಯಾಂಕ್ ಖಾತೆಗೆ ಹಣ ಜಮಾ ಮಾಡುವ ವಿಚಾರ ಎಲ್ಲ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದು, ಜನರನ್ನು ಗೊಂದಲಕ್ಕೆ ತಳ್ಳಿದೆ.

ಇಂತಹ ಸಂದೇಶಗಳ ಬಗ್ಗೆ ಹುಷಾರಾಗಿರಿ ಎಂದು ಕೇಂದ್ರ ಸರ್ಕಾರದ ಪಿಐಬಿ ಫ್ಯಾಕ್ಟ್ ಚೆಕ್ ವೇದಿಕೆ ತಿಳಿಹೇಳಿದೆ. ಭಾರತ ಸರ್ಕಾರವು ಅಂತಹ ಯಾವುದೇ ಯೋಜನೆಯನ್ನು ಘೋಷಿಸಿಲ್ಲ ಎಂದು ಸ್ಪಷ್ಟನೆ ನೀಡಿದೆ. 'ನಿಮ್ಮ ಖಾತೆಗೆ ಹಣ ಸಂದಾಯವಾಗಬೇಕಿದ್ದರೆ ಸಂದೇಶದ ಕೆಳಗಡೆ ನೀಡಲಾಗಿರುವ ಲಿಂಕ್ ಅನ್ನು ಒತ್ತಿ' ಎಂದು ಸೂಚಿಸಲಾಗಿದೆ. ಆದರೆ, ಇಂತಹ ಸಂದೇಶಗಳ ಹಿಂದೆ ವಂಚಕರ ಕೈವಾಡವಿದೆ. ಇಂತಹ ವಂಚನೆಗಳಿಗೆ ಈಡಾಗಬೇಡಿ ಎಂದು ಸೂಚಿಸಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಭಾವಗಳ ಸರಸತೆ

ಪರಿಪರಿಯ ವಿಶ್ವಪ್ರಕೃತಿಶಕ್ತಿತೇಜಗಳು |
ಕೆರಳಿಸಲು ನರಹೃದಯ ರಭಸಗಳನದರಿಂ ||
ಪೊರಮಡುವ ಸಂಮೋಹಧೀರಗಂಭೀರಗಳ |
ಸರಸತೆಯೆ ಸುಂದರವೊ – ಮಂಕುತಿಮ್ಮ || 454 ||

ಪದ-ಅರ್ಥ: ನರಹೃದಯರಭಸಗಳನದರಿಂ = ನರಹೃದಯ + ರಭಸಗಳನು + ಅದರಿಂ, ಪೊರಮೊಡುವ = ಹೊರಡುವ

ವಾಚ್ಯಾರ್ಥ: ವಿಶ್ವಪ್ರಕೃತಿಯ ಶಕ್ತಿಗಳು, ತೇಜಗಳು ಪರಿಪರಿಯಾಗಿ ಮನುಷ್ಯನನ್ನು ಕೆರಳಿಸಿದಾಗ, ಅವನ ಹೃದಯದ ರಭಸದಿಂದ ಹೊರಡುವ ಮೋಹ, ಧೀರತೆ ಮತ್ತು ಗಂಭೀರತೆಗಳ ಸ್ವಾರಸ್ಯವೇ ಸುಂದರವಾದದ್ದು.

ವಿವರಣೆ: ಬದುಕಿರುವವರೆಗೆ ಪ್ರತಿಯೊಬ್ಬ ಮನುಷ್ಯನೂ ಪ್ರಪಂಚದೊಂದಿಗೆ ಯಾವುದೇ ಒಂದು ಬಗೆಯಲ್ಲಿ ಸಂಬಂಧ ಇಟ್ಟುಕೊಂಡಿರಲೇಬೇಕಾಗುತ್ತದೆ. ಅವನು ಪ್ರಪಂಚಕ್ಕೆ ಒಂದಿಷ್ಟನ್ನು ಕೊಡುವುದು, ಅದರಿಂದ ಪಡೆಯುವುದು ನಡೆದೇ ಇರುತ್ತದೆ. ಹೀಗೆ ಕೊಟ್ಟು ಪಡೆಯುವುದರಲ್ಲಿ ಅವನ ಸ್ವಭಾವದಲ್ಲಿ ಬದಲಾವಣೆಗಳು ಕಾಣುತ್ತವೆ.

ಮನುಷ್ಯನ ಬುದ್ಧಿ, ಹೊರಗಿನ ಪ್ರಕೃತಿಗೂ, ಅವನ ಅಂತಃಚೈತನ್ಯಕ್ಕೂ ನಡುವೆ ಸೇತುವೆಯಂತೆ ಕಾರ್ಯಮಾಡುತ್ತದೆ. ಪ್ರಕೃತಿಯಲ್ಲಿ ಮೂರು ಗುಣಗಳು ಸೇರಿಕೊಂಡಿವೆ. ಅವು ಸತ್ವ, ರಜಸ್ಸು ಮತ್ತು ತಮಸ್ಸುಗಳು. ಈ ಮೂರೂ ಗುಣಗಳು ಮನುಷ್ಯನಲ್ಲೂ ಇವೆ. ಅವುಗಳ ಪ್ರಮಾಣ ಒಬ್ಬೊಬ್ಬರಲ್ಲಿ ಬೇರೆಯಾಗಿರುತ್ತವೆ. ಅವು ಬಹುಪಾಲು ಅವನು ಬೆಳೆದ ವಾತಾವರಣ, ವಂಶವಾಹಿನಿ, ಸಂಪರ್ಕದಲ್ಲಿದ್ದ ಜನರ ನಡವಳಿಕೆಗಳಿಂದ ಉಂಟಾದದ್ದು. ಪ್ರಕೃತಿ ತನ್ನ ಗುಣಗಳಿಂದ ಮನುಷ್ಯನನ್ನು ಸೆಳೆದಾಗ, ಅವನಲ್ಲಿದ್ದ ಗುಣಗಳು ಅವುಗಳೊಂದಿಗೆ ಹೊಂದಾಣಿಕೆಯಾಗಿಯೋ, ವಿರುದ್ಧವಾಗಿಯೋ ವರ್ತಿಸಿ ಅವನಲ್ಲಿ ಬೇರೆ ಬೇರೆ ಭಾವಗಳನ್ನು ಉಕ್ಕಿಸುತ್ತದೆ. ಪ್ರಕೃತಿಯ ಸತ್ವಗುಣ ಮನುಷ್ಯನನ್ನು ಕೆಣಕಿದಾಗ ಅದು ಆತ್ಮಾಭಿಮುಖವಾಗುತ್ತದೆ, ನಡತೆಯಲ್ಲಿ ಸುಭಗತೆ, ಕರುಣೆ, ವಿನಮ್ರತೆಗಳು ಕಾಣುತ್ತವೆ. ಅಂತೆಯೇ ರಾಜಸ ಹಾಗೂ ತಾಮಸಗುಣಗಳನ್ನು ಪ್ರಕೃತಿ ಪ್ರಚೋದಿಸಿದಾಗ ವ್ಯಕ್ತಿಗಳ ಗುಣಚರ್ಯೆಗಳೇ ಬದಲಾಗುತ್ತವೆ. ತನ್ನ ಹೆಂಡತಿಯನ್ನು ಅಪಹರಣ ಮಾಡಿಕೊಂಡು ಹೋದ ದೈತ್ಯ ರಾವಣನೊಡನೆ ಭೀಕರ ಯುದ್ಧವನ್ನು ಮಾಡುವಾಗ ತನ್ನ ಶೌರ್ಯವನ್ನು ತೋರಿದ ರಾಮಚಂದ್ರ, ರಾವಣನ ವಧೆಯಾದೊಡನೆ ಕರುಣೆಯಿಂದ ಅವನ ಗೌರವದ ಅಂತ್ಯಕ್ರಿಯೆಯನ್ನು ಮಾಡಲು ವಿಭೀಷಣನಿಗೆ ಹೇಳುತ್ತಾನೆ! ಅದೇ ರಾಮ, ಸಮುದ್ರ ದಾರಿ ನೀಡುವುದಿಲ್ಲವೆಂದಾಗ, ಅತ್ಯಾಧಿಕ್ಯವಾದ ರೋಷದಿಂದ, ಬಾಣ ಬಿಟ್ಟು ಸಮುದ್ರವನ್ನೇ ಒಣಗಿಸಿಬಿಡುವುದಾಗಿ ಸೆಟೆದು ನಿಲ್ಲುತ್ತಾನೆ. ಪ್ರಾಣತ್ಯಾಗ ಮಾಡುತ್ತಿರುವ ಜಟಾಯುವನ್ನು ನೋಡಿ ದುಃಖದಿಂದ ಕಣ್ಣೀರು ಸುರಿಸುತ್ತಾನೆ. ಸೀತೆಯ ಮೇಲೆ ಅನ್ಯಾದೃಶವಾದ ಪ್ರೀತಿ ತೋರಿಸುವ ಸೀತಾರಾಮ, ಲಂಕೆಯಲ್ಲಿ ಯುದ್ಧಮುಗಿದ ನಂತರ, ಆಕೆಯ ಮೇಲೆ ಏನೂ ಪ್ರೀತಿ ಇಲ್ಲದವರಂತೆ ಅಗ್ನಿಪರೀಕ್ಷೆಗೆ ಕರೆ ನೀಡುತ್ತಾನೆ. ಇವು ಪ್ರಕೃತಿಯ ಪ್ರಚೋದನೆಯಿಂದಾದ ಬದಲಾವಣೆಗಳು.

ನಾವು ವಾಹನದಲ್ಲಿ ಕುಳಿತು ಹಿಮಾಲಯ ಪರ್ವತದ ಶ್ರೇಣಿಗಳಲ್ಲಿ ಸಾಗುವಾಗ, ಸೃಷ್ಟಿ ಸೌಂದರ್ಯ ಹೃದಯಕ್ಕೆ ಆಲ್ಹಾದವನ್ನುಂಟುಮಾಡುತ್ತದೆ. ಆದರೆ ಮುಂದಿದ್ದ ಕಾರು ಜಾರಿ ಪ್ರಪಾತಕ್ಕುರುಳಿದಾಗ, ಆಲ್ಹಾದ ಮರೆಯಾಗಿ ಗಾಬರಿಯಾಗುತ್ತದೆ. ಇದನ್ನೇ ಕಗ್ಗ ಹೇಳುತ್ತದೆ. ಪ್ರಕೃತಿಯ ಶಕ್ತಿಗಳು, ತೇಜಗಳು ಮನುಷ್ಯನ ಹೃದಯವನ್ನು ಕೆರಳಿಸಿದಾಗ ಅವನಿಂದ ಹೊರಡುವ ಮೋಹದ, ಧೀರತೆಯ ಮತ್ತು ಗಂಭೀರ ಪ್ರತಿಕ್ರಿಯೆಗಳ ಸರಸತೆಯೇ ಸುಂದರವಾದದ್ದು. ❖

ದಿನ ಭವಿಷ್ಯ

ಶುಕ್ರವಾರ ಆಗಸ್ಟ್ 27, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಶ್ರಾವಣ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಮಖಾ ಪಂಚಮೀ ಗಂ. 29-49 (ಸಾ. 6-10) ಶುಕ್ರವಾರ ನಿತ್ಯ ನಕ್ಷತ್ರ ಅಶ್ವಿನೀ ಗಂ. 47-38 (ರಾ. 1-18) ಗಂಡ ನಾಮ ಯೋಗ ಗಂ. 2-20 ತೈತಲ ಕರಣ ಗಂ. 29-49 ವಿಷ ಗಂ. 37-15 ಅಮೃತ ಗಂ. 28-32 : ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30 : ಸೂರ್ಯೋದಯ: 6-12 ಸೂರ್ಯಾಸ್ತ: 6-31 ಅದೃಷ್ಟ ಸಂಖ್ಯೆ 1 8

- **ಮೇಷ:** ಒಳ್ಳೆಯ ಚಿಂತನೆಯಿಂದಾಗಿ ಉತ್ತಮ ಮನಸ್ಥಿತಿಯನ್ನು ಕಾಯ್ದುಕೊಳ್ಳುವಿರಿ. ಶಕ್ತ್ಯಾನುಸಾರ ಕೆಲಸ ಕಾರ್ಯಗಳನ್ನು ಕೈಗೆತ್ತಿಕೊಂಡು ನಿರಾಶರಾಗದೆ ಸಾಧಿಸಲಿದ್ದೀರಿ.
- **ವೃಷಭ:** ಪ್ರಾಮಾಣಿಕ ಪ್ರಯತ್ನದಿಂದಾಗಿ ಕೆಲಸ ಕಾರ್ಯಗಳಲ್ಲಿ ಯಶಸ್ಸು. ಮಹಿಳೆಯರಿಗೆ ಬಿಡುವಿಲ್ಲದ ನೆಮ್ಮದಿಯ ಕೆಲಸ ಕಾರ್ಯಗಳು.
- **ಮಿಥುನ:** ಸ್ವಯಂ ಶಕ್ತಿ, ನಂಬಿಕೆ ವಿಶ್ವಾಸಗಳನ್ನು ನಂಬಿ ಕೆಲಸ ಕಾರ್ಯಗಳಲ್ಲಿ ಯಶಸ್ಸನ್ನು ಸಾಧಿಸುವಿರಿ. ಜಾಣ್ಮೆಯಿಂದಾಗಿ ಅಸಾಧ್ಯವಾದ ಸಾಧನೆಯನ್ನು ಮಾಡಲಿದ್ದೀರಿ. ನೆಮ್ಮದಿಯ ದಿನವಾಗಿದೆ.
- **ಕರ್ಕಾಟಕ:** ಉದ್ಯೋಗ ಕ್ಷೇತ್ರದಲ್ಲಿ ಒಲುಮೆಯಿಂದಲೇ ಗೆಲುವು. ಬದುಕಿಗೊಂದು ಹೊಸ ಬೆಳಕು ಮೂಡಿಬರಲಿದೆ. ಕಾರ್ಯಸಾಧನೆಯಿಂದಾಗಿ ನೆಮ್ಮದಿಯನ್ನು ಹೊಂದುವಿರಿ.
- **ಸಿಂಹ:** ದೂರಾಲೋಚನೆಯಿಂದ ಚಿಂತನೆ ನಡೆಸಿ ಕಾರ್ಯಗಳನ್ನು ಕೈಗೊಳ್ಳಲಿದ್ದೀರಿ. ಸಹಕಾರ ಕ್ಷೇತ್ರಗಳಲ್ಲಿ ಉತ್ತಮ ಸಾಧನೆ ಮಾಡಿ ಪ್ರಶಂಸೆಗೆ ಪಾತ್ರರಾಗಲಿದ್ದೀರಿ. ಹಿರಿಯರ ಆರೋಗ್ಯದ ಬಗ್ಗೆ ವಿಶೇಷ ಕಾಳಜಿ ವಹಿಸಬೇಕಾದೀತು.
- **ಕನ್ಯಾ:** ಮಾಡಬೇಕಾದ ಕೆಲಸ ಕಾರ್ಯಗಳ ಬಗ್ಗೆ ಗಾಢ ಚಿಂತನೆ. ವಿರೋಧವಿಲ್ಲದ ಸಾಮರಸ್ಯದ ದೃಢ ಹೆಜ್ಜೆ ಹಾಕುವಿರಿ. ಕೆಲಸ ಕಾರ್ಯಗಳಲ್ಲಿ ಕೌಶಲ ಮೆರೆದು ಇತರರ ಪ್ರಶಂಸೆಗೆ ಪಾತ್ರರಾಗುವಿರಿ.
- **ತುಲಾ:** ನೌಕರಿಯಲ್ಲಿರುವವರು ಹಿರಿಯ ಅಧಿಕಾರಿಗಳ ಸೂಚನೆಯ ಮೇರೆಗೆ ಹೆಚ್ಚಿನ ಜವಾಬ್ದಾರಿಯನ್ನು ನಿಭಾಯಿಸಬೇಕಾದೀತು. ನೆರೆಹೊರೆಯವರೊಂದಿಗೆ ಹಿತವಾದ ಮಾತುಕತೆಗಳಿಂದಾಗಿ ಮನ ಗೆಲ್ಲಲಿದ್ದೀರಿ.
- **ವೃಶ್ಚಿಕ:** ದೃಢವಾದ ಸಂಕಲ್ಪದಿಂದ ಕೆಲಸ ಕಾರ್ಯಗಳನ್ನು ಕೈಗೆತ್ತಿಕೊಂಡು ಯಶಸ್ಸು. ಸಮಾಜದ ಸರ್ವತೋಮುಖ ಪ್ರಗತಿಗಾಗಿ ಉತ್ತಮ ಮಾರ್ಗದರ್ಶನ ಮಾಡಿ ಪ್ರಶಂಸೆಗೆ ಪಾತ್ರರಾಗಲಿದ್ದೀರಿ.
- **ಧನು:** ಕಷ್ಟದಲ್ಲಿರುವವರಿಗೆ ನೆರವು ನೀಡಬೇಕಾದ ಸುಸಂದರ್ಭ ದೊರಕಿ ಧನ್ಯತೆ ಮೂಡಲಿದೆ. ವೈಯಕ್ತಿಕ ಸಮಸ್ಯೆಗಳು ಪರಿಹಾರವಾಗಿ ನೆಮ್ಮದಿ. ಸಮಾರಂಭಗಳಲ್ಲಿ ಭಾಗವಹಿಸಿ ಸಂಭ್ರಮಿಸುವ ಅವಕಾಶ.
- **ಮಕರ:** ಬದುಕಿಗೊಂದು ನಿಶ್ಚಿತ ಆಸರೆಯನ್ನು ಕಲ್ಪಿಸಿಕೊಳ್ಳಲಿದ್ದೀರಿ. ಉತ್ತಮ ಗುಣದಿಂದಾಗಿ ನೆರೆಹೊರೆಯವರೊಂದಿಗೆ ಉತ್ತಮ ಬಾಂಧವ್ಯ ವೃದ್ಧಿಯಾಗಲಿದೆ.
- **ಕುಂಭ:** ನ್ಯಾಯಾಂಗದ ಬಗೆಗಿನ ಕಾಳಜಿಯಿಂದಾಗಿ ಹಿಂದೆ ಸರಿಯದ ದೃಢ ನಿರ್ಧಾರ ಒಳಿತನ್ನು ತರಲಿದೆ. ಸ್ಪಷ್ಟ ನಿಲುವಿನಿಂದಾಗಿ ವಿಶೇಷ ಸಾಧನೆಯ ಗರಿಮೆ ನಿಮ್ಮದಾಗಲಿದೆ.
- **ಮೀನ:** ನೆನೆಗುದಿಗೆ ಬಿದ್ದ ವಿಷಯವೊಂದರ ಬಗ್ಗೆ ದೃಢ ನಿರ್ಧಾರವೊಂದನ್ನು ತೆಗೆದುಕೊಳ್ಳಲಿದ್ದೀರಿ. ಧೈರ್ಯದ ನಡೆ ನುಡಿಯಿಂದಾಗಿ ನೆಮ್ಮದಿಯನ್ನು ಹೊಂದುವುದರ ಜೊತೆಗೆ ಗಾಂಭೀರ್ಯವನ್ನು ಕಾಯ್ದುಕೊಳ್ಳಲಿದ್ದೀರಿ.

ನಿಮ್ಮ ಜನ್ಮದಿನ 27-ಆಗಸ್ಟ್ ಇಂದು ಅತ್ಯಂತ ಶುಭದಾಯಕವಾಗಿದ್ದು, ವ್ಯಾಪಾರ ವ್ಯವಹಾರದಲ್ಲಿ ಸಾಮಾನ್ಯ ಪ್ರಗತಿಯಿಂದಾಗಿ ಜೀವನ ಮಟ್ಟವನ್ನು ಕಾಯ್ದುಕೊಳ್ಳಲಿದ್ದೀರಿ. ಕ್ರೀಡಾ ಮನೋಭಾವದಿಂದ ಸಮಸ್ಯೆಗಳನ್ನು ಎದುರಿಸುವುದರಿಂದ ಒತ್ತಡದ ಬದುಕಿನಿಂದ ದೂರಾಗಿ ನೆಮ್ಮದಿಯನ್ನು ಹೊಂದುವಿರಿ.

ಪದಬಂಧ 4701 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಕ್ಷೌರದ ಅಂಗಡಿಯಿದು (6)
4. ಅದೇ ತಾನೆ ಮೂಡುತ್ತಿರುವ ಸೂರ್ಯ (4)
5. ಒಳ್ಳೆಯ ಭಾವ (3)
7. ಈತ ಒಳ್ಳೆಯ ಕವಿ (3)
9. ಅಮೂಲ್ಯ ವಸ್ತುಗಳನ್ನಿಡುವ ಕಬ್ಬಿಣದ ಪೆಟ್ಟಿಗೆ (3)
11. ನೂರರ ಮೊತ್ತ (3)
13. ತೀಡಿ ತೀಡಿ ಮಾಡಿದ ಸುಧಾರಣೆ! (4)
15. ದಿನಸಿ ಸಾಮಾನುಗಳನ್ನು ಮಾರುವ ಅಂಗಡಿ (6)

ಮೇಲಿಂದ ಕೆಳಕ್ಕೆ
1. ಆಯಾಳಿಗೆ ಆಗಿರುವ ಸುಸ್ತು! (3)
2. ಹುಡುಗಿಯಿಲ್ಲಿ ತಿರುಗಿದ್ದಾಳೆ (2)
3. ಅಡ್ಡಿಯಿಲ್ಲದಿರುವುದು (3)
6. ನೇರವಲ್ಲದ ಗಮನ (4)
7. ಪ್ರಸ್ತುತ ಎಂದು ಹೀಗೂ ಹೇಳುವರು (3)
8. ಸಾವಿಗೀಡಾದ ವ್ಯಕ್ತಿ (4)
10. ಇದು ಕೊನೆಯದು (3)
12. ಕನ್ನ ಹಾಕಿ ಕದ್ದೊಯ್ದ ಮುಕುರ (3)
14. ಕೆಂಡದ ಚೂರು ಇಲ್ಲಿ ತಿರುವು ಮುರುವಾಗಿದೆ (2)



4700ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ವಸಂತಮಾಸ 4.ವರ್ಣನೆ 5.ಮಾನಿನಿ 6.ತರುಣಿ 8.ದಾಹ 9.ವಾರ 10.ನವಣೆ 13.ವದನ 14.ಆರಂಬ 15.ಸಮರಸಿಂಹ

ಮೇಲಿಂದ ಕೆಳಕ್ಕೆ: 2.ತಲೆಬರಹ 3.ಸಮಾಧಿ 4.ವನಿತ 7.ರುಧಿರ 8.ದಾನವ 9.ವಾರಸುದಾರ 11.ಣೆವಬ 12.ದುನಸ

ಸುಡೊಕು 5087

	7	9			3		8	1
				8		2		9
8	1		2	6		7	3	
	8					1		5
	9	2	8	1	5		6	
5						8		
9		7	5					6
	5				2		4	
4	3		6		1			2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5086 ಸುಡೊಕು

9	2	8	3	6	7	4	5	1
3	6	4	9	1	5	8	7	2
5	7	1	2	4	8	9	6	3
7	4	2	6	3	9	1	8	5
8	3	9	5	7	1	2	4	6
1	5	6	8	2	4	3	9	7
2	8	5	1	9	6	7	3	4
4	9	3	7	5	2	6	1	8
6	1	7	4	8	3	5	2	9

ಕಮಿಷನರ್ ಕಚೇರಿ ಬಳಿ 'ಡ್ರಗ್ಸ್ ಪಾರ್ಟಿ'!

ಒಂದನೇ ಪುಟದಿಂದ

'ಮಾರತ್ತಹಳ್ಳಿಯಲ್ಲಿರುವ 'ಈ-ಜೋನ್' ಕ್ಲಬ್, ಇಂದಿರಾನಗರದಲ್ಲಿ 'ಬಾಬಾ ಯಾಗಾಸ್ ಹಾಸ್ಪಿಟಾಲಿಟಿ ಎಲ್‌ಎಲ್‌ಪಿ' ಕ್ಲಬ್‌ನಲ್ಲೂ ಪಾರ್ಟಿ ಆಯೋಜಿಸಿದ್ದ. ಪಾರ್ಟಿ ಮುಗಿದ ನಂತರ, 'ಆಫ್ಟರ್ ಪಾರ್ಟಿ' ಹೆಸರಿನಲ್ಲಿ ಗ್ರಾಹಕರನ್ನು ಒಂದೆಡೆ ಸೇರಿಸಿ ಡ್ರಗ್ಸ್ ಮಾರುತ್ತಿದ್ದ. 2020ರ ಮಾರ್ಚ್ 8ರಂದು ಅಶೋಕ ಹೋಟೆಲ್‌ನಲ್ಲಿ 'ಡಿವೈನ್ ಎಕ್ಸ್ ಮಹೋಲಿ' ಕಾರ್ಯಕ್ರಮ ಆಯೋಜಿಸಿ ಡ್ರಗ್ಸ್ ಮಾತ್ರ ಮಾರಿದ್ದ ಸಂಬಂಧ ಹಲವು ಪುರಾವೆಗಳು ಸಿಕ್ಕಿವೆ' ಎಂದೂ ದೋಷಾರೋಪ ಪಟ್ಟಿಯಲ್ಲಿ ತಿಳಿಸಲಾಗಿದೆ.

ವಾಟ್ಸ್‌ಆ್ಯಪ್ ಗ್ರೂಪ್ ರಚನೆ: '2012ರಿಂದಲೇ ಡ್ರಗ್ಸ್ ಮಾರಾಟದಲ್ಲಿ ತೊಡಗಿಸಿಕೊಂಡಿದ್ದ ವಿರೇನ್, ಗ್ರಾಹಕರನ್ನು ಸಂಪರ್ಕಿಸಲು ವಾಟ್ಸ್‌ಆ್ಯಪ್ ಗ್ರೂಪ್ ಸಹ ರಚಿಸಿದ್ದ. ಕೆಲ ವ್ಯಕ್ತಿಗಳು ಗಾಂಜಾ ಕೈಯಲ್ಲಿ ಹಿಡಿದಿದ್ದ ಹಾಗೂ ಕೊಕೇನ್ ಸುತ್ತಿರುವ ನೋಟಿನ ಫೋಟೊಗಳು ಮೊಬೈಲ್‌ನಲ್ಲಿ ಸಿಕ್ಕಿವೆ' ಎಂಬ ಸಂಗತಿಯೂ ಚಾರ್ಜ್‌ಶೀಟ್‌ನಲ್ಲಿದೆ.

ಕೋಟ್ಯಂತರ ರೂಪಾಯಿ ವ್ಯವಹಾರ: 'ಡ್ರಗ್ಸ್ ವ್ಯಸನಿಗಳಾಗಿದ್ದ ಆರೋಪಿಗಳು, ಇತರರಿಗೆ ಡ್ರಗ್ಸ್ ಸೇವಿಸಲು ಪ್ರಚೋದಿಸಿದ್ದರು. ಪಾರ್ಟಿಗಳನ್ನು ಆಯೋಜಿಸಿ ಶ್ರೀಮಂತರ ಮಕ್ಕಳು, ಉದ್ಯಮಿಗಳು, ವ್ಯಾಪಾರಿಗಳು, ಖಾಸಗಿ ಕಂಪನಿ ಉದ್ಯೋಗಿಗಳು, ವಿದ್ಯಾರ್ಥಿಗಳನ್ನು ಆಹ್ವಾನಿಸುತ್ತಿದ್ದರು. ಡ್ರಗ್ಸ್ ಮಾರಿ ಹಣ ಸಂಪಾದಿಸುತ್ತಿದ್ದರು'

'25 ಆರೋಪಿಗಳು ಕೋಟ್ಯಂತರ ರೂಪಾಯಿ ವ್ಯವಹಾರ ನಡೆಸಿರುವುದು ಬ್ಯಾಂಕ್ ಖಾತೆಗಳ ಪರಿಶೀಲನೆಯಿಂದ ಗೊತ್ತಾಗಿದೆ. ಈ ಬಗ್ಗೆ ಲೆಕ್ಕ ಪರಿಶೋಧನೆ ಪ್ರಗತಿಯಲ್ಲಿದೆ' ಎಂದೂ ಪಟ್ಟಿ ವಿವರಿಸಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

'ಕ್ರೀಡಾ ಪ್ರಶಸ್ತಿಗಳಿಗೆ ರಾಜಕಾರಣಿಗಳ ಹೆಸರಿಡುವುದು ತಪ್ಪಲ್ಲ'

ಬೆಂಗಳೂರು: 'ಕ್ರೀಡಾ ಪ್ರಶಸ್ತಿ, ಕ್ರೀಡಾಂಗಣ ಹಾಗೂ ಇತರ ಸಂಸ್ಥೆಗಳಿಗೆ ರಾಜಕೀಯ ಧುರೀಣರ ಹೆಸರು ಇಡುವುದರಲ್ಲಿ ತಪ್ಪೇನಿಲ್ಲ. ಈಗಾಗಲೇ ಇಟ್ಟಿರುವ ಹೆಸರುಗಳನ್ನು ಬದಲಿಸುವುದು ಸರಿಯಲ್ಲ. ಆ ಮೂಲಕ ಆ ನೇತಾರರನ್ನು ಅವಮಾನಿಸಬಾರದು. ಕ್ರೀಡೆ ಮತ್ತು ಸನ್ನಿವೇಶದಲ್ಲಿ ರಾಜಕೀಯ ಬೆರೆಸುವುದು ತಪ್ಪು...'

'ಕ್ರೀಡಾ ಪ್ರಶಸ್ತಿ, ಸ್ಟೇಡಿಯಂಗಳಿಗೆ ರಾಜಕಾರಣಿಗಳ ಹೆಸರು ಬೇಕೆ?' ಎಂಬ ವಿಷಯದ ಕುರಿತು ಗುರುವಾರ ನಡೆದ 'ಪ್ರಜಾವಾಣಿ ಸಂವಾದ'ದಲ್ಲಿ ಮೂಡಿಬಂದ ಅಭಿಪ್ರಾಯಗಳಿವು.

'ಭಾರತದಲ್ಲಿ ಕ್ರೀಡೆಗೆ ಹೆಚ್ಚಿನ ಪ್ರೋತ್ಸಾಹ ಸಿಗುತ್ತಿಲ್ಲ. ಕ್ರೀಡಾ ಸಂಸ್ಥೆಗಳು ರಾಜಕಾರಣಿಗಳ ಕಪಿಮುಷ್ಟಿಯಲ್ಲಿವೆ. ಕ್ರೀಡಾ ಜ್ಞಾನವೇ ಇಲ್ಲದ ಅವರು ಕ್ರೀಡಾಪಟುಗಳನ್ನು ಆಯ್ಕೆ ಮಾಡುವುದು ಎಷ್ಟು ಸರಿ. ಕ್ರೀಡಾ ಸಂಸ್ಥೆಗಳನ್ನು ಮುನ್ನಡೆಸುವ ಹೊಣೆ ಕ್ರೀಡಾಪಟುಗಳಿಗೆ ಏಕೆ ನೀಡಬಾರದು' ಎಂಬ ಮಾತುಗಳೂ ವ್ಯಕ್ತವಾದವು.

ಪ್ರಜಾವಾಣಿ ಸಂವಾದ

ಅಟಲ್ ಬಿಹಾರಿ ವಾಜಪೇಯಿ ಅವರು ಈ ದೇಶ ಕಂಡ ಉತ್ತಮ ಪ್ರಧಾನಿ. ಅವರ ಹೆಸರನ್ನೂ ಹಲವು ಸಂಸ್ಥೆಗಳಿಗೆ ಇಡಲಾಗಿದೆ. ಅದಕ್ಕೆ ನಮ್ಮ ವಿರೋಧವೇನಿಲ್ಲ. ಅವರ ಹೆಸರು ಬದಲಿಸುವ ಕೆಲಸಕ್ಕೂ ನಾವು ಕೈ ಹಾಕಿಲ್ಲ'.

'ಕ್ರೀಡಾ ದಿಗ್ಗಜರಿಗೆ ಗೌರವ ನೀಡಬೇಕು. ಅದು ಎಲ್ಲರ ಆಶಯ. ಮುಂದೆ ರೂಪಿಸಲಾಗುವ ಯೋಜನೆಗಳಿಗೆ ಅವರ ಹೆಸರನ್ನು ಇಡಬಹುದಲ್ಲವೇ. ಇನ್ನು ಮುಂದೆ ಪ್ರಶಸ್ತಿ, ವಿಮಾನ ನಿಲ್ದಾಣ, ರಸ್ತೆಗಳಿಗೆ ನಾಮಕರಣ ಮಾಡುವಾಗ ಸೂಕ್ತ ಮಾನದಂಡಗಳನ್ನು ಅನುಸರಿಸಬೇಕು. ಅದಕ್ಕಾಗಿಯೇ ಹೊಸ ಮಾರ್ಗಸೂಚಿ ರೂಪಿಸುವುದು ಉತ್ತಮ'.

'ಗುಜರಾತ್‌ನ ಸರ್ದಾರ್ ಪಟೇಲ್ ಕ್ರೀಡಾಂಗಣಕ್ಕೆ ನರೇಂದ್ರ ಮೋದಿ ಹೆಸರಿಟ್ಟಿಲ್ಲವೇ. ಆ ಕ್ರೀಡಾಂಗಣಕ್ಕೆ ಮರು ನಾಮಕರಣ ಮಾಡಿದ್ದನ್ನು ಬದಿಗಿಟ್ಟು [illegible] ಒಂದು ಕುಟುಂಬದತ್ತ ಬೊಟ್ಟು ಮಾಡುವುದು ಎಷ್ಟು ಸರಿ'.

-ಸಲೀಂ ಅಹ್ಮದ್, ಕೆಪಿಸಿಸಿ ಕಾರ್ಯಾಧ್ಯಕ್ಷ

'ಹೊಸ ಯೋಜನೆ, ಪ್ರಶಸ್ತಿಗಳಿಗೆ ಕ್ರೀಡಾ ದಿಗ್ಗಜರ ಹೆಸರಿಡಿ'

'ರಾಜೀವ್ ಗಾಂಧಿ ಅವರು ಪ್ರಧಾನಮಂತ್ರಿಯಾಗಿದ್ದಾಗ ಕ್ರೀಡೆಗೆ ಹೆಚ್ಚಿನ ಉತ್ತೇಜನ ನೀಡಿದ್ದರು. ಹೀಗಾಗಿ ಅವರು ಹುತಾತ್ಮರಾದ ನಂತರ ಪಿ.ವಿ. ನರಸಿಂಹರಾವ್ ಅವರು ಖೇಲ್ ರತ್ನ ಪ್ರಶಸ್ತಿಗೆ ರಾಜೀವ್ ಹೆಸರಿಟ್ಟಿದ್ದರು.

'ಎಲ್ಲದಕ್ಕೂ ಒಂದೇ ಕುಟುಂಬಕ್ಕೆ ಸೇರಿದವರ ಹೆಸರಿಡುವುದು ಎಷ್ಟು ಸರಿ'

'ಕ್ರೀಡಾಂಗಣ, ಪ್ರಶಸ್ತಿಗಳಿಗೆ ಮಾದರಿ ರಾಜಕಾರಣಿಗಳ ಹೆಸರಿಡುವುದರಲ್ಲಿ ಯಾವ ತಪ್ಪೂ ಇಲ್ಲ. ಆದರೆ ಎಲ್ಲಾ ಪ್ರಶಸ್ತಿ, ಕ್ರೀಡಾಂಗಣ, ಯೋಜನೆಗಳಿಗೆ ಒಂದೇ ಕುಟುಂಬಕ್ಕೆ ಸೇರಿದವರ ಹೆಸರುಗಳನ್ನಷ್ಟೇ ಇಡುವುದು ಒಪ್ಪತಕ್ಕದ್ದಲ್ಲ. ಮಹಾತ್ಮ ಗಾಂಧೀಜಿ, ಸರ್ದಾರ್ ಪಟೇಲ್ ಅವರ ಹೆಸರುಗಳು ಮೂಲೆಗುಂಪಾಗುತ್ತಿವೆ. ಪಿ.ವಿ.ನರಸಿಂಹರಾವ್ ಅವರ ಹೆಸರನ್ನು ಜನ ಮರೆತೇ ಬಿಟ್ಟಿದ್ದಾರೆ'.

'ಈಗಾಗಲೇ ಇಟ್ಟಿರುವ ಹೆಸರುಗಳನ್ನು ಬದಲಿಸುವುದು ಎಷ್ಟು ಸರಿ ಎಂಬುದರ ಬಗ್ಗೆ ಚರ್ಚೆಯಾಗಲಿ. ದೇಶದ ಹಿರಿಮೆ ಹೆಚ್ಚಿಸಿದ ಅನೇಕ ಕ್ರೀಡಾಪಟುಗಳಿದ್ದಾರೆ. ಸಮಾಜದ ಏಕತೆ ಹಾಗೂ ಅಭಿವೃದ್ಧಿಗಾಗಿ ಸಾವಿರಾರು ಮಂದಿ ದುಡಿದಿದ್ದಾರೆ. ಅವರಿಗೂ ಗೌರವ ಸಲ್ಲಬೇಕಲ್ಲವೆ?. 600ಕ್ಕೂ ಹೆಚ್ಚು ಸಂಘ ಸಂಸ್ಥೆಗಳು, ಪ್ರಶಸ್ತಿಗಳು, ಕ್ರೀಡಾಂಗಣಗಳಿಗೆ ಕುಟುಂಬವೊಂದನ್ನು ಪ್ರತಿನಿಧಿಸುವ ಮೂವರು ರಾಜಕಾರಣಿಗಳ ಹೆಸರನ್ನು ಇಡಲಾಗಿದೆ. ರಾಜೀವ್ ಗಾಂಧಿ ಅವರ ಹೆಸರಿನಲ್ಲಿರುವ ಪ್ರಶಸ್ತಿಯೊಂದರ ಹೆಸರು ಬದಲಿಸುವುದರಲ್ಲಿ ತಪ್ಪೇನಿಲ್ಲ'.

–ಕ್ಯಾಪ್ಟನ್ ಗಣೇಶ್ ಕಾರ್ಣಿಕ್, ಬಿಜೆಪಿ ರಾಜ್ಯ ವಕ್ತಾರ

'ಕ್ರೀಡೆ ಹೆಸರಿನಲ್ಲಿ ರಾಜಕಾರಣ ಸಲ್ಲ'



'ಖೇಲ್ ರತ್ನ ಗೌರವಕ್ಕೆ ಧ್ಯಾನ್‌ಚಂದ್ ಹೆಸರಿಟ್ಟಿರುವುದು ಸ್ವಾಗತಾರ್ಹ. ವಿಶ್ವ ಮಟ್ಟದಲ್ಲಿ ಛಾಪು ಮೂಡಿಸಿರುವ ಕ್ರೀಡಾಪಟುಗಳ ಹೆಸರಿನಲ್ಲಿ ಪ್ರಶಸ್ತಿ ನೀಡುವುದು ಅರ್ಥಪೂರ್ಣ. ಕ್ರೀಡೆಯ ಹೆಸರಿನಲ್ಲಿ ರಾಜಕಾರಣ ಮಾಡುತ್ತಿರುವುದು ನಿಲ್ಲಬೇಕು. ರಾಜೀವ್, ಇಂದಿರಾ, ವಾಜಪೇಯಿ ಇವರೆಲ್ಲಾ ದೊಡ್ಡ ನಾಯಕರು. ಎಲ್ಲರೂ ಅವರನ್ನು ಪೂಜಿಸುತ್ತಾರೆ. ನಾವು ಕೂಡ ಅವರನ್ನು ಗೌರವಿಸುತ್ತೇವೆ'

'ಈಗ ಪ್ರತಿಯೊಂದಕ್ಕೂ ಲಾಬಿ ನಡೆಯುತ್ತಿದೆ. ಕ್ರೀಡಾಪಟುಗಳ ಸಾಧನೆ ಗುರುತಿಸಿ ಪ್ರಶಸ್ತಿ ನೀಡುವ ಕೆಲಸ ಆಗುತ್ತಲೇ ಇಲ್ಲ. ಕ್ರೀಡಾಪಟುಗಳ ಆಯ್ಕೆಯ ವಿಚಾರದಲ್ಲೂ ಪಾರದರ್ಶಕತೆ ಇಲ್ಲ. ಕ್ರೀಡೆಯಲ್ಲಿ ರಾಜಕಾರಣಿಗಳು ಇರಲಿ. ಆದರೆ ಕ್ರೀಡೆಯೇ ರಾಜಕಾರಣವಾಗಬಾರದು'.

–ಎಂ.ಕೆ.ಆಶಾ, ಅಂತರರಾಷ್ಟ್ರೀಯ ಅಥ್ಲೀಟ್

'ಕ್ರೀಡೆಗೆ ಹೆಚ್ಚಿನ ಮನ್ನಣೆ ಸಿಗಲಿ'

'ರಾಜೀವ್ ಗಾಂಧಿ ಖೇಲ್ ರತ್ನ ಪ್ರಶಸ್ತಿಗೆ ಮರುನಾಮಕರಣ ಮಾಡಿದ್ದು ಸರಿಯಲ್ಲ. ಕ್ರೀಡೆಗೆ ನಮ್ಮ ದೇಶದಲ್ಲಿ ದೊಡ್ಡ ಅನ್ಯಾಯವಾಗುತ್ತಿದೆ. ಚೀನಾದಲ್ಲಿ ಕ್ರೀಡಾ ಚಟುವಟಿಕೆಗಳಿಗಾಗಿಯೇ ₹3 ಲಕ್ಷ ಕೋಟಿ ಮೊತ್ತ ಮೀಸಲಿಡಲಾಗುತ್ತದೆ. ಹೋದ ವರ್ಷ ನಮ್ಮಲ್ಲಿ ₹350 ಕೋಟಿ ಮೊತ್ತ ನೀಡಲಾಗಿತ್ತು. 140 ಕೋಟಿ ಜನಸಂಖ್ಯೆ ಇರುವ ಭಾರತವು ಒಲಿಂಪಿಕ್ಸ್‌ನಂತಹ ಮಹಾಕೂಟಗಳಲ್ಲಿ ಎಷ್ಟು ಪದಕಗಳನ್ನು ಗೆಲ್ಲುತ್ತಿದೆ ಎಂಬುದರ ಆತ್ಮಾವಲೋಕನವೂ ಆಗಬೇಕು'.

'2019-20ರಲ್ಲಿ ₹2,300 ಕೋಟಿ ಇದ್ದ ಕ್ರೀಡಾ ಬಜೆಟ್, ಒಲಿಂಪಿಕ್ ವರ್ಷದಲ್ಲಿ ₹1,600 ಕೋಟಿಗೆ ಇಳಿಯಿತು. ಇದು ಸರಿಯಲ್ಲ. ಶಾಲೆ, ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ಕ್ರೀಡೆಗೆ ಎಷ್ಟು ಪ್ರೋತ್ಸಾಹ ನೀಡಲಾಗುತ್ತಿದೆ. ಕ್ರೀಡೆ ಮತ್ತು ಶಿಕ್ಷಣ ಜೊತೆ ಜೊತೆಯಾಗಿ ಸಾಗಬೇಕು. ಪ್ರಸ್ತುತ ಎಷ್ಟೋ ಶಾಲೆಗಳಲ್ಲಿ ಆಟದ ಮೈದಾನಗಳೇ ಇಲ್ಲ. ಕ್ರೀಡಾ ಬೆಳವಣಿಗೆಯಿಂದ ದೇಶದ ಅಭಿವೃದ್ಧಿಯಾಗುತ್ತದೆ. ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು'.

-ಕೆ.ಸಿ.ರಘು, ನೀತಿ ವಿಶ್ಲೇಷಕ

ಪೂರ್ಣ ಸಂವಾದ ವೀಕ್ಷಿಸಲು: https://www.facebook.com/prajavani.net/videos/1020402852140108

|ಓಂ ಶಾಂತಿ|

ವೈಕುಂಠ ಸಮಾರಾಧನೆ

ಶ್ರೀಮತಿ ಹೇಮಾವತಿ, ನಂ. 11/2, 5ನೇ ಅಡ್ಡ ರಸ್ತೆ, ಕಾರಣಿಕರ ರಸ್ತೆ, ಶಂಕರಪುರ, ಬೆಂಗಳೂರು-4. ಇವರು ಮಾಡುವ ವಿಜ್ಞಾಪನೆಗಳು

ಆತ್ಮೀಯರೇ, ನನ್ನ ಪೂಜ್ಯ ಪತಿಯವರಾದ
ಶ್ರೀ ಬಿ.ವಿ. ಗೌಡ (ವಿಜೇಂದ್ರ) ನವರು
(ಲೇ. ಬೋರೇಗೌಡರ ಮಗ)
ದಿನಾಂಕ 18-08-2021 ಬುಧವಾರ ಸಂಜೆ 4-25 ಗಂಟೆಗೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಇವರ ವೈಕುಂಠ ಸಮಾರಾಧನೆಯನ್ನು ದಿನಾಂಕ 29-08-2021 ಭಾನುವಾರ ಬೆಳಿಗ್ಗೆ 9:00 ರಿಂದ 12:00 ಗಂಟೆಯೊಳಗೆ ಮೃತರ ಸ್ವಗ್ರಾಮ "ಮಳೂರುಪಟ್ಟಣದಲ್ಲಿ" (ಚನ್ನಪಟ್ಟಣ ತಾ||) ನೆರವೇರಲಿದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ಕೋರುತ್ತೇವೆ.

ಇಂತಿ ದುಃಖತಪ್ತರು: ಶ್ರೀಮತಿ ಹೇಮಾವತಿ, ಮಕ್ಕಳು ಸಹೋದರರು, ಸಹೋದರಿಯರು ಹಾಗೂ ಬಂಧು-ಮಿತ್ರರು.

ನಿಧನ

ಶ್ರೀ. ಎಂ. ಆಶೀರ್ವಾದಮ್
ಮುರುಗಪ್ಪನ್ ಎಜುಕೇಶನ್ ಟ್ರಸ್ಟ್ (ರಿ) ಸಂಸ್ಥಾಪಕರು ಮತ್ತು ಚೇರ್ಮನ್ನರು, ಹಿರಿಯ ಕಾಂಗ್ರೆಸ್ ನಾಯಕರು, ಮಾಜಿ ಪಟ್ಟಣ ಪಂಚಾಯತಿ ಸದಸ್ಯರು 26.08.2021 ರಂದು ದೈವಾಧೀನರಾಗಿದ್ದಾರೆ.
27.08.2021 ರಂದು ಬೆಳಗ್ಗೆ 10 ಗಂಟೆಗೆ ಪಿಳ್ಳಣ್ಣ ಗಾರ್ಡನ್ ರುದ್ರಭೂಮಿಯಲ್ಲಿ ಅಂತ್ಯ ಸಂಸ್ಕಾರ ನೆರವೇರುತ್ತದೆ.

LOOKING FOR JOB OPPORTUNITY

Refer Classifieds on Wednesday

ಪರಸ್ಪರ ಅಂತರ ಮಾಯ

ಪಶ್ಚಿಮ ಬಂಗಾಳ ಸರ್ಕಾರ ಮಹಿಳೆಯರಿಗಾಗಿ ಜಾರಿಗೆ ತಂದಿರುವ ಲಕ್ಷ್ಮಿ ಭಂಡಾರ ಯೋಜನೆಯಡಿ ಹಣಕಾಸು ನೆರವು ಪಡೆಯಲು ಫಲಾನುಭವಿಗಳು ಪರಸ್ಪರ ಅಂತರ ಮರೆತು ಸಾಲಿನಲ್ಲಿ ನಿಂತಿದ್ದ ದೃಶ್ಯ ನದಿಯಾ ನಗರದಲ್ಲಿ ಗುರುವಾರ ಕಂಡುಬಂದಿತು

ಪಿಟಿಐ ಚಿತ್ರ

ತಮಿಳುನಾಡು: ಸರ್ಕಾರಿ ಶಾಲೆಗಳಲ್ಲಿ ಕಲಿತವರಿಗೆ ಶೇ 7.5 ಪ್ರಾಶಸ್ತ್ಯ ಕೋಟಾ

ಚೆನ್ನೈ (ಪಿಟಿಐ): ಸರ್ಕಾರಿ ಶಾಲೆಯಲ್ಲಿ 6 ರಿಂದ 12ನೇ ತರಗತಿವರೆಗೆ ಕಲಿತ ವಿದ್ಯಾರ್ಥಿಗಳಿಗೆ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಶೇ 7.5ರಷ್ಟು ಪ್ರಾಶಸ್ತ್ಯ ಕೋಟಾವನ್ನು ತಮಿಳುನಾಡು ಸರ್ಕಾರ ನಿಗದಿಪಡಿಸಿದೆ.

ಎಂಜಿನಿಯರಿಂಗ್, ಕೃಷಿ, ಪಶು ಸಂಗೋಪನೆ, ಕಾನೂನು ಮತ್ತು ಇತರೆ ವೃತ್ತಿಪರ ಪದವಿ ಕೋರ್ಸ್‌ಗಳಿಗೆ ರಾಜ್ಯದಲ್ಲಿ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ ಪಡೆಯಲು ಈ ಮೀಸಲು ಪ್ರಮಾಣ ಅವಕಾಶ ಕಲ್ಪಿಸಲಿದೆ.

ವಿಧಾನಸಭೆಯಲ್ಲಿ ಈ ಬಗ್ಗೆ ಮಸೂದೆ ಮಂಡಿಸಿದ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು, 'ದೆಹಲಿ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ಮುರುಗೇಶನ್ ನೇತೃತ್ವದ ಆಯೋಗದ ಶಿಫಾರಸು ಆಧರಿಸಿ ಈ ಕ್ರಮ ಕೈಗೊಳ್ಳಲಾಗುತ್ತಿದೆ' ಎಂದರು.

ಕಳೆದ ಹಲವು ವರ್ಷಗಳಲ್ಲಿ ಸರ್ಕಾರಿ ಶಾಲೆಗಳಲ್ಲಿ ಓದಿದ ಕೆಲವರಷ್ಟೇ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಪಡೆಯುತ್ತಿದ್ದಾರೆ. 2021ರಲ್ಲಿ ಅಣ್ಣಾ ವಿಶ್ವವಿದ್ಯಾಲಯಕ್ಕೆ ಪ್ರವೇಶ ಪಡೆದ ಸರ್ಕಾರಿ ಶಾಲೆಯಲ್ಲಿ ಕಲಿತ ವಿದ್ಯಾರ್ಥಿಗಳ ಪ್ರಮಾಣ ಕೇವಲ ಶೇ 0.83. ಅಂತೆಯೇ, ಸರ್ಕಾರಿ ಶಾಲೆಗಳಲ್ಲಿ ಕಲಿತ ಶೇ 6.31ರಷ್ಟು ವಿದ್ಯಾರ್ಥಿಗಳು ಸರ್ಕಾರಿ ಸಂಸ್ಥೆಗಳಿಗೆ, 0.44ರಷ್ಟು ವಿದ್ಯಾರ್ಥಿಗಳು ಅನುದಾನಿತ ಎಂಜಿನಿಯರಿಂಗ್ ಕಾಲೇಜುಗಳು, ಶೇ 3 ರಷ್ಟು ವಿದ್ಯಾರ್ಥಿಗಳು ಪಶುಸಂಗೋಪನಾ ಕೋರ್ಸ್‌ಗಳಿಗೆ ದಾಖಲಾಗಿದ್ದಾರೆ ಎಂದು ಅಂಕಿ ಅಂಶ ನೀಡಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600- 60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

ತಕ್ಷಣ ಬೇಕಾಗಿದ್ದಾರೆ ಕರ್ನಾಟಕದ ಎಲ್ಲಾಜಿಲ್ಲೆಗಳಲ್ಲಿನ ಕಂಪನಿಗಳಿಗೆ ಹಾಗೂ ಆಫೀಸ್‌ಗಳಿಗೆ ಯುವಕಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th,SSLC,PUC,ITI Degree Pass/Fail ಆದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ಉಚಿತ ವಸತಿಯೂಟದೊಂದಿಗೆ ESI/PFನೊಂದಿಗೆ ಸಂಬಳ:16,500/-ರಿಂದ 45000/-ದವರೆಗೆ. 7829256781, 7829215432

ರಾವ್ ಸಂಸ್ಥೆಗೆ ವಯಸ್ಸಾದವರನ್ನು,ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂ ನರ್ಸ್‌ಗಳು, ಹುಡುಗಿಯರು ಬೇಕಾಗಿದ್ದಾರೆ.ಊಟ ವಸತಿಯಿದೆ. 10,000-15,000. 8951315839, 9880545002

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧ ಕಂಪನಿ ಹಾಗೂ ಆಫೀಸ್ ಕೆಲಸಗಳಿಗೆ ಯುವಕಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800-45000/-. 9980295449, 9902839010

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

TOYOTA, TVS, ವಿಡಿಯೋಕಾನ್, ಬ್ರಿಟಾನಿಯಾಗಳಿಗೆ ಬಿಗ್ ಬಜಾರ್‌ಗಳಿಗೆ SSLC,PUC,Degree ಯವರು, ITI ನವರು, (ವಿದ್ಯಾರ್ಹತೆಯಿಲ್ಲದವರಿಗೂ) ನೇರನೇಮಕಾತಿ. 17,000-56,000/- ವಸತಿಯೂಟವಿದೆ. 9611715755

Part-Time Jobs

ಮನೆಯಿಂದಲೇ ಕುಳಿತು ಫಾರಂನಲ್ಲಿ ಅಂಕಿಗಳು ತುಂಬುವ ಮೂಲಕ,ಗಳಿಸಿ 15,000-25,000/-. ಕೊರಿಯರ್ ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ. 9108059956, 9901929956

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

ಮನೆಯಿಂದಲೆ ಕುಳಿತು ಡಾಟಾ ಎಂಟ್ರಿ ಫಾರಂ-ಫಿಲ್ಲಿಂಗ್ ಬರವಣಿಗೆ Offline. Weekly ಪೇಮೆಂಟ್ಸ್ 3000- 5000. ಸಂಪರ್ಕಿಸಿ: 7624918246, 7259848246.

ಭವಿಷ್ಯ

Astrology

★||ಶ್ರೀಆಂಜನೇಯಸ್ವಾಮಿ||★ ಆರಾಧನೆಯಿಂದ ಪ್ರೀತಿಪ್ರೇಮ, ವಶೀಕರಣ, ಸಾಲದಬಾದೆ, ಕೋರ್ಟ್_ಕೇಸ್, ವ್ಯಾಪಾರ, ಸಂತಾನ ಇನ್ನೂ ಯಾವುದೇ ಗುಪ್ತ_ಸಮಸ್ಯೆಗಳಿಗೆ ಫೋನಿನ ಮೂಲಕ ಪರಿಹಾರ. 9880977623

ಕೊಲ್ಲೂರು ಮೂಕಾಂಬಿಕಾ ಜ್ಯೋತಿಷ್ಯರು, ಸ್ತ್ರೀಪುರುಷ ವಶೀಕರಣ, ಪ್ರೀತಿಯಲ್ಲಿ ನಂಬಿ ಮೋಸ, ಗಂಡಹೆಂಡತಿ ಕಲಹ ಇನ್ನೂ ನಿಮ್ಮ ಯಾವುದೇ ಸಮಸ್ಯೆಗಳಿಗೆ 100% ಶಾಶ್ವತ ಪರಿಹಾರ ಕೆಲಸ ಹಾಗದಿದ್ದಲ್ಲಿ ಹಣ ವಾಪಸ್, ರಾಮಕೃಷ್ಣ ಶರ್ಮಾ. 9880950461

ಶಕ್ತಿಶಾಲಿ ಮಹಾಲಕ್ಷ್ಮಿ ಯಂತ್ರ ವ್ಯಾಪಾರ ಅಭಿವೃದ್ಧಿ, ಹಣಕಾಸಿನ ಸಮಸ್ಯೆಯಿಂದ ಆರ್ಥಿಕ ಅಭಿವೃದ್ಧಿ ಹೊಂದಲು ಲಕ್ಷ್ಮಿಯಂತ್ರ ಉಚಿತವಾಗಿ ಕೊಡಲಾಗುತ್ತದೆ ಹಾಗೂ ಎಲ್ಲಾ ಕಠಿಣ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ: 9606701007, 8892501007

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

ಇತರೆ

Medical

ಶ್ರೀಶಕ್ತಿ ಹೆಲ್ತ್-ಕೇರ್ ವತಿಯಿಂದ ಯಾವುದೇ ಶಸ್ತ್ರಚಿಕಿತ್ಸೆವಿಲ್ಲದೆ ಮಂಡಿನೋವು, ಬೆನ್ನುನೋವು, ಕತ್ತುನೋವು, ವೆರಿಕೋಸ್ ವೈನ್ಸ್, ಸೊಂಟ ಮತ್ತು ಕಾಲುಗಳಲ್ಲಿ ಶಕ್ತಿ ಕಳೆದುಕೊಂಡವರು, ಸಂಧಿವಾತ, ಟೆನ್ನಿಸ್ ಎಲ್ಬೋಪೇನ್, ತಲೆನೋವು, ಮೈಗ್ರೇನ್, ರೋಮೆಟೋ ಆರ್ಥ್ರೈಟಿಸ್, ಹಿಮ್ಮಡಿನೋವು, ಬುಜದನೋವುಗಳಿಗೆ ಎಲೆಕ್ಟ್ರೋ ಮ್ಯಾಗ್ನೆಟಿಕ್ ಚಿಕಿತ್ಸೆ ಕೊಡಲಾಗುವುದು ಸ್ಥಳ ಹುಮನಾಬಾದ ಜಿ// ಬೀದರ್: 6366656745

ಪ್ರವಾಸ

Travel

ವಿಮಾನ/ ರೈಲಿನಲ್ಲಿ 15.9.2021 ರಿಂದ 10 ದಿನಗಳ ರಾಜಸ್ಥಾನ ಸ್ಪೇಷಲ್ 3 ಸ್ಟಾರ್ ಹೋಟೇಲ್. ಸಂಪರ್ಕಿಸಿ: ಶ್ರೀರಾಜರಾಜೇಶ್ವರಿ ಟೂರ್ಸ್ 9743895346

DH DECCAN HERALD
SELL, RENT, BUY PROPERTY THROUGH PROPERTY CLASSIFIEDS ADS IN DECCAN HERALD & PRAJAVANI NEWS PAPER
BOOK YOUR CLASSIFIEDS ADS ONLINE
WWW.DHCLASSIFIEDS.COM
ಪ್ರಜಾವಾಣಿ ಕ್ಲಾಸಿಫೈಡ್ಸ್

FOR MORE INFORMATION CONTACT 9880856233 | 9886213331
Email: santhoshkumar@deccanherald.co.in

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಚುನಾವಣೋತ್ತರ ಹಿಂಸಾಚಾರ: 9 ಪ್ರಕರಣ ದಾಖಲಿಸಿದ ಸಿಬಿಐ

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ನಡೆದ ಚುನಾವಣೋತ್ತರ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಕೇಂದ್ರೀಯ ತನಿಖಾ ದಳ (ಸಿಬಿಐ) ಒಂಬತ್ತು ಪ್ರಕರಣಗಳನ್ನು ದಾಖಲಿಸಿಕೊಂಡಿದೆ.

ಹಿಂಸಾಚಾರ ಪ್ರಕರಣಗಳ ತನಿಖೆಗೆ ನಿಯೋಜಿಸಿರುವ ಎಲ್ಲ ತನಿಖಾ ಸಂಸ್ಥೆಗಳ ವಿಶೇಷ ಘಟಕಗಳು ಕೋಲ್ಕತ್ತದಿಂದ ಬೇರೆ ಬೇರೆ ಕಡೆ ಘಟನೆಗಳು ನಡೆದಿರುವ ಜಾಗಗಳಿಗೆ ಸ್ಥಳಾಂತರಗೊಂಡಿವೆ ಎಂದು ಮೂಲಗಳು ತಿಳಿಸಿವೆ.

ಹೆಚ್ಚಿನ ಪ್ರಕರಣಗಳು ನೋಂದಣಿಪ್ರಕ್ರಿಯೆಯಲ್ಲಿವೆ.ಅವುಗಳಲ್ಲಿ ಕೆಲವನ್ನು ರಾಜ್ಯ ಸರ್ಕಾರ ತನಿಖಾ ಸಂಸ್ಥೆಗಳಿಗೆ ಹಸ್ತಾಂತರಿಸಿದೆ.

ಈ ವರ್ಷದ ಆರಂಭದಲ್ಲಿ ಪಶ್ಚಿಮ ಬಂಗಾಳದಲ್ಲಿ ನಡೆದಿದ್ದ ಚುನಾವಣೋತ್ತರ ಹಿಂಸಾಚಾರ ಕುರಿತು ತನಿಖೆಯನ್ನು ಕಲ್ಕತ್ತಾ ಹೈಕೋರ್ಟ್ ಸಿಬಿಐಗೆ ವಹಿಸಿತ್ತು.

'ಪತಿ-ಪತ್ನಿ ನಡುವೆ ಬಲವಂತದ ಲೈಂಗಿಕ ಕ್ರಿಯೆ ಅತ್ಯಾಚಾರವಲ್ಲ'

ನವದೆಹಲಿ (ಪಿಟಿಐ): ಪತಿ ಮತ್ತು ಪತ್ನಿ ನಡುವೆ ನಡೆಯುವ ಲೈಂಗಿಕ ಕ್ರಿಯೆಯು ಬಲವಂತದಿಂದಲೇ ನಡೆದಿದ್ದರೂ ಅದನ್ನು ಅತ್ಯಾಚಾರ ಎಂದು ಪರಿಗಣಿಸಲಾಗದು ಎಂದು ಛತ್ತೀಸ್‌ಗಡ ಹೈಕೋರ್ಟ್ ಹೇಳಿದೆ.

ಕಾನೂನುಬದ್ಧವಾಗಿ ವಿವಾಹವಾದ ದಂಪತಿ ನಡುವೆ, ಹೆಣ್ಣಿನ ಇಚ್ಛೆಗೆ ವಿರುದ್ಧವಾಗಿ ಲೈಂಗಿಕ ಕ್ರಿಯೆ ನಡೆದಿದ್ದು, ಹೆಣ್ಣಿಗೆ 18 ವರ್ಷ ಮೀರಿದ್ದರೆ ಅತ್ಯಾಚಾರ ಎನ್ನಲಾಗದು ಎಂದು ಹೇಳಿದ ಕೋರ್ಟ್, ಈ ಆರೋಪದಿಂದ ವ್ಯಕ್ತಿಯನ್ನು ಖುಲಾಸೆಗೊಳಿಸಿದೆ.

'ವೈವಾಹಿಕ ಅತ್ಯಾಚಾರ'ಕ್ಕೆ ಸಂಬಂಧಿಸಿದ ಪ್ರಕರಣದ ವಿಚಾರಣೆಯ ವೇಳೆ ಕೋರ್ಟ್ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿತು.

ಉಲ್ಲೇಖಿತ ಪ್ರಕರಣದಲ್ಲಿ ಮಹಿಳೆಯು ದೂರುದಾರರು ಕಾನೂನುಬದ್ಧವಾಗಿ ವಿವಾಹವಾಗಿದ್ದ ಮಹಿಳೆಯಾಗಿದ್ದಾರೆ. ಹೀಗಾಗಿ, ಲೈಂಗಿಕ ಕ್ರಿಯೆಯು ಅಪರಾಧ ಅಥವಾ ಅತ್ಯಾಚಾರ ಆಗುವುದಿಲ್ಲ ಎಂದು ಕೋರ್ಟ್ ತನ್ನ ಆದೇಶದಲ್ಲಿ ತಿಳಿಸಿದೆ.

'ವೈವಾಹಿಕ ಅತ್ಯಾಚಾರ' ಆರೋಪದಿಂದ ಅರ್ಜಿದಾರ ಪತಿಯನ್ನು ಖುಲಾಸೆಗೊಳಿಸಿದರೂ, ಆತನ ವಿರುದ್ಧ ಐಪಿಸಿ ಸೆಕ್ಷನ್ 377 ಅನ್ವಯ ದಾಖಲಿಸಿದ್ದ 'ಅಸಹಜ ಲೈಂಗಿಕಕ್ರಿಯೆ' ಪ್ರಕರಣವನ್ನು ಕೋರ್ಟ್ ಎತ್ತಿಹಿಡಿಯಿತು.

ಪಿಯು: ಇತಿಹಾಸ ಪಠ್ಯಕ್ರಮ ಬದಲಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಥಮ ಮತ್ತು ದ್ವಿತೀಯ ಪಿಯು ತರಗತಿಗಳ ಇತಿಹಾಸ ಪಠ್ಯವಸ್ತುವನ್ನು ಯಥಾಕ್ರಮದಲ್ಲಿಯೇ ಬೋಧಿಸುವಂತೆ ಪದವಿಪೂರ್ವ ಶಿಕ್ಷಣ ಇಲಾಖೆ ಹೇಳಿದೆ.

ಈ ಮೊದಲು, ಪಿಯುಸಿ ಇತಿಹಾಸ ವಿಷಯದ ಪಠ್ಯವಸ್ತುವನ್ನು ಇಲಾಖೆಯು ಅವೈಜ್ಞಾನಿಕ ಕ್ರಮದಲ್ಲಿ ನಿಗದಿಪಡಿಸಿತ್ತು. ಈ ಕ್ರಮಕ್ಕೆ ಇತಿಹಾಸ ಪ್ರಾಧ್ಯಾಪಕರು, ಉಪನ್ಯಾಸಕರಿಂದ ಆಕ್ಷೇಪ ವ್ಯಕ್ತವಾಗಿತ್ತು.

'ಇತಿಹಾಸ ವಿರೂಪಗೊಳಿಸಿದ ಪಿಯು ಇಲಾಖೆ' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಆ.24ರಂದು ಈ ಬಗ್ಗೆ ವರದಿ ಪ್ರಕಟವಾಗಿತ್ತು.

ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ (2021-22) ದ್ವಿತೀಯ ಪಿಯು ವಿದ್ಯಾರ್ಥಿಗಳಿಗೆ ಎಲ್ಲ ಪಠ್ಯಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿ, ಪ್ರತಿಹಂತಕ್ಕೆ ಶೇ 25ರಷ್ಟು ಬೋಧನೆಗೆ ಅಳವಡಿಸಿ ಇಲಾಖೆಯು ಸುತ್ತೋಲೆ ಹೊರಡಿಸಿತ್ತು. ಈ ವೇಳೆ, ಇತಿಹಾಸ ವಿಷಯದ ಮೂಲಸ್ವರೂಪ ಮತ್ತು ವಿನ್ಯಾಸಕ್ಕೆ ತದ್ವಿರುದ್ಧವಾಗಿ ಪಠ್ಯವಸ್ತುವಿನ ಕ್ರಮವನ್ನು ಬದಲಿಸಲಾಗಿತ್ತು.

ವರದಿ ಫಲಶ್ರುತಿ

'ಪ್ರಜಾವಾಣಿ'ಯಲ್ಲಿ ವರದಿ ಪ್ರಕಟವಾದ ನಂತರ ಎಚ್ಚೆತ್ತುಕೊಂಡಿರುವ ಇಲಾಖೆ, ಇತಿಹಾಸವನ್ನು ಯಥಾಕ್ರಮದಲ್ಲಿಯೇ ಬೋಧಿಸುವಂತೆ ಹೇಳಿದೆ. ಈ ಕುರಿತು ಪಠ್ಯಕ್ರಮ ವಸ್ತುವನ್ನು ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ' ಎಂದು ರಾಜ್ಯ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದ ಕಾರ್ಯಾಧ್ಯಕ್ಷ ಎಸ್.ಆರ್. ವೆಂಕಟೇಶ್ ಹೇಳಿದರು.

'ಇತಿಹಾಸದ ಪರಿಷ್ಕೃತ ಪಠ್ಯವಸ್ತುವಿನ ಮೊದಲ ಅವಧಿಯಲ್ಲಿ ಬಹುತೇಕ ಆಧುನಿಕ, ಎರಡನೇ ಅವಧಿಯಲ್ಲಿ ಪ್ರಾಚೀನ, ಮೂರನೇ ಅವಧಿಯಲ್ಲಿ ಮಧ್ಯಕಾಲೀನ, ನಾಲ್ಕನೇ ಅವಧಿಯಲ್ಲಿ ಉಳಿದ ಇತಿಹಾಸವನ್ನು ಬೋಧಿಸುವಂತೆ ಸುತ್ತೋಲೆಯಲ್ಲಿ ತಿಳಿಸಲಾಗಿತ್ತು. ಈಗ ಯಥಾ ಕ್ರಮದಲ್ಲಿ, ಅಂದರೆ ಮೊದಲ ಅವಧಿಯಲ್ಲಿ ಪ್ರಾಚೀನ ಇತಿಹಾಸ, ನಂತರ ಮಧ್ಯಕಾಲೀನ, ತದನಂತರ ಆಧುನಿಕ ಇತಿಹಾಸ ಬೋಧಿಸುವ ಕ್ರಮದಲ್ಲಿ ಪಠ್ಯವಸ್ತುವನ್ನು ನೀಡಲಾಗಿದೆ' ಎಂದು ಅವರು ಹೇಳಿದರು.

ಕೋಟಿ ಕಾರು ಖರೀದಿಸಿದ ಬಿಎಸ್‌ವೈ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಹೊಸ ಟೊಯೊಟಾ ವೆಲ್‌ಫೈರ್ ಕಾರನ್ನು ಖರೀದಿ ಮಾಡಿದ್ದು, ತೆರಿಗೆ ಸೇರಿ ಇದರ ಮೌಲ್ಯ ₹1 ಕೋಟಿ ಎಂದು ಮೂಲಗಳು ಹೇಳಿವೆ.

ಮುಖ್ಯಮಂತ್ರಿಯಾಗಿದ್ದಾಗ ಸರ್ಕಾರಿ ಕಾರು ಬಳಸುತ್ತಿದ್ದರು. ಈಗ ಹೆಚ್ಚು ದೂರ ಮತ್ತು ಆರಾಮದಾಯಕ ಪ್ರಯಾಣಕ್ಕಾಗಿ ಈ ಕಾರು ಖರೀದಿ ಮಾಡಿದ್ದಾರೆ. ಇದರ

ಟೊಯೊಟಾ ವೆಲ್‌ಫೈರ್

ಮೂಲ ಬೆಲೆ ₹87 ಲಕ್ಷ. ಈಗಾಗಲೇ ನೋಂದಣಿ ಮಾಡಿಸಿದ್ದು, ಶುಕ್ರವಾರ ಶಿವಮೊಗ್ಗಕ್ಕೆ ಇದೇ ಕಾರಿನಲ್ಲಿ ಪ್ರಯಾಣಿಸಲಿದ್ದಾರೆ.

ಹಿರಿಯ ಸಚಿವರೊಬ್ಬರ ಬಳಿ ಇಂತಹದ್ದೇ ಕಾರು ನೋಡಿದ್ದರು. ಒಳಗೆ ಹೆಚ್ಚು ಜಾಗ ಇದೆ. ಕಾರಿನ ಸೀಟನ್ನೇ ಹಾಸಿಗೆಯಂತೆ ಮಡಿಸಿಕೊಳ್ಳಬಹುದು. ಮುಂಬರುವ ದಿನಗಳಲ್ಲಿ ಚುನಾವಣೆ ಓಡಾಟಕ್ಕೆ ಈ ಕಾರನ್ನು ಬಳಸಲಿದ್ದಾರೆ. ಕೆಲವು ಸಚಿವರು, ವಿರೋಧ ಪಕ್ಷಗಳ ನಾಯಕರು ಇದಕ್ಕಿಂತ ದುಬಾರಿ ಮೌಲ್ಯದ ಕಾರು ಹೊಂದಿದ್ದಾರೆ. ಅವುಗಳಿಗೆ ಹೋಲಿಸಿದರೆ ಈ ಕಾರು ಅಷ್ಟೇನು ಐಷಾರಾಮಿ ಅಲ್ಲ ಎಂದು ಯಡಿಯೂರಪ್ಪ ಅವರ ಆಪ್ತ ಮೂಲಗಳು ತಿಳಿಸಿವೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಮುಂಬೈ ಜೈಲಿಗೆ ಯುನಿಟೆಕ್ ಮಾಜಿ ಪ್ರವರ್ತಕರ ಸ್ಥಳಾಂತರಕ್ಕೆ ಸೂಚನೆ

ನವದೆಹಲಿ (ಪಿಟಿಐ): ಯುನಿಟೆಕ್ ಕಂಪನಿಯ ಮಾಜಿ ಪ್ರವರ್ತಕರಾದ ಸಂಜಯ್ ಚಂದ್ರ ಹಾಗೂ ಅಜಯ್ ಚಂದ್ರ ಅವರನ್ನು ಕ್ರಮವಾಗಿ ಮುಂಬೈನ ಆರ್ಥರ್ ರೋಡ್ ಜೈಲು ಹಾಗೂ ತಲೋಜಾ ಜೈಲಿಗೆ ಸ್ಥಳಾಂತರಿಸುವಂತೆ ಸುಪ್ರೀಂಕೋರ್ಟ್ ಗುರುವಾರ ನಿರ್ದೇಶನ ನೀಡಿತು.

ತಿಹಾರ್ ಜೈಲಿನಲ್ಲಿ ಈ ಇಬ್ಬರ ವರ್ತನೆ ಕುರಿತು ಜಾರಿ ನಿರ್ದೇಶನಾಲಯ (ಇ.ಡಿ) ಸಲ್ಲಿಸಿದ್ದ ವರದಿಯನ್ನು ಪರಿಶೀಲಿಸಿದ ನ್ಯಾಯಮೂರ್ತಿಗಳಾದ ಡಿ.ವೈ.ಚಂದ್ರಚೂಡ್ ಹಾಗೂ ಎಂ.ಆರ್.ಶಾ ಅವರಿರುವ ನ್ಯಾಯಪೀಠ ಈ ನಿರ್ದೇಶನ ನೀಡಿತು.

ಈ ಇಬ್ಬರು ಆರೋಪಿಗಳೊಂದಿಗೆ ತಿಹಾರ್ ಜೈಲು ಸಿಬ್ಬಂದಿ ನಡೆದುಕೊಳ್ಳುತ್ತಿದ್ದ ರೀತಿ ಕುರಿತು ಖುದ್ದಾಗಿ ತನಿಖೆ ನಡೆಸಿ, ನಾಲ್ಕು ವಾರಗಳ ಒಳಗಾಗಿ ವರದಿ ಸಲ್ಲಿಸಬೇಕು ಎಂದು ದೆಹಲಿ ಪೊಲೀಸ್ ಕಮಿಷನರ್‌ಗೆ ನ್ಯಾಯಪೀಠ ನಿರ್ದೇಶನ ನೀಡಿತು.

'ಯುನಿಟೆಕ್‌ನ ಸಂಸ್ಥಾಪಕ ರಮೇಶ್ ಚಂದ್ರ ಅವರು ರಹಸ್ಯವಾಗಿ ಭೂಗತ ಕಚೇರಿ ಸ್ಥಾಪಿಸಿದ್ದನ್ನು ಪತ್ತೆ ಹಚ್ಚಿದ್ದೇವೆ' ಎಂಬ ಅಚ್ಚರಿಯ ಮಾಹಿತಿಯನ್ನು ಇ.ಡಿ ಅಧಿಕಾರಿಗಳು ನ್ಯಾಯಪೀಠದ ಗಮನಕ್ಕೆ ತಂದರು.

'ಪರೋಲ್ ಅಥವಾ ಜಾಮೀನಿನ ಮೇಲೆ ಹೊರಗಿದ್ದ ಸಮಯದಲ್ಲಿ, ಅವರ ಪುತ್ರರಾದ ಸಂಜಯ್ ಹಾಗೂ ಅಜಯ್ ಈ ಕಚೇರಿಗೆ ಭೇಟಿ ನೀಡಿದ್ದರು' ಎಂದೂ ಅಧಿಕಾರಿಗಳು ತಿಳಿಸಿದರು. ಚಂದ್ರ ಸಹೋದರರು ಹಾಗೂ ಯುನಿಟೆಕ್ ಲಿಮಿಟೆಡ್ ವಿರುದ್ಧದ ಅಕ್ರಮ ಹಣ ವರ್ಗಾವಣೆ ಆರೋಪಗಳ ಕುರಿತು ಇ.ಡಿ. ತನಿಖೆ ನಡೆಸುತ್ತಿದೆ.

ಅಮಾನತುಗೊಂಡ ಐಪಿಎಸ್ ಅಧಿಕಾರಿಗೆ ಬಂಧನದಿಂದ ರಕ್ಷಣೆ

ನವದೆಹಲಿ (ಪಿಟಿಐ): ಅಮಾನತುಗೊಂಡ ಹಿರಿಯ ಐಪಿಎಸ್ ಅಧಿಕಾರಿ ಗುರ್ಜಿಂದರ್ ಪಾಲ್ ಸಿಂಗ್ ಅವರಿಗೆ ಗುರುವಾರ ಸುಪ್ರೀಂಕೋರ್ಟ್ ಬಂಧನದಿಂದ ರಕ್ಷಣೆ ನೀಡಿದೆ.

ಛತ್ತೀಸಗಡ ಸರ್ಕಾರವು ಅವರ ವಿರುದ್ಧ ಅಕ್ರಮ ಆಸ್ತಿ ಸಂಗ್ರಹ ಮತ್ತು ದೇಶದ್ರೋಹ ಆರೋಪಕ್ಕೆ ಸಂಬಂಧಿಸಿದಂತೆ ಎರಡು ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಿದೆ. ಈ ಬಗ್ಗೆ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ ರಮಣ ಅವರನ್ನು ಒಳಗೊಂಡ ಪೀಠವು 'ಅವರನ್ನು ಬಂಧಿಸದಂತೆ' ರಾಜ್ಯ ಪೊಲೀಸರಿಗೆ ನಿರ್ದೇಶನ ನೀಡಿದೆ

'ಗುರ್ಜಿಂದರ್ ಪಾಲ್ ಸಿಂಗ್ ವಿರುದ್ಧದ ಪ್ರಕರಣಕ್ಕೆ ಸಂಬಂಧಿಸದಂತೆ ಪ್ರತ್ಯೇಕ ಅರ್ಜಿಗಳಿಗೆ ನಾಲ್ಕು ವಾರಗಳೊಳಗೆ ತನ್ನ ನಿಲುವನ್ನು ಛತ್ತೀಸಗಡ ಸರ್ಕಾರ ಸಲ್ಲಿಸಬೇಕು. ಅಲ್ಲಿಯವರೆಗೆ ಅವರನ್ನು ಬಂಧಿಸುವಂತಿಲ್ಲ' ಎಂದು ನ್ಯಾಯಾಲಯವು ಆದೇಶ ಹೊರಡಿಸಿದೆ.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ **'ಪಿವಿ ಬ್ರ್ಯಾಂಡ್ ಸ್ಪಾಟ್'**ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಆತ್ಮಹತ್ಯಾ ದಾಳಿಗೆ 22 ಬಲಿ

ಒಂದನೇ ಪುಟದಿಂದ

'ನಮ್ಮ ಸೈನಿಕರು ತಮ್ಮ ಪ್ರಾಣವನ್ನು ಪಣಕ್ಕೆ ಇಟ್ಟು, ಬೇರೆ ದೇಶದ ನಾಗರಿಕರನ್ನು ರಕ್ಷಿಸುತ್ತಿದ್ದಾರೆ. ಈ ದಾಳಿಯಲ್ಲಿ ತಾಲಿಬಾನ್‌ನ ಹಲವು ಸೈನಿಕರು ಸತ್ತಿದ್ದಾರೆ' ಎಂದೂ ಹೇಳಿದೆ.

ತಾಲಿಬಾನ್ ಈ ಬಾಂಬ್ ದಾಳಿಯನ್ನು ಖಂಡಿಸಿದೆ. ಅಮೆರಿಕ ಮಿಲಿಟರಿ ನಿಯಂತ್ರಣದಲ್ಲಿರುವ ಪ್ರದೇಶದಲ್ಲಿ ಈ ಕೃತ್ಯ ನಡೆದಿದೆ. ನಾಗರಿಕರನ್ನು ಗುರಿಯಾಗಿರಿಸಿಕೊಂಡು ದಾಳಿ ನಡೆಸಲಾಗಿದೆ ಎಂದು ಅದು ಹೇಳಿದೆ.

'ದಾಳಿ ನಡೆದ ಸಂದರ್ಭದಲ್ಲಿ ವಿಮಾನ ನಿಲ್ದಾಣದಲ್ಲಿ ಸಾವಿರಾರು ಮಂದಿ ಸೇರಿದ್ದರು. ಅಫ್ಗಾನಿಸ್ತಾನದಿಂದ ತೆರಳಲು ಇವರೆಲ್ಲರೂ ವಿಮಾನಗಳಿಗೆ ಕಾಯುತ್ತಿದ್ದರು. ಕೆಲವೇ ನಿಮಿಷಗಳ ಅಂತರದಲ್ಲಿ ಎರಡು ಆತ್ಮಹತ್ಯಾ ದಾಳಿಗಳು ನಡೆದಿವೆ. ಮೊದಲ ಸ್ಫೋಟ ಸಂಭವಿಸಿದ ಬಳಿಕ ಜನರು ಭಯಭೀತರಾದರು. ಆಗ ಜನರನ್ನು ಚದುರಿಸಲು ತಾಲಿಬಾನಿಗಳು ಗಾಳಿಯಲ್ಲಿ ಗುಂಡು ಹಾರಿಸಿದರು' ಎಂದು ಪ್ರತ್ಯಕ್ಷದರ್ಶಿಯೊಬ್ಬರು ತಿಳಿಸಿದ್ದಾರೆ.

ವಿಮಾನ ನಿಲ್ದಾಣದ ಗೇಟ್ ಬಳಿ ಮೊದಲ ಸ್ಫೋಟ ಸಂಭವಿಸಿತು. ಎರಡನೇ ಸ್ಫೋಟ ಬರೋನ್ ಹೋಟೆಲ್ ಬಳಿ ಸಂಭವಿಸಿತು. ಈ ಹೋಟೆಲ್ ಬಳಿ ಅಫ್ಗನ್, ಬ್ರಿಟನ್ ಮತ್ತು ಅಮೆರಿಕದ ನಾಗರಿಕರು ಸೇರಿದಂತೆ ಹಲವರು ಜಮಾಯಿಸಿದ್ದರು.

ತೆರವು ಕಾರ್ಯಾಚರಣೆ ಮುಂದುವರಿಯಲಿದೆ: ಕಾಬೂಲ್‌ನಲ್ಲಿ ಬಾಂಬ್ ದಾಳಿ ನಡೆದಿದ್ದರೂ ಜನರನ್ನು ಸ್ಥಳಾಂತರಿಸುವ ಕಾರ್ಯಾಚರಣೆ ಮುಂದುವರಿಯಲಿದೆ ಎಂದು ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ತಿಳಿಸಿದ್ದಾರೆ.

ಕಾಬೂಲ್ ವಿಮಾನ ನಿಲ್ದಾಣದ ಪ್ರವೇಶ ದ್ವಾರದ ಬಳಿ ಗುರುವಾರ ನಡೆದ ಬಾಂಬ್ ದಾಳಿಯಿಂದಾಗಿ ಸುತ್ತಮುತ್ತ ಪ್ರದೇಶದಲ್ಲಿ ದಟ್ಟವಾದ ಹೊಗೆ ಆವರಿಸಿಕೊಂಡಿತ್ತು ಎಪಿ/ಪಿಟಿಐ ಚಿತ್ರ

ಬಾಂಬ್ ದಾಳಿಯು ಭಯಾನಕ ಕೃತ್ಯ. ಮೈತ್ರಿ ಪಡೆಗಳು ತೆರವು ಕಾರ್ಯಾಚರಣೆಯನ್ನು ಸ್ಥಗಿತಗೊಳಿಸದೆ ಮುಂದುವರಿಸಬೇಕು. ಕಾಬೂಲ್‌ನಿಂದ ಜನರನ್ನು ಸುರಕ್ಷಿತ ಸ್ಥಳಗಳಿಗೆ ಕರೆದೊಯ್ಯಬೇಕು

ಜೆನ್ಸ್ ಸ್ಟೋಲ್ಟನ್‌ಬರ್ಗ್, ನ್ಯಾಟೊ ಮಹಾ ಪ್ರಧಾನ ಕಾರ್ಯದರ್ಶಿ

ಪರಿಸ್ಥಿತಿ ತೀರಾ ಬಿಗಡಾಯಿಸಿದೆ. ಅಲ್ಲಿ ಉಳಿದುಕೊಂಡಿರುವವರನ್ನು ಮತ್ತು ತೆರವಿಗೆ ಗುರುತಿಸಿರುವವರನ್ನು ತೆರವು ಮಾಡಲು ಗರಿಷ್ಠಮಟ್ಟದಲ್ಲಿ ಯತ್ನಿಸುತ್ತೇವೆ

ಇಮಾನ್ಯುಯಲ್ ಮ್ಯಾಕ್ರನ್, ಫ್ರಾನ್ಸ್ ಅಧ್ಯಕ್ಷ

ಈ ಕೃತ್ಯ ಅಫ್ಗಾನಿಸ್ತಾನದ ಭೀಕರ ಪರಿಸ್ಥಿತಿಯನ್ನು ಬಿಂಬಿಸುತ್ತದೆ. ಅಫ್ಗನ್ ಜನರಿಗೆ ನಾವು ನೆರವಾಗಬೇಕು.

ಆಂಟೊನಿಯೊ ಗುಟೆರಸ್, ವಿಶ್ವಸಂಸ್ಥೆ ಮಹಾ ಪ್ರಧಾನ ಕಾರ್ಯದರ್ಶಿ

ಭಾರತ ಖಂಡನೆ

ನವದೆಹಲಿ (ಪಿಟಿಐ): ಕಾಬೂಲ್ ವಿಮಾನ ನಿಲ್ದಾಣದ ಬಳಿ ನಡೆಸಿದ ಬಾಂಬ್ ದಾಳಿಯನ್ನು ಭಾರತ ತೀವ್ರವಾಗಿ ಖಂಡಿಸಿದೆ.

'ಭಯೋತ್ಪಾದನೆ ವಿರುದ್ಧ ಜಗತ್ತು ಒಗ್ಗಟ್ಟಿನಿಂದ ಹೋರಾಟ ನಡೆಸಬೇಕು. ಭಯೋತ್ಪಾದಕರಿಗೆ ಆಶ್ರಯ ನೀಡುತ್ತಿರುವವರ ವಿರುದ್ಧವೂ ಕಠಿಣ ಕ್ರಮಗಳನ್ನು ಕೈಗೊಳ್ಳುವುದು ಅಗತ್ಯವಿದೆ' ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.

ಕಾಬೂಲ್‌ನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಪ್ರವೇಶದ್ವಾರದ ಬಳಿ ನಡೆದ ಆತ್ಮಹತ್ಯಾ ಬಾಂಬ್ ದಾಳಿಯಲ್ಲಿ ಗಾಯಗೊಂಡ ವ್ಯಕ್ತಿಯನ್ನು ಸ್ವಯಂಸೇವಕರು ಮತ್ತು ವೈದ್ಯಕೀಯ ಸಿಬ್ಬಂದಿ ಚಿಕಿತ್ಸೆಗಾಗಿ ಕರೆತಂದರು —ಎಎಫ್‌ಪಿ ಚಿತ್ರ

ಸ್ಫೋಟ: ಜನರು ದಿಗಿಲು

ಕಾಬೂಲ್ (ಎಎಫ್‌ಪಿ): ತಾಲಿಬಾನ್ ಆಡಳಿತದಿಂದ ತಪ್ಪಿಸಿಕೊಂಡು ದೂರಕ್ಕೆ ಪಲಾಯನ ಮಾಡುವ ಉದ್ದೇಶದಿಂದ ಕಾಬೂಲ್‌ನ ವಿಮಾನ ನಿಲ್ದಾಣದಲ್ಲಿ ಸೇರಿದ್ದ ಸಾವಿರಾರು ಜನರು ಗುರುವಾರ ಸಂಭವಿಸಿದ ಭೀಕರ ಸ್ಫೋಟಗಳಿಂದ ತತ್ತರಿಸಿಹೋಗಿದ್ದಾರೆ. ಅವರಲ್ಲಿ ಭೀತಿ ಮನೆಮಾಡಿದೆ.

'ಸ್ಫೋಟದ ಸದ್ದನ್ನು ಕೇಳಿದಾಗ ಜನರು ಭಾರಿ ದಿಗಿಲಾದರು. ವಿಮಾನ ನಿಲ್ದಾಣದ ಗೇಟ್‌ನಲ್ಲಿ ಉಂಟಾದ ನೂಕುನುಗ್ಗಲು ತಪ್ಪಿಸಲು ಗಾಳಿಯಲ್ಲಿ ಗುಂಡು ಹಾರಿಸಬೇಕಾಯಿತು' ಎಂದು ಪ್ರತ್ಯಕ್ಷದರ್ಶಿಯೊಬ್ಬರು ತಿಳಿಸಿದ್ದಾರೆ.

ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿರುವ ಚಿತ್ರಗಳಲ್ಲಿ ರಕ್ತಸಿಕ್ತ ದೃಶ್ಯಗಳೇ ಕಾಣುತ್ತಿವೆ. ರಕ್ತದಿಂದ ತೋಯ್ದಿರುವ ಬಟ್ಟೆಗಳು, ಗಾಯಾಳುವೊಬ್ಬರ ಮುರಿದ ಕೈಯನ್ನು ಹಿಡಿದು ಆಸ್ಪತ್ರೆಯತ್ತ ಸಾಗುತ್ತಿರುವ ಬಾಲಕನ ದೃಶ್ಯ ಮನಕಲಕುವಂತಿದೆ. ಗಾಯಾಳು ಮಗುವನ್ನು ಎತ್ತಿಕೊಂಡು ಓಡುತ್ತಿರುವ ದೃಶ್ಯ ಹೃದಯವಿದ್ರಾವಕವಾಗಿದೆ.

ತುಂಡುತುಂಡು ದೇಹಗಳು, ಮಾಂಸ, ಗಾಯಾಳುಗಳೇ ಸ್ಥಳದಲ್ಲಿ ತುಂಬಿದ್ದರು ಎಂದು ಪ್ರತ್ಯಕ್ಷದರ್ಶಿ ಮಿಲಾದ್ ಎಂಬುವರು ತಿಳಿಸಿದ್ದಾರೆ. ಘಟನೆಯಿಂದ ಗಾಬರಿಗೆ ಬಿದ್ದ ಪ್ರಯಾಣಿಕನೊಬ್ಬ ತನ್ನ ಪತ್ನಿ ಹಾಗೂ ಮಗುವಿನ ಪಾಸ್‌ಪೋರ್ಟ್ ಮೊದಲಾದ ದಾಖಲೆಗಳನ್ನು ಸ್ಥಳದಲ್ಲೇ ಬಿಟ್ಟು ಹೋದರು.

ತನ್ನ ದೇಶದ ಯಾವುದೇ ನಾಗರಿಕರು ಅಥವಾ ಸೇನಾ ಸಿಬ್ಬಂದಿಗೆ ಸ್ಫೋಟದಿಂದ ತೊಂದರೆಯಾಗಿಲ್ಲ ಎಂದು ಬ್ರಿಟನ್ ಗುರುವಾರ ತಿಳಿಸಿದೆ. ಆದರೆ, ಕಾಬೂಲ್ ವಿಮಾನ ನಿಲ್ದಾಣದ ಬಳಿ ಸ್ಫೋಟ ಸಂಭವಿಸಿದ ಪರಿಣಾಮ ಉಂಟಾದ ಗೊಂದಲ ಸ್ಥಿತಿಗೆ ತಾನು ಹಾಗೂ ತಮ್ಮ ಸಿಬ್ಬಂದಿ ಸಾಕ್ಷಿಯಾಗಿದ್ದೇವೆ ಎಂದು ಅಫ್ಗಾನಿಸ್ತಾನದಲ್ಲಿ ಪ್ರಾಣಿ ಆಶ್ರಯ ಕೇಂದ್ರ ನಡೆಸುತ್ತಿರುವ ಬ್ರಿಟನ್‌ನ ರಾಯಲ್ ಮರೀನ್‌ನ ಮಾಜಿ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಸ್ಫೋಟಕ್ಕೂ ಮುನ್ನ ಕಾರ್ಯಾಚರಣೆ ಸ್ಥಗಿತ

ಬಾಂಬ್ ಸ್ಫೋಟಕ್ಕೆ ಮುನ್ನ ಕೆಲವು ದೇಶಗಳು ಅಫ್ಗಾನಿಸ್ತಾನದಿಂದ ತೆರವು ಕಾರ್ಯಚರಣೆಯನ್ನು ಸ್ಥಗಿತಗೊಳಿಸಿದ್ದವು. ಬೆಲ್ಜಿಯಂ, ಕೆನಡಾ, ಡೆನ್ಮಾರ್ಕ್, ಜರ್ಮನಿ ಮತ್ತು ನೆದರ್‌ಲ್ಯಾಂಡ್ಸ್ ದೇಶಗಳು ಹಮೀದ್ ಕರ್ಜೈ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಇನ್ನು ಮುಂದೆ ತೆರವು ಮಾಡಲು ಸಾಧ್ಯವಾಗುವುದಿಲ್ಲ ಎಂದು ಹೇಳಿದ್ದವು. ಆದರೆ ಕಾರ್ಯಾಚರಣೆ ಮುಂದುವರಿಸುವುದಾಗಿ ಅಮೆರಿಕ ತಿಳಿಸಿತ್ತು.

ಸರ್ವ ಪಕ್ಷ ಸಭೆಯಲ್ಲಿ ಅಫ್ಗಾನಿಸ್ತಾನಕ್ಕೆ ಸಂಬಂಧಿಸಿದ ಮಾಹಿತಿ ನೀಡಿದ ಜೈಶಂಕರ್

ಭಾರತದ ಕಾದು ನೋಡುವ ತಂತ್ರ

ನವದೆಹಲಿ (ಪಿಟಿಐ): ಅತ್ಯಂತ ಶೋಚನೀಯ ಸ್ಥಿತಿಯಲ್ಲಿರುವ ಅಫ್ಗಾನಿಸ್ತಾನದಿಂದ ಎಲ್ಲ ಭಾರತೀಯರನ್ನು ತೆರವು ಮಾಡಲು ಸರ್ಕಾರವು ಬದ್ಧವಾಗಿದೆ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಗುರುವಾರ ಹೇಳಿದ್ದಾರೆ. ಅಫ್ಗಾನಿಸ್ತಾನ ಪರಿಸ್ಥಿತಿ ಬಗ್ಗೆ ಮಾಹಿತಿ ನೀಡಲು ಕರೆಯಲಾಗಿದ್ದ ಸರ್ವಪಕ್ಷ ಸಭೆಯಲ್ಲಿ ಅವರು ಮಾತನಾಡಿದರು.

ತಾಲಿಬಾನ್ ಬಗ್ಗೆ ಯಾವ ಧೋರಣೆ ಅನುಸರಿಸಬೇಕು ಎಂಬ ಬಗ್ಗೆ ಕಾದು ನೋಡುವ ತಂತ್ರ ಅನುಸರಿಸಲಾಗುವುದು. ಪರಿಸ್ಥಿತಿಯನ್ನು ನೋಡಿಕೊಂಡು ನಿರ್ಧಾರ ಕೈಗೊಳ್ಳಲಾಗುವುದು ಎಂದು ಜೈಶಂಕರ್ ಹೇಳಿದ್ದಾರೆ. ಪರಿಸ್ಥಿತಿ ಶಾಂತವಾದ ಬಳಿಕ ತಾಲಿಬಾನ್‌ಗೆ ಸಂಬಂಧಿಸಿ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಮಾಧ್ಯಮ ಪ್ರತಿನಿಧಿಗಳಿಗೂ ತಿಳಿಸಿದರು. ಸರ್ವಪಕ್ಷ ಸಭೆಯು ಸುಮಾರು ಮೂರೂವರೆ ತಾಸು ನಡೆಯಿತು.

'ನಮ್ಮ ತಕ್ಷಣದ ಕಾಳಜಿಯು ಎಲ್ಲ ಭಾರತೀಯರನ್ನು ತೆರವು ಮಾಡುವುದೇ ಆಗಿದೆ. ಅಫ್ಗಾನಿಸ್ತಾನ ಜನರ ಜತೆಗಿನ ನಂಟು ನಂತರದ ಆಸಕ್ತಿ' ಎಂದು ಜೈಶಂಕರ್ ಅವರು ಟ್ವೀಟ್‌ನಲ್ಲಿ ಹೇಳಿದ್ದಾರೆ.

ಜೈಶಂಕರ್ ಅವರಲ್ಲದೆ, ರಾಜ್ಯಸಭೆಯ ಸದನ ನಾಯಕ ಪೀಯೂಷ್ ಗೋಯಲ್ ಮತ್ತು ಸಂಸದೀಯ ವ್ಯವಹಾರ ಸಚಿವ ಪ್ರಲ್ಹಾದ ಜೋಶಿ ಅವರೂ ಸರ್ವ ಪಕ್ಷ ಸಭೆಯಲ್ಲಿ ಹಾಜರಿದ್ದರು. ವಿದೇಶಾಂಗ ಸಚಿವಾಲಯದ ಕಾರ್ಯದರ್ಶಿ ಹರ್ಷ ಶೃಂಗ್ಲಾ ಸೇರಿ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ರಾಯಭಾರ ಕಚೇರಿಯ 175 ಸಿಬ್ಬಂದಿ, 263 ಮಂದಿ ಭಾರತೀಯ ಪ್ರಜೆಗಳು, 112 ಅಫ್ಗನ್ನರು (ಹಿಂದೂ ಮತ್ತು ಸಿಖ್ಖರು ಸೇರಿ) ಮತ್ತು ಇತರ ದೇಶಗಳ 15 ಜನರನ್ನು ತೆರವು ಮಾಡಲಾಗಿದೆ. ತೆರವು ಮಾಡಲಾದ ಒಟ್ಟು ಜನರ ಸಂಖ್ಯೆ 565 ಎಂದು ಸಭೆಯಲ್ಲಿ ಮಾಹಿತಿ ನೀಡಲಾಗಿದೆ. ಭಾರತೀಯರನ್ನು ತೆರವು ಮಾಡಲು ಇತರ ಸಂಸ್ಥೆಗಳಿಗೆ ನೆರವು ನೀಡಲಾಗಿದೆ ಎಂದೂ ತಿಳಿಸಲಾಗಿದೆ.

'ಆಪರೇಷನ್ ದೇವಿಶಕ್ತಿ ಅಡಿಯಲ್ಲಿ ಸರ್ಕಾರವು ಆರು ವಿಮಾನಗಳ ಮೂಲಕ ಜನರನ್ನು ಕರೆತಂದಿದೆ. ಕೆಲವರಷ್ಟೇ ಅಲ್ಲಿ ಇನ್ನೂ ಉಳಿದಿದ್ದಾರೆ. ಕೆಲವರಿಗೆ ನಿನ್ನೆಯ ವಿಮಾನದಲ್ಲಿ ಬರಲು ಸಾಧ್ಯವಾಗಿಲ್ಲ. ಉಳಿದವರನ್ನು ಕರೆತರುವ ಪ್ರಯತ್ನ ಮುಂದುವರಿಯಲಿದೆ' ಎಂದು ಜೈಶಂಕರ್ ತಿಳಿಸಿದ್ದಾರೆ.

ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್, ಲೋಕಸಭೆಯಲ್ಲಿ ಕಾಂಗ್ರೆಸ್ ಪಕ್ಷದ ನಾಯಕ ಅಧಿರ್ ರಂಜನ್ ಚೌಧರಿ, ಡಿಎಂಕೆಯ ಟಿ.ಆರ್.ಬಾಲು, ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಮುಂತಾದವರು ಸಭೆಯಲ್ಲಿ ಭಾಗಿಯಾಗಿದ್ದರು.

35 ಮಂದಿ ತೆರವುಗೊಳಿಸಿದ ಭಾರತ

ಭಾರತವು ಕಾಬೂಲ್‌ನಿಂದ ತನ್ನ 24 ನಾಗರಿಕರು ಮತ್ತು 11 ನೇಪಾಳಿ ಪ್ರಜೆಗಳು ಸೇರಿ 35 ಜನರನ್ನು ಗುರುವಾರ ತೆರವುಗೊಳಿಸಿದೆ.

180 ಜನರನ್ನು ಕರೆತರಲು ಯೋಜಿಸಲಾಗಿತ್ತು. ಆದರೆ ಕಾಬೂಲ್‌ನಲ್ಲಿ ತಾಲಿಬಾನ್ ವಿಧಿಸಿದ ಇತರ ನಿರ್ಬಂಧಗಳು ಮತ್ತು ವಿವಿಧ ತಪಾಸಣಾ ಕೇಂದ್ರಗಳನ್ನು ದಾಟಿ ವಿಮಾನ ನಿಲ್ದಾಣಕ್ಕೆ ತಲುಪಲು ಅನೇಕರು ವಿಫಲರಾದರು. ಆದ್ದರಿಂದ 35 ಜನರನ್ನು ಮಾತ್ರ ಸ್ಥಳಾಂತರಿಸಲು ಸಾಧ್ಯವಾಯಿತು ಎಂದು ತೆರವು ಕಾರ್ಯಾಚರಣೆಯ ಸಿಬ್ಬಂದಿಗಳು ಹೇಳಿದರು.

'ಆಪರೇಷನ್ ದೇವಿ ಶಕ್ತಿ ಕಾರ್ಯಾಚರಣೆ ಭಾಗವಾಗಿ ಭಾರತೀಯ ವಾಯುಪಡೆ ವಿಮಾನವು ಕಾಬೂಲ್‌ನಿಂದ 24 ಭಾರತೀಯರು ಮತ್ತು 11 ನೇಪಾಳಿಗರನ್ನು ಹೊತ್ತುಕೊಂಡು ದೆಹಲಿಗೆ ಸಾಗುತ್ತಿದೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಬೆಳಿಗ್ಗೆ ಟ್ವೀಟ್ ಮಾಡಿದ್ದರು. ಕಳೆದ ಎರಡು ದಿನಗಳಿಂದ ಕಾಬೂಲ್ ವಿಮಾನ ನಿಲ್ದಾಣದ ಸುತ್ತಮುತ್ತಲೂ ಭದ್ರತಾ ಪರಿಸ್ಥಿತಿಯು ಮತ್ತಷ್ಟು ಹದಗೆಟ್ಟಿರುವ ಕಾರಣ ಅಫ್ಗನ್ನರು ಮತ್ತು ಇತರರು ಇಲ್ಲಿಗೆ ತಲುಪಲಾಗುತ್ತಿಲ್ಲ ಎಂದು ದೆಹಲಿಯನ್ನು ತಲುಪಿದ ಭಾರತೀಯರು ಅಲ್ಲಿನ ಪರಿಸ್ಥಿತಿ ತೆರೆದಿಟ್ಟರು.

'ಅಫ್ಗನ್ ಮುಸ್ಲಿಮರಿಗೆ ಆಶ್ರಯ ಬೇಡ'

ನಾಗ್ಪುರ (ಪಿಟಿಐ): ಅಫ್ಗಾನಿಸ್ತಾನದಿಂದ ಬರುವ ಮುಸ್ಲಿಂ ಪ್ರಜೆಗಳಿಗೆ ಭಾರತದಲ್ಲಿ ಆಶ್ರಯ ಕಲ್ಪಿಸಬಾರದು ಎಂದು ಅಂತರರಾಷ್ಟ್ರೀಯ ಹಿಂದೂ ಪರಿಷತ್‌ನ ಮುಖ್ಯಸ್ಥ ಪ್ರವೀಣ್ ತೊಗಾಡಿಯಾ ಅವರು ಕೇಂದ್ರ ಸರ್ಕಾರವನ್ನು ಗುರುವಾರ ಒತ್ತಾಯಿಸಿದ್ದಾರೆ. ಆದರೆ ಅಲ್ಲಿಂದ ಬರುವ ಹಿಂದೂ ಮತ್ತು ಸಿಖ್ ನಿರಾಶ್ರಿತರಿಗೆ ಭಾರತವು ಗಡಿಯನ್ನು ತೆರೆದಿರಿಸಬೇಕು ಎಂದು ಹೇಳಿದ್ದಾರೆ.

ನಾಗ್ಪುರ–ವಾರ್ಧಾ ಪ್ರದೇಶದ ಮೂರು ದಿನಗಳ ಭೇಟಿಗಾಗಿ ಇಲ್ಲಿಯ ವಿಮಾನ ನಿಲ್ದಾಣಕ್ಕೆ ಬಂದ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ಭಾರತವು ತಾಲಿಬಾನ್ ಉದ್ದೇಶದ ಕೇಂದ್ರಬಿಂದುವಾಗಿರುವುದರಿಂದ ದೇಶವು ಬಹಳ ದೊಡ್ಡ ಅಪಾಯ ಎದುರಿಸುತ್ತಿದೆ. ಆದ್ದರಿಂದ ದೇಶವು ತಾಲಿಬಾನೀಕರಣ ಆಗುವುದನ್ನು ತಡೆಯಬೇಕಿದೆ' ಎಂದರು.

ದಿಶಾ, ಪೂಜಾ ಶಂಕಾಸ್ಪದ ಸಾವು ಪ್ರಕರಣ ಕೆದಕಿದ ಕೇಂದ್ರ ಸಚಿವ ರಾಣೆ

ಪ್ರಜಾವಾಣಿ ವಾರ್ತೆ

ಮುಂಬೈ: 'ಟಿಕ್‌ಟಾಕ್ ಸ್ಟಾರ್ ಪೂಜಾ ಚವಾಣ್, ಟ್ಯಾಲೆಂಟ್ ಮ್ಯಾನೇಜರ್ ದಿಶಾ ಸಾಲಿಯಾನ್ ಅವರ ಶಂಕಾಸ್ಪದ ಸಾವಿಗೆ ಕಾರಣರಾರು' ಎಂದು ಕೇಂದ್ರ ಸಚಿವ ನಾರಾಯಣ ರಾಣೆ ಪ್ರಶ್ನಿಸಿದ್ದು, ಈ ಮೂಲಕ ರಾಜಕೀಯ ವಿವಾದವನ್ನು ಕೆದಕಿದ್ದಾರೆ.

ದಿಶಾ ಸಾಲಿಯಾನ್ ಅವರು ಅಲ್ಪಕಾಲ ಬಾಲಿವುಡ್ ನಟ ಸುಶಾಂತ್ ಸಿಂಗ್ ರಾಜ್‌ಪೂತ್ ಜೊತೆಗೂ ಕಾರ್ಯನಿರ್ವಹಿಸಿದ್ದು, ಸುಮಾರು ಒಂದು ವರ್ಷದ ಹಿಂದೆ ಶಂಕಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದರು. ಯಾರ ಹೆಸರನ್ನೂ ಉಲ್ಲೇಖಿಸದ ರಾಣೆ, 'ದಿಶಾ ಸಾಲಿಯಾನ್ ಸತ್ತಿದ್ದು ಹೇಗೆ? ಅಪರಾಧ ಕೃತ್ಯ ನಡೆದಾಗ ಆ ಸ್ಥಳದಲ್ಲಿ ಯಾರಿದ್ದರು. ಯಾವ ಸಚಿವ ಇದ್ದರು? ಪೊಲೀಸರು ಏಕೆ ಕಾರಣ ಬಹಿರಂಗಪಡಿಸಿಲ್ಲ? ಪೂಜಾ ಚವಾಣ್‌ಗೆ ಏನಾಯಿತು' ಎಂದು ಪ್ರಶ್ನಿಸಿದರು.

ರಾಣೆ

'ಈ ಎರಡು ಸಾವಿಗೆ ಕಾರಣರಾದವರ ಬಂಧನದವರೆಗೆ ನಾನು ಸುಮ್ಮನಿರುವುದಿಲ್ಲ' ಎಂದು ಎಚ್ಚರಿಸಿದರು. 'ಅಗತ್ಯವಿದ್ದರೆ ನಾನು ಕೋರ್ಟ್‌ಗೂ ಹೋಗುತ್ತೇನೆ. ನೋಡೋಣ ಅವರನ್ನು ಯಾರು ರಕ್ಷಿಸುತ್ತಾರೆ' ಎಂದು ಹೇಳಿದರು.

ದಿಶಾ ಅವರು 2020ರ ಸೆಪ್ಟೆಂಬರ್ 8ರಂದು ಮಲಾಡ್‌ನ ಗ್ಯಾಲಕ್ಸಿ ರೀಜೆಂಟ್ ಕಟ್ಟಡದ 14ನೇ ಮಹಡಿಯಿಂದ ಜಿಗಿದು ಆ್ಮಹತ್ಯೆ ಮಾಡಿಕೊಂಡಿದ್ದರು. ಸುಶಾಂತ್ ಸಾವಿಗೆ ಕೆಲವೇ ದಿನ ಈ ಘಟನೆ ನಡೆದಿತ್ತು. ಪೂಜಾ ಚವಾಣ್ ಅವರು ಪುಣೆಯ ಹೆವೆನ್ ಪಾರ್ಕ್ ಕಟ್ಟಡದಿಂದ ಜಿಗಿದು 2021ರ ಆಗಸ್ಟ್ 7ರಂದು ಆತ್ಮಹತ್ಯೆ ಮಾಡಿಕೊಂಡಿದ್ದರು. ಈ ಕೃತ್ಯದ ಜೊತೆಗೆ ರಾಜ್ಯ ಅರಣ್ಯ ಸಚಿವ, ಶಿವಸೇನೆ ಮುಖಂಡ ಸಂಜಯ್ ರಾಥೋಡ್ ಹೆಸರು ತಳಕುಹಾಕಿಕೊಂಡಿದ್ದು, ಬಳಿಕ ರಾಜೀನಾಮೆ ನೀಡಿದ್ದರು.

ಆರೋಗ್ಯ ತಪಾಸಣೆಗೆ ಒಳಗಾದ ರಾಣೆ: ಕೇಂದ್ರ ಸಚಿವ ನಾರಾಯಣ ರಾಣೆ ಅವರು ಗುರುವಾರ ಇಲ್ಲಿನ ಖಾಸಗಿ ಆಸ್ಪತ್ರೆಗೆ ಭೇಟಿ ನೀಡಿದ್ದು, ಆರೋಗ್ಯ ತಪಾಸಣೆಗೆ ಒಳಗಾದರು.

ಮಧುಮೇಹದಿಂದ ಬಳಲುತ್ತಿರುವ ರಾಣೆ ಅವರು ಲೀಲಾವತಿ ಆಸ್ಪತ್ರೆಗೆ ಭೇಟಿ ನೀಡಿದ್ದರು. ಮುಖ್ಯಮಂತ್ರಿ ಉದ್ಧವ್ ಠಾಕ್ರೆ ವಿರುದ್ಧದ ವಿವಾದಾಸ್ಪದ ಹೇಳಿಕೆ ನೀಡಿದ ಆರೋಪದ ಮೇಲೆ ಪೊಲೀಸರು ಇವರನ್ನು ಬಂಧಿಸಿದ್ದರು. ಬಳಿಕ ಜಾಮೀನು ಮೇಲೆ ಬಿಡುಗಡೆಯಾಗಿದ್ದರು.

ಜಿಎಸ್‌ಟಿ ಪರಿಹಾರ ವಿಸ್ತರಿಸಲು ಸಿ.ಎಂ. ಬೊಮ್ಮಾಯಿ ಮನವಿ

ನವದೆಹಲಿ (ಪಿಟಿಐ): ಕೋವಿಡ್–19 ಸೃಷ್ಟಿಸಿದ ಬಿಕ್ಕಟ್ಟಿನಿಂದಾಗಿ ರಾಜ್ಯದ ಆದಾಯ ಹಾಗೂ ಜಿಎಸ್‌ಟಿ ಸಂಗ್ರಹದಲ್ಲಿ ಇಳಿಕೆ ಆಗಿರುವ ಕಾರಣ, ರಾಜ್ಯಗಳಿಗೆ ಜಿಎಸ್‌ಟಿ ಪರಿಹಾರ ನೀಡುವುದನ್ನು 2022ರ ನಂತರವೂ ಮುಂದುವರಿಸಬೇಕು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಒತ್ತಾಯಿಸಿದರು.

ಬೊಮ್ಮಾಯಿ ಅವರು ನಿರ್ಮಲಾ ಅವರನ್ನು ನವದೆಹಲಿಯಲ್ಲಿ ಗುರುವಾರ ಭೇಟಿ ಮಾಡಿದರು. ಕರ್ನಾಟಕಕ್ಕೆ ಬರಬೇಕಿರುವ ₹ 11 ಸಾವಿರ ಕೋಟಿ ಜಿಎಸ್‌ಟಿ ಪರಿಹಾರ ಬಾಕಿ ಬಗ್ಗೆಯೂ ಸಚಿವರ ಜೊತೆ ಚರ್ಚಿಸಲಾಯಿತು ಎಂದು ಬೊಮ್ಮಾಯಿ ಅವರು ಸುದ್ದಿಗಾರರಿಗೆ ತಿಳಿಸಿದರು.

ಕೋವಿಡ್ ಬಿಕ್ಕಟ್ಟಿನಿಂದಾಗಿ ಜಿಎಸ್‌ಟಿ ಸಂಗ್ರಹವು ಇನ್ನೂ ಸ್ಥಿರತೆ ಕಾಣುತ್ತಿಲ್ಲ. ರಾಜ್ಯಗಳಿಗೆ ಜಿಎಸ್‌ಟಿ ಪರಿಹಾರ ಕೊಡುವುದನ್ನು ಇನ್ನೂ ಮೂರು ವರ್ಷ ವಿಸ್ತರಿಸಿದರೆ ಈಗಿನ ಸಂದರ್ಭದಲ್ಲಿ ಹೆಚ್ಚು ಸಹಾಯ ಆಗುತ್ತದೆ ಎಂದು ಬೊಮ್ಮಾಯಿ ಅವರು ಸಭೆಯಲ್ಲಿ, ನಿರ್ಮಲಾ ಅವರಿಗೆ ಹೇಳಿದರು.

ಜಿಎಸ್‌ಟಿ ವ್ಯವಸ್ಥೆ ಜಾರಿಗೆ ಬಂದಾಗಿನಿಂದ ಹೆಚ್ಚಿನ ಪ್ರಮಾಣದಲ್ಲಿ ಆದಾಯ ಸಂಗ್ರಹಿಸುತ್ತಿರುವ ರಾಜ್ಯಗಳಲ್ಲಿ ಕರ್ನಾಟಕವೂ ಒಂದು. 'ಆದರೆ, ಕಳೆದ ಆರ್ಥಿಕ ವರ್ಷದಿಂದ ಶುರುವಾದ ಕೊರೊನಾ ಬಿಕ್ಕಟ್ಟು ರಾಜ್ಯದ ಆದಾಯ ಸಂಗ್ರಹ ಪ್ರಮಾಣವನ್ನು ತಗ್ಗಿಸಿದೆ. ಜಿಎಸ್‌ಟಿ ಸಂಗ್ರಹ ಕೂಡ ಕುಸಿದಿದೆ' ಎಂದು ಬೊಮ್ಮಾಯಿ ಅವರು ನಿರ್ಮಲಾ ಅವರಿಗೆ ಸಲ್ಲಿಸಿರುವ ಮನವಿಯಲ್ಲಿ ಹೇಳಿದ್ದಾರೆ.

ಎಲ್ಲ ರಾಜ್ಯಗಳೂ ಎದುರಿಸುತ್ತಿರುವ ಆದಾಯದ ಬಿಕ್ಕಟ್ಟನ್ನು ಪರಿಗಣಿಸಿ ಕೇಂದ್ರ ಸರ್ಕಾರವು, ಜಿಎಸ್‌ಟಿ ಪರಿಹಾರ ಸಾಲವನ್ನು 2020–21ನೇ ಸಾಲಿನಲ್ಲಿ ನೀಡಿದೆ. ಈ ಸಾಲವನ್ನು ಪ್ರಸಕ್ತ ಆರ್ಥಿಕ ವರ್ಷಕ್ಕೂ ವಿಸ್ತರಿಸಲಾಗಿದೆ. 'ಪರಿಹಾರ ಸಾಲವು ರಾಜ್ಯಗಳಿಗೆ ಹಾಲಿ ಆರ್ಥಿಕ ವರ್ಷಕ್ಕೆ ಮಾತ್ರ ಆಗುತ್ತದೆ. ಆದಾಯ ಸಂಗ್ರಹದ ಮೇಲೆ ಕೋವಿಡ್‌ನ ಪರಿಣಾಮವು ಮುಂದಿನ ಕೆಲವು ವರ್ಷಗಳವರೆಗೆ ಇರಲಿದೆ' ಎಂದು ಅವರು ವಿವರಿಸಿದ್ದಾರೆ.

ಕೇಂದ್ರದಿಂದ ರಾಜ್ಯಕ್ಕೆ ಸಿಗುವ ತೆರಿಗೆ ಆದಾಯವು 15ನೇ ಹಣಕಾಸು ಆಯೋಗದ ಶಿಫಾರಸಿನ ಪ್ರಕಾರ ಕಡಿಮೆ ಆಗಲಿದೆ. ಅನುದಾನ ಹಂಚಿಕೆಗೆ ಸಂಬಂಧಿಸಿದ ಮಾನದಂಡ ಬದಲಿಸುವಂತೆ ರಾಜ್ಯ ಸರ್ಕಾರವು 15ನೇ ಹಣಕಾಸು ಆಯೋಗಕ್ಕೆ ಈಗಾಗಲೇ ಮನವಿ ಸಲ್ಲಿಸಿದೆ. ಆದರೆ, ಈ ಮನವಿಯನ್ನು ಆಯೋಗ ಪರಿಗಣಿಸಿಲ್ಲ ಎಂದು ಬೊಮ್ಮಾಯಿ ಅವರು ಸಭೆಯಲ್ಲಿ ನಿರ್ಮಲಾ ಅವರಿಗೆ ವಿವರಣೆ ನೀಡಿದರು.

ಹಣಕಾಸು ಆಯೋಗವು ಶಿಫಾರಸಿನಲ್ಲಿ ಬೆಂಗಳೂರಿನ ಜಲಮೂಲಗಳು ಹಾಗೂ ಹೊರವರ್ತುಲ ರಸ್ತೆಗೆ ₹ 6000 ಕೋಟಿ ನಿಗದಿಪಡಿಸಿದೆ. ಆದರೆ, ಕೇಂದ್ರದ ವಿವರಣಾ ಪತ್ರದಲ್ಲಿ ಹಣಕಾಸು ಆಯೋಗ ಈ ಶಿಫಾರಸನ್ನು ಪ್ರಸ್ತಾಪಿಸಿಲ್ಲ. ಇದರಿಂದಾಗಿ, ರಾಜ್ಯಕ್ಕೆ ಇನ್ನಷ್ಟು ಹಿನ್ನಡೆಯಾಗಲಿದೆ ಎಂದು ಕೂಡ ಬೊಮ್ಮಾಯಿ ವಿವರಿಸಿದರು.

ಯಾಹೂ ಸುದ್ದಿ ಜಾಲತಾಣ ಸ್ಥಗಿತ

ನವದೆಹಲಿ (ಪಿಟಿಐ): ವಿದೇಶಿ ನೇರ ಬಂಡವಾಳ ಹೂಡಿಕೆಗೆ (ಎಫ್‌ಡಿಐ) ಸಂಬಂಧಿಸಿದ ಹೊಸ ನಿಯಮಗಳ ಕಾರಣದಿಂದಾಗಿ ಯಾಹೂ ಕಂಪನಿಯು ಭಾರತದಲ್ಲಿ ಸುದ್ದಿಗಳನ್ನು ಪ್ರಕಟಿಸುತ್ತಿದ್ದ ತನ್ನ ವೆಬ್‌ಸೈಟ್‌ಗಳನ್ನು ಸ್ಥಗಿತಗೊಳಿಸಿದೆ. ಹೊಸ ನಿಯಮಗಳು, ದೇಶದಲ್ಲಿ ಡಿಜಿಟಲ್ ಮಾಧ್ಯಮದ ಮೂಲಕ ಸುದ್ದಿ ಪ್ರಕಟಿಸುವ ಕಂಪನಿಗಳಲ್ಲಿ ವಿದೇಶಿ ಬಂಡವಾಳಕ್ಕೆ ಮಿತಿ ಹೇರಿವೆ.

ಯಾಹೂ ನ್ಯೂಸ್, ಯಾಹೂ ಕ್ರಿಕೆಟ್, ಫೈನಾನ್ಸ್, ಎಂಟರ್‌ಟೇನ್‌ಮೆಂಟ್ ಮತ್ತು ಮೇಕರ್ಸ್ ಇಂಡಿಯಾ ವೆಬ್‌ಸೈಟ್‌ಗಳು ಸ್ಥಗಿತವಾಗಲಿವೆ. ಆದರೆ ಇ–ಮೇಲ್ ಮತ್ತು ಸರ್ಚ್ ಎಂಜಿನ್ ಸೇವೆಗಳು ಎಂದಿನಂತೆಯೇ ಮುಂದುವರಿಯಲಿವೆ.

ಅಕ್ಟೋಬರ್‌ನಿಂದ ಜಾರಿಗೆ ಬರಲಿರುವ ನಿಯಮಗಳ ಅನ್ವಯ, ಡಿಜಿಟಲ್ ಮಾಧ್ಯಮ ಕಂಪನಿಗಳು ತಮ್ಮಲ್ಲಿ ಗರಿಷ್ಠ ಶೇಕಡ 26ರಷ್ಟು ವಿದೇಶಿ ಬಂಡವಾಳಕ್ಕೆ ಅವಕಾಶ ಕೊಡಬಹುದು. ಈ ಬಂಡವಾಳ ಹೂಡಿಕೆಗೆ ಕೇಂದ್ರ ಸರ್ಕಾರದಿಂದ ಒಪ್ಪಿಗೆ ಪಡೆದಿರಬೇಕು.

ಚಿನ್ನದ ದರ ₹ 265, ಬೆಳ್ಳಿ ₹ 323 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ಚಿನ್ನ ಬೆಳ್ಳಿ ದರ ಇಳಿಕೆ ಕಂಡಿದೆ. 10 ಗ್ರಾಂ ಚಿನ್ನದ ದರ ₹ 265ರಷ್ಟು ಇಳಿಕೆ ಆಗಿದ್ದು ₹ 46,149ರಂತೆ ಮಾರಾಟವಾಗಿದೆ.

ಬೆಳ್ಳಿ ಧಾರಣೆ ಕೆ.ಜಿ.ಗೆ ₹ 323ರಷ್ಟು ಕಡಿಮೆಯಾಗಿ ₹ 61,653ಕ್ಕೆ ತಲುಪಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆ ಹಾಗೂ ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ರೂಪಾಯಿ ಮೌಲ್ಯ ಇಳಿಕೆಯಿಂದಾಗಿ ದೇಶಿ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆ ಆಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಷೇರುಪೇಟೆ ವಹಿವಾಟು ▲ 5



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,624
ಇಂದಿನ ಅಂತ್ಯ	16,636
▲	2
ದಿನದ ಗರಿಷ್ಠ	16,683

ವಿನಿಮಯ ದರ

$ ಡಾಲರ್	74.22
£ ಪೌಂಡ್	102.04
€ ಯುರೊ	87.37
¥ ಯೆನ್ (100ಕ್ಕೆ)	68

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹415
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹415

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1570 (1540)
ಸೋಯಾ (ರಿಫೈನ್ಡ್)	₹1408 (1400)
ಸೂರ್ಯಕಾಂತಿ (ರಿಫೈನ್ಡ್)	₹1500(1495)
ಪಾಮೋಲಿನ್	₹1270 (1270)

ಎಲ್‌ಐಸಿ: ಏಜೆಂಟ್‌ಗಳಿಗೆ 'ಆನಂದ' ಆ್ಯಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಜೀವ ವಿಮಾ ನಿಗಮವು ತನ್ನ ಹೊಸ ವಹಿವಾಟನ್ನು ಡಿಜಿಟಲೀಕರಣಗೊಳಿಸುವ ಭಾಗವಾಗಿ ಏಜೆಂಟ್‌ಗಳು ಮತ್ತು ಮಧ್ಯವರ್ತಿಗಳಿಗೆ 'ಆತ್ಮನಿರ್ಭರ ಭಾರತ ನ್ಯೂ ಬಿಸಿನೆಸ್ ಡಿಜಿಟಲ್ ಅಪ್ಲಿಕೇಷನ್' (ಆನಂದ ಆ್ಯಪ್) ಬಿಡುಗಡೆ ಮಾಡಿದೆ.

ಈ ಆ್ಯಪ್‌ಅನ್ನು ಏಜೆಂಟ್‌ಗಳು, ಮಧ್ಯವರ್ತಿಗಳು ಬಳಸುವುದು ಹೆಚ್ಚಲಿದೆ ಎಂಬ ನಿರೀಕ್ಷೆ ಇದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ವಿಡಿಯೊ ಕಾನ್ಫರೆನ್ಸ್ ಮೂಲಕ ಈಚೆಗೆ ನಡೆದ ಕಾರ್ಯಕ್ರಮದಲ್ಲಿ ಎಲ್‌ಐಸಿಯ ಅಧ್ಯಕ್ಷ ಎಂ.ಆರ್. ಕುಮಾರ್ ಅವರು ಆ್ಯಪ್ ಅನ್ನು ಬಿಡುಗಡೆ ಮಾಡಿದರು.

ಕಾರ್ಯಕ್ರಮದಲ್ಲಿ ಏಜೆಂಟ್‌ಗಳಿಗಾಗಿ ಇ-ತರಬೇತಿ ವೀಡಿಯೊ ಬಿಡುಗಡೆ ಮಾಡಲಾಯಿತು. ಮೊಬೈಲ್ ಆ್ಯಪ್‌ನ ಪ್ರಮುಖ ಲಕ್ಷಣಗಳನ್ನು ಮತ್ತು ಜೀವವಿಮಾ ಪಾಲಿಸಿಯನ್ನು ಪೂರ್ಣಗೊಳಿಸುವ ಪ್ರಕ್ರಿಯೆಯ ಮಾಹಿತಿಯು ಈ ವಿಡಿಯೊದಲ್ಲಿದೆ ಎಂದು ಕಂಪನಿಯು ತಿಳಿಸಿದೆ.

₹ 2,500 ಕೋಟಿ ಸಂಗ್ರಹಿಸಿದ ಕೆನರಾ ಬ್ಯಾಂಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರ್ಹ ಸಾಂಸ್ಥಿಕ ವಿತರಣೆಯ (ಕ್ಯುಐಪಿ) ಮೂಲಕ ₹ 2,500 ಕೋಟಿ ಬಂಡವಾಳ ಸಂಗ್ರಹಿಸಿರುವುದಾಗಿ ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್ ತಿಳಿಸಿದೆ. ಆಗಸ್ಟ್ 17ರಿಂದ 23ರ ಅವಧಿಯಲ್ಲಿ ಕ್ಯುಐಪಿಗೆ ಅವಕಾಶ ನೀಡಲಾಗಿದ್ದು, ಅದು ಯಶಸ್ವಿಯಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ದೇಶಿ ಮತ್ತು ವಿದೇಶಿ ಹೂಡಿಕೆದಾರರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ಬ್ಯಾಂಕ್‌ನ ಬಂಡವಾಳ ಸಾಮರ್ಥ್ಯ ಹೆಚ್ಚಿಸಲು ಇದು ನೆರವಾಗಲಿದೆ ಎಂದು ಹೇಳಿದೆ.

ಮುಂಬೈ ಧಾರಣೆ

ಶೇಂಗಾ

26-8-2021

ಜಾವಾ 70/80(ಹೊಸ)	10150-10200
ಜಾವಾ 80/90(ಹೊಸ)	9250-9300
ದಪ್ಪ ಮಧ್ಯಪ್ರದೇಶ(ಹೊಸ)	9750-9800
ದಪ್ಪ ಗುಜರಾತ್(ಹೊಸ)	9500-9550

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1580 (1550)
ಒಂದು ವಾರದ ಡೆಲಿವರಿ	1575 (1545)
ಸೋಯಾ ಕಚ್ಚಾ	1372 (1370)
ಪಾಮ್ ವಾರದ ಡೆಲಿವರಿ	1268 (1268)
ಸೂರ್ಯಕಾಂತಿ ಎಣ್ಣೆ ಕಚ್ಚಾ	1440 (1440)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
47,200 (47,350)
ಬೆಳ್ಳಿ ಕೆ.ಜಿ 63,250 (63,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ

'ಕೂ' ಬಳಕೆದಾರರ ಸಂಖ್ಯೆ 1 ಕೋಟಿಗೆ ಏರಿಕೆ

ನವದೆಹಲಿ (ಪಿಟಿಐ): 'ಕೂ' ಸಾಮಾಜಿಕ ಜಾಲತಾಣದ ಬಳಕೆದಾರರ ಸಂಖ್ಯೆಯು 1 ಕೋಟಿಗೆ ತಲುಪಿದ್ದು, ಮುಂದಿನ ಒಂದು ವರ್ಷದೊಳಗೆ 10 ಕೋಟಿ ಬಳಕೆದಾರರನ್ನು ಹೊಂದುವ ಗುರಿಯನ್ನು ಇಟ್ಟುಕೊಳ್ಳಲಾಗಿದೆ ಎಂದು ಕಂಪನಿಯ ಸಹ ಸ್ಥಾಪಕ ಅಪ್ರಮೇಯ ರಾಧಾಕೃಷ್ಣ ಹೇಳಿದ್ದಾರೆ.

ಬಳಕೆದಾರರ ಸಂಖ್ಯೆಯಲ್ಲಿ ಗಮನಾರ್ಹ ಏರಿಕೆ ಕಂಡಿದ್ದರೂ, ಮಾರುಕಟ್ಟೆಯು ನೀಡುವ ಬೆಳವಣಿಗೆಯ ಸಾಮರ್ಥ್ಯವನ್ನು ಗಮನಿಸಿದರೆ ಅದರ ಮೇಲ್ಮೈಯನ್ನೂ ಸಹ ತಲುಪಿಲ್ಲ. ಅಂತರ್ಜಾಲ ಬಳಕೆದಾರರಲ್ಲಿ ಶೇಕಡ 2ಕ್ಕಿಂತಲೂ ಕಡಿಮೆ ಜನರು ಮೈಕ್ರೊಬ್ಲಾಗಿಂಗ್ ವೇದಿಕೆಯನ್ನು ಬಳಸುತ್ತಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಮೈಕ್ರೊಬ್ಲಾಗಿಂಗ್ ಮೂಲಕ ದೇಶದ ಯಾರಿಗಾದರೂ ತಮ್ಮ ಅನಿಸಿಕೆಗಳನ್ನು ತಲುಪಿಸಲು ಸಾಧ್ಯ ಎನ್ನುವುದು ಅಂತರ್ಜಾಲ ಬಳಸುವ ಶೇ 98ರಷ್ಟು ಜನರಿಗೆ ತಿಳಿದಿಲ್ಲ. ಇಂಥವರನ್ನು ತಲುಪಲು ಕೂ ಬಯಸುತ್ತಿದೆ ಎಂದು ಅವರು ಹೇಳಿದ್ದಾರೆ.

ಟ್ವಿಟರ್ ಪ್ರತಿಸ್ಪರ್ಧಿ ಆಗಿರುವ ಕೂ, ಬಿಡುಗಡೆ ಆದ 15–16 ತಿಂಗಳ ಒಳಗಾಗಿ 1 ಕೋಟಿ ಬಳಕೆದಾರರನ್ನು ಹೊಂದಿದ ಮೈಲಿಗಲ್ಲು ತಲುಪಿದೆ.

ಆಸ್ತಿ ನಗದೀಕರಣ: ಬಿಎಸ್‌ಎನ್‌ಎಲ್ ನೌಕರರ ಸಂಘಟನೆ ವಿರೋಧ

ನವದೆಹಲಿ (ಪಿಟಿಐ): ಭಾರತ್‌ನೆಟ್ ಯೋಜನೆಯ ಅಡಿ ಅಳವಡಿಸಲಾಗಿರುವ 2.86 ಲಕ್ಷ ಕಿ.ಮೀ. ಉದ್ದದ ಆಪ್ಟಿಕಲ್ ಫೈಬರ್ ಜಾಲವನ್ನು, ಬಿಎಸ್‌ಎನ್‌ಎಲ್ ಮತ್ತು ಎಂಟಿಎನ್‌ಎಲ್ ಮಾಲೀಕತ್ವದ ಒಟ್ಟು 14,917 ಮೊಬೈಲ್ ಟವರ್‌ಗಳನ್ನು ಆಸ್ತಿ ನಗದೀಕರಣ ಯೋಜನೆಯಲ್ಲಿ ಬಳಸಿಕೊಳ್ಳುವುದಕ್ಕೆ ಬಿಎಸ್‌ಎನ್‌ಎಲ್ ನೌಕರರು ವಿರೋಧ ವ್ಯಕ್ತಪಡಿಸಿದ್ದಾರೆ.

ಮೊಬೈಲ್ ಟವರ್‌ಗಳನ್ನು ಕಾರ್ಪೊರೇಟ್ ಸಂಸ್ಥೆಗಳಿಗೆ ಮಾರಾಟ ಮಾಡುವುದು ಬಿಎಸ್‌ಎನ್‌ಎಲ್ ಹಾಗೂ ಎಂಟಿಎನ್‌ಎಲ್ ಕಂಪನಿಗಳ ಖಾಸಗೀಕರಣದ ಆರಂಭ ಎಂದು ಬಿಎಸ್‌ಎನ್‌ಎಲ್ ನೌಕರರ ಒಕ್ಕೂಟವು ಆರೋಪಿಸಿದೆ. 'ರಾಷ್ಟ್ರೀಯ ಆಸ್ತಿ ನಗದೀಕರಣ ಯೋಜನೆಯ ಹೆಸರಿನಲ್ಲಿ ಕೇಂದ್ರ ಸರ್ಕಾರವು ರಾಷ್ಟ್ರದ ಆಸ್ತಿಗಳನ್ನು ಕಡಿಮೆ ಬೆಲೆಗೆ ಕಾರ್ಪೊರೇಟ್ ಸಂಸ್ಥೆಗಳಿಗೆ ನೀಡಲು ಹೊರಟಿದೆ' ಎಂದು ಒಕ್ಕೂಟವು ಪ್ರಕಟಣೆಯಲ್ಲಿ ಹೇಳಿದೆ.

ಬಿಎಸ್‌ಎನ್‌ಎಲ್ ನೌಕರರು ಶುಕ್ರವಾರ ದೇಶದ ಎಲ್ಲೆಡೆ ಪ್ರತಿಭಟನೆ ನಡೆಸಬೇಕು ಎಂದು ಕರೆ ನೀಡಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-46000
ಹಳತು	42500-51000
ಕುಮಟ	
ಚಿಪ್ಪು	29069-36869
ಕೋಕ	24899-34575
ಹಳೆಚಾಲಿ	49000-51000
ಹೊಸಚಾಲಿ	39000-46000
ಪುತ್ತೂರು	
ಕೋಕ	10500-26000
ಹೊಸತು	31500-46000
ಸಿದ್ದಾಪುರ	
ಬಿಳಿಗೋಟು	30699-35699
ಚಾಲಿ	38699-41099
ಕೋಕ	28900-34000
ಕೆಂಪುಗೋಟು	31089-32189
ರಾಶಿ	43699-44639
ತಟ್ಟಿಬೆಟ್ಟೆ	31100-38001
ಶಿರಸಿ	
ಬೆಟ್ಟೆ	35869-40299
ಬಿಳಿಗೋಟು	24699-44509
ಚಾಲಿ	38511-416096
ರಾಶಿ	39699-44509
ಯಲ್ಲಾಪುರ	
ಬಿಳಿಗೋಟು	28899-35510
ಚಾಲಿ	35899-41240
ಕೋಕ	24899-34099
ಕೆಂಪುಗೋಟು	31001-37399
ರಾಶಿ	43699-46899
ತಟ್ಟಿಬೆಟ್ಟೆ	39409-43199
ಶಿವಮೊಗ್ಗ ಎಪಿಎಂಸಿ	
ಗೊರಬಲು	21159-37190
ರಾಶಿ	43219-47900
ಸಾಗರ	
ಬಿಳಿಗೋಟು	23899-36599
ಚಾಲಿ	33199-40529
ಕೋಕ	21099-36699
ಕೆಂಪುಗೋಟು	30099-40699
ರಾಶಿ	41399-48119
ಸಿಪ್ಪೆಗೋಟು	6690-23629

ಮೂಡಿಗೆರೆ ಕಾಫಿ

	ಮುದ್ರೆಮನೆ
ಎಪಿ	13650
ಎಸಿ	6150
ಆರ್‌ಪಿ	6075
ಆರ್‌ಸಿ	3510

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ದಾಖಲೆ ಮುರಿದ ಗುವೊ ಲಿಂಗ್ಲಿಂಗ್ 'ಪವರ್'

ಪ್ಯಾರಾಲಿಂಪಿಕ್ಸ್: ಸೈಕ್ಲಿಂಗ್‌ನಲ್ಲಿ ಅಲ್ಫೊನ್ಸೊ ಮಿಂಚು; ಭಾರತದ ಸುಯಶ್‌ಗೆ ಅನಾರೋಗ್ಯ; ಮೊದಲ ಸ್ಪರ್ಧೆಗೆ ಅಲಭ್ಯ

ಟೋಕಿಯೊ (ಪಿಟಿಐ/ಎಎಫ್‌ಪಿ): ಚೀನಾದ ಗುವೊ ಲಿಂಗ್ಲಿಂಗ್ ಅವರು ಚೊಚ್ಚಲ ಪ್ಯಾರಾಲಿಂಪಿಕ್ಸ್‌ನಲ್ಲೇ ಪವರ್ ತೋರಿಸಿದರು. ಮಹಿಳೆಯರ 41 ಕೆಜಿ ವಿಭಾಗದ ಪವರ್‌ಲಿಫ್ಟಿಂಗ್‌ನಲ್ಲಿ ಅವರು 108 ಕೆಜಿ ಭಾರ ಎತ್ತಿ ವಿಶ್ವ ಚಿನ್ನದ ಪದಕ ಗೆದ್ದುಕೊಂಡರು. ವಿಶ್ವ ದಾಖಲೆಯನ್ನೂ ಬರೆದರು.

ಇಂಡೊನೇಷ್ಯಾದ ವಿಡಿಯಾಶಿನ್ ನೀ ನಿಂಗಾ 98 ಕೆಜಿ ಭಾರ ಎತ್ತಿ ಬೆಳ್ಳಿ ಪದಕ ಗಳಿಸಿದರೆ ವೆನೆಜುವೆಲಾದ ಫಾಂಟಿಸ್ ಮೊನಸ್ಟೆರಿಯೊ (97 ಕೆಜಿ) ಕಂಚಿನ ಪದಕ ಗೆದ್ದುಕೊಂಡರು.

ಸ್ಪೇನ್‌ನ ಸೈಕ್ಲಿಸ್ಟ್ ಅಲ್ಫೊನ್ಸೊ ಕಾಬೆಲೊ ಅವರು ಸಿ4 ವಿಭಾಗದ ಸಾವಿರ ಮೀಟರ್ಸ್ ಟೈಮ್ ಟ್ರಯಲ್‌ನಲ್ಲಿ ಚಿನ್ನ ಗೆದ್ದು ವಿಶ್ವ ದಾಖಲೆ ಮುರಿದರು. 1 ನಿಮಿಷ 01.557 ಸೆಕೆಂಡಿನಲ್ಲಿ ಗುರಿ ಮುಟ್ಟಿದ ಅವರು ಬ್ರಿಟನ್‌ನ ಕ್ಯೂಂಡಿ ಜೋಡಿ (1 ನಿಮಿಷ 01.847ಸೆ) ಅವರನ್ನು ಹಿಂದಿಕ್ಕಿದರು. ಸ್ಲೊವಾಕಿಯಾದ ಮೆಟೆಲ್ಕ ಜೋಸೆಫ್ (1:04.786) ಕಂಚಿನ ಪದಕ ಗಳಿಸಿದರು.

ಚಿನ್ನದ ಸಂಭ್ರಮದಲ್ಲಿ ಗುವೊ ಲಿಂಗ್ಲಿಂಗ್ –ರಾಯಿಟರ್ಸ್ ಚಿತ್ರ

ಸುಯಶ್‌ಗೆ ಅನಾರೋಗ್ಯ: ಭಾರತದ ಈಜುಪಟು ಸುಯಶ್ ಜಾಧವ್ ಅನಾರೋಗ್ಯದಿಂದಾಗಿ ಸ್ಪರ್ಧಿಸುವುದಿಲ್ಲ. ಎಸ್‌ಎಂ–7 ವಿಭಾಗದ ಸ್ಪರ್ಧಿಯಾಗಿರುವ ಅವರು ಶುಕ್ರವಾರ 200 ಮೀಟರ್ಸ್ ವೈಯಕ್ತಿಕ ಮೆಡ್ಲೆಯಲ್ಲಿ ಪಾಲ್ಗೊಳ್ಳಬೇಕಾಗಿತ್ತು.

'ಅವರು ನೆಗಡಿ ಮತ್ತು ಗಂಟಲು ಕೆರೆತ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಹೀಗಾಗಿ ಸ್ಪರ್ಧೆಯಿಂದ ದೂರ ಇರುವಂತೆ ವೈದ್ಯರು ಸೂಚಿಸಿದ್ದಾರೆ. ಅವರ ಕೋವಿಡ್ ಪರೀಕ್ಷೆ ವರದಿ ನೆಗೆಟಿವ್ ಆಗಿದೆ' ಎಂದು ಭಾರತ ತಂಡದ ಚೆಫ್ ಡಿ ಮಿಷನ್ ಗುರುಶರಣ್ ಸಿಂಗ್ ತಿಳಿಸಿದ್ದಾರೆ.

ಸೆಪ್ಟೆಂಬರ್ ಒಂದರಂದು 100 ಮೀಟರ್ಸ್ ಬ್ರೆಸ್ಟ್ ಸ್ಟ್ರೋಕ್ ಮತ್ತು ಸೆಪ್ಟೆಂಬರ್ ಮೂರರಂದು 50 ಮೀಟರ್ಸ್ ಬಟರ್‌ಫ್ಲೈ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಸಮಸ್ಯೆ ಇಲ್ಲ ಎಂದು ತಿಳಿಸಲಾಗಿದೆ.

ಸುಯಶ್ ಜಾಧವ್ ಅವರಿಗೆ ಈಗ 27 ವರ್ಷ. 11ನೇ ವಯಸ್ಸಿನಲ್ಲಿ ಮೊಣಕೈಗಳ ಕೆಳಗಿನ ಭಾಗವನ್ನು ಕೃತಕ ಅಂಗ ಜೋಡಿಸಲಾಗಿತ್ತು. 2018ರ ಏಷ್ಯನ್ ಪ್ಯಾರಾ ಗೇಮ್ಸ್‌ನ 50 ಮೀಟರ್ಸ್ ಬಟರ್‌ಫ್ಲೈಯಲ್ಲಿ ಚಿನ್ನ, 200 ಮೀಟರ್ಸ್ ವೈಯಕ್ತಿಕ ಮೆಡ್ಲೆ ಹಾಗೂ 50 ಮೀಟರ್ಸ್ ಫ್ರೀಸ್ಟೈಲ್‌ನಲ್ಲಿ ಬೆಳ್ಳಿ ಪದಕ ಗೆದ್ದಿದ್ದರು.

> **ಇದೇ ಮೊದಲ ಬಾರಿ ಪ್ಯಾರಾಲಿಂಪಿಕ್ಸ್‌ನಲ್ಲಿ ಪಾಲ್ಗೊಂಡಿದ್ದೇನೆ. ದೇಶಕ್ಕೆ ಚಿನ್ನ ಗೆದ್ದುಕೊಡಲು ಸಾಧ್ಯವಾದ ಇಂದು ನನ್ನ ಪಾಲಿಗೆ ವಿಶಿಷ್ಟ ದಿನ.**
> **ಗುವೊ ಲಿಂಗ್ಲಿಂಗ್** ಚೀನಾ ಪವರ್ ಲಿಫ್ಟರ್

ಪ್ರೀ ಕ್ವಾರ್ಟರ್ ಫೈನಲ್‌ಗೆ ಭವಿನಾ

ಭಾರತದ ಪ್ಯಾರಾ ಟೇಬಲ್ ಟೆನಿಸ್ ಪಟು ಭವಿನಾ ಬೆನ್ ಅವರು ಮಹಿಳೆಯರ ಸಿಂಗಲ್ಸ್‌ನ ಕ್ಲಾಸ್–4 ವಿಭಾಗದಲ್ಲಿ ಪ್ರೀ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಆದರೆ ಸೋನಲ್ ಬೆನ್ ಪಟೇಲ್ ಸೋತು ಹೊರಬಿದ್ದರು.

ಬ್ರಿಟನ್‌ನ ಮೇಗನ್ ಶೇಕ್ಲಿಟನ್ ಎದುರಿನ ಪಂದ್ಯದಲ್ಲಿ ಭವಿನಾ ಬೆನ್ 11-7, 9-11, 17-15, 13-11ರಲ್ಲಿ ಜಯ ಗಳಿಸಿದರು. 34 ವರ್ಷದ ಭವಿನಾ ವಿಶ್ವ ಕ್ರಮಾಂಕದಲ್ಲಿ ಒಂಬತ್ತನೇ ಸ್ಥಾನದಲ್ಲಿರುವ ಮೇಗನ್ ಎದುರು ಜಯ ಗಳಿಸಲು 41 ನಿಮಿಷ ತೆಗೆದುಕೊಂಡರು. ಸೋನಲ್‌ಬೆನ್ ಪಟೇಲ್ ಕ್ಲಾಸ್–3 ವಿಭಾಗದ ಗುಂಪು ಹಂತದ ಎರಡನೇ ಪಂದ್ಯದಲ್ಲಿ 12-10, 5-11, 3-11, 9-11ರಲ್ಲಿ ಕೊರಿಯಾದ ಎಂಜಿ ಲೀ ಎದುರು ಸೋಲನುಭವಿಸಿದರು.

ಈಜಿ ಮನಗೆದ್ದ 14ರ ಬಾಲೆ

ಈ ಬಾರಿ ಪ್ಯಾರಾಲಿಂಪಿಕ್ಸ್‌ನಲ್ಲಿ ಪಾಲ್ಗೊಂಡಿರುವವರ ಪೈಕಿ ಅತಿ ಕಿರಿಯ ವಯಸ್ಸಿನ ಅಥ್ಲೀಟ್ ಉಗಾಂಡದ ಈಜುಪಟು ಹುಸ್ನಾ ಕುಕುಂಡಕ್ವೆ ಈಜು ಸ್ಪರ್ಧೆಯಲ್ಲಿ ಪಾಲ್ಗೊಂಡು ಗಮನ ಸೆಳೆದರು. ಎಸ್‌ಬಿ–8 ವಿಭಾಗದ 100 ಮೀಟರ್ಸ್ ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ಸ್ಪರ್ಧಿಸಿದ ಅವರ ವಯಸ್ಸು 14 ವರ್ಷ.

ಸ್ಪರ್ಧೆಯಲ್ಲಿ ಫೈನಲ್ ಪ್ರವೇಶಿಸಲು ಅವರಿಗೆ ಸಾಧ್ಯವಾಗಲಿಲ್ಲ. ಅದರೂ ವೈಯಕ್ತಿಕ ಶ್ರೇಷ್ಠ ಸಾಧನೆ ಮಾಡಲು ಸಾಧ್ಯವಾಯಿತು. 'ಅಂಗವೈಕಲ್ಯ ಇರುವವರ ಬಗ್ಗೆ ಉಗಾಂಡದ ಜನರ ಅಭಿಪ್ರಾಯ ಬದಲಿಸುವುದು ನನ್ನ ಸ್ಪರ್ಧೆಯ ಪ್ರಮುಖ ಉದ್ದೇಶವಾಗಿದೆ' ಎಂದು ಅವರು ಹೇಳಿದರು. ಅವರಿಗಿಂತ ಒಂದು ತಿಂಗಳು ಹಿರಿಯರಾದ ಜಪಾನ್‌ನ ಮಿಯುಕಿ ಯಮಂಡ ಅವರೂ ಬುಧವಾರದ ಸ್ಪರ್ಧೆಯಲ್ಲಿದ್ದರು.



ಜೋ ರೂಟ್ 'ಶತಕ'ದ ಹ್ಯಾಟ್ರಿಕ್

ಲೀಡ್ಸ್ (ಪಿಟಿಐ): ಭಾರತದ ಎದುರಿನ ಟೆಸ್ಟ್ ಸರಣಿಯಲ್ಲಿ ಇಂಗ್ಲೆಂಡ್ ತಂಡದ ನಾಯಕ ಜೋ ರೂಟ್ ಶತಕದ 'ಹ್ಯಾಟ್ರಿಕ್' ಸಾಧನೆ ಮಾಡಿದರು.

ರೂಟ್ ಸೇರಿದಂತೆ ಅಗ್ರಕ್ರಮಾಂಕದ ಬ್ಯಾಟ್ಸ್‌ಮನ್‌ಗಳ ಸೊಗಸಾದ ಆಟಕ್ಕೆ ಮೂರನೇ ಟೆಸ್ಟ್‌ನ ಎರಡನೇ ದಿನವಾದ ಗುರುವಾರದ ಆಟದಲ್ಲಿ ಭಾರತ ತಂಡ ಬಸವಳಿಯಿತು. 129 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 423 ರನ್ ಗಳಿಸಿರುವ ಇಂಗ್ಲೆಂಡ್ 345 ರನ್‌ಗಳ ಮುನ್ನಡೆ ಸಾಧಿಸಿತು.

ಬುಧವಾರ ವಿರಾಟ್ ಕೊಹ್ಲಿ ಬಳಗ 78 ರನ್‌ಗಳಿಗೆ ಆಲೌಟ್ ಆಗಿತ್ತು. ಇಂಗ್ಲೆಂಡ್ ದಿನದಾಟದ ಕೊನೆಗೆ ವಿಕೆಟ್ ನಷ್ಟವಿಲ್ಲದೇ 120 ರನ್ ಗಳಿಸಿತ್ತು.

ಗುರುವಾರ ಆಟ ಮುಂದುವರಿಸಿದ ಆರಂಭಿಕ ಜೋಡಿ ಭಾರತದ ಬೌಲರ್ ಗಳನ್ನು ಕಾಡಿದರು. ರೋರಿ ಬರ್ನ್ಸ್ ಅವರನ್ನು ಬೌಲ್ಡ್ ಮಾಡಿದ ಮೊಹಮ್ಮದ್ ಶಮಿ ಜೊತೆಯಾಟವನ್ನು ಮುರಿದರು.

ರೋರಿ ಮತ್ತು ಹಸೀಬ್ ಹಮೀದ್ ಮೊದಲ ವಿಕೆಟ್ ಜೊತೆಯಾಟದಲ್ಲಿ 135 ರನ್ ಸೇರಿಸಿದರು. ಹಮೀದ್ ವಿಕೆಟ್ ಗಳಿಸುವಲ್ಲಿ ರವೀಂದ್ರ ಜಡೇಜ ಯಶಸ್ವಿಯಾದರು.

ಆದರೆ ಡೇವಿಡ್ ಮಲಾನ್ ಜೊತೆ ಸೇರಿದ ರೂಟ್ ಭಾರತದ ಬೌಲರ್‌ಗಳಿಗೆ ಮತ್ತೊಮ್ಮೆ ಕಬ್ಬಿಣದ ಕಡಲೆಯಾದರು. ಮಲಾನ್ ತಮ್ಮ ಆಕ್ರಮಣಕಾರಿ ಶೈಲಿಗೆ ತುಸು ಕಡಿವಾಣ ಹಾಕಿ ಬ್ಯಾಟಿಂಗ್ ಮಾಡಿದರು. ನಾಯಕ ರೂಟ್ ಕೂಡ ಬೌಲರ್‌ಗಳನ್ನು ಆತ್ಮವಿಶ್ವಾಸದಿಂದ ಎದುರಿಸಿದರು.

ಈ ಸರಣಿಯ ಮೊದಲೆರಡು ಪಂದ್ಯಗಳಲ್ಲಿಯೂ ರೂಟ್ ಶತಕ ಗಳಿಸಿದ್ದರು. ಇಲ್ಲಿಯೂ ಪಟಪಟನೇ ರನ್ ಗಳಿಸಿದರು.132 ಎಸೆತಗಳಲ್ಲಿ ಶತಕ ಪೂರೈಸಿದರು.

ಇದು ಅವರಿಗೆ 23ನೇ ಶತಕ.

ಜೋ ರೂಟ್ ಸಂಭ್ರಮ –ರಾಯಿಟರ್ಸ್ ಚಿತ್ರ

ಮಲಾನ್ ಜೊತೆಗೆ ಮೂರನೇ ವಿಕೆಟ್‌ಗೆ 139 ರನ್ ಪೇರಿಸಿದರು.

ಸಿರಾಜ್ ಎಸೆತದಲ್ಲಿ ಮಲಾನ್ ಔಟಾದ ನಂತರವೂ ರೂಟ್ ಆಟ ಮುಂದುವರಿಯಿತು. ಜಾನಿ ಬೆಸ್ಟೊ ಜೊತೆಗೆ 51 ರನ್ ಸೇರಿಸಿದರು.

ಸ್ಕೋರ್ ಕಾರ್ಡ್

ಭಾರತ (ಮೊದಲ ಇನಿಂಗ್ಸ್) 78
ಇಂಗ್ಲೆಂಡ್ (ಮೊದಲ ಇನಿಂಗ್ಸ್) 8ಕ್ಕೆ 423 (129 ಓವರ್)
(ಬುಧವಾರ 42 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 120)

ಬರ್ನ್ಸ್ ಬಿ ಶಮಿ 61 (153 ಎ, 4x6, 6x1), ಹಸೀಬ್ ಬಿ ಜಡೇಜ 68 (195 ಎ, 4x12), ಮಲಾನ್ ಸಿ ಪಂತ್ ಬಿ ಸಿರಾಜ್ 70 (128 ಎ, 4x11) ರೂಟ್ ಬಿ ಬೂಮ್ರಾ 121 (165 ಎ, 4x14), ಬೇಸ್ಟೊ ಸಿ ಕೊಹ್ಲಿ ಬಿ ಶಮಿ 29 (43 ಎ, 4x4, 6x1), ಬಟ್ಲರ್ ಬಿ ಇಶಾಂತ್ ಬಿ ಶಮಿ 7 (12 ಎ, 4x1), ಮೋಯಿನ್ ಸಿ ಅಕ್ಷರ್ (ಬದಲಿ), ಬಿ ಜಡೇಜ 8 (18 ಎ, 4x1), ಕರನ್ ಸಿ ಮಯಂಕ್ (ಬದಲಿ), ಬಿ ಸಿರಾಜ್ 15 (30 ಎ, 4x2) ಕ್ರೇಗ್ ಬ್ಯಾಟಿಂಗ್ 24 (31 ಎ, 4x4), ರಾಬಿನ್ಸನ್ ಬ್ಯಾಟಿಂಗ್ 0 (6 ಎ)

ಇತರೆ (ಬೈ 8, ಲೆಗ್‌ಬೈ 4, ನೋಬಾಲ್ 7, ವೈಡ್ 1) 20

ವಿಕೆಟ್ ಪತನ: 1-135 (ರೋರಿ ಬರ್ನ್ಸ್, 49.6), 2-159 (ಹಸೀಬ್ ಹಮೀದ್, 62.6), 3-298 (ಡೇವಿಡ್ ಮಲಾನ್, 93.6), 4-350 (ಜಾನಿ ಬೇಸ್ಟೊ, 107.3), 5-360 (ಜೋಸ್ ಬಟ್ಲರ್, 111.3), 6-383 (ಜೋ ರೂಟ್, 117.2), 7-383 (ಮೋಯಿನ್ ಅಲಿ, 118.4), 8-418 (ಸ್ಯಾಮ್ ಕರನ್, 127.1),

ಬೌಲಿಂಗ್: ಇಶಾಂತ್ ಶರ್ಮಾ 22–0–92–0, ಜಸ್‌ಪ್ರೀತ್ ಬೂಮ್ರಾ 27–10–58–1, ಮೊಹಮ್ಮದ್ ಶಮಿ 26–7–87–3, ಮೊಹಮ್ಮದ್ ಸಿರಾಜ್ 23–3–86–2, ರವೀಂದ್ರ ಜಡೇಜ 31–7–88–2

ಬೆಂಗಳೂರು ಓಪನ್ ರದ್ದು

ಬೆಂಗಳೂರು: ಪ್ರಾಯೋಜಕರು ಸಿಗದ ಕಾರಣ ಈ ಬಾರಿ ಬೆಂಗಳೂರು ಓಪನ್ ಗಾಲ್ಫ್ ಚಾಂಪಿಯನ್‌ಷಿಪ್ ನಡೆಸದೇ ಇರಲು ನಿರ್ಧರಿಸಲಾಗಿದೆ. 2017 ಮತ್ತು 2019ರಲ್ಲಿ ಕೆಜಿಯ ಆವರಣದಲ್ಲಿ ಚಾಂಪಿಯನ್‌ಷಿಪ್ ನಡೆದಿತ್ತು.

'ಕೋವಿಡ್‌ನಿಂದಾಗಿ ಎಲ್ಲ ಕ್ಷೇತ್ರದಲ್ಲೂ ಆರ್ಥಿಕ ಸಮಸ್ಯೆಯಾಗಿದೆ. ಹೀಗಾಗಿ ಈ ಬಾರಿ ಪ್ರಾಯೋಜಕತ್ವ ಸಿಗಲಿಲ್ಲ. ಪ್ರಾಯೋಜಕರು ಮುಂದೆ ಬಂದಿದ್ದರೆ ಚಾಂಪಿಯನ್‌ಷಿಪ್ ಆಯೋಜಿಸುತ್ತಿದ್ದೆವು' ಎಂದು ಕೆಜಿಎ ಪದಾಧಿಕಾರಿಗಳು ತಿಳಿಸಿದ್ದಾರೆ.

ಪ್ರಜಾವಾಣಿ ಪ್ರಜಾಧ್ವನಿ
ಜನರ ಮನದಾಳದ ಮಾತು

ರಾಜ್ಯದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಆತುರವಾಗಿ ಜಾರಿಗೊಳಿಸಲಾಗಿದೆಯೆ?

ಜನಾಭಿಪ್ರಾಯ:

ಹೌದು	ಇಲ್ಲ
80%	20%

ನನ್ನ ಹೇಳಿಕೆ ಪ್ರಚಾರಕ್ಕೆ ಬಳಸಬೇಡಿ: ನೀರಜ್

ನವದೆಹಲಿ(ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನ ಸ್ಪರ್ಧೆಯ ವೇಳೆ ಪಾಕ್ ಅಥ್ಲೀಟ್ ಅರ್ಷದ್ ನದೀಮ್ ತಮ್ಮ ಜಾವೆಲಿನ್ ತೆಗೆದುಕೊಂಡಿದ್ದನ್ನು ಮತ್ತು ಅವರಿಂದ ತಾವು ಪಡೆದಿದ್ದನ್ನು ಭಾರತದ ನೀರಜ್ ಚೋಪ್ರಾ ಸಮರ್ಥಿಸಿಕೊಂಡಿದ್ದಾರೆ. ಈ ಕುರಿತ ವಿವಾದಗಳಿಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಗುರುವಾರ ಟ್ವಿಟರ್‌ನಲ್ಲಿ ವಿಡಿಯೊ ಬಿಡುಗಡೆ ಮಾಡಿರುವ ನೀರಜ್, 'ನನ್ನ ಹೇಳಿಕೆಗಳನ್ನು ನಿಮ್ಮ ಪ್ರಚಾರಕ್ಕಾಗಿ ಬಳಸಿಕೊಳ್ಳಬೇಡಿ. ಎಲ್ಲರೂ ಒಗ್ಗಟ್ಟಾಗಿರಲು ಕ್ರೀಡೆ ನಮಗೆ ಕಲಿಸುತ್ತದೆ. ನನ್ನ ಇತ್ತೀಚಿನ ಹೇಳಿಕೆಗಳಿಗೆ ಕೆಲವರಿಂದ ಬಂದ ಪ್ರತಿಕ್ರಿಯೆಗಳನ್ನು ನೋಡಿ ತುಂಬಾ ಬೇಸರವಾಗಿದೆ' ಎಂದಿದ್ದಾರೆ.

'ಸ್ಪರ್ಧೆಯಲ್ಲಿ ಎಲ್ಲರ ಜಾವೆಲಿನ್‌ಗಳು ಒಂದೇ ಕಡೆ ಇರುತ್ತವೆ. ಅವುಗಳನ್ನು ಯಾರು ಬೇಕಾದರೂ ತೆಗೆದುಕೊಳ್ಳಬಹುದು. ಅರ್ಷದ್ ನನ್ನ ಜಾವೆಲಿನ್ ಹಿಡಿದು ಥ್ರೋಗೆ ತಯಾರಿ ಮಾಡುತ್ತಿದ್ದರು. ಇದು ದೊಡ್ಡ ವಿಷಯವೇನಲ್ಲ. ಪಾಕಿಸ್ತಾನದ ಕ್ರೀಡಾಪಟು ನನ್ನ ಜಾವೆಲಿನ್ ತೆಗೆದುಕೊಂಡಿದ್ದರಲ್ಲಿ ತಪ್ಪೇನೂ ಇಲ್ಲ' ಎಂದು ನೀರಜ್ ಹೇಳಿದ್ದಾರೆ.



ನೀರಜ್

ಇತ್ತೀಚೆಗೆ ಮಾಧ್ಯಮ ಸಂಸ್ಥೆಯೊಂದಕ್ಕೆ ನೀರಜ್ ಚೋಪ್ರಾ ನೀಡಿದ್ದ ಸಂದರ್ಶನದಲ್ಲಿನ ಕೆಲ ಮಾತುಗಳು ಸಾಮಾಜಿಕ ಮಾಧ್ಯಮಗಳಲ್ಲಿ ಚರ್ಚೆಗೆ ಒಳಗಾಗಿದೆ.

'ಫೈನಲ್‌ಗೂ ಮುನ್ನ ನಾನು ನನ್ನ ಜಾವೆಲಿನ್ ಹುಡುಕುತ್ತಿದ್ದೆ. ಆಗ ಪಾಕಿಸ್ತಾನದ ಅರ್ಷದ್ ನದೀಮ್ ನನ್ನ ಜಾವೆಲಿನ್ ಹಿಡಿದು ತಿರುಗಾಡುತ್ತಿರುವುದನ್ನು ತಟ್ಟನೇ ಗಮನಿಸಿದೆ. ಅವರ ಬಳಿಗೆ ಹೋಗಿ, ಈ ಜಾವೆಲಿನ್ ನನ್ನದು ಎಂದು ಹೇಳಿದೆ. ಅರ್ಷದ್ ಅದನ್ನು ನನಗೆ ಮರಳಿಸಿದರು. ನಂತರ ನಾನು ಥ್ರೋ ಮಾಡಿರುವುದನ್ನು ನೀವು ನೋಡಿದ್ದೀರಿ' ಎಂದಿದ್ದರು.

ಇದರಿಂದಾಗಿ ಪಾಕ್ ಆಟಗಾರನ ಮೇಲೆ ಜನ ಆಕ್ರೋಶ ವ್ಯಕ್ತಪಡಿಸಿದ್ದರು.



ಟೆಡ್ ಡೆಕ್ಸ್ಟರ್

ಟೆಡ್ ಡೆಕ್ಸ್ಟರ್ ನಿಧನ

ಲಂಡನ್ (ಪಿಟಿಐ): ಇಂಗ್ಲೆಂಡ್ ಕ್ರಿಕೆಟ್ ತಂಡದ ಮಾಜಿ ನಾಯಕ ಟೆಡ್ ಡೆಕ್ಸ್ಟರ್ (86) ಅನಾರೋಗ್ಯದಿಂದ ಗುರುವಾರ ನಿಧನರಾದರು ಎಂದು ಮೆರಿಲ್‌ಬೋನ್ ಕ್ರಿಕೆಟ್ ಕ್ಲಬ್ (ಎಂಸಿಸಿ) ತಿಳಿಸಿದೆ.

1958 ರಿಂದ 1968ರ ಅವಧಿಯಲ್ಲಿ ಇಂಗ್ಲೆಂಡ್ ತಂಡದಲ್ಲಿ ಅವರು ಮಧ್ಯಮಕ್ರಮಾಂಕದ ಬ್ಯಾಟ್ಸ್‌ಮನ್ ಆಗಿದ್ದರು. 62 ಟೆಸ್ಟ್‌ಗಳಲ್ಲಿ ಆಡಿದ್ದರು. 4502 ರನ್‌ಗಳನ್ನು ಗಳಿಸಿದ್ದರು. ಅದರಲ್ಲಿ ಒಂಬತ್ತು ಶತಕಗಳಿದ್ದವು. ಮಧ್ಯಮವೇಗಿಯಾಗಿದ್ದ ಟೆಡ್ 62 ವಿಕೆಟ್‌ಗಳನ್ನು ಪಡೆದಿದ್ದರು. ಅವರಿಗೆ ಐಸಿಸಿ ಕ್ರಿಕೆಟ್ ಹಾಲ್ ಆಫ್ ಫೇಮ್ ಗೌರವವೂ ಸಂದಿದೆ.

ಕೋಲ್ಕತ್ತ ತಂಡಕ್ಕೆ ವೇಗಿ ಟಿಮ್ ಸೌಥಿ

ಕೋಲ್ಕತ್ತ (ಪಿಟಿಐ): ನ್ಯೂಜಿಲೆಂಡ್‌ನ ಟಿಮ್ ಸೌಥಿ ಅವರು ಐಪಿಎಲ್ ಕ್ರಿಕೆಟ್ ಟೂರ್ನಿಯ 14ನೇ ಆವೃತ್ತಿಯ ಎರಡನೇ ಲೆಗ್‌ನಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ಪರ ಆಡಲಿದ್ದಾರೆ.

ಟಿಮ್ ಸೌಥಿ

ವೈಯಕ್ತಿಕ ಕಾರಣಗಳಿಂದಾಗಿ ತಂಡ ತೊರೆದಿರುವ ಆಸ್ಟ್ರೇಲಿಯಾದ ವೇಗಿ ಪ್ಯಾಟ್ ಕಮಿನ್ಸ್ ಬದಲಿಗೆ ಸೌಥಿ ಅವರನ್ನು ಕರೆಸಿಕೊಳ್ಳಲಾಗಿದೆ ಎಂದು ಕೆಕೆಆರ್ ಪ್ರಕಟಣೆ ತಿಳಿಸಿದೆ.

ರಾಜಸ್ತಾನ್ ರಾಯಲ್ಸ್ ಮತ್ತು ಪಂಜಾಬ್ ಕಿಂಗ್ಸ್ ಕೂಡ ಕೆಲವು ಬದಲಾ ವಣೆಗಳನ್ನು ಮಾಡಿದೆ.

ರಾಜಸ್ತಾನ್ ರಾಯಲ್ಸ್ ತಂಡ ಇಂಗ್ಲೆಂಡ್‌ನ ಜೊಫ್ರಾ ಆರ್ಚರ್ ಬದಲಿಗೆ ನ್ಯೂಜಿಲೆಂಡ್‌ನ ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ಗ್ಲೆನ್ ಫಿಲಿಪ್ ಅವರನ್ನು ಕರೆಸಿಕೊಂಡಿದೆ. ಆ್ಯಂಡ್ರ್ಯೂ ಟೈ ಬದಲಿಗೆ ತಬ್ರೇಜ್ ಶಂಸಿ ತಂಡವನ್ನು ಸೇರಿಕೊಂಡಿದ್ದಾರೆ.

ಪಂಜಾಬ್ ಕಿಂಗ್ಸ್ ತಂಡ ರಿಲಿ ಮೆರಿಡಿತ್ ಬದಲಿಗೆ ನೇಥನ್ ಎಲಿಸ್ ಅವರನ್ನು ಮತ್ತು ಜೇ ರಿಚರ್ಡ್ಸನ್ ಬದಲಿಗೆ ಆದಿಲ್ ರಶೀದ್ ಅವರನ್ನು ಕರೆಸಿಕೊಂಡಿದೆ.

ಕುಸ್ತಿ 'ದತ್ತು' ಪಡೆದ ಉತ್ತರಪ್ರದೇಶ

ಲಖನೌ(ಪಿಟಿಐ): ಭಾರತದಲ್ಲಿ ಕುಸ್ತಿ ಕ್ರೀಡೆಯನ್ನು 2032ರ ಒಲಿಂಪಿಕ್ ವರೆಗೆ ಪೋಷಣೆ ಮಾಡಲು ಉತ್ತರ ಪ್ರದೇಶ ರಾಜ್ಯ ಸರ್ಕಾರ ದತ್ತು ಪಡೆದುಕೊಂಡಿದೆ.

ಕುಸ್ತಿಪಟುಗಳಿಗೆ ಮೂಲಸೌಕರ್ಯ ಒದಗಿಸಲು ₹170 ಕೋಟಿ ಹೂಡಿಕೆ ನಿರೀಕ್ಷಿಸಲಾಗಿದೆ ಎಂದು ಭಾರತದ ಕುಸ್ತಿ ಒಕ್ಕೂಟದ (ಡಬ್ಲ್ಯುಎಫ್‌ಐ) ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ತಿಳಿಸಿದ್ದಾರೆ.

ಹಾಕಿಗೆ ಒಡಿಶಾ ಸರ್ಕಾರ ನೀಡಿದ ಪ್ರೋತ್ಸಾಹದಿಂದ ಉತ್ತೇಜನಗೊಂಡಿರುವ ಉತ್ತರ ಪ್ರದೇಶವು ಕುಸ್ತಿ ಬೆಳವಣಿಗೆಗೆ ಕೈಜೋಡಿಸಲು ಮುಂದೆ ಬಂದಿದೆ ಎಂದು ಡಬ್ಲ್ಯುಎಫ್‌ಐನ ಮುಖ್ಯಸ್ಥರೂ ಆದ ಸಿಂಗ್ ಹೇಳಿದ್ದಾರೆ.

'ದೊಡ್ಡ ರಾಜ್ಯವಾಗಿರುವ ಉತ್ತರಪ್ರದೇಶವೇಕೆ ಕುಸ್ತಿಯನ್ನು ಪ್ರೋತ್ಸಾಹಿಸಲು ಸಾಧ್ಯವಿಲ್ಲ ಎಂದು ನಾವು ಯೋಚಿಸಿದೆವು. ಮುಖ್ಯಮಂತ್ರಿ ಕುಸ್ತಿ ಪೋಷಣೆಗೆ ಒಪ್ಪಿಕೊಂಡಿದ್ದಾರೆ' ಎಂದರು.

ಹಾಕಿ ಆಟಗಾರ ಸೈಮನ್ ಮೈಕೆಲ್ ನಿಧನ

ಬೆಂಗಳೂರು: ಕರ್ನಾಟಕ ರಾಜ್ಯ ಹಾಕಿ ತಂಡದ ಮಾಜಿ ಆಟಗಾರ ಸೈಮನ್ ಮೈಕೆಲ್ (81) ಗುರುವಾರ ನಿಧನರಾದರು.

ಫುಟ್‌ಬಾಲ್ ಆಟಗಾರರಾಗಿದ್ದ ಅವರು ಹಾಕಿ ತಂಡದಲ್ಲಿ ಗೋಲ್‌ಕೀಪರ್ ಆಗಿ ಸೇರ್ಪಡೆಯಾಗಿದ್ದರು. ಅಖಿಲ ಭಾರತ ಹಾಕಿ ಟೂರ್ನಿಯಲ್ಲಿ ಕರ್ನಾಟಕ ತಂಡವನ್ನು ಪ್ರತಿನಿಧಿಸಿದ್ದರು.